Digitization by eGangotri and Sarayu Trust. Funding by MoE-IKS

ಚಿನ್ನಿಧಿ

ಪೂಜ್ಯ ಶ್ರೀ ನಿರುಪಾಧೀಶ, ಮರೇಗುದ್ದಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಅಡವಿ ಸಿದ್ಧೇಶ್ವರ ಗ್ರಂಥಮಾಲೆ-೬೨

ಚಿನ್ನಿಧಿ

(ಕಾಶಿಯ ಲಿಂ. ಜ. ವಿಶ್ವೇಶ್ವರ ಶಿವಾಚಾರ್ಯರ ಕುರಿತ ಕಾವ್ಯ)

ಶ್ರೀ ಮ.ನಿ.ಪ್ರ . ನಿರುಪಾಧಿಮಹಾಸ್ವಾಮಿಗಳ
ಅಮೃತಮಹೋತ್ಸವ
ಹಾಗೂ
ಗುರುವಂದನಾ ಸವಿನೆನಪು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಅಡವಿ ಸಿದ್ಧೇಶ್ವರ ಗ್ರಂಥಮಾಲೆ-೬೨

ಚಿನ್ನಿಧಿ

(ಕಾಶಿಯ ಲಿಂ. ಜ. ವಿಶ್ವೇಶ್ವರ ಶಿವಾಚಾರ್ಯರ ಕುರಿತ ಕಾವ್ಯ)

ಶ್ರೀ ನಿ. ಪ್ರ. ನಿರುಪಾಧಿ ಸ್ವಾಮಿಗಳು
"ನಿರುಪಾಧೀಶ"

ಪ್ರಕಾಶಕರು
ಅಡವೀಶ ಪ್ರಕಾಶನ, ಮರೇಗುದ್ದಿ-೫೮೭ ೧೨೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಿನ್ನಿಧಿ (ಕಾಶಿಯ ಲಿಂ. ಜ. ವಿಶ್ವೇಶ್ವರ ಶಿವಾಚಾರ್ಯರ ಕುರಿತ ಕಾವ್ಯ) :
ಶ್ರೀ ನಿ. ಪ್ರ. ನಿರುಪಾಧಿ ಸ್ವಾಮಿಗಳು, 'ನಿರುಪಾಧೀಶ', ಮರೆಗುದ್ದಿ
೦೮೩೫೩ – ೨೩೯೦೨೧ – ಮೊ. ೯೪೪೯೮ ೩೩೪೭೦

ಪ್ರಕಾಶಕರು : ಅಡವೀಶ ಪ್ರಕಾಶನ
ಮರೇಗುದ್ದಿ– ೫೮೭ ೧೨೧

© ಪ್ರಕಾಶಕರದು

ಪ್ರಥಮ ಮುದ್ರಣ : ೨೦೧೭

ಪ್ರತಿಗಳು : ೧೦೦೦

ಪುಟಗಳು : xxxvi + ೨೩೮

ಬೆಲೆ : ರೂ. ೩೦೦/-

ಪುಸ್ತಕದ ಆಕಾರ : ಡೆಮಿ ೧/೮

ಬಳಸಿದ ಕಾಗದ : ೮೦ ಜಿ.ಎಸ್.ಎಂ. ಎನ್. ಎಸ್. ಮ್ಯಾಪಲಿಥೊ

ಮುದ್ರಕರು :
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ಗದಗ – 582 101. M. 9448223602
Email : chaitanyaoffset@gmail.com

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶ್ರೀ ಅಡವಿಸಿದ್ಧೇಶ್ವರರು (ಅಂಕಲಗಿ) ಮರೆಗುದ್ದಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಪೂಜ್ಯಶ್ರೀ ಮರೇಗುದ್ದಿ ಮಡಿವಾಳೇಶ್ವರರು

ಅಡವಿಸಿದ್ದೇಶ್ವರಮಠ ಮರೇಗುದ್ದಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಮ.ನಿ.ಪ್ರ. ಗುರುಪಾದ ಮಹಾಸ್ವಾಮಿಗಳು
ಅಡವಿಸಿದ್ದೇಶ್ವರಮಠ ಮರೇಗುದ್ದಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶ್ರೀ ಮ.ನಿ.ಪ್ರ. ನಿರುಪಾಧೀಶ ಸ್ವಾಮಿಗಳು
ಅಡವಿಸಿದ್ದೇಶ್ವರಮಠ ಮರೇಗುದ್ದಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಜಗದ್ಗುರು ಚಿನ್ನಧಿಯವರ
ತಂದೆ
ಲಿಂ॥ ವೇದಮೂರ್ತಿ
ಪರಮೇಶ್ವರಯ್ಯ.
ತಾಯಿ
ಲಿಂ॥ ರುದ್ರಮ್ಮ ಹಿರೇಮಠ

ಸೊನ್ನಕ್ಕೆ ಪ್ರಥಮ
ಬಾರಿಗೆ ದಯಾಮಾಡಿಸಿದಾಗ
ದಹಿವಡಕರ,
ಬಾರ್ಶಿ ಪರಾಂಡಕರ್,
ಪೂಜ್ಯ ನಿರುಪಾಧೀಶರು
ಹಾಗೂ ದೇಸಾಯಿ
ದಂಪತಿಗಳೊಂದಿಗೆ

ಕಾಶೀ ಶ್ರೀಪೀಠದಲ್ಲಿ
ಪಟ್ಟಾಭಿಷೇಕದ
ನಂತರ ಪ್ರಥಮ
ಧರ್ಮಸಭೆ ಕಾಶಿಯಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಬ್ಬಿಣ ಕಂತೀ
ಮಠ ರಟ್ಟಿಹಳ್ಳಿ.
ಜಗದ್ಗುರುಗಳು ಪ್ರಾಥಮಿಕ
ವಿದ್ಯಾಭ್ಯಾಸ
ಮಾಡಿದ ಸ್ಥಳಕ್ಕೆ
ನಿರುಪಾಧೀಶರ ಭೇಟಿ

ಕಾಶಿ ಜಗದ್ಗುರುಗಳು
ಯಲ್ಲಟ್ಟಿಯ ಶ್ರೀ ನಿರುಪಾಧೀಶ
ಮಠಕ್ಕೆ ಆಗಮಿಸಿದಾಗ
ಪೂಜ್ಯ ನಿರುಪಾಧೀಶರೊಂದಿಗೆ
ಭಕ್ತ ಸಮೂಹ



ಆರೇತೆಲಗಡ್ಡಿಯಲ್ಲಿ
ಸನ್ನಿಧಿಯವರ ಹಿರಿಯ
ಸಹೋದರಿಯಾದ
ಲಿಂ॥ ನೀಲಕಂಠಯ್ಯನವರ
ಧರ್ಮಪತ್ನಿ
ಶ್ರೀಮತಿ ಗೌರಮ್ಮ ನಿ. ಹಿರೇಮಠ
ಇವರೊಂದಿಗೆ ಚರ್ಚಿಸುತ್ತಿರುವ
ಪೂಜ್ಯಶ್ರೀ ನಿರುಪಾಧೀಶರರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸನ್ನಿಧಿಯವರ ಜನ್ಮಸ್ಥಳ
ಮಾಸೂರು ಹಿರೇಮಠದಲ್ಲಿ
ಗ್ರಂಥ ಕರ್ತೃಗಳಾದ
ಮರೇಗುದ್ದಿ ಪೂಜ್ಯರು



ಮಾಸೂರಿನ ಹಿರೇಮಠದ
ಆವರಣದಲ್ಲಿರುವ
ಶ್ರೀ. ಜ. ವಿಶ್ವಾರಾಧ್ಯ
ಮಂದಿರದ ಮುಂಭಾಗದಲ್ಲಿ
ಮರೇಗುದ್ದಿ ಪೂಜ್ಯರು

ಜತ್ತ ತಾಲೂಕ ಮಂಗಳವೇಡೆ
ಮಂಗಲ ಕಾರ್ಯಲಯದ
ಮುಂದೆ ಪೂಜ್ಯಶ್ರೀ ನಿರುಪಾಧೀಶರು
ಹಾಗೂ ಭಕ್ತ ಸಮೂಹ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗ್ರಂಥದಾನಿಗಳು



ಲಿಂ. ಶ್ರೀ ಷ. ಬ್ರ. ಶಿವನಾಂದ
ಶಿವಚಾರ್ಯ ಸ್ವಾಮಿಗಳು
ಹಿರೇಮಠ ದಿಂಡದಹಳ್ಳಿ
ಇವರ ಸ್ಮರಣಾರ್ಥವಾಗಿ
ಶ್ರೀ ಗುರುಪ್ರಸಾದ ಬಸವರಾಜ
ಶರ್ಮ ಹಿರೇಮಠ
ಸಾ. ಕಿಟ್ಟದಹಳ್ಳಿ

ಲಿಂ. ಶ್ರೀಮತಿ ಗಿರಿಜಮ್ಮ
ಹಾಗೂ
ಲಿಂ. ಬಸವರಾಜ ಶರ್ಮ
ಇವರ ಸ್ಮರಣೆಗಾಗಿ
ಶ್ರೀ ಗಂಗಾಧರ ಶಾಸ್ತ್ರಿಗಳು
ಹಿರೇಮಠ



ಲಿಂ. ಶ್ರೀಯುತ ಷಣ್ಮುಖಯ್ಯ
ಮಠದ ಇವರ ಸ್ಮರಣೆಗಾಗಿ
ಶ್ರೀಮತಿ ಕೋಮಲ
ಷಣ್ಮುಖಯ್ಯ ಮಠದ
ಸಾ. ರಾಣೆಬೆನ್ನೂರು

ಗ್ರಂಥದಾನಿಗಳು : ಶ್ರೀ ಬಸಣ್ಣ ಕುರವತ್ತಿ ನಂದಿ ಟ್ರೇಡರ್ಸ್, ರಾಣೆಬೆನ್ನೂರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಮರ್ಪಣೆ



ಶ್ರೀ ನಿ.ಪ್ರ. ಕುಮಾರ ಶಿವಯೋಗಿಗಳು ಹಾನಗಲ್ಲ

ಬಣ್ಣ ತೊಟ್ಟವರೆಲ್ಲ ಖತ ಸಂ
ಪನ್ನರೆನಬಹುದೇನು ಹೇರಳ
ಹಣ್ಣು ತಿಂದವರೆಲ್ಲ ಪರತರ ಹಂಸಿ ಸದ್ವಂಶಿ
ಎನ್ನಲಾಗದುದೆನಿತು ಚಿದ್ರಸ
ಬೆಣ್ಣೆ ಸುಕುಮಾರೇಶ ತೇಜೋಳ
ರನ್ನ ಸುಪ್ರಭೆ ಹೊರಗೊಳಗದುವೆ ಬೆಳಗು ರಸಕಾಶಿ

– ನಿರುಪಾಧಿ ಸ್ವಾಮಿಗಳು
'ನಿರುಪಾಧೀಶ'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಿನ್ನಿಧಿಯ ಚಿತ್ರಭೆ

ಭಕ್ತಿ ಜೀವರಸದ ಝರಿಯು, ಮುಕ್ತಿ ದೇವರಸದ ತೊರೆಯು
ಭಕ್ತಿಯೆನ್ನ ಬಾಳ ಸಿರಿಯು, ಮುಕ್ತಿ ನಿನ್ನ ಮೇಳ ಪರಿಯು
ಭಕ್ತಿಯಿದುವೆ ಜೀವ ಕಿರಣ, ಮುಕ್ತಿಯಿದುವೆ ದೇವಕರುಣ
ಎನ್ನ ಭಕ್ತಿ ನಿನಗೆ ಚರಣ, ನಿನ್ನ ಮುಕ್ತಿ ನನಗೆ ಹರಣ

ಎಂಬ ಸಾಹಿತ್ಯ ಮಹಾಚಾರ್ಯ ಡಾ. ಜ.ಚ.ನಿ. ಅವರ ವಾಣಿಯಂತೆ ಭಕ್ತಿಯೇ ಮುಕ್ತಿಗೆ ಸೋಪಾನವೆಂದನ್ನರಿತು, ಆ ಮಾಗದಿಂದ ನಡೆಯುತ್ತ ಭಕ್ತಿಯನ್ನು ಜೀವನದುಸಿರಾಗಿಸಿ ಕೊಂಡು, ಲೋಕ ಕಲ್ಯಾಣಕ್ಕಾಗಿ ಸಾಹಿತ್ಯ ರಚನೆ ಹಾಗೂ ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ನಾಡ ಜನತೆಗೆ ಚಿರಪರಿಚಿತವಾಗಿರುವ ಮರೆಗುದ್ದಿ ಶ್ರೀ ಮಠದ ಹಿರಿಯ ಮಠಾಧೀಶರಾಗಿರುವ ಶ್ರೀ ಮ.ನಿ.ಪ್ರ. ನಿರಾಪಾಧೀಶ್ವರ ಸ್ವಾಮಿಗಳವರು ಪುರಾಣಕಾರರಾಗಿ, ಕವಿಗಳಾಗಿ, ವಚನಕಾರರಾಗಿ, ವೈಚಾರಿಕ ಬರಹಗಾರರಾಗಿ, ಕನ್ನಡ ಹಿಂದಿ ಭಾಷೆಗಳಲ್ಲಿ ಮೌಲಿಕ ಕೃತಿ ರಚನೆಯ ಮೂಲಕ ವಿದ್ವತ್ ಪ್ರಪಂಚ ಗಮನ ಸೆಳೆದಿದ್ದಾರೆ. ಡಾ. ಜ.ಚ.ನಿ. ಡಾ. ಮೂಜಗಂ, ಡಾ. ಅನ್ನದಾನೀಶ್ವರ್ ಸ್ವಾಮಿಗಳವರು ಮುಂಡರಗಿ, ಶ್ರೀಮತ್ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು, ನಾಗನೂರು ಪೂಜ್ಯ ಡಾ. ಸಿದ್ಧರಾಮ ಸ್ವಾಮಿಗಳವರು ಮತ್ತು ಇತ್ಯಾದಿ ಪೂಜ್ಯರಂತೆ ಒಂದು ಪೀಠದ ಪೀಠಾಧಿಕಾರಿಗಳಾಗಿ ಸಾಹಿತ್ಯ ಸೇವೆ ಗೈಯುತ್ತಿರುವ ನಿರುಪಾಧೀಶ್ವರರ ಸಮಗ್ರ ಸಾಹಿತ್ಯ ಕುರಿತ ಚಿಂತನೆ, ಹಾಗೂ ಅನೇಕ ವಿಚಾರ ಸಂಕಿರಣಗಳು ಜರುಗಿವೆಯಲ್ಲದೆ; ಗೌರವಪೂರ್ವಕವಾಗಿ, 'ನಿರುಪಾಧೀಶ' ಎಂಬ ಅಭಿನಂದನ ಗ್ರಂಥವನ್ನು ನಾಡ ಜನತೆಯ ಪರವಾಗಿ ಸಮರ್ಪಿಸಲಾಗಿದೆ. ಕನ್ನಡ, ಹಿಂದಿ, ಸಂಸ್ಕೃತ, ಭಾಷೆಗಳ ಮೇಲೆ ಪ್ರಭುತ್ವ ಹೊಂದಿರುವ ಶ್ರೀಗಳವರು ಕಾಶಿ ಜಂಗಮವಾಡಿ ಮಠದಲ್ಲಿ ಅಧ್ಯಯನ ಕೈಕೊಂಡು, ಸ್ವಅಧ್ಯಯನ-ಪರಿಶ್ರಮದ ಮೂಲಕ ಕನ್ನಡ, ಹಿಂದಿ, ಸಂಸ್ಕೃತ ಭಾಷೆಯ ಹಲವಾರು ಪ್ರಾಚೀನ ಗ್ರಂಥಗಳನ್ನು ಸಂಗ್ರಹಿಸಿರುವುದು ಇವರ ವ್ಯಾಪಕ ಅಧ್ಯಯನಕ್ಕೆ ಕೈಗನ್ನಡಿಯಂತಿದೆ. ಶ್ರೀಗಳವರು ಉತ್ತಮ ಪ್ರವಚನಕಾರರಾಗಿ ಜನಮನ್ನಣೆಯನ್ನು ಗಳಿಸಿದ್ದಾರೆ. ಕನ್ನಡ ನಾಡು-ನುಡಿ-ಸಂಸ್ಕೃತಿಯನ್ನು ಕಟ್ಟುವಲ್ಲಿ ಬೆಳೆಸುವಲ್ಲಿ ಶ್ರಮಿಸಿದವರಲ್ಲಿ ಅನೇಕ ಮಠಾಧೀಶರನ್ನು ಹೆಸರಿಸಬೇಕಾಗುತ್ತದೆ. ಮಠಾಧೀಶರು ಮುಖ್ಯವಾಗಿ ಧಾರ್ಮಿಕ ಸಂಗತಿಗಳಿಗೆ ಪ್ರಾಮುಖ್ಯತೆ ಕೊಡುತ್ತಾರೆಂಬುದು ಸಹಜ, ಆದರೆ ಕನ್ನಡ ನಾಡಿನ ಅನೇಕ ಮಠಗಳ ಸ್ವಾಮೀಜಿಯವರು ಕನ್ನಡದ ಏಳ್ಗೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದಾರೆ. ಕೇವಲ ಧಾರ್ಮಿಕ ಸಂಗತಿಗಳಿಗೆ ಪ್ರಾಮುಖ್ಯತೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೊಡುತ್ತಾರೆಂಬುದು ಸಹಜ. ಆದರೆ ಕನ್ನಡ ನಾಡಿನ ಅನೇಕ ಮಠಗಳ ಸ್ವಾಮೀಜಿಯವರು ಕನ್ನಡದ ಏಳ್ಗೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದಾರೆ. ಕೇವಲ ಧಾರ್ಮಿಕ ವಿಚಾರಗಳಿಗೆ ತಮ್ಮನ್ನು ಸೀಮಿತಗೊಳಿಸಿಕೊಳ್ಳದೇ ಸಮಾಜ ಸುಧಾರಣೆಯತ್ತ ಗಮನ ಹರಿಸಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಾ ಸಮಾಜದಲ್ಲಿ ನೆಮ್ಮದಿ ನಿಲ್ಲಲು ಕಾರಣವಾಗಿರುವುದನ್ನು ಮರೆಯಲಾಗದು. ಇದಕ್ಕೆ ಸಾಕ್ಷಿಯೆಂಬಂತೆ ತುಮಕೂರಿನ ಸಿದ್ಧಗಂಗಾಮಠ, ಚಿತ್ರದುರ್ಗ ಬ್ರಹ್ಮಮಠ, ಹುಬ್ಬಳ್ಳಿ ಮೂರುಸಾವಿರ ಮಠ, ಸುತ್ತೂರು, ಸಿರಿಗೆರೆ ಮಠ, ಗದುಗಿನ ತೋಂಟದಾರ್ಯಮಠ, ಧಾರವಾಡದ ಶ್ರೀ ಮುರುಘಾಮಠಗಳು ಕನ್ನಡ ನಾಡು – ನುಡಿಗೆ ಸಲ್ಲಿಸಿದ ಸೇವೆ ಅನುಪಮವಾದದ್ದು ಇದಕ್ಕೆಲ್ಲ ಕಾರಣವಾಗಿದ್ದು ಮಠಾಧೀಶ್ವರರ ಪ್ರೀತಿ ಕಾರಣವೆನ್ನಬಹುದು. ಇಂಥವರಲ್ಲಿ ಮರೆಗುದ್ದಿ ಶ್ರೀ ನಿರುಪಾಧೀಶ ಸ್ವಾಮಿಗಳವರನ್ನು ಹೆಸರಿಸಲೇಬೇಕಾಗುತ್ತದೆ. ಶ್ರೀಮಠದ ಪೀಠಾಧಿಪತಿ ಗಳಾಗಿ ಮಠದ ಏಳ್ಗೆಯತ್ತ ಗಮನ ಹರಿಸಿ, ಸಣ್ಣ ಪುಟ್ಟ ವ್ಯಾಜ್ಯಗಳನ್ನು ಸಮಯ ಪ್ರಜ್ಞೆಯ ಹಿನ್ನೆಲೆಯಲ್ಲಿ ಜಾಗರೂಕತನದಿಂದ ಬಗೆಹರಿಸಿದ್ದು ಇವರ ಕಾರ್ಯಚಕ್ಷತೆಯನ್ನು ಎತ್ತಿ ತೋರಿಸುತ್ತದೆ. ಶ್ರೀ ಕಾಶಿಮಠದ ಜಂಗಮವಾಡಿಮಠ ಹಾಗೂ ಹುಬ್ಬಳ್ಳಿಯ ಜಡಿಸಿದ್ಧಾಶ್ರಮದಲ್ಲಿ ಅಧ್ಯಯನ ನಿರತರಾಗಿ ಕೈವಲ್ಯಪದ್ಧತಿ, ಪರಮಾನುಬೋಧೆ, ವಿವೇಕ ಚಿಂತಾಮಣಿಗಳಂಥ ಶಾಸ್ತ್ರ ಅಧ್ಯಾತ್ಮಗ್ರಂಥಗಳ ತಪಸ್ಪರ್ಷಿ ಅಧ್ಯಯನ ಮುಂದೆ ಇವರ ವೈವಿಧ್ಯಮಯ ಸಾಹಿತ್ಯ ರಚನೆಗೆ ಪ್ರೇರಣೆಯನ್ನಿತ್ತವು ಎಂದು ಹೇಳಬಹುದು.

ಕನ್ನಡ ಸಾಹಿತ್ಯದ ಶ್ರೀಮಂತಿಕೆಗೆ ವೈದಿಕ, ಜೈನ, ವೀರಶೈವ ಪುರಾಣಗಳು ಮಹತ್ತರ ಕೊಡುಗೆಯನ್ನಿತ್ತಿವೆ. ಭೀಮಕವಿಯ ಬಸವಪುರಾಣದಿಂದ ಪುರಾಣ ಪರಂಪರೆ ಅವ್ಯಾಹತವಾಗಿ ರಚನೆಗೊಳ್ಳುತ್ತ ಬಂದು, ಪುರಾಣ ರಚನೆ ಪರಂಪರೆ ನಿಂತೇ ಹೋಯಿತು. ಎಂಬ ಹೇಳಿಕೆಯನ್ನು ಇಲ್ಲವಾಗಿಸಲು ಇಪ್ಪತ್ತು ಇಪ್ಪತ್ತೊಂದನೆಯ ಶತಮಾನದಲ್ಲಿಯೂ ಪ್ರಾಚೀನ ಕಾವ್ಯ ವಸ್ತುಗಳನ್ನಾಧರಿಸಿ, ಶರಣ –ಶರಣೆಯರನ್ನು ಕುರಿತು ಹಾಗೂ ಆಧುನಿಕ ಮಹಾಪರಂಪರ, ಆಧ್ಯಾತ್ಮ ಜೀವಿಗಳ ಕುರಿತ ಪುರಾಣ ರಚನೆ ನಡೆದುಕೊಂಡು ಬಂದಿದೆ ಎಂಬುದಕ್ಕೆ ಗದುಗಿನ ವೀರೇಶ್ವರಾಶ್ರಮದ ಪೂಜ್ಯ ಡಾ. ಪುಟ್ಟರಾಜ ಗವಾಯಿಗಳು, ಮರೆಗುದ್ದಿ ನಿರುಪಾಧೀಶ ಸ್ವಾಮಿಯವರನ್ನು ಮತ್ತು ಇನ್ನಿತರರನ್ನು ಹೆಸರಿಸಬಹುದು. ಗಣೇಶ ಪುರಾಣ, ಗುರುಪಾದೇಶ್ವರರ ಚಿದ್ವಿಲಾಸ, ಮರೆಗುದ್ದಿ ಮಡಿವಾಳೇಸ್ವರ ಚರಿತ್ರೆ, ಲಿಂಗನಾಯಕನಹಳ್ಳಿ, ಚೆನ್ನವೀರ ವಿಲಾಸ, ಚಿನ್ಮಯಜ್ಞಾನಿ ಚನ್ನಬಸವ ವಿಜಯ ಹಾಗೂ ಮಹಾ ಮಾನವತಾವಾದಿ ಸಂಗನ ಬಸವ ವಿಜಯ ಈ ಪುರಾಣಗಳು ಭಾಮಿನಿ ಷಟ್ಪದಿಯಲ್ಲಿ ಪೂಜ್ಯ ನಿರುಪಾಧೀಶ್ವರ ಶ್ರೀಗಳವರಿಂದ ರಚಿತಗೊಂಡಿವೆ. ಪುರಾಣಗಳಂತೆ –ವಚನ ಸಾಹಿತ್ಯ ಪರಂಪರೆಯೂ ಅಷ್ಟೇ ಸಂಪದ್ಭರಿತವಾದುದು. ಬಸವಪೂರ್ವ ಯುಗದಲ್ಲಿ ಅಂಕುರಗೊಂಡಿರುವ ವಚನ ಸಾಹಿತ್ಯ ಪರಂಪರೆ ಬಸವಯುಗ, ಬಸವೋತ್ತರಯುಗ ಹಾಗೂ ಆಧುನಿಕ ಯುಗಗಳಲ್ಲಿ ನಿರಂತರವಾಗಿ ರಚನರಯಾಗುತ್ತ ಬಂದಿದ್ದು ಆಧುನಿಕ ಪ್ರಮುಖ ವಚನಕಾರರಲ್ಲಿ ಎಸ್.ಎ. ರಂಗಣ್ಣ, ಸಿದ್ಧಯ್ಯ ಪುರಾಣಿಕ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಚನಿ, ಮೂಜಗಂ, ಮಹದೇವ ಬಣಕಾರ, ಮುಂಡರಗಿ ಅನ್ನದಾನೀಶ್ವರ ಸ್ವಾಮಿಗಳು, ಪಂಡಿತ ಗುರುರಾಜ ಕಲಕೇರಿ, ಆರ್.ಬಿ. ಚಿಲುಮಿ ಮುಂತಾದವರನ್ನು ಹೆಸರಿಸಬಹುದು. ಆಧುನಿಕ ವಚನಕಾರರಾಗಿ ನಿರುಪಾಧೀಶ್ವರ ಶ್ರೀಗಳವರು ಪ್ರಚಲಿತ ಘಟನೆ, ಸಮಸ್ಯೆ – ಪರಿಹಾರಗಳನ್ನು ವಚನ ರಚನೆಗೆ ಮುಖ್ಯ ವಸ್ತುಗಳನ್ನಾಗಿರಿಸಿಕೊಂಡು ಚಿನ್ಮೂರ್ತಿ, ವಚನಶತಕ, ವಚನಾಂಕುರ ಭಾಗ–೧, ವಚನಾಂಕುರ ಭಾಗ–೨, ವಚನಾಂಕುರ ಭಾಗ–೩, ವಚನ ಪಲ್ಲವಿ ಭಾಗ ೧–೨–೩ ಹಾಗೂ ವಚನ ತೋರಣ ಕೃತಿಗಲನ್ನು ರಚಿಸಿ ವಚನ ಸಾಹಿತ್ಯ ಪರಂಪರೆಯನ್ನು ಜೀವಂತವಾಗಿರಿಸಿದ್ದಾರೆ ಇದರಂತೆ ಕನಕದಾಸರ ಜೀವನಾಧಾರಿತ 'ಕನಕ ವಿಜಯ' (ಭಾಮಿಸಿ ಷಟ್ಪದಿ ಕಾವ್ಯ) ವೇಮ ವಿಜಯ ಹಾಗಲಾಂಬಿಕೆ (ಭಾಮಿನಿ ಷಟ್ಪದಿ) ಹಾಗೂ ಗದುಗಿನ, ಮುಂಡರಗಿ ಜಗದ್ಗುರುಗಳವರನ್ನು ಕುರಿತು ಕಾವ್ಯ, ಚಿನ್ಮೂರ್ತಿ (ತ್ರಿಪದಿಗಳು), ರಸಗೀತೆ (ಹಿಂದೆ–ಖಂಡ ಕಾವ್ಯ), ಸಪ್ತತೀರ್ಥ (ಹಿಂದಿಕಥೆಗಳು) ಅಷ್ಟದಲ (ಹಿಂದಿ ಕಥೆಗಳು) ಮುಂತಾದವುಗಳು ಶ್ರೀಗಳವರಿಂದ ರಚಿತಗೊಂಡಿರುವ ವೈವಿಧ್ಯಮಯ ಸಾಹಿತ್ಯ ಕೃತಿಗಳು.

ಹೀಗೆ ಹಲವು ವಸ್ತುವಿವೇಚನೆಗಳನ್ನೊಳಗೊಂಡ ನಿರುಪಾಧೀಶ್ವರರ ಸಮಗ್ರ ಸಾಹಿತ್ಯ, ಪರಂಪರೆ – ಪ್ರಗತಿ – ಅಂಶಗಳನ್ನು ಸಮೀಕರಿಸಿಕೊಂಡು ರಚನೆಗೊಂಡಿರು ವುದು ತಿಳಿದು ಬರುತ್ತದೆ. ಇವು ಪ್ರಸ್ತುತ ದಿನ ಮಾನಕ್ಕೆ ಅವಶ್ಯಕವಾದಂಥವುಗಳು ಎಂದೇ ಹೇಳಬೇಕಾಗುತ್ತದೆ. ತರ್ಕಬದ್ಧ ವಿಷಯ ಪ್ರತಿಪಾದನೆ, ತೂಕಬದ್ಧ ಹಾಗೂ ಆವೇಶರಹಿತ ನೇರ ಬರವಣಿಗೆ, ಸರಳ ಶೈಲಿ ನಿರುಪಾಧೀಶ್ವರ ಸಾಹಿತ್ಯದ ವಿಶೇಷಗಳು.

ಪ್ರಸ್ತುತ 'ಚೆನ್ನಿಧಿ' (ಭಾಮಿಸಿ ಷಟ್ಪದಿ) ಕಾವ್ಯವು ಪಂಚಪೀಠಗಳಲ್ಲೊಂದಾದ ಕಾಶೀ ಪೀಠದ ೮೫ ನೇ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಇವರ ಕುರಿತಾಗಿದ್ದು ೧೮ ಅಧ್ಯಾಯ (ಬೆಳಗು) ಗಳನ್ನೊಳಗೊಂಡ ಕಾವ್ಯವು ೧೧೨೭ ಪದ್ಯಗಳನ್ನೊಳಗೊಂಡಿದೆ.

'ನ ವೀರಶೈವ ಸದೃಶಂ ಮತಮಸ್ತಿ ಜಗತ್ರಯ ಎಂಬ ಪಾರಮೇಶ್ವರಾಗಮದ ವಾಣಿಯಂತೆ, ಪ್ರಾಚೀನ ಇತಿಹಾಸ ಪರಂಪರೆಯನ್ನು ಹೊಂದಿರುವ ವೀರಶೈವ ಧರ್ಮವು ಜೀವಿಯನ್ನು ಶಿವನನ್ನಾಗಿಸುವ, ಅಂಗವನ್ನು ಲಿಂಗವನ್ನಾಗಿಸುವ, ಭವಿಯನ್ನು ಭಕ್ತನನ್ನಾಗಿಸುವ, ಜಡವನ್ನು ಜಂಗಮವಾಗಿಸುವ, ಪದಾರ್ಥವನ್ನು ಪ್ರಸಾದವನ್ನಾಗಿಸುವ, ಕರ್ಮವನ್ನು ಧರ್ಮವನ್ನಾಗಿಸುವ, ಇಹವನ್ನು ಪರವನ್ನಾಗಿಸುವ ಶಕ್ತಿಸಾಮರ್ಥ್ಯವನ್ನು ಹೊಂದಿದೆ ಎಂಬ ಅಂಶವೂ ವಚನಸಾಹಿತ್ಯದಲ್ಲಿ ಮೂಡಿಬಂದಿದೆ ಎಂದು ತಿಳಿದು ಬರುತ್ತದೆ.. ಹೀಗೆ ಜ್ಞಾನ–ಕರ್ಮ ಸಮುಚ್ಚಾಯಾತ್ಮಕ ಸಮನ್ವಯ ವೀರಶೈವ ಧರ್ಮವು ತನ್ನ ವಿಶಿಷ್ಟ ವಿಚಾರಧಾರೆ ಹಾಗೂ ಅರ್ಥಪೂರ್ಣ ಆಚಾರ ಸಂಹಿತೆ–ನೀತಿ ಸಂಹಿತೆಯಿಂದಾಗಿ ಪ್ರಾಯೋಗಿಕ ಧರ್ಮವೆಂಬ ಅಭಿದಾನಕ್ಕೆ ಪಾತ್ರವಾಗಿದೆ. ಸಾಮಾಜಿಕ ಕಳಕಳಿ ಮತ್ತು ಚಿಂತನೆಯ ಸಾಕಾರ ರೂಪದಂತಿರುವ ವೀರಶೈವ ಧರ್ಮದಲ್ಲಿ ಅರ್ಚನೆಗಿಂತಲೂ ಅರ್ಪಣೆಗೆ, ವ್ಯಕ್ತಿ–ನಿಷ್ಠೆಗಿಂತಲೂ ತತ್ವನಿಷ್ಠೆಗೆ, ಚರಿತ್ರೆಗಿಂತಲೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಾರಿತ್ರ್ಯಕ್ಕೆ ಹೆಚ್ಚಿನ ಮಹತ್ವವಿದೆ. ಇಂಥ ಅನೇಕ ವಿಶೇಷತೆಗಳನ್ನು ಹೊಂದಿರುವ ವೀರಶೈವ ಧರ್ಮದ ಸರ್ವಾಂಗೀಣ ಬೆಳವಣಿಗೆ ಹಾಗೂ ಪ್ರಚಾರದಲ್ಲಿ ಭಾರತದ ಬೇರೆ ಬೇರೆ ಭಾಗಗಳಲ್ಲಿ ಅಧಿಷ್ಠಾನಗೊಂಡಿರುವ ಪಂಚಪೀಠಗಳು–ಪಂಚಪೀಠಾಧೀಶ್ವರರ ಹಾಗೂ ಕರ್ನಾಟಕದಾದ್ಯಂತ ಸ್ಥಾಪಿತಗೊಂಡಿರುವ ವೀರಶೈವ ಮಠಗಳ ಮತುತ ಮಠಾಧೀಶರ ಪಾತ್ರ ಪ್ರಾತಃ ಸ್ಮರಣೀಯವಾದುದು.

ಕಾಲದ ಏರಿಳಿತಕ್ಕೆ ಸಿಲುಕಿ ಧರ್ಮ–ಸಮಾಜ ಅವನತಿ ಮಾರ್ಗದತ್ತ ನಡೆದಂಥ ಸಂದರ್ಭದಲ್ಲಿ ಸಮಾಜಕ್ಕೆ ಮತ್ತು ಜನತೆಗೆ ಹೊಸ ಬದುಕನ್ನು ಕೊಟ್ಟು ಅವರಲ್ಲಿ ಹೊಸ ಚೇತವನ್ನು ತುಂಬುವುದಕ್ಕಾಗಿ ಪಂಚಾಚಾರ್ಯರು, ಮಹಾತಪಸ್ವಿಗಳು, ತಪೋನಿಷ್ಠರು, ಧರೆಗೆ ಅವತರಿಸಿದರೆಂಬುದಕ್ಕೆ ಶಿವನ ಮುಖ ಕಮಲ ಸಂಜಾತರಾಗಿ ಅವತರಿಸಿದ ಪಂಚಾಚಾರ್ಯರು, ಶರಣ ಪರಂಪರೆ ಎಡೆಯೂರು ಸಿದ್ಧಲಿಂಗೇಶ್ವರರು ಮುಂತಾದವರನ್ನು ಹೆಸರಿಸಬಹುದು. ಸದ್ಯೋಜಾತ ವಾಮದೇವ, ಅಘೋರ, ತತ್ಪುರುಷ, ಈಶಾನ ಇವು ಪರಶಿವನ ಪಂಚಮುಖಗಳು ಶಿವನ ಸದ್ಯೋಜಾತ ಮುಖದಿಂದ ಉದಯರಾದ ಶ್ರೀ ರೇಣುಕಾಚಾರ್ಯರು ಇಂದಿನ ಆಂಧ್ರಪ್ರದೇಶದ ಕೊಲ್ಲಿಪಾಕಿ ಶ್ರೀ ಸೋಮನಾಥ ಲಿಂಗದಲ್ಲಿ ಅವರಿಸಿ 'ವೀರಸಿಂಹಾಸನಪೀಠ'ವನ್ನು ಸ್ಥಾಪಿಸಿದರು ಹಾಗೆಯೇ ಶಿವನ ವಾಮದೇವ ಮುಖದಿಂದ ಉದ್ಭವವಾದ ಶ್ರೀ ದಾರುಕಾಚಾರ್ಯರು ಇಂದಿನ ಮಧ್ಯ ಪ್ರದೇಶದ ಉಜ್ಜಯನಿಯ ವಟಕ್ಷೇತ್ರದ ಸಿದ್ಧೇಶ್ವರ ಲಿಂಗದಲ್ಲಿ ಅವತಿಸಿ 'ಸದ್ಧರ್ಮಸಿಂಹಾಸನ ಪೀಠ''ವನ್ನು ಸ್ಥಾಪಿಸಿದರು. ಶಿವನ ಅಘೋರ ಮುಖದಿಂದ ಉದಯರಾದ ಶ್ರೀ ಏಕೋರಾಮಾರಾಧ್ಯರು ದ್ರಾಕ್ಷಾರಾಮ ಕ್ಷೇತ್ರದ ರಾಮನಾಥ ಲಿಂಗದಲ್ಲಿ ಅವರಿಸಿ ಇಂದಿನ ಉತ್ತರಾಂಚಲ ರಾಜ್ಯದ ಕೇದಾರದಲ್ಲಿ ವೈರಾಗ್ಯ ಸಿಂಹಾಸನ ಪೀಠವನ್ನು ಸ್ಥಾಪಿಸಿದರು. ಶಿವನ ತತ್ಪುರುಷ ಮುಖದಿಂದ ಉದಯರಾದ ಶ್ರೀ ಪಂಡಿತಾರಾಧ್ಯರು ಸುಧಾಕುಂಡ ಕ್ಷೇತ್ರದ ಮಲ್ಲಿಕಾರ್ಜುನ ಲಿಂಗದಲ್ಲಿ ಉದಯಿಸಿ, ಇಂದಿನ ಆಂಧ್ರಪ್ರದೇಶದ ಶ್ರೀಶೈಲದಲ್ಲಿ 'ಸೂರ್ಯಸಿಂಹಾಸನ' ಪೀಠವನ್ನು ಸ್ಥಾಪಿಸಿದರು. ಹಾಗೆಯೇ ಶಿವನ ಈಶಾನ ಮುಖದಿಂದ ಉದಯರಾದ ಶ್ರೀ ವಿಶ್ವಾರಾಧ್ಯರು ಉತ್ತರ ಪ್ರದೇಶದ ಕಾಶೀ ಕ್ಷೇತ್ರದ ವಿಶ್ವನಾಥ ಲಿಂಗ ಮುಖೇನ ಉದಯಿಸಿ, 'ಜ್ಞಾನಸಿಂಹಾಸ' ಪೀಠವನ್ನು ಸ್ಥಾಪಿಸಿದರೆಂಬ ವಿಷಯ ಸ್ವಾಯಂಭುವಾಗಮದಲ್ಲಿ ಉಲ್ಲೇಖಿತಗೊಂಡಿದೆ.

ಹೀಗೆ ಸಮಸ್ತ ಮನುಕುಲದ ಉದ್ಧಾರಕ್ಕಾಗಿ ಅವರಿಸಿದ ಪಂಚಾಚಾರ್ಯರಿಗೆ ಭೂಮಿ, ಜಲ, ಅಗ್ನಿ, ವಾಯು, ಆಕಾಶಗಳೆಂಬ ಪಂಚತತ್ವಗಳೇ ಪಂಚಪೀಠಗಳಾಗಿ ಪರಿಣಮಿಸಿದವು. ಈ ತತ್ವಗಳಲ್ಲಿ ಪೃಥ್ವಿ ತತ್ವವೇ ರಂಭಾಪುರಿ ಪೀಠವಾಗಿ, ಜಲತತ್ವವೇ ಉಜ್ಜಯಿನಿ ಸದ್ಧರ್ಮಪೀಠವಾಗಿ, ಅಗ್ನಿತತ್ವವೇ ಕೇದಾರ ವೈರಾಗ್ಯ ಪೀಠವಾಗಿ, ವಾಯು ತತ್ತ್ವವೇ ಶ್ರೀಶೈಲ ಪೀಠವಾಗಿ, ಆಕಾಶ ತತ್ತ್ವವೇ ಕಾಶೀ ಜ್ಞಾನ ಪೀಠವಾಗಿ, ಧರ್ಮೋದ್ಧಾರ ಹಾಗೂ ಸಮಾಜೋದ್ಧಾರ ಕಾರ್ಯಗಳಲ್ಲಿ ನಿರತವಾಗಿ ಇವುಗಳಲ್ಲಿ ವೀರಪೀಠವು ಚಿಕ್ಕಮಗಳೂರು ಜಿಲ್ಲೆಯ ರಂಭಾಪುರಿ ಕ್ಷೇತ್ರದಲ್ಲಿ ಸದ್ಧರ್ಮಪೀಠವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಜ್ಜಯಿನಿ ಕ್ಷೇತ್ರದಲ್ಲಿ, ಸೂರ್ಯಪೀಠವು ಶ್ರೀಶೈಲ ಕ್ಷೇತ್ರದಲ್ಲಿ ವೈರಾಗ್ಯ ಪೀಠವು ಕೇದಾರ ಕ್ಷೇತ್ರದಲ್ಲಿ, ಜ್ಞಾನಪೀಠವು ಕಾಶೀ ಕ್ಷೇತ್ರದಲ್ಲಿ ಸ್ಥಾಪಿಸತಗೊಂಡಿವೆ. ವೀರಶೈವ ಧರ್ಮ –ತತ್ತ್ವ–ಸಿದ್ಧಾಂತಗಳು ಎಲ್ಲ ಪ್ರಾಂತ್ಯದ ಜನತೆಗೆ ತಲುಪಬೇಕೆಂಬ ಸದುದ್ದೇಶದಿಂದ ರೇಣುಕಾದಿ ಪಂಚಾಚಾರ್ಯರು ಸ್ಥಾಪಿಸಿರುವ ಪೀಠಗಳು ಭಾರತದ ವಿವಿಧ ಪ್ರಾಂತಗಳಲ್ಲಿವೆ; ಹಾಗೂ ಈ ಪಂಚಪೀಠಗಳು ಆಯಾ ಭಾಗದ ಜನತೆಯ ಧಾರ್ಮಿಕ ಏಳ್ಗೆ ಮತ್ತು ಆಧ್ಯಾತ್ಮಿಕ ಅಭ್ಯುದಯಕ್ಕೆ ಕಾರಣವೆಂದೆನಿಸಿವೆ. ಹೀಗೆ ಪಂಚಪೀಠ ಗಳು ಸನಾತನ ಹಾಗೂ ವಿನೂತನ ಧಾರೆಗಳನ್ನು ಬಿಂಬಿಸುತ್ತ ಸಶಕ್ತ ಸಮಾಜದ ನಿರ್ಮಾಣಕ್ಕೆ ಕಂಕಣ ಬದ್ಧವಾಗಿ ನಿಂತಿವೆ. ಪ್ರಸ್ತುತ ಪಂಚಪೀಠಾಧೀಶ್ವರರು ಸ್ವಕ್ಷೇತ್ರದಲ್ಲಷ್ಟೇ ಇರದೆ ದೇಶಾದ್ಯಂತ ಸಂಚರಿಸಿ ಧಾರ್ಮಿಕ ದಿಗ್ವಿಜಯ ಯಾತ್ರೆಗಳನ್ನು ಕೈಕೊಂಡಿದ್ದಾರೆ. ಪಂಚಪೀಠಗಳಂತೆ ಪಂಚಪೀಠಗಳ ಶಾಖಾಮಠಗಳು, ವಿರಕ್ತಸಂಪ್ರದಾಯದ ಮಠಗಳು ಅಷ್ಟೇ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿವೆ.

ಪ್ರಸ್ತುತ ಪೂಜ್ಯ ನಿರುಪಾಧೀಶ್ವರ ಸ್ವಾಮೀಜಿ ವಿರಚಿತ 'ಚೆನ್ನಿಧಿ' ಷಟ್ಪದಿ ಕಾವ್ಯದಲ್ಲಿ ಶ್ರೀ ಕಾಶೀಪೀಠದ ೮೫ ನೇಯ ಜಗದ್ಗುರುಗಳವರ ದಿವ್ಯ ವ್ಯಕ್ತಿತ್ವದ ವಿವಿಧ ಮಜಲುಗಳನ್ನು ಸುಂದರವಾಗಿ ನಿರೂಪಿಸಲ್ಪಟ್ಟಿದೆ. ಈ ಹಿನ್ನಲೆಯಲ್ಲಿ ಅಧ್ಯಯನಕ್ಕೆ ಪೂರಕವಾಗುವ ಜ್ಞಾನ ಪೀಠವೆಂದೇ ಹೆಸರಾಗಿರುವ ಕಾಶೀಪೀಠದ ಕುರಿತಾಗಿ ಕೆಲವು ವಿಷಯಗಳನ್ನು ಪ್ರಸ್ತಾಪಿಸಲಾಗಿದೆ. ಇತಿಹಾಸ ಪ್ರಸಿದ್ಧ ಹಾಗೂ ಹಿಂದುಗಳಿಗೆ ಪವಿತ್ರ ಹಾಗೂ ಲೋಕಪ್ರಸಿದ್ಧವಾದ ಕ್ಷೇತ್ರವಾದ ಕಾಶಿಯಲ್ಲಿ ಸ್ಥಾಪಿತಗೊಂಡಿರುವ ಜ್ಞಾನ ಸಿಂಹಾಸನ ಪೀಠವು ವೀರಶೈವ ಧರ್ಮ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಪರಶಿವನ ಈಶಾನ್ಯ ಮುಖದಿಂದ ಅವಿರ್ಭವಿಸಿದ ಒಡೆಯರೇ ಜ್ಞಾನ ಸಿಂಹಾಸನಾ ಧೀಶ್ವರರು ಇವರು ಶಬ್ಧ ಒಂದೇ ಗುಣವನ್ನು ಹೊಂದಿದ ಆಕಾರ ತತ್ವದ ಒಡೆಯರು 'ಜ್ಞಾನ'ವೆಂದರೆ ಪರಶಿವ ಜೀವಾತ್ಮನಿಗೆ ಅಂಟಿದ ಅಜ್ಞಾನದ ಬಂಧನವನ್ನು ಬಿಡಿಸ ಬೇಕಾದರೆ ಜ್ಞಾನ ಸ್ವರೂಪವಾದ ಗುರುಮಾರ್ಗದರ್ಶನ ಅವಶ್ಯಕ ಹೀಗೆ ವೀರಶೈವ ದರ್ಶನದಲ್ಲಿ ಪರಶಿವನಿಗೆ ಇರುವ ಪಾರಿಭಾಷಿಕ ಮತ್ತೊಂದು ಪದವೇ ಜ್ಞಾನ. ಜ್ಞಾನ ಸಿಂಹಾಸನದ ಪೀಠಾಧೀಶ್ವರರು ಅಲೌಕಿಕ ಶಕ್ತಿಯಿಂದ ಬೆಳಗುತ್ತಿರುವ ಜ್ಞಾನದ ಹಳದಿ ಧ್ವಜವನ್ನು ಹೊತ್ತು ಧರ್ಮ ಪ್ರಚಾರ ಕಾರ್ಯದಲ್ಲಿ ನಿರತರಾಗಿರುತ್ತಾರೆ.

ಕೃತಯುಗ, ತ್ರೇತಾಯುಗ, ದ್ವಾಪರಯುಗ ಹಾಗೂ ಕಲಿಯುಗದಲ್ಲಿ ಅನುಕ್ರವಾಗಿ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರು ಜಗದ್ಗುರು ಪಂಚದಕ್ಷ ಶಿವಾಚಾರ್ಯರು, ಜಗದ್ಗುರು ವಿಶ್ವಕರ್ಣ ಶಿವಾಚಾರ್ಯರು, ಜಗದ್ಗುರು ವಿಶ್ವಾರಾಧ್ಯ ಶಿವಾಚಾರ್ಯರು ಅವತರಿಸಿ ಶಿವಾದ್ವೈತ ಸಿದ್ಧಾಂತವನ್ನು ಉಪದೇಶಿಸುವ ಮೂಲಕ ಧರ್ಮಜಾಗೃತಿ–ಕಾರ್ಯದಲ್ಲಿ ಭಾಗಿಗಳಾಗಿದ್ದರೆಂದು ತಿಳಿದು ಬರುತ್ತದೆ. ದ್ವಾಪರ ಯುಗದ ಶ್ರೀ ವಿಶ್ವಕರ್ಣ ಶಿವಾಚಾರ್ಯರು ವೇದ, ಆಗಮ, ಧರ್ಮಶಾಸ್ತ್ರಗಳನ್ನು ತಿಳಿದ ಪ್ರಾಜ್ಞರಾಗಿದ್ದರು. ಶಾಪಕೋಪಗಳಿಗೆ ಪ್ರಸಿದ್ಧನಾಗಿದ್ದ ದೂರ್ವಾಸ ಮುನಿಯನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿಷ್ಯನನ್ನಾಗಿ ಸ್ವೀಕರಿಸಿ, ಆತನಿಗೆ ವೀರಶೈವ ತತ್ತ್ವೋಪದೇಶ ಮಾಡಿ, ಆತನನ್ನು ಜ್ಞಾನಿಯಾಗಿ ಮೂಡಿದ ಸ್ಥಳವೇ 'ಜ್ಞಾನಪೀಠ' ಅಥವಾ ಜಂಗಮವಾಡಿಮಠ ಎಂದು ಪ್ರಸಿದ್ಧಿ ಪಡೆದಿದೆ. ಕಲಿಯುಗದ ಆಚಾರ್ಯರಾದ ಜಗದ್ಗುರು ವಿಶ್ವಾರಾಧ್ಯರು ಅನೇಕ ಲೀಲಾ ವಿನೋದಗಳನ್ನಾಚರಿಸಿ, ಅನೇಕ ಋಷಿ ಮುನಿಗಳಿಗೆ, ಯತಿಗಳಿಗೆ ವೀರಶೈವ ತತ್ತ್ವೋಪದೇಶಗಳನ್ನು ಅರುಹಿದ್ದಾರೆ. ಹೀಗೆ ಕಾಶೀ ಜಂಗಮವಾಡಿ ಮಠವನ್ನು ಈ ಪೀಠದ ಪರಂಪರೆಯಲ್ಲಿ ಬರುವ ಎಲ್ಲ ಆಚಾರ್ಯರು ಜನತಾ ಕಲ್ಯಾಣ ಕೇಂದ್ರವನ್ನಾಗಿ ಮಾಡಿಕೊಂಡು, ಭಕ್ತರ ಇಷ್ಟಾರ್ಥಗಳನ್ನು ಪೂರೈಸುತ್ತ ಜ್ಞಾನ ಪ್ರಸಾರ ಕಾರ್ಯದಲ್ಲಿ ನಿರತರಾಗಿರುವರು.

ಶಾಸನೋಕ್ತ (ಜಂಗಮವಾಡಿ ಮಠ) ಕಾಶೀ ಪೀಠದೊಂದಿಗೆ ಅನೇಕ ಮುಸ್ಲಿಂ ದೊರೆಗಳು ಭಕ್ತಿ-ಸೌಹಾರ್ದತೆಯಿಂದ ನಡೆದುಕೊಂಡು ಶ್ರೀಮಠಕ್ಕೆ ದಾನಸಲ್ಲಿಸಿದ್ದಾರೆ. ಒಂದು ಕಾಲಕ್ಕೆ ಕಾಶೀ ಜಂಗಮವಾಡಿ ಮಠವು ಸುಮಾರು ೧೪೦೦ ಎಕರೆಗಳಷ್ಟು ವಿಸ್ತಾರ ಭೂಮಿಯನ್ನು ಹೊಂದಿತ್ತು ಆದರೆ ಕಾಲಕ್ರಮೇಣ ಇವೆಲ್ಲ ನಾನಾ ಕಾರಣಗಳಿಂದ ಕಡಿಮೆಯಾಗಿವೆ. ಲೋಕಪ್ರಸಿದ್ಧಿ ಕಾಶಿಯಲ್ಲಿ ಸಾವಿರಾರು ಮಂದಿರಗಳು, ಮಠಗಳಿದ್ದರೂ, ಜಂಗಮವಾಡಿ ಮಠಕ್ಕೆ ಇದ್ದ ವಿಸ್ತಾರವಾದ ನಿವೇಶನ ಬೇರೆ ಮಠಗಳಿರುವುದಿಲ್ಲ. ಮುಸ್ಲಿಂ ದೊರೆಗಳಂತೆ ಅನೇಕ ಅರಸುಮನೆತನದ ದೊರೆಗಳು ಶ್ರೀ ಕಾಶೀಮಠಕ್ಕೆ ಭೇಟಿಯನ್ನಿತ್ತಿದ್ದಾರೆ. ಹಾಗೂ ಜಗದ್ಗುರುಗಳವರನ್ನು ತಮ್ಮ ಸಂಸ್ಥಾನಕ್ಕೆ ಕರೆಯಿಸಿ ಅವರಿಗೆ ಗುರುಭಕ್ತಿ ಕಾಣಿಕೆಗಳನ್ನು ಸಲ್ಲಿಸಿದ್ದಾರೆ. ಇವರಲ್ಲಿ ಮೈಸೂರು ಅರಸು ಮನೆತನದ ದಕ್ಷಪ್ರಭು ಶ್ರೀ ಕೃಷ್ಣರಾಜ ಒಡೆಯರ್ ಅವರು ತಮ್ಮ ಸಕಲಪರಿವಾರದೊಂದಿಗೆ ಕಾಶೀಗೆ ಹೋಗಿ ಶ್ರೀ ವಿಶ್ವನಾಥನ ದರ್ಶನ ಮಾಡಿ, ಜಗದ್ಗುರುಗಳವರ ಆಶೀರ್ವಾದವನ್ನು ಪಡೆದಿದ್ದಾರೆ. ಪ್ರಭುಗಳು ಕಾಶೀಪೀಠದ ಎಪ್ಪತ್ತೊಂಭತ್ತನೆಯ ಜಗದ್ಗುರುಗಳಿಂದ ಶ್ರೀ ಸಿದ್ಧಲಿಂಗ ಶಿವಾಚಾರ್ಯರನ್ನು ಮೈಸೂರಿಗೆ ಕರೆಯಿಸಿ ಗೌರವಾದರಗಳಿಂದ ಭಕ್ತಿ ಕಾಣಿಕೆಯನ್ನು ಸಮರ್ಪಿಸಿದ್ದಾರೆ. ಮೈಸೂರು ಅರಸರಂತೆ – ಕೊಡಗಿನ ಚಿಕ್ಕವೀರ ರಾಜೇಂದ್ರ ಅರಸರು ಕಾಶೀ ಜಂಗಮವಾಡಿಮಠಕ್ಕೆ ಭಕ್ತಿಯಿಂದ ನಡೆದುಕೊಂಡಿದ್ದು ತಿಳಿದು ಬರುತ್ತದೆ.

ಶ್ರೀ ಪೀಠಕ್ಕೆ ಇಲ್ಲಿಯವರೆಗೆ ಆಗಿ ಹೋಗಿರುವ ೮೫ ಜಗದ್ಗುರುಗಳವರಲ್ಲಿ ತಪೋಸಿದ್ಧರು, ಶಿವಯೋಗಿಗಳು ಹಾಗೂ ವಿದ್ವಾಂಸರಿದ್ದಾರೆ. ಇವರಲ್ಲಿ ಶ್ರೀ ಜಗದ್ಗುರು ಹರೀಶ್ವರ ಶಿವಾಚಾರ್ಯರು, ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯರು ತಮ್ಮ ಅಧಿಕಾರಾವಧಿಯಲ್ಲಿ ಕೊಡಗಿನ ರಾಜರ ಹಾಗೂ ಭಕ್ತರ ನೆರವಿನಿಂದ ಮಠದ ದರ್ಬಾರ್ ಹಾಲ್, ರಾಣಿ ಛತ್ರ, ಗಣೇಶ ಮಹಲ್ ಮತ್ತು ಚಿತ್ರಶಾಲ ಭವನಗಳನ್ನು ನಿರ್ಮಿಸಿದರು. ಕ್ರಿ.ಶ. ೧೮೭೪ ರಿಂದ ೧೮೮೧ ರವರೆಗೆ ಹನ್ನೆರಡು ವರ್ಷಗಳ ಕಾಲ ಶ್ರೀ ಕಾಶೀಪೀಠದ ಜಗದ್ಗುರುಗಳಾಗಿ ಸಮರ್ಥವಾಗಿ ಕಾರ್ಯ ನಿರ್ವಹಿಸಿದ ಒಂದನೇ ವೀರಭದ್ರ ಶಿವಾಚಾರ್ಯರು ತಮ್ಮ ವಿದ್ವತ್ತಿನಿಂದ ಪೀಠದ ಹಿರಿಮೆಯನ್ನು ಹೆಚ್ಚಿಸಿದರು. ಇವರ ಕಾಲದಲ್ಲಿ ಅನೇಕ ಉಪಯುಕ್ತ ವೀರಶೈವ ಧರ್ಮಗ್ರಂಥಗಳು ಪರಿಷ್ಕರಣೆಗೊಂಡು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಕಟಗೊಂಡಿವೆ ವಿದ್ವತ್ ಜನರ ಸಭೆಗಳನ್ನು ಜಗದ್ಗುರುಗಳವರು ನಡೆಸಿದ್ದಾರೆ. ಶಿವಕುಮಾರ ಶಾಸ್ತ್ರಿಗಳಿಂದ ರಚಿತವಾದ ಶಿರತ್ ವ್ಯಾಖ್ಯಾ ಸಮೇತವಾಗಿ ''ಲಿಂಗಧಾರಣ ಚಂದ್ರಿಕೆ'' ಸಂಸ್ಕೃತ ಗ್ರಂಥವನ್ನು ಪೀಠದ ವತಿಯಿಂದ ಪ್ರಕಟಿಸಿದ್ದಾರೆ. ಇವರ ತರುವಾಯ ಬಂದ ೮೨ ನೆಯ ಜಗದ್ಗುರುಗಳಾದ ಇಮ್ಮಡಿ ಶಿವಲಿಂಗ ಶಿವಾಚಾರ್ಯರು ಕ್ರಿ.ಶ. ೧೯೦೭ ರಿಂದ ಕ್ರಿ.ಶ. ೧೯೩೭ ರ ವರೆಗೆ ಅಖಂಡ ೨೫ ವರ್ಷಗಳ ಕಾಲ ಪೀಠಾಧೀಶರಾಗಿ ಧರ್ಮ, ಸಾಹಿತ್ಯ, ಸಂಸ್ಕೃತಿಗಳ ಪ್ರತಿಪಾದಕರಾಗಿ, ಪ್ರಚಾರಕರಾಗಿ ''ಜಗದ್ಗುರು ವಿಶ್ವಾರಾಧ್ಯ'' ಗುರುಕುಲವನ್ನು ಪ್ರಾರಂಭಿಸಿದರು. ಇವರ ಕಾಲದಲ್ಲಿ ಬೇರೆ ಬೇರೆ ಭಾಗಗಳಿಂದ ಅಧ್ಯಯನಕ್ಕೆ ಬರುತ್ತಿದ್ದ ವಟುಗಳಿಗೆ ಕಾಶೀ ಜಂಗಮವಾಡಿ ಮಠದಲ್ಲಿ ಆಶ್ರಯ ನೀಡಿ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟಿದ್ದರು. ಇದೇ ಪರಂಪರೆಯಲ್ಲಿ ೮೩ ನೆಯ ಜಗದ್ಗುರುಗಳಾಗಿ ಪೀಠದ ಸರ್ವತೋಮುಖ ಬೆಳವಣಿಗೆಯಲ್ಲಿ ವಿಶೇಷ ಆಸಕ್ತಿ ವಹಿಸಿ ಶ್ರೀಮಠಕ್ಕೆ ಆರ್ಥಿಕ ಸುಭದ್ರತೆಯನ್ನು ಒದಗಿಸಿಕೊಟ್ಟ ಜಗದ್ಗುರು ಶ್ರೀ ಪಂಚಾಕ್ಷರ ಶಿವಾಚಾರ್ಯರು ಸಾಕಷ್ಟು ಶಿಷ್ಯ ಸಂಪತ್ತು ಹೊಂದಿದ್ದರು. ವಿದ್ಯಾವಿನಯ ಸಂಪನ್ನರೂ, ಶಿಕ್ಷಣ ಪ್ರೇಮಿಗಳೂ, ದಾರ್ಶನಿಕರೂ ಹಾಗೂ ಶ್ರೀ ಪೀಠದ ೮೪ ನೆಯ ಜಗದ್ಗುರುಗಳಾದ ಶ್ರೀ ಇಮ್ಮಡಿ ಶಿವಾಚಾರ್ಯರು ತಮ್ಮ ಸಂಕಲ್ಪದಂತೆ ಪೀಠದಲ್ಲಿ ಜ್ಞಾನ ಭಂಡಾರವನ್ನು (ಗ್ರಂಥಾಲಯ) ಪ್ರಾರಂಭಿಸಿದರು. ಸಿಕಂದರಾಬಾದಿನ 'ಶೈವಭಾರತಿ–ಭವನ'ದ ಎಲ್ಲ ಅಮೂಲ್ಯ ಗ್ರಂಥಗಳು ಜ್ಞಾನ ಭಂಡಾರಕ್ಕೆ ಸೇರ್ಪಡೆಯಾಗುವಂತೆ ನೋಡಿಕೊಂಡರು. ಈ ಜ್ಞಾನ ಭಂಡಾರದಲ್ಲಿರುವ ಮೌಲಿಕ ಗ್ರಂಥಗಳು ಮತ್ತು ತಾಡೋಲೆಗಳು ಸಾಹಿತ್ಯಾಸಕ್ತರಿಗೆ, ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿವೆ. ಶ್ರೇಷ್ಠ ವಾಗ್ಮಿಗಳಾಗಿದ್ದ ಜಗದ್ಗುರುಗಳವರು ಬೇರೆ ಬೇರೆ ರಾಜ್ಯಗಳ ವಿವಿಧ ಪಟ್ಟಣ, ನಗರ ಗ್ರಾಮಗಳಲ್ಲಿ ಪ್ರವಚನ ನೀಡಿ ಜನರಲ್ಲಿ ಧರ್ಮ ಭಾವನೆಯನ್ನು ಉದ್ದೀಪನಗೊಳಿಸಿದ್ದಾರೆ.

ಹೀಗೆ ಕಾಶೀ ಪೀಠದ ಅನೇಕ ಪೀಠಾಧೀಶರು ಧರ್ಮ ಸಮ್ಮೇಳನ, ಧರ್ಮಗೋಷ್ಠಿ, ವಿದ್ವತ್ ಜರನ ಗೋಷ್ಠಿಗಳು ಹಾಗೂ ಆಗಮಗಳ ಕುರಿತ ವಿಶೇಷ ಉಪನ್ಯಾಸಗಳನ್ನು ಆಯೋಜಿಸುವುದರ ಮೂಲಕ ರಾಷ್ಟ್ರಾದ್ಯಂತ ವೀರಶೈವ ಧರ್ಮಪ್ರಚಾರ ಕಾರ್ಯ ಮಾಡಿದ್ದಾರೆ. ಶ್ರೀ ಪೀಠದ ೮೫ ನೆಯ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ವಿಶ್ವೇಶ್ವರ ಶಿವಾಚಾರ್ಯರು ವಿದ್ವತ್ ಪರಂಪರೆಯಲ್ಲಿ ಹೆಸರಿಸಬೇಕಾದವರು. ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಚಾರಕ್ಕಾಗಿ ಉತ್ತ ಭಾರತದಿಂದ ಕರ್ನಾಟಕದವರೆಗೆ ಸಂಚರಿಸಿ ದರ್ಮ ಬೋಧನೆಯನ್ನು ಮಾಡಿದ ಹೆಗ್ಗಳಿಕೆ ಇವರದಾಗಿದೆ. ಕಾಶೀಪೀಠದ ದರ್ಶನಕ್ಕೆ ಬರುವ ಭಕ್ತಾಧಿಗಳಿಗೆ ದಾಸೋಹ ಹಾಗೂ ವಸತಿ ಸೌಲಭ್ಯಗಳನ್ನು ಕಲ್ಪಿಸಿ ಕೊಟ್ಟಿದ್ದರು. ಶ್ರೀ ಪೀಠದ ಆರ್ಥಿಕ ಸ್ಥಿತಿ–ಸುಧಾರಿಸುವಲ್ಲಿ ಅನೇಕ ಉಪಕ್ರಮಗಳನ್ನು ಕೈಗೊಂಡಿದ್ದರು. ಕರ್ನಾಟಕದ ನೆರೆಯ ರಾಜ್ಯ ಮಹಾರಾಷ್ಟ್ರದ ಪುಣೆಯಲ್ಲಿ 'ವಿಶ್ವಾರಾಧ್ಯ ವಿದ್ಯಾರ್ಥಿ ನಿಲಯ' ಮತ್ತು ಮಂಗಳವೇಡದಲ್ಲಿ 'ವಿಶ್ವಾರಾಧ್ಯ ಬೋರ್ಡಿಂಗ' ಪ್ರಾರಂಭಿಸಿ ಬಡ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟಿರುವರು. ಕಾಶೀಯಲ್ಲಿರುವ
ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಎಲ್ಲ ವೇದಾಂತಗಳ ಜೊತೆಗೆ
''ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ'ದ ಅಧ್ಯಯನಕ್ಕೆ ಅವಕಾಸ ಕಲ್ಪಸಿಕೊಟ್ಟು ಉತ್ತರ
ಭಾರತದ ಜನತೆಗೆ ವೀರಶೈವ ಸಿದ್ಧಾಂತವನ್ನು ತಿಳಿದುಕೊಳ್ಳುವಂತೆ ಮಾಡಿದ್ದಾರೆ. ಶಕ್ತಿ
ವಿಶಿಷ್ಟಾ್ಯದ್ವೈತ ಸಿದ್ಧಾಂತದ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಮತ್ತು
ಸಂಶೋಧಕರಿಗೆ ವಿದ್ಯಾರ್ಥಿ ವೇತನ ದೊರೆಯುವಂತ ದತ್ತಿನಿಧಿಯನ್ನು ಇಡಲಾಗಿದೆ.

ಹೀಗೆ ಸಮಾಜದ ಸರ್ವತೋಮುಖ ಬೆಳವಣಿಗೆಯಲ್ಲಿ ನಿರತರಾಗಿದ್ದು ಕಾಶೀಪೀಠದ
೮೫ ನೆಯ ಜಗದ್ಗುರುಗಳವರ ಕುರಿತು 'ಚಿನ್ನಿಧಿ' ಭಾಮಿಸಿ ಷಟ್ಪದಿ ಕಾವ್ಯವು ಮರೆಗುದ್ದಿ
ಪೂಜ್ಯ ಶ್ರೀ ನಿರುಪಾಧೀಶ್ವರ ಸ್ವಾಮಿಗಳವರಿಂದ ರಚನೆಗೊಂಡಿದ್ದು; ೧೮ ಅಧ್ಯಾಯ
ಗಳಲ್ಲಿ (ಅಧ್ಯಾಯಗಳಿಗೆ ಪರ್ಯಾಯವಾಗಿ 'ಬೆಳಗು' ಎನ್ನಲಾಗಿದೆ) ವಿಸ್ತೃತಗೊಂಡಿರುವ
ಪ್ರಸ್ತುತ ಕಾವ್ಯ ೧೯೨೭ ಪದ್ಯಗಳನ್ನೊಳಗೊಂಡಿದ್ದು; ಪೂಜ್ಯ ಜಗದ್ಗುರುಗಳವರ
ಜೀವನ–ಸಾಧನೆ–ಸಿದ್ಧಿಗಳನ್ನು ನೇರ ಹಾಗೂ ಸರಳ ಶೈಲಿಯಲ್ಲಿ ಕಾವ್ಯ ತತ್ವಗಳ
ಚೌಕಟ್ಟಿನಲ್ಲಿ ಅನಾವರಣಗೊಳಿಸುತ್ತ ಹೋಗಿದ್ದು; ಸಹೃದಯ ಓದುಗರ ಮನವನ್ನು
ಗೆಲ್ಲಲು ಸಾಧ್ಯವಾಗಿದೆ ಎಂದು ಹೇಳಬಹುದು. ಪುರಾಣ–ಕಾವ್ಯಗಳನ್ನು ರಚಿಸುವಲ್ಲಿ
ಸಿದ್ಧಹಸ್ತರಾಗಿರುವ ಶ್ರೀ ನಿರುಪಾಧೀಶ ಸ್ವಾಮಿಗಳು, ಜಗದ್ಗುರುಗಳವರ ಕುರಿತು
ಲಭ್ಯವಿರುವ ಆಕರ ಸಾಮಗ್ರಿಗಳ ಆಧಾರದ ಹಿನ್ನಲೆಯಲ್ಲಿ ಮತ್ತು ವಿಶೇಷವಾಗಿ
ಜಗದ್ಗುರುಗಳವರೊಂದಿಗೆ ಒಡನಾಟ ಹೊಂದಿದ್ದು ನಿರುಪಾಧೀಶ ಕಂಡು ಕೇಳಿದ
ವಿಚಾರಗಳ ಹಿನ್ನಲೆಯಲ್ಲಿ ವಸ್ತುನಿಷ್ಠವಾಗಿ ಕಾವ್ಯ ರಚಿಸಿರುವುದು ವಿಶೇಷವೆನ್ನಬಹುದು.
ಪ್ರತಿಯೊಂದು ಅಧ್ಯಯನವನ್ನು 'ಬೆಳಗು' ಎಂಬ ಹೆಸರಿನಿಂದ ಸೂಚಿಸಿದ್ದು; ಪ್ರತಿ
ಅಧ್ಯಾಯದ ಪ್ರಾರಂಭದಲ್ಲಿ ಕೊಟ್ಟಿರುವ ಶಿರೋನಾಮೆ, ಉಪಶಿರೋನಾಮೆಗಳು
ಅರ್ಥಪೂರ್ಣವಾಗಿವೆ ಹಾಗೂ ಅಧ್ಯಾಯದಲ್ಲಿ ಚರ್ಚಿತಗೊಳ್ಳಲಿರುವ ವಿಷಯದ
ಮುನ್ಸೂಚನೆಯನ್ನು ನೀಡುತ್ತವೆ.

ಶ್ರೀ ನಿರುಪಾಧೀಶ ಶ್ರೀಗಳವರು 'ಚಿನ್ನಿಧಿ' ಕಾವ್ಯದಲ್ಲಿ ಅಧ್ಯಾಯಗಳಿಗಾಗಿ
'ಬೆಳಗು' ಎಂಬುದಾಗಿ ಬಳಸಿದ್ದುವು ಒಂದು ವಿಶೇಷತೆ ! ಇದು ಈ ಕೃತಿಯ ವೈಶಿಷ್ಟ್ಯ
ಗಳಲ್ಲೊಂದು ಪುರಾಣ ಪರಂಪರೆಯನ್ನು ಸಂಪೂರ್ಣವಾಗಿ ಅನುಸರಿಸಿದಂತಿದೆ.
ಬಸವಪುರಾಣದಲ್ಲಿ ಪ್ರತಿಯೊಂದು ಅಧ್ಯಾಯದಲ್ಲಿ ಬರುವಂತೆ –ತ್ರಿಚರಣಗಳುಳ್ಳ
ಸೂಚನೆ ಈ ಕಾವ್ಯದುದ್ದಕ್ಕೂ ಬಂದಿರುವುದು ಗಮನಾರ್ಹ ಉದಾಹರಣೆಗೆ

ಚನ್ನ ಚಿನ್ನಿಧಿವರ್ಯರಾ ಸಂ
ಪನ್ನ ಜೀವನಚರ್ಯರುನ್ನತಿ
ಯೆನ್ನ ಬರೆಯುವ ಕಾರಣರಿವುದು ಮೊದಲು ಸಮದರ್ಶಿ ॥

ತ್ರಿಚರಣಗಳುಳ್ಳ ಪದ್ಯಗಳು ಪ್ರತಿಯೊಂದು ಅಧ್ಯಾಯದ ವಸ್ತು ವಿಷಯದ
ವೈವಿಧ್ಯತೆಯನ್ನು ಸೂಚ್ಯವಾಗಿ ತಿಳಿಸುವ ಕ್ರಮ ವಿಶೇಷವಾದುದು. ಈ ಕೃತಿ ಕಿರಿದಾದರೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೌಲ್ಯದಲ್ಲಿ ಹಿರಿದಾಗಿದೆ. ಭಾಮಿನಿ ಷಟ್ಪದಿಯ ನಡೆಯಲ್ಲಿ ಸುಂದರವಾಗಿ ಮೂಡಿ ಬಂದಿದೆ. 'ಚಿನ್ನಿಧಿ' ಕಾವ್ಯ ಪ್ರಾರಂಭದಲ್ಲಿರುವ 'ಚಿನ್ನಿಧಿ'ಯ 'ಹೊಂಬೆಳಗು' ಓದಿದಾಗ ನಿರುಪಾಧೀಶರ ಕವಿತ್ವದ ಶಕ್ತಿ ನಮಗೆ ಅರಿವಾಗದಿರದು! ಕಾವ್ಯದ ಪ್ರಾರಂಭಕ್ಕೂ ಮುನ್ನ ಬಸವಾದಿ ಶರಣರನ್ನು ಸ್ಮರಿಸಿರುವುದು ಪ್ರಾಚೀನ ಕಾವ್ಯಗಳನ್ನು ನೆನಪಿಗೆ ತರುತ್ತದೆಂದು ಹೇಳಬಹುದು.

ಕತ್ತಲೋ ಗೆಲ್ಲರಿಗು ಬೆಳಕಿನ
ಬತ್ತಿಗಳೇ ತಾವಾಗುತಲ್ಲದೆ
ಹೊತ್ತು ಹೊತ್ತಿಗೆಹೂವದಂತಿರಿಸುತ್ತ ಜೀವಿಗಳ ॥
ಹೊತ್ತನರಿಸುತ ಹರ್ಷಹೊನಲೊಳ
ಗುತ್ತಮೋತ್ತಮ ಕಾರ್ಯದೊಳ ಪದ
ಗತ್ತ ಗೂಡಿಸುವಂಥ ಗಣ ಶರಣರಿಗೆ ಶರಣಾರ್ಥಿ

ಇದೇ ಅಧ್ಯಾಯದ ಮುಂದುವರೆದ ಭಾಗದಲ್ಲಿ ಶ್ರೀಗಳಿಂದ ರಚಿತಗೊಂಡಿರುವ ಕೃತಿ ಪರಿಚಯವನ್ನು ಸೂಚ್ಯವಾಗಿ ಮಾಡುವುದರೊಂದಿಗೆ, ಪ್ರಸ್ತುತ ಕಾವ್ಯರಚನೆಗೆ ಪ್ರೇರಣೆಯನ್ನಿತ್ತ ಈಗಿನ ಕಾಶೀ ಜಗದ್ಗುರುಗಳವರ ಬಗೆಗೆ ತಿಳಿಸುತ್ತ ಕಥಾನಾಯಕನ ಬಗೆಗೆ ಹೀಗೆ ಪ್ರಸ್ತಾಪಿಸಿದ್ದಾರೆ.

ಎಂಥ ನಾಯಕನಿವನು—

ಈತ ಸತ್ಕುಲವಂಶಿ ಸಾತ್ವಿಕ
ಸೇತು ಗತಿ-ಗಾಂಭೀರ್ಯ ಸಂಸ್ಕೃತಿ
ಮಾತು ಮಾತಿಗೆ 'ವೀರಶೈವಾಚಾರವಭಿಮಾನಿ
ಖ್ಯಾತ ಚರ ಅಥಣೀಶನಾಶಯ
ಮಾತಿನಂತಾದಾತ ಮಹಿಮ ವಿ
ಭೂತಿ ವೈಭವವಾಸದಾಂಗ ಸಮಾಜ ಮುಕುರ

ಕುಮಾರವ್ಯಾಸ – ಚಾಮರಸ ಕವಿಗಳು ತಮ್ಮ ಕಾವ್ಯ ಪ್ರಾರಂಭದಲ್ಲಿ ಹೇಳಿರುವಂತೆ ನಿರುಪಾಧೀಶರೂ ಹೀಗೆನ್ನುತ್ತಾರೆ.

ಬರೆಯುವವರಾರು—

ಶುದವಹುದಂಕಲಗಿಯಡವೀ
ಸಿದ ಚರಣಾಶ್ರಯದಿ ಸ್ಥಾಪಿಸ
ಲೆದ್ದ ಪುರಮರೆಗುದ್ದಿ ಮಠವಿದುವಡವಿಸಿದ್ದೇಶ ॥
ಬದಿದಕೆ ಗುರುವಂಶದೊಳು ಕ್ರಮ
ಬದ್ದ ಗುರು ಗುರುಪಾದ ಕೃಪೆಯಿಂ
ದೆದ್ದ ನಿರುಪಾಧೀಶನಿಂ -ಶ್ರೀಕಾರ ಪರಿತೋಷ

ಬರೆಯುವವನು ನಾನಾದರೂ, ಎನ್ನಂತರಂಗದೊಳ ಬರೆಯಿಸುವವನು ಆ ಅಂಕಲಗಿಯಡಿವಿ ಸಿದ್ಧೇಶನು ಎಂಬುದಾಗಿ ಹೇಳುತ್ತ ಆತನಿಗೆ ಅರ್ಪಿತವು ಈ ಕಾವ್ಯ ಕುಸುಮದು ಎಂದಿದ್ದಾರೆ ನಿರುಪಾಧೀಶರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಕಾಲ ತಾಲ' ವೆಂಬುವುದರಲ್ಲಿ ಚರಿತನಾಯಕನು ಜನಿಸುವ ಹಿನ್ನೆಲೆಯುಳ್ಳ ಸಾಮಾಜಿಕ, ಧಾರ್ಮಿಕ, ಪರಿಸರಗಳ ಚಿತ್ರಣವನ್ನು ಕಣ್ಮುಂದೆ ಕಟ್ಟುವ ಹಾಗೆ ಚಿತ್ರಿಸಲಾಗಿದೆ.

ಸಾಮಾಜಿಕ ಪರಿಸ್ಥಿತಿ –

ಅಂದು ಕರ್ಮಠರೊಲವದಿಂ ಬಿಡ
ದಂದು ಬಂದಿಹ ಜಾತಿಮತ ಭೇ
ದಂದುವೇ ಮುಂದೊರೆದಗತಿ ಸತಿ ಹೋಗುವಾ ರೀತಿ॥
ಬಂದವರದೊತ್ತಾಯದೊಳಬಿಡ
ದಂದು ಬದಲಾದಂಥ ಜಂಹ್ವಾ
ನಂದದಿ ಮನುಸ್ಮೃತಿಯ ಮನ್ನಿಸುತವರದೇ ಚಾಳಿ

ಧಾರ್ಮಿಕ ಪರಿಸ್ಥಿತಿ –

ಅರಸರಾಶ್ರಯದೊಳಗಿರುವರ
ಹುರಿಯದಂತೆಯ ಹಾಡ ಹಾಡುತ
ಲಿರುವ ಪಾಠ್ಯಕ್ರಮದಿ ಸಾಗಿಹುದವರದೇ ನೋಟ॥
ಪರಮದಾಗಮದಾಳ ಮುಚ್ಚಿಡು
ತರಳು ಸಂಸ್ಕೃತ ಭಾಷೆಗಲಿಸು
ತ್ತಿರುವ ಡೌಲದ ಗತ್ತಗಾಣುತ ದೀನರೆಲ್ಲರರು

ಮುಂದುವರೆದು 'ಪ್ರಾಕೃತಿಕ ಪಾತ್ರ'ದಲ್ಲಿಯೂ ಮಲೆನಾಡಿನ ಸೆರಗು ಎಂದೇ ಖ್ಯಾತಿ ಹೊಂದಿದ ಹಾವೇರಿ ನಿರ್ಮಾಣ ಈ ಭಾಗವನ್ನು ಆಳಿದ ಆಳರಸರು ವಹಿವಾಟ, ಬೆಳೆಗಳು, ವನಸಿರಿಯ, ಹಸಿರಿನ ರಮ್ಯ ಮುಂತಾದವುಗಳ ವರ್ಣನೆ ದಟ್ಟವಾಗಿದೆ. ಸರ್ವಜ್ಞಕವಿ ಜನಿಸಿದ ಮಾಸೂರು ಕುಮುದ್ವತಿ ನದಿಯ ಮಂಜುಳ ನಿನಾದದ ವೈಭವ ಮತ್ತುಕಲ್ಮೇಶ್ವರ, ಆಂಜನೇಯ, ಗಣಪತಿ, ವೀರಭದ್ರೇಶ್ವರ, ಬೀರೇಶ್ವರ, ಚೌಡೇಶ್ವರ, ಬಾಡದಾದೀಕೇಶವ ಮುಂತಾದ ಮಂದಿರಗಳ ಧಾರ್ಮಿಕ ಪರಂಪರೆ ದಿವ್ಯದರ್ಶನ ಹೀಗೆ ಮೂಡಿ ಬಂದಿದೆ.

ಇಲ್ಲಿ ಕಲ್ಮೇಶ್ವರನ ಮಂದಿರ
ದಲ್ಲಿ ಕಲೆ-ಚಾಲುಕ್ಯ ಶೈಲಿಗ
ಳಲ್ಲಿ ಕಂಗೊಳಿಸಿಹುದು ಮತ್ತೆ ಹಲವು ಗುಡಿಗಳಿಹವು॥
ಬಲ್ಲ ಗಣಪತಿ-ವೀರಭದ್ರರ
ದಿಲ್ಲಿ ಬೀರೇಶ್ವರರ ಮಂದಿರ
ಸಲ್ಲಿದಂತೆಯೇ ನೋಡಿ ಚೌಡೇಶ್ವರಿಯ ಗುಡಿಯಿಹುದು

ಇಂತಹ ಪರಿಸರದ ಬಾಳ್ಕೆಯಲ್ಲಿ ಹಾವೇರಿಪುರಕ್ಕೊಪ್ಪುವ ಹಿರೇಮಠವು ಸಹಿತ–ಚಿತ್ತವೀಪುರದೊಳಗೆ ಚರಿತನಾಯಕನಿತ್ತ ಜನಿಸಿಹುದಾರ್ಥವೀ ನುಡಿಗತ್ತದೊಳ ರಿಯುವಿಕೆ ಮುಂದಿನ ಬೆಳಗಿನಾಂಗಳದಿಯೆನ್ನುವಂತೆ ! ಎಂದಿರುವುದನ್ನು ಗಮನಿಸಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು ಮೂರರಲ್ಲಿಯೂ ಹಾವೇರಿ ಸಂಸ್ಕೃತಿಯ ಸೊಬಗಿನ ಸೋನೆಯಿದೆ ಮತ್ತು ಚರಿತ್ರನಾಯಕನ ಜನನಿ–ಜನಕರ ನಾಮನಿರ್ದೇಶನವಿದೆ. ಹಿರೇಮಠವು ವೀರಶೈವ ಪರಂಪರೆಯ ಸಂಸ್ಕೃತಿಗೆ ಸಂಬಂಧ ಪಟ್ಟಂತೆ ವಿಧಿ–ವಿಧಾನ–ಪದ್ಧತಿಗಳನ್ನು ಅನುಸರಿಸಿ ಕೊಂಡು ಬಂದ ಪರಿವಾರವೇ ಪರಮಶಿವಯ್ಯ ಮತ್ತು ರುದ್ರಮ್ಮ ದಂಪತಿಗಳು ಎಂಬುದಾಗಿ ನಿರೂಪಿತಗೊಂಡಿದೆ.

ಪರತರ ಹಿರೇಮಠದಿ ಸದ್ಗುಣ
ಸರಿತಸಿರಿ ಪರಮೇಶ್ವರಯ್ಯರು
ಸರಿಯೆ ಸುವ್ರತಿ ಸತಿಯು ಸದ್ಗುಣಿ ಶೀಲೆ ರುದ್ರಮ್ಮ ॥
ಇರುತಿಹರು ಲಿಂಗಾಯತದ ಪಥ
ಪರಿಯ ಸಂಸ್ಕೃತಿ ಸೊಬಗ ಸೆಲೆಯೊಳ
ಗಿರುತಿಹರು ಮನಸೊಪ್ಪಿ ತನ್ನಿರಿಯಾತ್ಮ ಸಾಕ್ಷಿಯಲಿ

ಇಂಥ ಪುಣ್ಯ ದಂಪತಿಗಳಾಗಿ ಮಗನಾಗಿ ೨೩–೦೩–೧೯೧೭ ರಲ್ಲಿ ಜನಿಸಿದ ಮಗುವಿಗೆ ಸಿದ್ಧಲಿಂಗ – ಸಿದ್ಧಲಿಂಗಯ್ಯ ಎನುತ ಸುಮಂಗಲೆಯರು ಜೋಗುಳ ಹಾಡುತ ತೊಟ್ಟಿದಲ್ಲಿ ಮಲಗಿಸುವ ಚಿತ್ರಣ ಓದುಗರ ಮನ ಸೂರೆಗೊಳ್ಳುತ್ತದೆ. ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲೂಕಿನ ಮದನಮಾಸೂರ ಪುರವು ಈತನ ಜನನದಿಂದ ಅರುಣೋದಯದ ಕಾಂತಿಯ ಬೆಳಕು ಪಸರಿಸಿದಂತಾಯಿತೆಂದೇ ಹೇಳಬೇಕು. ಹಾಲುಗಲ್ಲದ ಹಸುಳೇ ಬೆಳೆ ಬೆಳೆಯುತ್ತಿದ್ದಂತೆ ತಂದೆ–ತಾಯಿ ಊರ ಮಂದಿಗೆ ಸಂತಸದ ಹೊಂಗನಸು ಹರಿದಿತ್ತು 'ಸಂಸ್ಕೃತಿ' ಯೆಂಬ ಬೆಳಗಿನ ಆ ಮಗುವಿನ ಬೆಳವಣಿಗೆಯ ವರ್ಣನೆಯು ಕವಿನಯರಿಂದ ಸುಂದರವಾಗಿ ಹೀಗೆ ನಿರೂಪಿತವಾಗಿದೆ.

ಸುಳಿಯುತಂಬೇಗಾಲ ಸುಂದರ
ಚಲನವಲನದ ಚಂದ ಚಂದ್ರಿಕೆ
ಚಲುವ ನಿಲುವಿನದೊಲವದುಲಿಕೆ ಸಕಾಲ ಬೆಳೆನಲಿಕೆ ॥
ಒಲವದೆಂತೆನಿಸುತ್ತ ಭಕುತರೊ
ಲಲೆಯ ನಲ್ಮೆಯ ಭಾವ ಬೆಳಗದು
ಮಳೆಗೆರೆದಂತೆನಲಿದೇನಿದು ತಿಳಿಯದಾಂತರಿಕ

ಇದೇ ಕಾಲಾವಧಿಯಲ್ಲಿ ಅಥಣಿ ಪುರವರಾಧೀಶ ಪೂಜ್ಯ ಶ್ರೀ ಮುರುಘೇಂದ್ರ ಶಿವಯೋಗಿಗಳವರ ಆಗಮನದಿಂದಾಗಿ (ಸಿದ್ಧಲಿಂಗಯ್ಯನ) ಮಗುವಿನ ಮೇಲೆ ಅವರ ಕೃಪಾದೃಷ್ಟಿ ಬೀಳುತ್ತದೆ. ಮುಂದೇ ಈತ ಅಂದಣವನೇರುವನು – ಗಣಹಿತ ಬಂದು ತಾನೆನಿಸುವನು– ಉತ್ತರೋತ್ತರವಾಗಿ ಸಾಗುತಭಿತ್ತಿ ಬಲಿಸುತ ಗುಡಿಗೆ ಗೋಪುರದಂತೆ ಶೋಭಿಸುವನಲ್ಲದೇ ಚಿತ್ತ ಜನಹಿತಕಾರಿಯಾಗಿ ಕಾರ್ಯವನೆಸಗುತ, ಏಳ್ಗೆಯನು ಬಯಸುತ, ಮತಿ ಭಿತ್ತಿಯೊಳಗೆ ಲಿಂಗಾಯತ ಧರ್ಮದ ವಿಚಾರಗಳನು ಬಿತ್ತುವನೆಂದು ಹರಸಿದರು. ಹಾವೇರಿ ಹೊಸಮಠದ ಮರಿಯಾಗುವ ಲಕ್ಷಣಗಳನ್ನು ಅಥಣೀಶರು ಗುರುತಿಸಿ, ಕೃಪಾಕಟಾಕ್ಷ ಬೀರಿದರೆಂದು ತೋರುತ್ತದೆಯೆನ್ನಲಾಗಿದೆ. ಹಾಗೂ ಸಿದ್ಧಲಿಂಗಯ್ಯ ಸಿಂಹಾಸನದ ಪಟ್ಟ ಪಲ್ಲಕ್ಕಿಯನ್ನೇರುತ್ತಾನೆಂಬ ಭವಿಷ್ಯವಾಣಿಯನ್ನು ನುಡಿಯುವರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಮಶಿವಯ್ಯ ರುದ್ರಮ್ಮ ದಂಪತಿಗಳಿಗೆ ಗಂಗಾಧರ, ನೀಲಕಂಠಯ್ಯರ ತರುವಾಯ ಸಿದ್ಧಲಿಮಗಯ್ಯ ಮೂರನೆಯವರಾಗಿ ಜನಿಸುತ್ತಾರೆಂಬುದನ್ನು ಮರೆಯುವಂತಿಲ್ಲ. ಸಿದ್ಧಲಿಂಗಯ್ಯನ ನಂತರವೂ ಬಸವರಾಜ, ಮೃತ್ಯುಂಜಯ, ಶಿವಮೂರ್ತಯ್ಯರೆಂಬುದಾಗಿ ಮೂವರು ಜನಿಸುತ್ತಾರೆ ಎಂಬುದಾಗಿ ಈ ಕೃತಿಯಲ್ಲಿ ಉಲ್ಲೇಖಗೊಂಡಿದ್ದು; ಇವರಿಗೆ ಒಟ್ಟು ಆರು ಜನ ಗಂಡು ಮಕ್ಕಳಿದ್ದರೆಂದು ತಿಳಿದು ಬರುತ್ತದೆ.

ಸಿದ್ಧಲಿಂಗನು ಐದು ವರ್ಷವ ಎಸಗುತ್ತಿರುವಂತೆ ಓರಿಗೆಯ ಮಿತ್ರರೊಂದಿಗೆ ಚಿಣಿ–ಫಣಿ, ಓಟೆ, ಸರಿಗೆರೆ–ಗೋಲಿಗುಂಡು, ಗುರಿ–ಬಗರಿ–ಗಿಡಮಂಗ ನಾಟವನ್ನಾಡುವುದರಲ್ಲಿ ತೊಡಗುತ್ತಾನೆಂಬುದಾಗಿ ನಿರುಪಾಧೀಶರು ವಿವರಿಸಿದ್ದಾರೆ. ತಾಯಿಯೋ ಪಾದಿಯಲ್ಲಿ ಬೆಳೆದ ಮಗು–ವಿಭೂತಿ ಚಿತ್ಕಳೆಯು ಶೋಭಾಯಮಾನವಾಗಿ ಕಂಗೊಳಿಸುತ್ತದೆ. ಶಿವಯೋಗ ಮಂದಿರದ ಯೋಗಿವರರೆನಿಸಿದ ರಟ್ಟಿಹಳ್ಳಿ ಕಬ್ಬಿಣಕಂತಿ ಮಠದ ಶ್ರೀ ಷ. ಬ್ರ. ಸಿದ್ಧಲಿಂಗ ಶಿವಾಚಾರ್ಯರ ಗುರುಕರುಣದಲ್ಲಿ ಸಿದ್ಧಲಿಂಗನ ವಿದ್ಯಾಭ್ಯಾಸ ನಡೆಯುತ್ತಿದೆ ಬೆಳೆಯುವ ಸಿರಿ ಮೊಳಕೆಯಲ್ಲಿ ಕಾಣು ಎಂಬಂತೆ ಅವರು ಹೇಳಿದುದೆಲ್ಲವನ್ನೂ ಕರಗತಮಾಡಿಕೊಳ್ಳುತ್ತಾನೆ; ಏಕ ಪಾಠಿಯಾಗಿಯೇ ರೂಪುಗೊಳ್ಳುತ್ತಾನೆ. ಗುರುಮೂರ್ತಿ ಶಾಸ್ತ್ರಿಗಳವರಿಂದ ಸಂಸ್ಕೃತಾಧ್ಯಯನ ಮಾಡಿಕೊಳ್ಳುತ್ತಾನೆ. ೮ ನೆಯ ವಯಸ್ಸಿಗೆ ಅನಾಚಾರವಾಗುತ್ತದೆ. ಸಿದ್ಧಲಿಂಗಯ್ಯನ ಚಾರು ಚರಿತೆಗೆ 'ಸಂಸ್ಕೃತಾಮೃತ' ಬೆಳಗುವ ಮೀಸಲಾಗಿದ್ದು; ಶಿಸ್ತು, ಸಂಯಮ, ಶಮ–ದಮಾದಿಗಳಾಸ್ತಿಗಳೆಂದು ಭಾವಿಸಿ ನೀತಿಶಾಸ್ತ್ರ, ಯೋಗಶಾಸ್ತ್ರ, ತತ್ತ್ವಶಾಸ್ತ್ರಗಳ ಅಧ್ಯಯನ ಮಾಡುತ್ತಾನೆ. ಈತನ ವಿದ್ವತ್ತು ಸ್ಮರಣಶಕ್ತಿಗೆ ಕ್ಯಾಸನೂರಿನ ಪೂಜ್ಯರು ಮಾರು ಹೋಗುತ್ತಾರೆ. ಈತನ ಸತತಾಧ್ಯಯನದ ಶುಚಿ–ರುಚಿಯನ್ನು ಕಂಡು ಆಶ್ಚರ್ಯಚಕಿತರಾಗುತ್ತಾರೆ.

ಚಿತ್ತಧಿ ಸಮಯನಿಷ್ಠೆ ಪರಹಿತ
ಗತ್ತ ಗಮ್ಯತೆ ರಮ್ಯ ಶೀತಲ
ಭಿತ್ತಿ ಭಾವನೆ ಕಾಮನೆಯೊಳಾತುರಿದೆ ನಿಜದಿತ್ತ ॥
ಮೊತ್ತವದೆ ಬೇರ್ಪಡಿಸಲಾಗದು
ದೋತ್ತಮತೆಯಿದೆ ವಿಮಲ ಮಾನಸ
ಮುತ್ತದೊಳಗದೆ ಅರಿವೆ ವಿದ್ಯಾದೈವನುವ ಪಥ್ಯ

ಈತ ಸಮಾನ್ಯಾನಲ್ಲವೆಂಬುದನ್ನರಿತ ಶ್ರೀಗಳು ಈತನ ತಂದೆ–ತಾಯಿಗಳನ್ನು ಕರೆದು ಈತನನ್ನು ಕ್ಯಾಸನೂರಿನ ಶ್ರೀ ಮಠಕ್ಕೆ ಪಟ್ಟಾಧಿಕಾರಿಯನ್ನಾಗಿ ಮಾಡುವುದಕ್ಕೆ ಒಪ್ಪಿಗೆ ಬೇಕೆಂದು ಕೇಳುವರು. ಆಗ ಪರಮಶಿವಯ್ಯ – ರುದ್ರಮ್ಮ ದಂಪತಿಗಳ ಪುಣ್ಯವೇ ಹಣ್ಣಾದಂತೆ ಅಥಣೀಶರ ಅಮೃತ ವಾಣಿಯಂತಾದುದೆಂದು ಭಾವದುಂಬಿ ಸಮ್ಮತಿಸುತ್ತಾರೆ. ಒಪ್ಪಿಗೆ ಸ್ವೀಕರಿಸಿದ ಪೂಜ್ಯರು ಶ್ರೀಶೈಲ ಪೀಠದ ಸನ್ನಿಧಿಯವರ ಸಮ್ಮುಖದಲ್ಲಿ ಕ್ಯಾಸನೂರಿನ ಮಠಕ್ಕೆ ಪಟ್ಟಾಧಿಕಾರಿಯನ್ನಾಗಿಸಿ, ಶ್ರೀ ಷ.ಬ್ರ. ಜಯಗುರು ವೃಷಭ ಶಿವಾಚಾರ್ಯರೆಂದು ನಾಮಕರಣ ಮಾಡುತ್ತಾರೆ. (೧೯೩೭)ದೇಶದೊಳು ಖ್ಯಾತಿಯೊಳರುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೇರೆ ಜಂಗಮವಾಡಿ ಮಠಕೆ ಸ
ಸಾರ ಸುಖದೊಳ ಹೊಳೆಯುತಾ ವಿ
ಸ್ತಾರದೀ ಸುಜ್ಞಾನ ಪೀಠದೊಳಿಟ್ಟನಾ ಹೆಜ್ಜೆ

ಎಂದು ನಿರುಪಾಧೀಶರು ಹೇಳಿರುವಂತೆ ೧೯೪೪ ರಂದು ಕಾಶೀಪೀಠದ ಸಿಂಹಾಸನಾರೋಹಣ ಮಾಡುತ್ತಾರೆ ತುಂಬಾ ಮುಖ್ಯ ಬೆಳಗು ಲ ನೆಯದರಲ್ಲಿ ಚರಿತೆಯ ಹೂರಣವೇ ಅಡಗಿದೆ.

'ವಿದ್ಯಾವಿಲಾಸ' ಎಂಬುದರಲ್ಲಿ ''ಕಾಶೀಯೊಳಗಧ್ಯಯನಶೀಲ । ಸುಧಾಶೆನಿಪ ಸಾಹಿತ್ಯ ಸಂಪದ ಕೋಶ ಸಹಿತಾ ನ್ಯಾಯ ಶಾಸ್ತ್ರದಲಿ ಪ್ರಾವೀಣ್ಯತೆಯನ್ನು ಜಗದ್ಗುರು ಪೀಠದಿಂದ ಪಡೆಯುತ್ತಾರೆ. ಅವರ ದಿನಚರಿಯನ್ನು ನಿರುಪಾಧೀಶರು ಹೇಳಿದ್ದು ಹೀಗಿದೆ.

ವಿದ್ಯೆಯಿದು ತನುವಿಂಗೆ ಭೂಷಣ
ವಿದ್ಯೆಯಿಂ ಸದ್ಗುಣ ವಿಭೂಷಣ
ವಿದ್ಯೆ ಅಷ್ಟಾವರಣ ಪಂಚಾಚಾರ ಷಟ್‌ಸ್ಥಲದ ॥
ವಿದ್ಯೆ ವಿವರಣೆ ತಿಳಿಯುತಾ ನಾ
ನಿದ್ಯದೊಳಗುಳಿಯುತ್ತ ವಿಬುಧರ
ಮಧ್ಯದೊಳಜಯಗುರು ಶಿವಾಚಾರ್ಯರ ದಿನಚರಿಯು

ಮುಂದೆ ದಿನಾಂಕ ೨೫-೧-೧೯೪೪ ರಂದು ಕಾಶೀಪೀಠದ ಹಿರಿಯ ಜಗದ್ಗುರುಗಳವರು ಲಿಂಗೈಕ್ಯರಾದನಂತರ ಇವರ ಪೀಠಾರೋಹಣ ಚಿತ್ರಣವನ್ನು ಬಹು ಸೊಗಸಾಗಿ ಮಾನ ಮುದವಾಗಿ ಶ್ರೀಗಳವರು ಚಿತ್ರಿಸಿದ್ದಾರೆ. ಪೀಠಾರೋಹಣ ಸಮಾರಂಭಕ್ಕೆ ಕರ್ನಾಟಶಾಹಿಯಾಗಿ ಆಂಧ್ರ ಪ್ರದೇಶ, ಮಧ್ಯಪ್ರದೇಶ, ನೇಪಾಳ, ಸೊನ್ನಲಾಪುರದಿಂದ ಭಕ್ತಾದಿಗಳು ಬಂದಿರುವ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಪೀಠಾರೋಹಣದೊಂದಿಗೆ ವಿಶ್ವೇಶ್ವರ ಶಿವಾಚಾರ್ಯ ಅಭಿದಾನದೊಂದಿಗೆ ಪೀಠಾಧೀಕಾರ ವಹಿಸಿಕೊಂಡ ಚಿತ್ರಣ ಅಪ್ಯಾಯಮಾನವಾಗಿದೆ.

ಪಟ್ಟಬಂಧನ ಮುಕುಟ ಧಾರಣ
ಗುಟ್ಟು ಮುದ್ರಾ, ಸಹ ಕಮಂಡಲ
ಮಟ್ಟವೆಲ್ಲ ವಿಧಾನದಿಂ ನೆಂವೇರಿ ಸಮಯವರಿತು ॥

ಆಲಿಸುತಲಿವರೆಲ್ಲ ಹೊಸತೆನಿ
ಪಾಲಿಸುತಲಿ ಜಗದ್ಗುರುಗಳಿವ
ರಾ ಲಲಿತ ವಿಶ್ವೇಶ್ವರ ಶಿವಾಚಾರ್ಯರೆಂದೆನುವ॥
ಮೇಲೆ ಹೊಸ ಅಭಿದಾನವನು ಬಿಡ
ದಾಲಿಸುತ ಜಯ ಘೋಷಣೆಯ ಗಣ
ಸಾಲುಗೂಡತ ಸುಪ್ರಸಾದ ಗ್ರಹಿಸಿ ಸುಖದಿರುತ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಟ್ಟಾಧಿಕಾರದ ನಂತರ ಸನ್ನಿಧಿಯ ಪಲ್ಲಕ್ಕಿ ಉತ್ಸವದ ವರ್ಣನೆ, ಸನ್ನಿಧಿಯ ಆಶೀರ್ವಚನದ ವಿವರಣೆ ಔಚಿತ್ಯಪೂರ್ಣವಾಗಿ ನಿರೂಪಿತಗೊಂಡಿದೆ.

ವೀರಶೈವ ತತ್ತ್ವತ್ರಯಂಗಳ ಸಾರವನ್ನರಿತುಕೊಂಡಿದ್ದ ಜಗದ್ಗುರುಗಳವರು ಧರ್ಮ ಪ್ರಸಾರ, ಶಿಕ್ಷಣ ಪ್ರಸಾರ, ಪ್ರಸಾದ ನಿಯಮಗಳ ಸ್ಥಾಪನೆ, ಮುಂತಾದ ಸಮಾಜ ಹಿತ ಕಾರ್ಯಯೋಜನೆಗಳನ್ನು ಪೂರ್ವದ ಕಾಶೀ ಪೀಠದ ಜಗದ್ಗುರುಗಳಂತೆ ಅನುಷ್ಠಾನದಲ್ಲಿ ತಂದು ಸುಸದೃಢ ಸಮಾಜ ನಿರ್ಮಾಣದತ್ತ ಕಾರ್ಯನಿರತರಾಗಿರುವುದು, ಸಮಾಜದ ಮೇಲಿನ ಅವರ ಕಳಕಳಿಯನ್ನು ಎತ್ತಿ ತೋರಿಸುತ್ತದೆ. ಕಾಶೀ ಪೀಠದ ಪ್ರಸಾದ ಸ್ವೀಕರಿಸಿದ ಅನಂತರದಲ್ಲಿ ಅನೇಕ ಪ್ರಗತಿಪರ ಮಾನವ ಕಲ್ಯಾಣದ ಕಾರ್ಯಗಳನ್ನು ಹಮ್ಮಿಕೊಳ್ಳುತ್ತಾರೆ. ಕೆಲವನ್ನಿಲ್ಲಿ ಹೇಳಬಹುದು. ಮಹಾರಾಷ್ಟ್ರದಲ್ಲಿ ವೀರಶೈವ ಧರ್ಮಜಾಗೃತಿ ನಿಮಿತ್ತ ೫೫ ದಿನ ಸಂಚಾರಕೈಕೊಂಡ ಬಗೆಗೆ ದಾಖಲಿಸಲಾಗಿದೆ.

ಮರಳುತ ಮಹಾರಾಷ್ಟ್ರದೊಳಗಿರು
ತಿರುವ ಇತಿಮಿತಿ ವೀರಶೈವರ
ಶರಣ ಸಂಪುಟತಾಗಿರಿಸುದಕೆ ಸಮಿತಿ ನೇಮಿಸುತ॥
ಭರಣ ಭಾವನೆ ಬಲದಿ ನಿರುಪಮ
ಧರಮವನು ಪರಸರಿಸುವ ನೆವದೊಳ
ಗಿರಳಿಸುತ ಸಂಚಾರದೈವತ್ತೈದು ದಿನವರೆಗೆ

ಬಡ ವಿದ್ಯಾರ್ಥಿಗಳ ನೆತ್ತಿ –ಹೊಟ್ಟೆ ತುಂಬಿಸುವುದಕ್ಕಾಗಿ ವಿದ್ಯಾರ್ಥಿನಿಲಯ ಗಳನ್ನು ಸ್ಥಾಪಿಸಿ ತಮ್ಮ ವಿದ್ಯಾಪ್ರೇಮವನ್ನು ವ್ಯಕ್ತಪಡಿಸಿದ್ದಾರೆ ಜಗದ್ಗುರುಗಳವರು

ಹೆಸರು - ವಿಶ್ವಾರಾಧ್ಯ ನಿಲಯಂ
ಬುಸಿಕದೊಳ ಬೆಳಕಾಗುತಿದರೊಳ
ಸಸಿನ ಬಳಲಿಕೆ ಕಳೆವ ಪರಿಯಂತಾಗಿ ಬಡವರರು ॥
ಋಷಿಯೊಳಾಧ್ಯಯನದೊಳ ತೊಡಗು
ತ್ತೆಸೆವ ವಿದ್ಯಾ ಪಡೆಯುತಿರಲದೆ
ಹಸಿರಿನೊಳ ಹೂವರಳಿದಂತೆನಿಸಿತ್ತು ಸನ್ನಿಧಿಗೆ

ಮಹಾರಾಷ್ಟ್ರ ಭಾಗದಲ್ಲಿ ವೀರಶೈವಧರ್ಮದ ವ್ಯಾಪಕ ಪ್ರಚಾರ ನಡೆಯಲಿ ಎಂಬ ಹಿನ್ನೆಲೆಯಲ್ಲಿ ವೀರಶೈವ ಪರಿಷತ್ತು ಸಭಾ ಸ್ಥಾಪನೆ ಮಾಡಿದ್ದನ್ನು ಗಮನಿಸಬಹುದು. ಪೂಜ್ಯ ಜಗದ್ಗುರುಗಳವರು ತಮ್ಮ ದಿನನಿತ್ಯದ ಕಾರ್ಯ ಚಟುವಟಿಕೆಗಳೊಂದಿಗೆ ಕೇದಾರ ಪೀಠದ ಪಟ್ಟಾಧಿಕಾರವನ್ನು ನೆರವೇರಿಸಿದ್ದು (೧೯೬೬), ಬಾರ್ಶಿಯ ದಹಿವಡ ಕರ ಮಠದ ಪಟ್ಟಾಧಿಕಾರ ನೆರವೇರಿಸಿದ್ದು (೧೯೭೬) ೬-೧-೧೯೭೭ ರಲ್ಲಿ ಮರೆಗುದ್ದಿಯಲ್ಲಿ ಮಂಟಪೋತ್ಸವ ನೆರವೇರಿಸಿದ್ದು; ಸೊನ್ನದಲ್ಲಿ ಪ್ರವಚನ ದಾಸೋಹ ನೆರವೇರಿಸಿದ್ದು; ೧೯೮೩ ರಲ್ಲಿ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಶಕ್ತಿವಿಶಿಷ್ಟಾದ್ವೈತ ವೇದಾಂತ ಪೀಠ ಸ್ಥಾಪನೆ ಮಾಡಿದ್ದು; ೧೯೬೮ ರಲ್ಲಿ ಮಾರುಕಟ್ಟೆ ನಿರ್ಮಾಣ ಆಗುವಂತೆ ನೋಡಿಕೊಂಡಿದ್ದು; ಅದೇ ಅವಧಿಯಲ್ಲಿ ವಿದರ್ಭಧರ್ಮ ಪ್ರಚಾರವನ್ನು ದೌರಾದಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡಿದ್ದು – ಈ ಮುಂತಾದ ಜನೋಪಯೋಗಿ ಕಾರ್ಯಕ್ರಮಗಳನ್ನು ನೆರವೇರಿಸಿ ಯಶಸ್ವಿಗೊಳಿಸಿದ ಕೀರ್ತಿ ಪೂಜ್ಯ ಜಗದ್ಗುರುಗಳವರಿಗೆ ಸಲ್ಲುತ್ತದೆ. ಬೆಳಗು ೧೦ರ ''ಪೀಠ ಪ್ರಸಾದ'' ಮತ್ತು ಬೆಳಗು ೧೧ ರ ''ಪ್ರಾಸ್ತಾವಿಕ ಪ್ರಜ್ಞೆ'' ಈ ಅಧ್ಯಾಯಗಳಲ್ಲಿ ಕಾರ್ಯಕ್ರಮಗಳ ಫಲಶ್ರುತಿಯನ್ನು ಕಾಣಬಹುದು. ಎಂಥ ಕಷ್ಟಕೋಟಲೆಗಳು ಎದುರಾದರೂ ಅವುಗಳನ್ನು ನಿಜ ನಿಷ್ಠೆಯಿಂದ ಎದುರಿಸಿದ ಅನೇಕ ಪ್ರಸಂಗಗಳನ್ನು ಈ ಕಾವ್ಯದಲ್ಲಿ ಪೂಜ್ಯ ನಿರುಪಾಧೀಶರು ಓದುಗರಿಗೆ ಮನಂಬುಗುವಂತೆ ನಿರವಿಸಿದ ಬಗೆಯಿದೆ.

ಜಗದ್ಗುರುಗಳವರ ಕಾರ್ಯಕ್ರಮಗಳದೆಷ್ಟೋ ಇದ್ದರೂ ಪ್ರತಿದಿನವೂ ದಿನಚರಿಯನ್ನು ಬರೆಯುತ್ತಿರುವುದನ್ನು ಮರೆಯುತ್ತಿರಲಿಲ್ಲ. ಅವರು ಬರೆದಿಟ್ಟ ೪೧ ವರುಷಗಳ ಎಲ್ಲಾ ಡೈರಿ ಪುಸ್ತಕಗಳು ಕಾಶೀ ಪೀಠದಲ್ಲಿ ಸುರಕ್ಷಿತವಾಗಿದೆಯೆಂದೂ ತಿಳಿಯಪಡಿಸಿದ್ದಾರೆ. ಅವರ ದಿನಚರಿಯದ್ದೇ ಒಂದು ಸಂಪುಟವಾಗುತ್ತದೆಂದು ಹೇಳಬಹುದು.

ಪೂಜ್ಯ ಜಗದ್ಗುರುಗಳವರು ನಿರಂತರ ಧರ್ಮ–ಜ್ಞಾನ ಪ್ರಸಾರ ಕಾರ್ಯ ನಿಮಿತ್ತ ಸುತ್ತಾಟದ ಫಲವಾಗಿ ಆಯಾಸಗೊಂಡು ತಮ್ಮ ೭೨ ನೆಯ ವಯಸ್ಸಿನಲ್ಲಿ ಪ್ರಕೃತಿಯು ಕ್ಷೀಣವಾಗಿ ಅಸ್ತವ್ಯಸ್ತವಾದುದು ಕಂಡು ಬಂದಿತು. ಪುಣೆಯ ಜಹಾಂಗೀರ ಆಸ್ಪತ್ರೆಗೆ ಸೇರಿಸಿ, ತಜ್ಞ ವೈದ್ಯರ ತಂಡ ಉಪಚರೊಸೊದರೇ ಫಲಕಾರಿಯಾಗದೇ ದಿನಾಂಕ ೨–೧೦–೧೯೪೯ರಲ್ಲಿ ಲಿಂಗೈಕ್ಯರಾದರು. ಶ್ರೀ ಕಾಶೀ ಕ್ಷೇತ್ರದಲ್ಲಿ ಕೈಲಾಸ ಮಂಟಪದ ಆವರಣದಲ್ಲಿ ಕ್ರಿಯಾ ಸಮಾಧಿ ಮಾಡಲಾಯಿತು ಎಂಬುದಾಗಿ ಚರಿತ್ರೆಯ ಬಣ್ಣಿಸಲ್ಪಟ್ಟಿದೆ.

ಪ್ರಸ್ತುತ ಕಾವ್ಯವು ಉಪಮೇ, ರೂಪಕ, ದೃಷ್ಟ್ಯಾಂತ ಮುಂತಾದ ಅಲಂಕಾರಿಕ ಭಾಷಾ ಪ್ರಯೋಗದೊಂದಿಗೆ ಮುಧೋಳ ಜಮಖಂಡಿಯ ಪರಿಸರದ ಪ್ರಾದೇಶಿಕ ನುಡಿಗಟ್ಟು –ಗಾದೆಮಾತು– ಪಡೆನುಡಿಗಳೊಂದಿಗೆ ಸರ್ವಾಂಗ ಸುಂದರವಾಗಿ ಮೂಡಿ ಬಂದಿದೆ. ಉದಾಹರಣೆಗೆ

ದೀಪ ಹೊರ ಹಚ್ಚುತ್ತಲಿರಲೆಡೆ
ಗಾ ಪರಾತ್ಪರ ಇಷ್ಟ ತತ್ವದೊ
ಳಾ ಪದರಿರಿಸಿಹುದನೆ ಕಾಣುತ ತಮ್ಮೊಳಗೆ ತಾವೆ ॥
ವಾಪಿಯೊಳಗುದಯಿಸಿದ ಕಳೆ
ಮಾಪನಾಚೆಯದಂತೆ ಕಾಣುತ
ತಾಪದೊಳಗಾದಾಗ ಮೃಗಮಳೆ ಮುತ್ತು ಕಂಡಂತೆ

ಪ್ರತಿ ಅಧ್ಯಾಯದಲ್ಲಿ ಚಿನ್ನಿಧಿ ವಾಣಿಯಡಿಯಲ್ಲಿ ಜಗದ್ಗುರುಗಳವರ ಉಪದೇಶಾಮೃತ ವಿಚಾರಗಳನ್ನು ನಿರುಪಾಧೀಶರು ತಮ್ಮ ಅನುಭವದ ಮೂಸೆಯಲ್ಲಿ ಸೊಗಸಾಗಿ ಚಿತ್ರಿಸಿದ್ದಾರೆ.

ಜೀವನಿದು ಜೋಕಾಲಿಯೇರಿಳಿ
ತಾವ ನೆವದೊಳ ತಡೆವರಾರಿದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾವಧಾನದೊಳರಿತು ಸಾಗುವದೊಂದೆ ಭೇಷಜವು॥
ಹಾವ ಗತಿಮತಿ ಹೊರತದಾತುರ
ಜೀವನಾಗಿರಬೇಕು ನಡೆಯು ಸ
ದಾವ ಕಾಲದಿ ಶಾಂತರಪ್ಪಿಹುದೊಪ್ಪಿರಲು ಶುಭವು

ಎಣ್ಣೆ ಬತ್ತಿಯು ಕೊಡಲಾ ಸಂ
ಪನ್ನ ಸೊಡರಾದಂತೆ ಮನಮತಿ
ಹಣ್ಣು ಹಿದುಳಾದಾಗದರೊಳಾ ಮಧುರ ಬೆರತಂತೆ ॥
ಬೆಣ್ಣೆ ಭಾವಿಕರಾಗು ತೊಲವಿನ
ಕಣ್ಣೊಳಡಗಿಸಿಕೊಂಡ ವಿದ್ಯೆಗ
ಳುಣ್ಣಿಸುವದೆಲ್ಲರನು ಖಿನ್ನತೆ ಮಾಡಿದೆನಿತೆನಿತು

ಬಸವಾದಿ ಶಿವಶರಣರ ವಚನೋಕ್ತಿಗಳನ್ನು ಸಂದರ್ಭಕ್ಕನುಸಾರವಾಗಿ ಪ್ರಯೋಗಿಸಿದ್ದು ಕಾವ್ಯಕ್ಕೆ ಮೆರಗು ತಂದಿದೆ. ಉದಾಹರಣೆಗೆ ಎನ್ನವಾಮಕ್ಷೇಮ 'ನಿನ್ನದು', 'ಆಶೆ ಮಾಡಿದಡಿಲ್ಲವಾ ಪರಿ', 'ಎಕ್ಕದೆಲೆ ಕಳೆ ಶೀಲ ಸಂಯಮ'.

ಹೀಗೆ ಕಾಶೀ ಪೀಠದ ಹಾಗೂ ಧರ್ಮ–ಸಮಾಜದ ಶ್ರೇಯೋಭಿವೃದ್ಧಿಗಾಗಿ ಹಿಂದಿನ ಜಗದ್ಗುರುಗಳು ಹಾಕಿ ಕೊಟ್ಟ ಪರಂಪರೆಯನ್ನು ಮುಂದುವರೆಸಿಕೊಂಡು ಬಂದ ಪೀಠದ ೮೫ ನೆಯ ಜಗದ್ಗುರುಗಳವರ ಸಾರ್ಥಕ ಬದುಕಿನ ದಿವ್ಯ ಚಿತ್ರಣವನ್ನೂ ಪೂಜ್ಯ ನಿರುಪಾಧೀಶ ಶ್ರೀಗಳವರು ತಮ್ಮ ಸತತಾಧ್ಯಯನ ಪ್ರತಿಭೆ–ಪಾಂಡಿತ್ಯಗಳ ಹಿನ್ನಲೆಯಲ್ಲಿ 'ಚನ್ನಿಧಿ' ಕಾವ್ಯ ರಚನೆ ಮಾಡಿ ಕನ್ನಡ ಕಾವ್ಯ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಿದ್ದಾರೆ. ಇಂಥ ಸಾಹಿತ್ಯ ತಪಸ್ವಿ ಶ್ರೀಗಳವರ ಸಾಹಿತ್ಯ ಸೇವೆ ನಿರಂತರವಾಗಿ ಸಾಗಲಿ ಎಂದು ಪ್ರಾರ್ಥಿಸುವೆ.

– ಡಾ. ಬಿ. ವಿ. ಯಕ್ಕುಂಡಿಮಠ
ಸಂಯೋಜಕರು
ಕನಕ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೆನಹು

"ವಾಗರ್ಥಾವಿವ ಸಂಪ್ರಕ್ತೌ ವಾಗರ್ಥ ಪ್ರತಿಪತ್ತಯೇ
ಜಗತಃ ಪಿತರೌ ವಂದೇ ಪಾರ್ವತಿ ಪರಮೇಶ್ವರೌ ।"

ಪಾರ್ವತಿ ಪರಮೇಶ್ವರರಷ್ಟು ಶ್ರೇಷ್ಠವಾದುದು ವಾಗರ್ಥ. ಮಹಾ ಕವಿಯ ಅನಿಸಿಕೆ. ಇದನ್ನೇ ನನ್ನುಡಿಯಲ್ಲಿ ಹೇಳುವದಾದರೆ – ಇದರ ವಿವರಣೆ ಅಸಾಧ್ಯವೆಂದರೂ ಏನಾದರೊಂದು ಅರ್ಥ ಅರ್ಥೈಸಬೇಕಲ್ಲ, ವಾಗರ್ಥವೆಂದರೆ ಬಯಲೊಳಡಗಿದ ಬೆಳಕು, ದೀಪ್ತಿಯೊಳಡಗು ತರಳಿಸಿದ ಥಳಕು, ತೋರದಡಗದಾನಂದದುಲುಕು, ಕಂದನ ಕಲ್ಪನಾಗಸದ ಮಧು ಮೆಲುಕು, ಪರಿಮಳವನಡಗಿಕೊಂಡ ಪಯಣಿಸುತಿಹ ಪವನದಳಕು. ಸರಿಯಾರ್ಥ ತನಗಾಗದೇಹೋದಾಗ ನಟ್ಟ ಮುಳ್ಳಿನ ಪಾದ ಚಳಕು.

ಹಾಗೆ ಮಹಾಶಿವ ಶರಣರ – ಗುರು – ಜಂಗಮರ – ಶಿವ ಯೋಗಿಗಳ ಸರಿಯಾಗಿ ಅವರಂತರಾಳ ತಿಳಿದುಕೊಂಡರೆ ಸರಸಿ ಸರೋಜದ ಒನಪು, ಕಂಡನಯನದೊಳಗದರದೇ ನೆನಪು, ಅವರಿರವದಾನಂದದೊಳಗಾದಾಗ ಮಂದಸ್ಮಿತದ ಪಾಪು. ಒಂದು ವೇಳೆ ಕಂಡುಕೊಂಡಂಥ ಆನಂದದಲ್ಲಿ ಲೀನವಾದಂಥವನ ಇರವು. ಸರಿಯ ಶಿಶು ಬದಿಯ ಕೂಸನ್ನು ಕಂಡು ಆನಂದಪಡುತ್ತ ಪಾಪಾ ಪಾಪಾ ಎಂದು ನುಡಿದಂತೆ ಭಾವಿಸಬಹುದಲ್ಲವೇ? ಅರಳಿದ ಸೌರಭದ ಸುಮಕಂಡು ಯಾವ ಕನ್ಯೆ ನೋಡದೆ ಹೋದಾಳು !! ನೀರಡಿಸಿದಾತ ಕೆರೆಯಕಂಡು ತಿಳಿ ಜಲ ಗುಡಿದು ಹೋಗಲಾರನೇ । ಪುಟ್ಟಿಗಳಾಡುವ ಆಟ ಪದಪಾಠ ಮುದ ಮುಖಮಾಟ ತಿರಸ್ಕರಿಸುವವರುಂಟೇನು ? ಬೆಳಕನಳಿದು ಕತ್ತಲೆಯಕಡೆಗಾರು ? ಗೂಗಿಯಲ್ಲವೇ !!

ಇಲ್ಲಿ ಶಿವಾನುಭವಿಗಳ ಚಿಂತನೆಯಿದೆ, ನಡೆದ ನಡೆಸಿದವುಗಳ ಕಂಡುಕೊಂಡಂಥ ನೆನಹು ಇದೆ. ಇವರೆಡೆಗೆ ನೋಡುವದಾದರೆ ತೆರೆದ ಮನಬೇಕು, ಕರಿದು ಕರಕಾದ ಹೊತ್ತಿಕೊಂಡಂಥ ಪದಾರ್ಥದಂತಿರುವವರಿಗೆ ತಿಳಿಯಲು ಅಸಾಧ್ಯ. ಶರಣಾನುಭವಿಗಳ ನುಡಿಯೊಳಡಗಿಹುದೆಲ್ಲ ಅರಿಯುವದೂ ಅಷ್ಟು ಸುಲಭವಲ್ಲ, ಅವರ ಸಂದೇಶ ಕೆಲವರಿಗೆ ಸರಿದೋರದಿದ್ದರೂ ನಿಜವನರಿತ ನಿರುಪಮ ಶರಣರಿಗೆ ಸದ್ಭಾವಿಗಳಿಗೆ ರಸಧಾರೆ, ಕತ್ತಲೆಯೊಳ ಥಳಥಳಿಸುವ ಗುರುಗ್ರಹಾದಿ ತಾರೆ, ಸಾರಸ್ವತಾರಿಷ್ಟರಸಾಯನ ಮೇರೆ, ನಂಬಿ ತುಂಬಿದ ಕುಂಭದಂತಾದವನ ಹೃದಯ ಸಾರೆ.

ಆಗುವದಯ್ಯಾ ನಿರಾಭಾರಿಗಳ ತೀರ್ಥಜಗದ್ವಂದ್ಯವಾಗಿ
ಆಗುವದಯ್ಯಾ ಪೀಠಾಧಿಕಾರಿಗಳ ತೀರ್ಥ ಜಗನ್ಮಾನ್ಯವಾಗಿ
ಆಗುವದಯ್ಯಾ ದೇಶಿಕರ ತೀರ್ಥ ದೇಶಿಕರೂಪಾಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇಶಿಕನಾಗಿ ಉಪದೇಶ ಪ್ರಸಾದ ಮುಖಿಯಾಗದಿರಬಾರದು
ಕ್ರಿಯಾವಂತ ಶರಣರಿಗೆ ಕಾಣಾ ಕೂಡಲ ಚನ್ನಸಂಗಮದೇವಾ
(ಸ.ವ.ಸಂಪುಟ – ೩. ವಚನ ಸಂಖ್ಯೆ ೯೬೪)

'ಚನ್ನಿಧಿ ಷಟ್ಪದಿಯ ಬಗ್ಗೆ' ನೆನಹು, ಬರೆಯುವಲ್ಲಿ ಈ ವಚನ ಪ್ರಾಸಂಗಿಕ ವೆನಿಸುತ್ತದೆ.

ತಾರೀಖು ೩೧–೧–೨೦೧೧ ರಂದು ಕಾಶೀ ಜ್ಞಾನಪೀಠಾಧೀಶ್ವರರು ಬನ್ನಟ್ಟಿಯ ಶ್ರೀ ಶಂಕರ ಬಿದಿರಿಯವರ ತಂದೆಯ ಪುಣ್ಯತಿಥಿಯ ನೆವದಲ್ಲಿ ದಯಮಾಡಿಸಿದಾಗ ಯಲ್ಲಟ್ಟಿ ಭಕ್ತರ ಇಚ್ಛೆಯಂತೆ ನಿರುಪಾಧೀಶ್ವರ ಮಠಕ್ಕೆ ಬಂದು ದರ್ಶನ ನೀಡಿದ್ದು ಶುಭಪ್ರದ. ಲಿಂ.ಜ. ವೀಶ್ವೇಶ್ವರ ಶಿವಾಚಾರ್ಯರು ೧೯೭೬ ಜನವರಿ ೫ ನೇ ತಾರೀಖದಂದು ಮರೆಗುದ್ದಿಗೆ ಆಗಮಿಸುವ ಪ್ರಸಂಗದಲ್ಲಿ ಇಲ್ಲಿಯೇ ವಾಸ್ತವ್ಯ ಮಾಡಿ. ಮರುದಿವಸ ಮರೆಗುದ್ದಿಗೆ ಹೊರಟಾಗ ಪೂಜಾ ಪ್ರಸಾದ ಕೋಣೆ ಸಿದ್ಧಪಡಿಸಿರಿ ಮತ್ತೆ ಇತ್ತ ಬರುವ ಬಗ್ಗೆ ತಿಳಿಸಿ ಮರೆಗುದ್ದಿಯಲ್ಲಿ ಮಂಟಪೋತ್ಸವ ಸಭಾರಂಗದಲ್ಲಿ ಆಶೀರ್ವಚನ ಕರುಣಿಸಿದ್ದು ಮರೆಯದ ಮೌಕ್ತಿಕ ಘಟನೆ. ನಂತರ ಅವರನಿಸಿಕೆಯಂತೆ ಸಿದ್ಧವಾದ ಬಳಿಕ ನಿಮಂತ್ರಣ ಕೊಡಬೇಕೆಂದು ಯಲ್ಲಟ್ಟಿಯ ಭಕ್ತರು ಸಿದ್ಧರಾದಾಗ ಪುಣೆಯಲ್ಲಿ ನಿಜೈಕ್ಯರಾದದ್ದು ಕೇಳಿ ಹಳಹಳಿಸಿದರು. ಕಾರಣ ಸದ್ಯ ಸನ್ನಿಧಿಯವರಿಗೆ ನಿಮಂತ್ರಣ ಕೊಟ್ಟು ನಿರುಪಾಧೀಶ್ವರಮಠಕ್ಕೆ ಬರಮಾಡಿಕೊಂಡಾಗ ಇಲ್ಲಿಗೆ ಬಂದು ಸೌರಭದ ಮಠದ ಕಟ್ಟಡ ಕಂಡುದಲ್ಲದೆ ಅಲ್ಲಿಯ ನೆಲಮನೆಯ ಕಂಡಾಗರಿತು – ಮುಂದಿನಯೋಚನೆ ಇಲ್ಲೇಕೆ ನಿನಗೆ – ಎಂದಾಗ ವಿಚಾರ ವಿಸ್ಮಯಗೂಡಿತು. ಗ್ರಂಥಗಳನ್ನು ಕೊಡಮಾಡಿದಾಗ ಹೊರಡುವವೇಳೆ ಬರೆಯುತ್ತಿರುವ ಕೃತಿಗಳ ಬಗ್ಗೆ ತಿಳಿದು ನಮ್ಮ ಮಠದ ಬಗ್ಗೆ ಬರೆಯಿರಿ ಎಂದು ಅಪ್ಪಣೆ ಕೊಡಿಸಿದರು. ಆಗ ನನಗಿರುವ ಕರಕಂಪನವನರಿಸಿಹುದನಾಲಿಸಿ ಸಾವಕಾಶವಾಗಿ ಬರೆಯೆಂದು ನುಡಿದ ನೆನಹಿದುವೇ ಬರೆದು ಸಿದ್ಧಪಡಿಸಿದ 'ಚನ್ನಿಧಿ' ಕಾವ್ಯ.

ಶ್ರೀ ಕಾರ ಮಾಡಬೇಕಾದರೆ ಸಂಬಂಧಪಟ್ಟ ಸಾಹಿತ್ಯ ಮುಖ್ಯ. ಮುಧೋಳದ ಸದ್ಭಕ್ತರಾದ ಶಿವಪ್ಪ ಸಬಳದ ಅವರು ತಿಳಿಸಿದ ಸಲಹೆ ಪ್ರಾಮುಖ್ಯ. ಹಾವೇರಿ ಶ್ರೀಗಳನ್ನು ಕರೆಯಿಸಿ ಅವರ ಅಮೃತ ಹಸ್ತದಿಂದ ಭಜನ ಭೃಂಗ – ಕೃತಿ ಬಿಡುಗಡೆ ಮಾಡಿಸಿದ ಸದ್ಭಾವಿಗಳು. ಶ್ರೀ ಮಠಕ್ಕೆ ಇವರು ಬಂದಾಗ್ಗೆ ಚರ್ಚಿಸಲಾಗಿ ಇವರೇ ಆ ಭಾಗದ ಪರಿಚಯ ಮಾಡಿಕೊಟ್ಟವರು. ಆ ಭಾಗದಲ್ಲಿ ನೌಕರಿ ಮಾಡಿ ನಿವೃತ್ತರಾಗಿ ಈಗ ಮುಧೋಳದಲ್ಲಿ ವಾಸಿಸುತ್ತಿದ್ದ ಇವರನ್ನು ಕರೆದುಕೊಂಡು ಶಂಕರ ಡಬರಿ, ವೆಂಕಣ್ಣ ಬರಗಿ, ಎಮ್.ಸಿ. ಯಾಳವಾರ ನಿವೃತ್ತಪ್ರಧಾನಾಚಾರ್ಯರು ಸಮೇತ ಕಾಶಿ ಪೂಜ್ಯರು ಜನಿಸಿದ ಪುರ ಮಾಸೂರಕ್ಕೆ ಹೊರಟು ಮಧ್ಯದಲ್ಲಿ ಹಾವೇರಿ ಶಿವಬಸವ ಮಹಾಶಿವ ಯೋಗಿಗಳ ಮಠಕ್ಕೆ ಹೋಗಿ ದರ್ಶನ ಪಡೆದು ಕುಳಿತಾಗ ಮಹತ್ವಪೂರ್ಣ ವಿಷಯ ತಿಳಿದು ಬಂದಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಾರೀಖು ೧೪–೯–೧೯೨೦ ರಂದು ಹಾವೇರಿ ಹೊಸಮಠಕ್ಕೆ ಅಥಣಿ ಶ್ರೀಗಳು ದಯಮಾಡಿಸಿದ್ದ ಬಗ್ಗೆ ಡಾಯರಿ (ದಿನಚರಿ) ಯಲ್ಲಿ ಬರೆದದ್ದು ತಾರೀಖ ೨೭–೧–೨೦೧೫ ರಂದು ಸಮಕ್ಷಮ ಕಂಡು ತಿಳಿದದ್ದು. ನನಗೆ ಮುಂದೆ ಸಾಗಲು ಬಲ ಬಂದದ್ದು ಈ ವೇಳೆಯಲ್ಲಿಯೇ. ಚರಿತನಾಯಕರಾದವರ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಹಾವೇರಿಗೆ ಕರೆದುಕೊಂಡು ಬಂದು ಶಿವಯೋಗಿಗಳ ದರ್ಶನ ಪಡೆಯುವಾಗ ಗಂಗಾಧರ ನೀಲಕಂಠಯ್ಯ ಸಿದ್ಧಲಿಂಗಯ್ಯ ಕಂದಮ್ಮಗಳನ್ನು ಕಂಡು ಸಿದ್ಧಲಿಂಗಯ್ಯ ಕಡೆ ನೋಡಿ ಈ ಮಗು ಪಲ್ಲಕ್ಕಿಯೇರುವನೆಂದು ನುಡಿದದ್ದು. ಇದರಂತೆ ಶ್ರೀ ಶೈಲ, ಚಿತ್ರದುರ್ಗದ ಶ್ರೀಗಳ ಬಗ್ಗೆಯೂ ಮೊದಲೇ ಪಲ್ಲಕ್ಕಿ ಹತ್ತುವ ಬಗ್ಗೆ ನುಡಿದಂತೆ ನಮ್ಮ ಚರಿತ ನಾಯಕರಿಗೂ ನುಡಿದದ್ದು ಮಹಾಪುಣ್ಯ. ಇಲ್ಲಿ ಈ ಸಪ್ರಮಾಣ ದಿನಚರಿಯ ಲೇಖನಕಂಡು ಮಾಸೂರಿಗೆ ಬಂದೆವು. ಇತ್ತ ಬರುವ ಬಗ್ಗೆ ಶಿವಪ್ಪಾ ಸಬಳದ ತಿಳಿಸಿದಂತೆ ಶ್ರೀ ಎಚ್.ಎಂ. ಗಂಗಾಧರ ಬಿ. ಹಿರೇಮಠ, ಸಾ॥ ಕಿಟ್ಟದಹಳ್ಳಿ ೦೮೧೮೭–೨೪೧೦೦೮, ೯೪೮೩೨೦೮೪೪೬, ಹಾಗೂ ಶ್ರೀ ಗುರು ಪ್ರಸಾದ ಬಿ. ಹಿರೇಮಠ ೯೪೪೮೯೭೭೦೫೮ ಇವರು ಸರ್ವ ರೀತಿಯ ಸಹಕಾರ ಮಾಹಿತಿ ನೀಡಿದ್ದುದಲ್ಲದೇ ಗುರುಪ್ರಸಾದ ಅವರು ಚಿನ್ನಿಧಿಯವರ ಕಾನೂನಿನ ಡಾಯರಿ ೧೯೪೫ ಇಷ್ಟಿಯದು ಕೊಟ್ಟದ್ದು ಇದರಲ್ಲಿ ಹಲವಾರು ಮಾಹಿತಿ ಸಿಕ್ಕವು. ಆ ಸಮಯದ ರೇಲಗಾಡಿ ಚಾರ್ಜು, ಕಾಶಿಯಿಂದ ಊರಿಗೆ ಹೊರಡುವಾಗ ೨೫–೪–೧೯೪೫ ರಂದು ವೈರಾಗ ಶ್ರೀ ಶ್ರೀ ಉಮಾಪತಿ ಶಾಸ್ತ್ರಿ ಹಾಗೂ ಇನ್ನಿತರರ ಜತೆಗೆ ಹೊರಟಿದ್ದು ದೈನಂದಿನಿಯಲ್ಲಿ ಬರೆದಿದ್ದಾರೆ. ಗದಗ ಧಾರವಾಡ ಹಾವೇರಿ ಭಾಗದಲ್ಲಿ ವಸತಿ, ಬಂದಕಾಣಿಕೆ, ನಡೆದ ಸಂಗೀತ ಸೇವೆ ಕೇಳಿದ್ದು ಅಡಚಣೆ ಬಂದಾಗ ಹಣಕೂಡ ಇಸಿದುಕೊಂಡು ನಂತರ ಅವರಿಗೆ ಮರಳಿಸಿದ್ದು ಹೇಳಿದ್ದಾರೆ. ಕಲಿಸಿದ ಗುರುಮೂರ್ತಿ ಶಾಸ್ತ್ರಿಗಳ ಭೆಟ್ಟಿ (೧೫–೬–೧೯೪೫), ಕೆಳದಿಮುಕ್ಕಾಂ (೨೫–೬–೧೯೪೫), ತಾವು ಬರೆದ ಪತ್ರ ತಾರೀಖು, ಕುಂದಗೋಳ ಶ್ರೀಗಳು ಇವರಿಗೆ ೨೧–೦೦ ರೂಪಾಯಿ ಕೊಟ್ಟಿದ್ದು ಮರೆತಿಲ್ಲ. (೪–೮–೧೯೪೫). ನೀಲಕಂಠಯ್ಯನವರಿಗೆ ೨೫–೦೦ ರೂಪಾಯಿ ಕೈಗಡ ೧೨–೮–೧೯೪೫ ರಂದು ಮರಳಿ ಕೊಟ್ಟದ್ದು. ೨೨–೮–೧೯೪೫ ರಂದು ಶ್ರೀಶೈಲ ಸನ್ನಿಧಿಯವರು ೨೫–೦೦ ರೂ. ದಯಪಾಲಿಸಿದ್ದು. ರಟ್ಟಿಹಳ್ಳಿ ಶ್ರೀಗಳಿಂದ ೧೦–೦೦ ರೂಪಾಯಿ ಬಂದದ್ದು; ಸೋಲ್ಲಾಪೂರ, ಜತ್ತಕ್ಕೆ ಹೋದದ್ದು ಕಾಶೀ ಜಗದ್ಗುರುಗಳಿಂದ ೪೦–೦೦ ರೂ. ಬಂದದ್ದು ೫–೧೦–೧೯೪೫. ೧೬–೧೦–೧೯೪೫ ರಂದು ಕಡೆನಂದಿಹಳ್ಳಿ – ಉಳವಿ ಚಿಲ್ಮಿಮಠ ಮುಂತಾದ ಹಳ್ಳಿಗಳಿಗೆ ಶಮಿಪತ್ರ ಕಳಿಸಿದ್ದು. ನಾನು ಕಾಶೀಯಿಂದ ಇತ್ತ ಬಂದ ಮೇಲೆ ನನಗೆ ಶಮಿ ಪತ್ರ ತಪ್ಪದೇ ಕಳಿಸುತ್ತಿದ್ದರು. ತಮಗೆ ಉಡಲು ಒಂದು ಜೋಡಿ ಧೋತರ ೫–೦೦ ರೂಪಾಯಿಗೆ ಖರೀದಿಸಿದ್ದೂ, ೫–೧೧–೧೯೪೫ ರಂದು ೮ ಪುಸ್ತಕ ಖರೀದಿಸಿದ್ದು. ಸೋಲಾಪುರದಲ್ಲಿ M.L.E.S. (ಮಹಾರಾಷ್ಟ್ರ ಲಿಂಗಾಯತ ಎಜ್ಯುಕೇಶನ್ ಸಂಸ್ಥೆ) ಶಿಕ್ಷಣ ಪರಿಷತ್ತು ಪ್ರಾರಂಭಿಸಿದ್ದು ಅಲ್ಲದೆ ಕಮರ್ಷಿಯಲ್ ಕಾಲೇಜ್ ತಗೆಯುವ ಬಗ್ಗೆ ಠರಾವ ೧೧–೧–೧೯೪೫ ರಂದು ಮಾಡಿದ್ದು ಅಲ್ಲದೆ ಮಹಿಳಾ ಪರಿಷತ್ತು– ಯೋಜನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೇಲಿನ ವಿಷಯ ಚೆನ್ನಿಧಿಯವರ ದೈನಂದಿನಿಯಲ್ಲಿ ಬರೆದಿದ್ದನ್ನೇ ಮುಖ್ಯ ವಾದಂಥವುಗಳನ್ನು ಇಲ್ಲಿ ನಮೂದಿಸಿದ್ದೇನೆ. ವೇ|| ಗಂಗಾಧರ ಶಾಸ್ತ್ರೀಗಳು ಸನ್ನಿಧಿಯವರು ಹುಟ್ಟಿದ ಊರು ಕಲಿತ ಊರು ಬೆಳೆದ ಸ್ಥಾನಗಳನ್ನು ಸಮಕ್ಷಮ ಬಂದು ತೋರಿಸಿದರು. ಶ್ರೀ ಗುರುಪ್ರಸಾದ ಅವರು. ಅರೆತಲೆಗಡ್ಡಿಯಲ್ಲಿ ತಮ್ಮ ಮಗಳ ಮನೆಯಲ್ಲಿ ವಾಸಿಸುತ್ತಿರುವ ವೇ. ನೀಲಕಂಠಯ್ಯನವರ ಧರ್ಮಪತ್ನಿ ಸೌ. ಗೌರಮ್ಮರವರ ಭೆಟ್ಟಿ ಮಾಡಿಸಿ ಅಧಿಕಾಂಶ ಮಾಹಿತಿ ಒದಗಿಸಿಕೊಟ್ಟರು. ಈ ಕೃತಿಯಲ್ಲಿ ಇವರೆಲ್ಲರ ಭಾವ ಚಿತ್ರಗಳನ್ನು ಹಾಕಲಾಗಿದೆ. ಗುರುಪ್ರಸಾದರಿಗೆ ದೊಡ್ಡಮ್ಮ ಇವಳು.

ಹೋದ ಹೋದಲ್ಲಿ ಸಂಬಂಧ ಪಟ್ಟ ಭಾವಚಿತ್ರಗಳನ್ನು ತಗೆದುಕೊಂಡು ಮರಳುವಾಗ್ಗೆ ೨೭-೧-೨೦೧೭ ರಂದು ಹಾವೇರಿಮಠದಲ್ಲಿ ವಿರೂಪಾಕ್ಷಪ್ಪಾ ತೊರಗಲ್ಲ ಅವರು ಅಥಣಿ ಶ್ರೀ ಮುರಘೇಂದ್ರ ಶಿವಯೋಗಿಗಳು ಹಾವೇರಿಗೆ ಬಂದದ್ದು ದಿನಚರಿಯಲ್ಲಿ ನಮೂದಿಸಿದ ವಿಷಯ ತಿಳಿಸಿದರು ಝುರಾಕ್ಸ್ ಕಳಿಸುವ ಬಗ್ಗೆ ತಿಳಿಸಿ ಸಾಗಿದೆವು.

ಶ್ರೀಮತಿ ಗೌರಮ್ಮನವರು ತಿಳಿಸಿದ ಕೆಲವು ಸಂಗತಿಗಳನ್ನು ಇಲ್ಲಿ ನೆನಪಿಸುತ್ತೇನೆ. ಕಾಶೀ ಚೆನ್ನಿಧಿಯವರು ಮೊದಲು ಕ್ಯಾಸನೂರ ಮಠಕ್ಕೆ ಪಟ್ಟಾಧಿಕಾರಿಗಳು ಆಗುವ ವೇಳೆ ತಂದೆ ಮಹದೇವಯ್ಯ-ರುದ್ರಮ್ಮನವರು ಬಂದಿದ್ದರು. ಪಟ್ಟಾಧಿಕಾರದ ವೇಳೆ ತಾಯಿ-ತಂದೆ ಇದ್ದರೆ ಸಮಾಜ ಸೇವೆಗಾಗಿ ತಮ್ಮ ಮಗನನ್ನು ಧಾರೆರೆದ ಬಗ್ಗೆ ವಚನ ಪಠಿಸುವಿಕೆಯಂತೆ ಕಾರ್ಯ ನಡೆದುಹೋದದ್ದು.

ಮಾಸೂರು ಹಿರೇಮಠದಲ್ಲಿಯ ಶ್ರೀಗಳ ಪೂರ್ವಾಶ್ರಮದ ತಂದೆ ತಾಯಿಯ ಭಾವಚಿತ್ರ ತಗೆದುಕೊಂಡೆವು. ಕ್ಯಾಸನೂರಿನಲ್ಲಿ ೧೯೩೭ನೇ ಇಸ್ವಿಯಲ್ಲಿ ವಿಧಿವತ್ ಪಟ್ಟಾಧಿಕಾರವಾಗಿ ಚಿ|| ಸಿದ್ಧಲಿಂಗಯ್ಯನಿಗೆ ಶ್ರೀ. ಷ.ಬ್ರ. ಜಯಗುರು ವೃಷಭ ಶಿವಾಚಾರ್ಯರೆಂದು ನೂತನ ಅಭಿದಾನ ಮಾಡಿದ್ದು. ಆದರೆ ಮುಂದೆ ವಾದದ ಸಮಸ್ಯೆಯೊಳಗೆ ೧೯೩೭ ರಲ್ಲಿ ವಾರದ ಪಾಠ ಶಾಲೆಗೆ ಬಂದದ್ದು ಅಲ್ಲಿಂದ ಕಾಶಿಗೆ ಅಧ್ಯಯನಕ್ಕೆ ಹೋದಾಗ ತತ್ಸಮಯದ ಜ. ವೀರಭದ್ರ ಶಿವಾಚಾರ್ಯರು ನಿಜೈಕ್ಯರಾದ ಬಳಿಕ ಮೃತ್ಯುಪತ್ರದ ಪ್ರಕಾರ ತಾರೀಖು : ೧೪-೧೧-೧೯೪೮ ಕಾರ್ತಿಕ ಶುದ್ಧ ತ್ರಯೋದಶಿಯಂದು ಪೀಠಾಧಿಕಾರ ವಹಿಸಿಕೊಳ್ಳುವಾಗ ಪೂರ್ವಾಶ್ರಮದ ತಾಯಿ ಮಾತ್ರ ಬಂದಿದ್ದರು. ತಂದೆಯವರು ೧೯-೩-೧೯೪೭ ರಂದು ಲಿಂಗೈಕ್ಯರಾಗಿದ್ದರೆಂದು ಹ.ಮು. ತಳವಾರ ಶಿಕ್ಷಕರು 'ಮಾಸೂರು ಮಹತ್ವ' ಕೃತಿಯ ಪುಟ ೨೦ ರಲ್ಲಿ ಮೂಡಿಸಿದ್ದಾರೆ.

ಕ್ಯಾಸನೂರಿನ ಪಟ್ಟಾಧಿಕಾರ ಮಾಡುವಾಗ್ಗೆ ಪುತ್ರವರ್ಗ ಮಠದ ನೆವದಿಂದ ವಾದವನ್ನು ಏಕೆ ಮಾಡಲಿಲ್ಲ, ಕ್ಯಾಸನೂರಿನ ಶ್ರೀಗಳ ಸಮ್ಮತಿ ಇದಕ್ಕೆ ಇತ್ತೆನ್ನಬೇಕು. ಪಟ್ಟಾಧಿಕಾರಿಗಳು ಇದ್ದಾಗ ಅವರ ಸಮಕ್ಷಮ ಕಾರ್ಯ ನೆರವೇರಿರಬೇಕು. ಮೊದಲಿನ ಶ್ರೀಗಳು ಲಿಂಗೈಕ್ಯರಾದ ಮೇಲೆ ನ್ಯಾಯಾಲಯಕ್ಕೆ ಹೋಗಿರಬೇಕೆಂದು ನಿಶ್ಚಯಿಸ ಬೇಕಾಗುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಶೈಲದ ಸನ್ನಿಧಿಯವರ ಸದಿಚ್ಛೆಯಂತೆ ಸೋಲಾಪೂರವಾರದ ಪಾಠಶಾಲೆಗೆ ಹೋಗಿ ಅಲ್ಲಿಂದ ಜತ್ತದಲ್ಲಿಯ ಸಂಸ್ಥಾನ ಮಠದ ಶ್ರೀ ಸಂಗಮೇಶ್ವರ ಶಿವಾಚಾರ್ಯರ ಸಹಾಯದಲ್ಲಿ ತಲುಪಿ ಅಲ್ಲಿ ಅಧ್ಯಯನ ತೊಡಗಿದ್ದು ಇವರ ಸಾಧನೆ. ಕ್ಯಾಸನೂರಿನ ಮಠದ ಬಗ್ಗೆ ನಡೆದ ವಾದದ ನಂಬರು ನಮಗೆ ಸಿಗಲಿಲ್ಲ. ಕಾರಣ ಆದ್ಯಂತ ಅಧ್ಯಯನ ಮಾಡಲಾಗಲಿಲ್ಲ.

ನಾನು ಕಂಡಂತೆ – ಮನಗಂಡಂತೆ :

೧೯೬೧ ರಿಂದ ೧೯೬೪ ರ ವರೆಗೆ ಅಧ್ಯಯನಕ್ಕಾಗಿ ನಿವೇದಿಸಿಕೊಂಡಂತೆ ಸನ್ನಿಧಿಯವರ ಪತ್ರ ಬಂದನಂತರ ಹೋದೆ. ಅಲ್ಲಿ ಮುಲ್ಕಿ ಪರೀಕ್ಷೆ ಪಾಸಾದವರಲ್ಲಿ ನಾನು ಹಾಗೂ ಮಂಟಾಳ ಗ್ರಾಮದ ಸಂಗಪ್ಪಾನೂಲೆ ಅವರು. ಇವರು ನನಗಿಂತ ಹಿರಿಯರು ಬಸವ ತತ್ವಾಭಿಮಾನಿ. ನನಗೆ ಮಾರ್ಗದರ್ಶಕರೂ ಹೌದು. ಮಂಗಳವೇಢೆಯಿಂದ ಭಕ್ತರು ಅಲ್ಲಿಯ ಮಠಕ್ಕೆ ಮರಿಯಕೇಳಲು ಬಂದಿದ್ದರು. ಒಂದು ವಾರ ಇದ್ದು ಪರೀಕ್ಷಿಸಿ ನನ್ನ ಬಗ್ಗೆ ಸಮ್ಮತಿಸಿದರೂ ನನ್ನ N.C.C. ಡ್ರೆಸ್ ನೋಡಿ ಭ್ರಮಿತರಾದದ್ದು ನಂತರ ಪೂಜ್ಯರೂ ಪರಿಹರಿಸಿ ನನ್ನ ಕರೆದು ಭಕ್ತರ ಅಭಿಪ್ರಾಯ ಇಟ್ಟಾಗ ಸುಮ್ಮನಾಗಿದ್ದೆ. ನಂತರ ಅಂಕಲಗಿ ಮಠಕ್ಕೆ ನನ್ನ ಬಯಸಿದ ಬಗ್ಗೆ ಪತ್ರ ಬಂದದ್ದನ್ನು ಕಂಡು ಇದಕ್ಕೇನೆನ್ನುವೀ ? ಅಂದಾಗ ಸುಮ್ಮನೇ ಬಂದಿದ್ದೆ. ಆ ನಂತರ ಆರ್ಥಿಕದ ಅಡಚಣೆಯೊಳಗೆ ಮರೆಗುದ್ದಿಯಲ್ಲಿ ಉಳಿದು ೧೯೬೫ ರಂದು ಮಠಾಧಿಕಾರ ಸ್ವೀಕರಿಸಿ ೧೯೭೮ ರಂದು ಬಾಗಲಕೋಟೆಗೆ ಸನ್ನಿಧಿಯವರು ಬಂದಾಗ್ಗೆ ಭೆಟ್ಟಿಯಾಗಿ ನನ್ನ ಪರಿಚಯ ತಿಳಿಸಿದಾಗ ಸಂತಸದಿಂದ ಮರೆಗುದ್ದಿಗೆ ಬರಲು ಒಪ್ಪಿದ್ದು. ಉತ್ಸವಬೇಡ ಹಾಗೇ ಬಂದು ಹೋಗುತ್ತೇವೆಂದರೂ – ಕಾಶೀಯಿಂದ ಪುನಾಕ್ಕೆ ಬಂದದ್ದು ತಿಳಿದು ೧–೩–೧೯೭೮ ರಂದು ಆಮಂತ್ರಣ ಕೊಡಲು ಚನ್ನಬಸಪ್ಪಾ ರಾಮಗೊಂಡ ಸಹಿತ ಹೋಗಿ ಕಾರ್ಯಪೂರೈಸಿ ಬಂದರು. ಪೂರ್ವಯೋಜನೆಯಂತೆ ದಯಮಾಡಿಸಿದ್ದು ಭಕ್ತರ ಸುದೈವ, ಮಂಟಪೋತ್ಸವ ಯಶಸ್ವಿಯಾಯಿತು. ಕೊನೆಗೆ ಭಕ್ತರಿಗೆ ಒಂದು ಮಾತನ್ನು ಹೇಳಿದರು. – ''ನಿಮ್ಮ ಸ್ವಾಮಿಗಳಿಗೆ ಅಪಾರ ಗುರು ಬಲವಿದೆ ಅದು ಅವರನ್ನು ಪಾಲಿಸುತ್ತಿದೆ'' ಎಂಬುದು ಹಲವರಿಗೆ ಅರ್ಥವಾಗದೇ ಹೋದದ್ದು. ಈ ನುಡಿ ಮುಂದಿನ ನನ್ನಗತಿ ತಿಳಿಸಿದಂತಾಗಿತ್ತು. ಎರಡು ದಿವಸವಿದ್ದು ಮುಂದೆ ಸೊನ್ನಕ್ಕೆ ಪಯಣ. ಅಲ್ಲಿ ಎರಡು ದಿವಸ ಧರ್ಮೋಪದೇಶ ಪೂಜ್ಯರಿಂದಾಯಿತು. ಪೂಜಾ ಗೃಹದಲ್ಲಿ ಕುಳಿತಾಗ ಅಥಣಿಯ ನಿರಂಜನ ಜಂಗಮ ಮುರಘೇಂದ್ರ ಶಿವಯೋಗಿಗಳ ಭಾವಚಿತ್ರಕಂಡಾಗ ಅಂದು ದರ್ಶನಕ್ಕೆ ತಂದೆಯವರು ಕರೆದುಕೊಂಡು ಹಾವೇರಿಗೆ ಹೋದಾಗ ಪಲ್ಲಕ್ಕಿ ಹತ್ತುವನೆಂದು ಅವರು ನುಡಿದಂತೆ ನಾನು ಪಲ್ಲಕ್ಕಿಯನ್ನೇರಿದೆನೆನುವಾಗ ಬಾರ್ಶಿಯ ದಹಿವಾಡಕರ –ಪರಾಂಡಕರ ಶ್ರೀಗಳೂ ಇದ್ದರು. ಪರಾಂಡಕರ ಶ್ರೀಗಳ ಸೇವಕ ಮಾಣಿಕ ಹೆಗಲಿಗೆ ಗೌರವ ಪಟ್ಟಾ ಹಾಕಿದವರು, ಇದ್ದ ಶ್ರೀಮಂತ ಚಂದ್ರಶೇಖರ ಧನಿಯರು ಕೇಳಿ ಸಾನಂದ ಭರಿತರಾದದ್ದು ಸಮಕ್ಷಮ ಕಂಡದ್ದು ಕೇಳಿದ್ದು. ಇದು ಕಟ್ಟು ಕಥೆಯಲ್ಲವೆಂಬುದು ಸತ್ಯ. ಮರುದಿವಸ ಬಾಗಲಕೋಟೆಗೆ ಕಳಿಸಲು ಹೋದಾಗ ಚೆನ್ನಿಧಿಯವರು ನುಡಿದದ್ದು–

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

''ನಿನಗಾಗಿ ಮಂಗಳವೇಢೆ ಮಠ ಇದೆ : ವಾದದ ಮಠ ಬೇಡವಾದರೆ ಕಾಶಿಗೆ ಬಂದು ಬಿಡು ಎನುವಾಗ ಉಗಿಬಂಡಿ ಸಾಗಿದರೂ ಚನ್ನಿಧಿಯವರ ನೋಟ ನನ್ನೆಡೆಗಿಹುದನ್ನು ಮರೆಯುವಂತಿಲ್ಲ. ಮುಂದೆ ಕೇದಾರ ಪೀಠದ ಪಟ್ಟಾಧಿಕಾರ ಸಮಯ ಮರೆಗುದ್ದಿಗೆ ದಯಮಾಡಿಸಿದ ನಂತರ ಸೊನ್ನಕ್ಕೆ ಪಯಣ. ನಾನೂ ಹೋದೆ ಅಲ್ಲಿ ಶ್ರೀಮಂತ ಚಂದ್ರಶೇಖರ ದೇಸಾಯಿಯವರು ಕೇದಾರ ಪೀಠಕ್ಕೆ ಅಧಿಕಾರಿಯಾಗುವಾತ ಬ್ರಹ್ಮಚಾರಿ ಜಂಗಮನಿರಬೇಕೆಂಬ ನಿಯಮವಿದ್ದರಿಂದ ದಾಖಲೆ ಕೊಡಬೇಕಾಗಿತ್ತು. ಗುಳಬಾಳದವರ ಬಗ್ಗೆ ದಾಖಲೆ ತಹಶೀಲ್ದಾರರು ಕೊಟ್ಟ ಮೇಲೆ ಗದಗಕ್ಕೆ ಕಳಿಸಲು ಹೋದೆ. ಗಾಡಿ ಹೊರಡುವ ಸಮಯ ಮತ್ತೆ ನನಗೆ ಮಂಗಳವೇಢ ಮಠದ ಬಗ್ಗೆ ನೆನಪಿಸಿದರು.

ಮುಧೋಳ ತಾಲೂಕಿನ ಮಂಟೂರ ಗ್ರಾಮದಲ್ಲಿ ಮುಂದೆ ೧೯೮೫ ಮಾಘಶುದ್ಧ ಪೌರ್ಣಿಮೆಯಂದು ನಡೆದ ಮಂಟಪೋತ್ಸವದಲ್ಲಿ ಆಶೀರ್ವಚನ ದಯಪಾಲಿಸಿದ್ದು. ೨೫ ಮಂಟಪ ಪೂಜೆ ನೆರವೇರಿಸಿದ್ದು ನೆನಪಿದೆ. ಇಲ್ಲಿ ಒಂದನೆಯ ಮಂಟಪ ಘೋಡಗೇರಿಯ ನಿರಂಜನಮೂರ್ತಿಗೆ ಅಲ್ಲಿಯ ಭಕ್ತರು ಕೊಡಮಾಡಿದಾಗ ಓರ್ವ ಶ್ರೀಗಳು ನುಡಿದ ಮಾತಿದು –

ಈ ಸಮಾರಂಭದ ದಾಸೋಹ ಶ್ರೀಮತಿ ಸೀತಮ್ಮ ಬಿ. ತಿಮ್ಮಸಾನಿಯವರ ದಾಗಿತ್ತು. ನಿರಾಭಾರಿ ಪೂಜ್ಯರನ್ನು ಕಂಡಾಗ ಗೌರವದಿಂದ ಕಾಣುವ ಇವರಲ್ಲಿಯ ಬಹುದೊಡ್ಡ ಗುಣ. ೧೯೫೦ರಲ್ಲಿ ವಿಜಾಪೂರ ರೇಲ್ವೆ ಸ್ಟೇಶನದಲ್ಲಿ ಚನ್ನಿಧಿಯವರು ವಿಶ್ರಮಿಸಿದಾಗ ಶಿವಯೋಗಮಂದಿರಕ್ಕೆ ಹೊರಡುದಕಾಗಿ ಬಂದ ಮಹಾಲಿಂಗಸ್ವಾಮಿ ಪೂರ್ವನಾಮ ಚಂದ್ರಶೇಖರದೇವರ ಶಿವಯೋಗಮಂದಿರದಲ್ಲಿಟ್ಟ ಹೆಸರು. ಇವರು ಕಾಣಿಕೆ ಹೋದಾಗ್ಲೆ ಇದನ್ನು ನೆನಪಿಸಿರುವದನ್ನು ೧೯೭೪–೧೯೭೫ರಲ್ಲಿ ಮುಂಡರಗಿ ಜಗದ್ಗುರುಗಳಾದಾಗ ಗದಗಕ್ಕೆ ಹೋದಾಗ ಅದೇ ದಯಮಾಡಿಸಿದ ಕಾಶಿಯ ಸನ್ನಿಧಿಯವರು ಅತ್ಯಂತ ಗೌರವ ಕಂಡದ್ದು ಮುಂಡರಗಿ ಶ್ರೀಗಳೂ ಇಂದಿಗೂ ಸ್ಮರಿಸುತ್ತಾರೆ. ವಿರಕ್ತ ಶ್ರೀಗಳನ್ನು ಗೌರವಿಸುವ ಇವರ ದೊಡ್ಡಗುಣ ಎಲ್ಲೆಡೆಗೆ ಇದ್ದರೆ ಶುಭವಲ್ಲವೆ !!

ವಿರಕ್ತಮಠಾಧಿಪತಿ ನಾನಾಗಿದ್ದರೂ ನನ್ನ ಹಿತಬಯಸುವಿಕೆಯವರದಾಗಿತ್ತು. ಇದೇ ರೀತಿ ಇನ್ನೊಂದು ಪ್ರಶ್ನೆ ನನಗೆ ಬಂದಿತ್ತು. ಓರ್ವ ಶ್ರೀ ಶಿವಾಚಾರ್ಯರು ನನ್ನ ಕರದಿಂದ ಲಿಂಗದೀಕ್ಷೆ ಮಾಡಿಸಿಕೊಂಡವರಿಗೆ – ಮಾಡಿಸಿಕೊಳ್ಳಬಾರದೆಂಥು ಹೇಳಿದ ವಿಷಯ ನನ್ನ ಮುಂದೆ ಬಂದದ್ದು ಸುಳ್ಳಲ್ಲ. ನನ್ನ ಸದಾಹಿತ ಚನ್ನಿಧಿಯವರು ಬಯಸಿದ್ದು ಮರೆಯುವಂತಿಲ್ಲ. ಕೊನೆಗೆ ಇಂತೆಂದರು.

ಲಿಂಗದೀಕ್ಷೆ ಮಾಡು ಮುಂದುವರೆಸು ಅಯ್ಯಾಚಾರ ಬೇಡ, ಅವರೇನಾದರನ್ನಲಿ – ಮಾಡು ಎಂದು ಮಂಟೂರಲ್ಲಿ ಹೇಳಿದ್ದು ಇದುವೇ ಪೂಜ್ಯರ ಕೊನೆಯ ದರ್ಶನ ಕೃಪಾದೃಷ್ಟಿಯೆಂಬಂತಾಯಿತು ಅವರ ಉಪಕಾರ ಸ್ಮರಣೆಯೇ ಈ ಚನ್ನಿಧಿ ಕಾವ್ಯ ಇದರಂತೆ ನನ್ನ ಮಠ, ವಾದದ ಬಗ್ಗೆ ಸದಾ ವಿಚಾರಿಸುತ್ತ ಬಂದವರು ಇಂಚಲದ ಶ್ರೀ ಶಿವಾನಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾರತಿ ಸ್ವಾಮಿಗಳು ಹಾಗೂ ಬೆಂಗಳೂರಿನ ಶಂಕರಾನಂದ ಯೋಗಾಶ್ರಮದ ಶ್ರೀ ನೀಲಕಂಠ ಸ್ವಾಮಿಗಳನ್ನು ಮರೆಯುವಂತಿಲ್ಲ.

ದಿಲ್ಲಿ ನಿರ್ಣಯವಾದ ಮೇಲೆ ವಾದಿಗಳು ಮತ್ತೇ ಹೊಸ ದಾವಾ ಪ್ರಾರಂಭ ಮಾಡಿದ್ದನ್ನು ತಿಳಿಯುತ್ತ ನಿನಗೆ ಬೇಸರಾದರೆ ಕಾಶಿಗೆ ಬಂದುಬಿಡು ಹೇಳಿ ಪಯಣಿಸಿದ ಆ ದಿನ ಇಂದೂ ಮಾನಸಪಟಲದಲ್ಲಿ ಪ್ರತಿಬಿಂಬಿಸುತ್ತಿದೆ.

ಕೇದಾರ ಮಠಕ್ಕೆ ಕರ್ನಾಟಕದವರೇ ಇರಬೇಕು ಜಂಗಮ ಮನೆತನದಲ್ಲಿ ಜನಿಸಿದ ಬ್ರಹ್ಮಚಾರಿಯಿರಬೇಕೆಂದು ನಿಯಮ ಗಟ್ಟಿಗೊಳಿಸಿದವರು ಕರ್ನಾಟಕದ ಕಾನೂನು ಬಲ್ಲಿದ ನ್ಯಾಯಾಧೀಶರಾದ ಶ್ರೀ ಮಹದೇವಯ್ಯನವರು (೧೮೭೫–೧೯೬೬).

ಕೇದಾರ ಪೀಠದ ಸ್ಥಾನಕ್ಕೇ ಆ ಭಾಗದ ಬ್ರಾಹ್ಮಣರೂ ಬಯಸಿದ್ದೂ ಪರಂಪರೆ ಯಂತೆ ಲಿಂಗಧಾರಣಕ್ಕೂ ಅವರು ಸಿದ್ಧರಿದ್ದಾರೆಂದು ಸನ್ನಿಧಿಯವರು ಸೊನ್ನದಲ್ಲಿ ಹೇಳಿದ್ದನ್ನು ಕೇಳಿದ್ದೇನೆ. ನಮ್ಮ ಕರ್ನಾಟಕದಲ್ಲಿ ಮಠಗಳಿಲ್ಲದ ಮಠಗಳಿಗೆ ಶೋಧಿಸುವ ಪರಿ ನಿರಂಜನ ಮೂರ್ತಿಗಳು ಮಾಡುವುದನ್ನು ಕಂಡಿದ್ದೇನೆ. ಹಾಗೆ ಕಾಶೀಯ ಜಗದ್ಗುರುಗಳು ಕಾರ್ಯ ಪೂರೈಸುತ್ತಿದ್ದುದು ಮೇಲಿಂದ ಮೇಲೆ ಕೇಳಿಬರುತ್ತಿತ್ತು.

ಕೇದಾರ ಪೀಠದ ಪಟ್ಟಾಧಿಕಾರದ ಹೊಣೆ ಹೊತ್ತ ಪೂರ್ತಿಗಾಣಿಸಿದ್ದು ಅದೊಂದು ಇತಿಹಾಸ. ಅದರಂತೆ ಬಾರ್ಸಿಯಲ್ಲಿಯ ಕಾಶಿಪೀಠದ ಶಾಖಾ ದಹಿವಡಕರಮಠ ಶಿಷ್ಯವರ್ಗ ಪರಂಪರೆಯದು. ಪೂರ್ವ ಶ್ರೀಗಳು ಉತ್ತರಾಧಿಕಾರಿಗಳ ನಿಯಮಿಸದೆ ಹಾಗೆಯೇ ಆಕಸ್ಮಿಕ ಲಿಂಗೈಕ್ಯವಾದ್ದರಿಂದ ಚನ್ನಿಧಿಯವರು ಇತ್ತ ಗಮನಹರಿಸಿ ಶ್ರೀ ಷ.ಬ್ರ. ಗುರುಸಿದ್ಧ ಶಿವಾಚಾರ್ಯರನ್ನು ನಿಯಮಿಸಿ ಮಠದ ಸ್ಥಿರ–ಚರ ಆಸ್ತಿ ನೂತನ ಶ್ರೀಗಳವರಿಗೆ ಒಪ್ಪಿಸಿದ್ದು ಈ ನೂತನ ಶ್ರೀಗಳ ವಿನಯ, ಸದ್ವಿವೇಕ, ವಿಧೇಯತ್ವ ನಾನೂ ಕಂಡಂಥವನು.

ಕಾಶಿ ಸನ್ನಿಧಿಯವರು ತಾವು ಇರುವ ಪರ್ಯಂತ ಪ್ರವಾಸಕ್ಕಾಗಿ ಕಾರಿನ ಗೋಜಿಗೆ ಹೋಗದೇ ಇದ್ದದ್ದು ಕಂಡದ್ದು ಕೇಳಿದ್ದು, ವ್ಯಾಪಾರ ಮಳಿಗೆ ಕಟ್ಟಿಸುವಾಗ ಅತ್ಯಂತ ಭಾರವಾದ ಬಂಗಾರ ಮುಕುಟ ಮಾರಿ ಕಟ್ಟಿಸಿದ ನಂತರ ಕಿರೀಟ ಮಾಡಿಸಿದ್ದರೆಂಬುದು ಶ್ರೀ ಗಂಗಾಧರ ಹಿರೇಮಠ ಅವರ ಹೇಳಿಕೆ.

ಪೂಜ್ಯರು ಮಠಾಧಿಕಾರಿಗಳಿಲ್ಲದ ಸ್ಥಿತಿಯರಿತು ಅದಕ್ಕೆ ನಿಯಮಿಸುವ ಗುರಿ ಅವರದು, ಅಲ್ಲದೇ ನೇಮಕಗೊಂಡಂಥವರ ಇರುವಿಕೆಯ ಬಗ್ಗೆ ತಿಳಿದುಕೊಳ್ಳುವಿಕೆಯು ಅವರದಾಗಿತ್ತು

ಶ್ರೀಗಳಲ್ಲಿ ಭಕ್ತರ ಭಾವನೆಗಳನ್ನು ಗೌರವಿಸುವ ಗುಣವಿತ್ತು, ಪೂಜ್ಯರಲ್ಲಿ ನೆನೆಪಿನ ಶಕ್ತಿ ಅಪಾರ ಮರೆಗುದ್ದಿಗೆ ೧೯೭೪ ರಂದು ಬಂದಾಗ ೨೦–೨೫ ವರ್ಷ ಹಿಂದೆ ಒಮ್ಮೇ ಭೆಟ್ಟಿಯಾದವರು ಬಂದಾಗ ನೋಡಿ ನೋಡಿ ಪರಿಚಯ ಹೆಸರನ್ನು ಹೇಳಿದ್ದು ಕೇಳಿದೆ. ಅತ್ಯಂತ ಬಡವರೂ ನಿಮಂತ್ರಣ ಕೊಟ್ಟಾಗ ಅಲ್ಲಿ ದಯಮಾಡಿಸುವ ಕರುಣಾಭಾವಿಗಳೂ ಹೌದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂಜ್ಯರು ಯಾವುದೇ ಮಠವಿರಲಿ ಅಲ್ಲಿ ಸಮಸ್ಯೆಗಳಿದ್ದರೆ ಪರಿಹರಿಸುವ ಉದಾರಭಾವಿಗಳಾಗಿದ್ದರು. ನನ್ನ ಮಠದ ಹಿತ ಬಯಸಿದವರು ಮಾರ್ಗದರ್ಶನ ಮಾಡಿದವರೆಂಬುದು ನಾನು ಮರೆಯುವಂತಿಲ್ಲ.

ಸೇವಕರನ್ನು ಅತ್ಯಂತ ಪ್ರೀತಿಯಿಂದ ಕಾಣುತ್ತಿದ್ದುದು ಅಂದು ನಾನು ಕಾಶಿಯಲ್ಲಿ ಇದ್ದಾಗ ಕಂಡದ್ದು. ಸಿಡುಕಿನ ಶಬ್ದಗಳನ್ನೇ ನಾನು ಕೇಳಿಲ್ಲ. ಸೇವಕರ ಹಿನ್ನಲೆಯನರಿತು ಅದಕ್ಕೇ ಪರಿಹಾರ ಹುಡುಕುವ ತವಕ ಅವರದಾಗಿತ್ತು. ಸಿಟ್ಟು ಒರಟು ಬಂದೆಡೆಗೆ ಇಂದಿನ ಕಾಲದಲ್ಲಿ ಸೇವಕರು ನಿಲ್ಲುವದೇ ಇಲ್ಲ. ಗಂಗಾಧರಯ್ಯ, ನೀಲಕಂಠಯ್ಯ, ೨೦–೨೨ ವರ್ಷದವರೆಗೆ ಸೇವೆ ಮಾಡಿದ್ದು ಪೂಜ್ಯರ ಸಹನಾಭೂತಿಯ ಸಂಕೇತವೆಂದು ಭಾವಿಸಬೇಕಾಗುತ್ತದೆ. ನಮ್ಮೆಲ್ಲರ ಮೇಲೆ ಸನ್ನಿಧಿಯವರ ನೋಟಯಿರದೇಯಿರಲಿಲ್ಲ. ಕೆಲವೊಂದು ವಿಷಯಗಳು ನೇರವಾಗಿ ಹೇಳದೇ ಪರ್ಯಾಯವಾಗಿ ತಿಳಿಸುವಿಕೆಯಾಗಿತ್ತು. ಇದು ಸರ್ವರಿಗೂ ತಟ್ಟುವಂತೆ ಶಬ್ದ ಸಂಭ್ರಮವಾಗಿರುವಿಕೆಯಾಗಿತ್ತು. ಕಾಲೇಜದಲ್ಲಿ ನಾವು ಗ್ರಹಿಸಿದ ವಿಷಯಗಳ ಬಗ್ಗೆ ಹಿನ್ನಲೆಯಾಗಿ ತಿಳಿದುಕೊಳ್ಳುವದು ಅವರ ವೈಶಿಷ್ಟ್ಯ.

ಗುರುಕುಲದಲ್ಲಿರುವ ನಿಯಮ ಆಹಾರಾದಿಗಳ ಬಗ್ಗೆ ಮುಂದೆಯೂ ಪಾಲಿಸುವ ಸಂದೇಶ ಅವರದಾಗಿತ್ತು. ಖಾರ ಹುಳಿ ಮಿತಿಯಾಗಿರಲೆಂಬುದರ ಕಥನವಾಗಿತ್ತು. ಯತಿಗಳಾಗುವವರು ಒಕ್ಕಲಿಗ ತಿನ್ನುವಂತೆ ಅತ್ಯಂತ ಖಾರ ಹುಳಿಗೆ ಮಾರು ಹೋಗುವದು ತನ್ನ ಸ್ಥಿತಿ ತಾನೆ ಕಳೆದುಕೊಂಡಂತೆ ಎಚ್ಚರಿಸುತ್ತಿದ್ದರು.

ವಿಶ್ವಾರಾಧ್ಯ ಗುರುಕುಲದಲ್ಲಿದ್ದು ಕಲಿತವರು ನೂರಾರು ವಟುಗಳು, ಸಾಧಕರು, ಸ್ವಾಮಿಗಳು. ಇವೆಲ್ಲ ವಿಷಯ ಕಾಶಿಯ ಜ್ಞಾನಗಂಗಾ ಕೃತಿಯಲ್ಲಿ ನೋಡಿಕೊಳ್ಳಬಹುದು. ಬೀದರಿನ ಶ್ರೀ ಶಿವಕುಮಾರಸ್ವಾಮಿಗಳು, ವಿಜಾಪೂರದ ಶ್ರೀಮದಭಿನವ ಶಿವಪುತ್ರ ಸ್ವಾಮಿಗಳು ಇದೇ ಮಠದಲ್ಲಿದ್ದು ಕಲಿತು ವಿದ್ವಾಂಸರಾದವರು.

ಪಾಕಶಾಲೆಯಲ್ಲಿ ಅಡಿಗೆ ಏನಾದರೂ ಕೆಡಿಸಿದರೆ, ಊಟಕ್ಕೆ ಕುಳಿತಾಗ ತಟ್ಟೆಯಲ್ಲಿ ಅಗುಳು ಬಿಟ್ಟರೆ ಕಂಡು ಸುಮ್ಮನಿರುತ್ತಿರಲಿಲ್ಲ, ''ಒಂದು ಅಗುಳು ಇರುವೆಯ ಹೊಟ್ಟೆ ತುಂಬುತ್ತದೆ – ಕೆಡಿಸಿದರೆ ಹೇಗೆ?'' ಎನ್ನುತ್ತಿದ್ದರು. ಒಂದು ದಿವಸ ಪಾಕದಲ್ಲಿ ರುಚಿ ಕಡಿಮೆಯಾದದ್ದಕ್ಕೇ ಯಾರೋ ನುಡಿದ ನುಡಿಗೆ ಹೇಳಿದ ಮಾತು –

''ಪ್ರಸಾದ ಬುದ್ಧಿಯಿಂದ ಸ್ವೀಕರಿಸಿದರೆ ಸದ್ರುಚಿಯಾಗಿ ಪರಿಣಮಿಸುತ್ತದೆ. ಪದಾರ್ಥ ಬುದ್ಧಿಯಿದ್ದೆಡೆಗೆ ಅಡುಗೆಗೆ ಹೆಸರಿಡುವ ಬುದ್ಧಿ ಉದಯವಾಗುತ್ತದೆ. ಇಂದು ಸಮಾಜ ಸುಧಾರಣಾ ದಿಶೆಯ ಸಾಗುವ ವಟು–ಸಾಧಕ–ಸ್ವಾಮಿಗಳು ಚಿಂತನ ಗೂಡುವ ಮಾತಿದು'' ಎಂದು – ಹೇಳಿದ್ದು, ನುಡಿದವಗೆ ಹರಳು ಕಡಿದಂತಾಗಿತ್ತು. ಪಾಕಶಾಲೆಯ ಅಡಿಗೆ ಮಾಡುವವ ಅತ್ಯಂತ ಸಿಟ್ಟು. ಅವನದು ತಿಳಿದು ಪೂಜ್ಯರು –

''ಅತಿಯಾಗಿ ಖಾರ ತಿನ್ನುವದನ್ನು ಮೊದಲು ಕಡಿಮೆ ಮಾಡು ಸಾತ್ವಿಕನಾಗಿ ಭುಂಜಿಸು ಅಂದರೆ ಶಾಂತನಾಗುತ್ತಿ.'' ಎಂದು ಹೇಳಿದ್ದು ಅಲ್ಲಿಯ ಮುಂಬರುವ ಮಠಾಧಿಕಾರಿಗಳಾಗುವವರಿಗೆ ಪರ್ಯಾಯವಾಗಿ ಪಾಠಕೊಟ್ಟಂತಾಗಿತ್ತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಚನ್ನಿಧಿ' ಕರದಲ್ಲಿ ದರ್ಪಣ ಹೇಗೆ ಪ್ರತಿಬಿಂಬಿಸುತ್ತಿದೆಯೋ ಹಾಗೆ ಹದಗೂಡು ತರಳಿದ ಪೂಜ್ಯರ ಪ್ರಸಾಧಿಕತೆಯ ಪಾತ್ರದೊಳಗೆ ಚೈತ್ರ ಪೌರ್ಣಿಮೆಯ ಬೆಳದಿಂಗಳು. ಇದರೊಳಗೆ ಸಹಜರಳಿದ ಸಂಪಿಗೆಸಳು.

ಇದೊಂದು ಕಾವ್ಯಕೃಷಿ, ಕ್ಷೇತ್ರ ಕೃಷಿಕ ತಾನು ಹೊಲಕ್ಕೆ ಖರ್ಚು ಮಾಡಿದ್ದನ್ನು – ಬಂದ ಬೆಳೆಯನ್ನು – ದೊರೆತ ಸಲ್ಲಾಭ ತುಲನೆಮಾಡುವಂತಿರಬೇಕು. ಸತ್ವಲಸಿಗದೇ ಹೋದರೆ ಮಾಡಿದ ಖರ್ಚುವೆಲ್ಲವೂ ವ್ಯರ್ಥವೆಂಬುದನ್ನು ಯೋಚಿಸಿ ತೊಡಗುವದೆ ಸರಿ. ತಪ್ಪಿ ಹಾಗೆ ಸಾಗಿದರೆ ಮಾಡುವದೆಲ್ಲವೂ ಹೆರಿಯಂತಾಗಬಾರದು. ಹಾಗೆ ಈ ಕಾವ್ಯಕೃಷಿಯಿಂದ ವಾಚಕರಿಗೆ ಸಾನಂದ ಲಭಿಸಿದರೆ ಸಂತಸ, ಇಲ್ಲವೆಂದರೆ ಮತ್ತೆಮುಂದಿನ ಕೃತಿಯ ರಚನೆಯಲ್ಲಿ ಮರು ಯೋಚಿಸಬೇಕಾಗುತ್ತದೆಂಬುದನ್ನು ಬರಹಗಾರ ಅಳವಡಿಸಿಕೊಳ್ಳಬೇಕಾಗುತ್ತದೆ.

ಈ ಕಾವ್ಯ ಬರೆಯಬೇಕಾದರೆ ಅವರು ಸಂಚರಿಸಿದೆಡೆ ಸಾಗಿ ತಿಳಿದುಕೊಂಡದ್ದು ಮಾಸೂರೆಡೆಗೆ ಹೋಗಿಬಂದಂತೆ ಮಹಾರಾಷ್ಟ್ರದೆಡೆಗೂ ಹೋಗಿಬರುವದಾಯ್ತು. ಜತ್ತ–ಮಂಗಳವೇಡಾ ಕಂಡು ಅಲ್ಲಿಯ ಪರಿವರ್ತನೆ ಕೇಳಿ ತಿಳಿದು ಭಾವಚಿತ್ರ ತೆಗೆದುಕೊಂಡು ಬಂದೆ. ಮಂಗಳ ವೇಢೆಯಲ್ಲಿ ಮಠ ಮಾಡುವಲ್ಲಿ ಗುಡಿಸಲುವರೆಗೂ ಸನ್ನಿಧಿಗಳು ಸಾಗಿ ಮನೆಯಲ್ಲಿದ್ದವರ ಸಂಖ್ಯೆಯಷ್ಟು ಒಂದೊಂದು ರೂಪಾಯಿ ದೇಣಿಗೆ ಗ್ರಹಿಸಿ ಅಲ್ಲಿ ಖರೀದಿಸಿದ ಕ್ಷೇತ್ರ ೪ ಎಕರೆ ೨೨ ಗುಂಟೆ ಸಿ.ನಂ. ೨೯೫೭. ಇದಕ್ಕೇ ವಿಶ್ವೇಶ್ವರ ಸಾಂಸ್ಕೃತಿಕ ಭವನ ಜಂಗಮವಾಡಿ ಮಠ ಬ್ರ್ಯಾಂಚ್ ಮಂಗಳ ವೇಢಾ ಅಂತಾ ನಾಮಕರಣ ಮಾಡಿದ್ದಾಗಿದೆ. P.T. No. ಕೇಳಿದೆ ಸಿಗಲಿಲ್ಲ. ಮಾಹಿತಿ ಕೊಟ್ಟವರು C.M. ಹಿರೇಮಠ ೧೮೫೦೫೩೭೯೦೫ ಶಿಕ್ಷಕರು. ಈಗ ಅತ್ಯಂತ ವಿಶಾಲವಾದ ಭವನ ಸಿದ್ಧಗೊಳ್ಳುತಲಿದೆ. ಜತ್ತದಲ್ಲಿಯ ಶ್ರೀ ಸಂಗಮೇಶ್ವರ ಸ್ವಾಮಿಗಳು ಚನ್ನಿಧಿಯವರಿಗೆ ಕಾಶಿಯಲ್ಲಿ ಅಧ್ಯಯನಕ್ಕೆ ಧನದ ಸಹಾಯ ಮಾಡಿದ್ದು ತಿಳಿದು ಇವರ ಮಠಕಂಡು ಬಂದೆವು.

ಚಕ್ಕಡಿಗಳಲ್ಲಿ ಹಳ್ಳಿಹಳ್ಳಿಗೆ ಸಂಚಾರ ಮಾಡಿದ ಅಂದಿನ ಶ್ರೀಗಳ ಇರವು ವಿಶಾಲ ಹೃದಯ ವಿವರಿಸಿಹುದನ್ನು ಕೇಳಿದೆವು. ನಮ್ಮ ಭಕ್ತರು ಬಡವರು ಅವರಿಗೆ ಭಾರವಾಗುವದು ಬೇಡ ಎನ್ನುವ ಅವರ ಮನದೆರೆದ ಮಾತು ಇಂದಿನ ಶ್ರೀಗಳಲ್ಲಿ ಕಂಡು – ಕೇಳಬರುವದೇ ಬಲಗಾಲವೆನ್ನಿ; ಈ ಮಾತನ್ನು ಸಿಡೆಗೂರಿನ ಶ್ರೀ ನೀಲಕಂಠ ಶಾಸ್ತ್ರಿಗಳವರು ವಿವರಿಸಿದ್ದು ಇವರು ಮರೆಗುದ್ದಿ ಮಂಟೂರ, ಸೊನ್ನಕ್ಕೆ ಬಂದವರು ಸೊನ್ನೆವಾಡೆಯಲ್ಲಿ ಶಿವಯೋಗಿಗಳ ಬಗ್ಗೆ ಗೌರವ ತೆರೆದಿಸಿರಿಸಿಹುದನ್ನು ಮರು ಮೆಲುಕಿಸಿದವರು.

ಇನ್ನೂ ಲಾತೂರ ಪುಣೆಯವರೆಗೆ ಹೋಗಿಬರಬೇಕಾಗಿತ್ತು ಅನಾರೋಗ್ಯ ಅಶಕ್ತತೆಯ ಕಾರಣ ಹೋಗಲಾಗಲಿಲ್ಲ ನೀಗಿದಷ್ಟು ಚನ್ನಿಧಿಯವರು ನನ್ನೆಡೆಗೆ ಇಟ್ಟ ಕಾರುಣ್ಯ ನೋಟದ ಫಲವಾಗಿ ಈ ಷಟ್ಪದಿ ರಚನೆ ನನ್ನಿಂದಾಗಿದೆ ಮತ್ತೇ ಮಹತ್ವಪೂರ್ಣವಾದ ಘಟನೆಗಳನ್ನು ಸಂಪೂರ್ಣವಾಗಿ ತಿಳಿಸಿದರೆ ಮತ್ತೆ ವಿಷಯ ಸೇರಿಸಬಹುದು ತಿದ್ದಿಕೊಳ್ಳಬಹುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೭–೮–೧೯೮೯ ಶ್ರಾವಣ ಶುದ್ಧ ಷಷ್ಠಿಯ ದಿವಸ ಸನ್ನಿಧಿಯವರ ಕೊನೆಯ ಸಭಾ ಸಮಾರಂಭ ಕಂಡು ಬರುತ್ತದೆ. ಹೂಲಿಯಲ್ಲಿಯ ಮಠದ ಉದ್ಘಾಟನಾ ಮಾಡಿದ ನಂತರ ಮಂಗಳವೇಢೆಯ ಕಡೆಗೆ ಸಾಗಿದರೆ ಮುಂದೆ ಅನಾರೋಗ್ಯದಿಂದ ಪುಣೆಗೆ ಪಯಣಿಸಿದ್ದು ತಿಳಿದುಬರುತ್ತದೆ.

ಸನ್ನಿಧಿಯವರ ಪುಣ್ಯಾರಾಧನೆ ಕಾಶಿಯಲ್ಲಿ ಶ್ರೀ ಜ. ಡಾ|| ಚಂದ್ರಶೇಖರ ಶಿವಾಚಾರ್ಯರವರು ವೈಭವಪೂರಕ ಮಾಡುತ್ತ–ಬಂದದ್ದು ವಿಧಿತ. ಅದೇ ತೆರನಾಗಿ ತಮಗೆ ನೀಗಿದಷ್ಟು ದಿಂಡದ ಹಳ್ಳಿ ಶ್ರೀ ಷ.ಬ್ರ. ಶಿವಾನಂದ ಶಿವಾಚಾರ್ಯರ ಅಪ್ಪಣೆಯ ಮೇರೆಗೆ ಮಾಸೂರದಲ್ಲಿ ಶ್ರೀ ಲಿಂ.ಜ. ವಿಶ್ವೇಶ್ವರ ಶಿವಾಚಾರ್ಯರ ನೆನಹಿನಲ್ಲಿ ವಿಶ್ವಾರಾಧ್ಯರ ಮೂರ್ತಿ ಸ್ಥಾಪಿಸಿ ಪುಣ್ಯಾರಾಧನೆಯನ್ನು ಶ್ರೀ ಗುರುಪ್ರಸಾದ ಹಾಗೂ ಸಂಗಡಿಗರು ಭಕ್ತರು (೯೪೪೮೯೭೭೦೫೪) ಆಚರಿಸುತ್ತ ಬಂದ ದಾಖಲೆಗಳ ಕಂಡೆ. ೨೯–೪–೨೦೧೨ ಎಂದು ಮೂರ್ತಿ ಸ್ಥಾಪನೆಯಾದದ್ದು, ಪೂಜ್ಯರ ಪುಣ್ಯಾರಾಧನೆಯ ರಜತ ಮಹೋತ್ಸವಕ್ಕೆ ಸನ್ನಿಧಿಯವರ ಸಂದೇಶ ಬಂದರೂ ನನ್ನ ಅನಾರೋಗ್ಯದ ಕಾರಣ ಹೋಗಲಾಗಲಿಲ್ಲ ೩ ದಿವಸ ರೈಲದಲ್ಲಿ ಪಯಣ ಜಟಿಲವೆನಿಸಿ ಸುಮ್ಮನಾದದ್ದಾದರೂ ಈಗ ಅದರ ಪ್ರತೀಕವಾಗಿ ಸಿದ್ಧವಾದ ಕಾವ್ಯಕುಮುದಿನಿಯಿದು. ಯಲ್ಲಟ್ಟಿ ನಿರುಪಾಧೀಶ್ವರ ಮಠಕ್ಕೆ ದಯಮಾಡಿಸಿದ ವೇಳೆಯಲ್ಲಿ ತೆರೆದಿರಿಸಿದವರ ಭಾವಗರ್ಭ ಬಯಕೆಯಂತೆ ರಚಿಸಿದ್ದು ಸಂತಸ ತಂದಿದೆ. ಆಗ ಬರೆಯುವ ಬಗ್ಗೆ ಮಾತು ಕೊಟ್ಟಿರಲಿಲ್ಲ. ಆದರೂ ರಚನೆ ೮–೧೧–೨೦೧೫ ರಂದು ರವಿ ಹಸ್ತಾ ದಿವಸ ಪ್ರಾರಂಭ ಮಾಡಿ ೨೮–೩–೨೦೧೬ ರಂಗಪಂಚಮಿಯಂದು ಮುಗಿಸಿದಾಗ ಸಂತೃಪ್ತಿಯ ಸರೋಜ ವಿಕಸಿತವಾಗಿದೆ. ಬೇಸರತೆಗೊಂಡ ಈ ಜೀವನಕ್ಕೆ ಆಸರಾದುದೇ ಈ ಬರಹ.

ಈ ಕಾವ್ಯಕ್ಕೆ ೧) 'ಕಾಶೀ ಪೀಠಜ್ಞಾನಗಂಗಾ' ೨) 'ಮಾಸೂರ ಮಹತ್ವ' –ಹ.ಮು. ತಳವಾರ ೨೦೦೯, ೩)'ಲಿಂಗಜ್ಯೋತಿ' –ಸ್ಮರಣ ಗ್ರಂಥ ಸಂ.ಪ್ರೊ.ಸಿ.ಎನ್. ಪೂಜಾರ ೨೦೧೧, ೪) 'ಬಸವೇಶ್ವರ ವಚನದೀಪಿಕೆ' – ಡಾ. H. ತಿಪ್ಪೇರುದ್ರಸ್ವಾಮಿ, ೫) 'ಸಿದ್ಧಾಂತ ಶಿಖಾಮಣಿ'–ಪ್ರವಚನಪ್ರಭೆ–ಕಾಶಿ ಸನ್ನಿಧಿ – ಈ ಕೃತಿಗಳ ಆಕರವಾಗಿದೆ. ಪೂರಕವಾಗಿ ತಾತ್ವಿಕವಾಗಿ ಸುತ್ತುಪುರುಷರ ಜೀವನಕಥಾ ನೆನೆಪಿಸಿದ್ದೇನೆ. ಇದು ಬೋಧಾತ್ಮಕವಾಗಿಯೂ ಧಾರ್ಮಿಕವಾಗಿಯೂ ತಾತ್ವಿಕವಾಗಿಯೂ ಶೋಭೆಗೊಳ್ಳುವ ದಿಶೆಯಲ್ಲಿ ಗ್ರಹಿಸಲಾಗಿದೆ. ವಿದ್ವಾಂಸರೆದುರು ಚರ್ಚಿಸಿ ಸಂಯೋಜಿಸಿದ ಷಟ್ಪದಿಯಿದು. ಸಲಹೆಗಳು ಬಂದರೆ ಗ್ರಾಹ್ಯ. ಇಲ್ಲಿಯವರೆಗೆ ಬರೆದ ಕಾವ್ಯಾನುಭವದ ಸವಿಯಲ್ಲಿ ಸಿದ್ಧಗೊಳಿಸಿದ ಷಟ್ಪದಿಯಿದು. ಪೂಜ್ಯರು ವಚನಗಳನ್ನು ತಮ್ಮ ಉಪದೇಶದಲ್ಲಿ ತಗೆದುಕೊಳ್ಳುತ್ತಿದ್ದುದರಿಂದ ಇಲ್ಲಿ ಪರ್ಯಾಯವಾಗಿ ಗ್ರಹಿಸುತ್ತಸಾಗಿದೆ. ಇಲ್ಲಿ ಪೂರಕವಾಗಿ ಬಳಸಿರುವ ಸದ್ವಿಷಯ ಮಾಸೂರಿಗೆ ಹೋದಾಗ ಅಲ್ಲಿನಡೆದ ಸಂಸ್ಕೃತಿಯ ಬಗ್ಗೆ ಸನ್ನಿಧಿಯವರ ಪೂರ್ವಾಶ್ರಮದ ಬಂಧುಗಳಲ್ಲಿ ಚರ್ಚಿಸಿದಾಗ ತಿಳಿದುಬಂದ ರೀತಿಯನ್ನೇ ಭರಿಸಲಾಗಿದೆ. ಶ್ರೀಮತಿ ಗೌರಮ್ಮ ವೇ। ಗಂಗಾಧರ, ಶ್ರೀ ಗುರುಪ್ರಸಾದರ ಮುಖದಿಂದ ತಿಳಿದುಬಂದಿಹುದನ್ನೇ ಸರಳಿರಿಸಲಾಗಿದೆ ಅನ್ಯಥಾ ಕಲ್ಪಿಸಬಾರದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಲಹು :

ಪ್ರಾರಬ್ಧದಂತೆ ಜೀವನವೆಂಬುದು ಹಲವಾರು ಬುಧರ ಅನುಭಾವಿಗಳ ಉಲುಹು. ಶಿಕ್ಷಣದಲ್ಲಿ ಒಂದು ಪರಿಪಂಥ, ಮಠಾಧಿಕಾರಿಯಾದ ಬಳಿಕಂತೂ ಹೆಜ್ಜೆಹೆಜ್ಜೆಗೆ ತಾಪತ್ರಯ ಅವಮಾನ ಕಷ್ಟನಷ್ಟಗಳು. ಉಪಾಧಿಗಳನಳಿದು ಹೊರಬಂದರೂ ಪರಿಸರದಲ್ಲಿ ಕಂಡು ಬರುವ ತಪ್ಪುಗಳ ತಿದ್ದುವದು ತಿಳಿ ಹೇಳುವದು ಜಂಗಮನ ಸದ್ಧರ್ಮ. ತಿದ್ದಿಕೊಳ್ಳದೇ ತಮ್ಮದೇ ನಡೆ ಸತ್ಯವೆಂಬುವರೆಡೆಗೆ ಹಿತನುಡಿಗಾವ ಫಲಪೂಜೆಯಿಲ್ಲ. ಹೀಗಾಗಿ ಇದರೆಡೆ ಯಿಂದಲೂ ಮುಕ್ತನಾಗುವ ದಿಚ್ಛೆ ಪ್ರಾಭಲ್ಯವಾಗಿ ಸಾಗುವದೇ ಶ್ರೇಯಸ್ಕರವೆಂದು ಭಾವಿಸಿದೆ. ನಡೆಯಬೇಕಾದದ್ದು ಸಕ್ರಮ ನಡೆಯದೇ ತಮ್ಮ ಗತ್ತೇ ಸತ್ಯವೆಂದು ಸಾಗಿದಾಗ ಅಲ್ಲಿ ಬೋಧನೆಯೆಂಬುದು ಮೌನವಾಗಿ ಉಳಿಯುತ್ತದೆ. ಈ ರೀತಿ ಕಾಣುವದು ಒಂದು ಪ್ರಾರಬ್ಧವೇ? ಸಮಾಜ–ಪರಿಸರದಲ್ಲಿ ಕಂಡು ಬರುವ ಕಠೋರತೆ ಹಟ ಒರಟುಕಂಡು ತಿದ್ದುದಕ್ಕೆ ಸಾಗಿ ಸಫಲತೆಗಾಣದಾದಾಗ ಮತ್ತೊಂದು ಗುರಿ ಹಿಡಿಯುವಿಕೆ ಸಹಜ. ಹೀಗಾಗಿ ಮೌನವಾಗಿರಬೇಕೆಂದರೂ ಮನಸ್ಸು ಮೌನವಾಗಿ ಉಳಿಯದೆ ನಡೆಯೊಳಗಾಗದು ದೆಡೆಯ ಚಿತ್ರಗಳೇ ಕಣ್ಣೆದುರು ನಟನೆ ಮಾಡಿದಾಗ ಮಾಡಬೇಕೇನು. ಕಾರಣ ಬರಹವೇ ಸಾಕು ಸಾಕೆಂದರೂ ಮತ್ತೆ ಉಲುಹಿದೆನೀ ದಿಶೆಯಲ್ಲಿ. ಲೋಕದ ಡೊಂಕು ನೀವೇಕೆ ತಿದ್ದುವಿರಿ? ಇಲ್ಲಿ ನೀವೆಷ್ಟು ತಿದ್ದುವಿರಿ ತಿದ್ದದ ಡೊಂಕು ಎಂದು ಪರಿಭಾವಿಸಿ ಮತ್ತೆ ಮನಕೆ ಬರೆಯಲು ಆಜ್ಞಾಪಿಸಿದೆ. ಇದರೆಡೆಗಾದಾಗ ಕರ್ಕಶ ಕಠೋರತೆ ಮರೆಯುತ್ತೇನೆ ಬರೆಯುತ್ತ ಸಾಗಿದ ಸಂಭ್ರಮಗಳೇ ನಾಗಲಾಂಬಿಕೆ, ನೀಲಾಂಬಿಕೆ ಭವ್ಯಕಾವ್ಯಗಳು ಮೂಡಿಬಂದಂತೆ ಚೆನ್ನಿಧಿಯು, ನಿಮ್ಮ ಕರದಲ್ಲಿದೆ. ಅವರಿಗೆ ತಕ್ಕ ಶಬ್ದ ಶೃಂಗಾರವಿದೆ, ಮನದೊಲವಿನ ಮಿಡಿಗಳಿವೆ. ಅಂದು ಮುಂದೆ ಕಂಡಂಥ ಅರವಿಂತ ಚಂದದ ಚಿದ್ಬಿಂದುಗಳಿಲ್ಲಿವೆ. ಈ ಕೃತಿಯನೋದಿ ಕೆಲವರಿಗಾಶ್ಚರ್ಯವಾಗಲೂಬಹುದು. ಕೆಲವರಿಗೆ ಸರಿ ತೋರದಿರಲೂಬಹುದು. ಕಾವ್ಯಾಸಕ್ತರು ಸಮದರ್ಶಿಗಳು ಈ ಕೃತಿಯ ಪುರಸ್ಕರಿಸುವರೆಂದು ದೃಢವಾದ ನನ್ನ ನಿಲುವು. ಚಿತ್ರದೊಲವಿನ ಚಿಲುಮೆ ಕಾಲ್ಪನಾಗಸ ಕುಲುಮೆ. ತತ್ವದಾಂಬರದೊಲುಮೆಯೆನದೆ ಇನ್ನೇನು !! ಸುಜ್ಞಾನ ಪೀಠದ ಸಮೆಯಿದು.

ಸತ್ಪಥದಲ್ಲಿ ಸಾಗಿ ಭಕ್ತರ ಗತಿಗೆ ಮತಿಗೆ ಬಲಧಾರೆರೆದು ಪ್ರಸಿದ್ಧರಾದರಂಥವರ ಈ ಕಾವ್ಯ ಮುಗಿಸುವ ಮೊದಲು ಪರಿಶೋಧಿಸುವ ಸಂಚಾರದಲ್ಲಿ ಸಹಭಾಗಿಗಳಾದವರು ಕವಿ ಸಂಶೋಧಕ ವೈಚಾರಿಕರಾದ ಶ್ರೀ ಮಲ್ಲಿಕಾರ್ಜುನ ಯಾಳವಾರ, ಶಂಕರ ಡಬರಿ, ವೆಂಕಣ್ಣಬರಗಿ, ಶಿವಪ್ಪಾ ಸಬಳದ ಅವರ ಸೇವೆ ಸಹಕಾರ ಸ್ಮರಣೀಯ. ಸಮಗ್ರ ಸದ್ವಿಷಯ ಪರಿಚಯಿಸಿದ ಕಿಟ್ಟದಹಳ್ಳಿಯ ಶ್ರೀ ಗುರುಪ್ರಸಾದ ಬಿ. ಹಿರೇಮಠ ಹಾಗೂ ಶ್ರೀ ಗಂಗಾಧರ ಶಾಸ್ತ್ರಿಗಳು ಹಾಗೂ ಹಳೆಶಿಡೇನೂರಿನ ಶ್ರೀ ನೀಲಕಂಠ ಶಾಸ್ತ್ರಿಗಳು ಮತ್ತೆ ಅರೆತಲೆಗಡ್ಡಿಯ ಶ್ರೀಮತಿ ಗೌರಮ್ಮನವರಿಗೆ ಹಾಗೂ ಐತಿಹ್ಯ ಕೊಡಮಾಡಿದವರಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೃತಜ್ಞತೆಗಳು. ಡಾ. ಬಿ.ವಿ. ಯಕ್ಕುಂಡಿಮಠ ಸಂಯೋಜಕರು ಕನಕ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರು ಆದ್ಯಂತ ನಿರೀಕ್ಷಿಸಿ 'ಚಿನ್ನಿಧಿಯ ಚಿತ್ಪ್ರಭೆ' ಬರೆದು ಶೋಭೆ ತಂದದ್ದು ಸ್ಮರಣೀಯ ಹಾಗೂ ಗ್ರಂಥ ಪ್ರಕಟಣೆಯ ಭಾರ ಹೊತ್ತಂಥ – ಮಹನಿಯರಿಗೆ ಸುಂದರವಾಗಿ ಮುದ್ರಿಸಿದ ಮುದ್ರಣ ಬಳಗಕ್ಕೂ ಸೇವಾ ಭಾವಿಗಳಿಗೂ ಧನ್ಯವಾದಗಳು.

ರಂಗಪಂಚಮಿ ೨೮–೩–೨೦೧೬
ಸೋಮವಾರ

ಶ್ರೀ ನಿ. ಪ್ರ. ನಿರುಪಾಧಿಸ್ವಾಮಿಗಳು
"ನಿರುಪಾಧೀಶ"
ಮರೆಗುದ್ದಿ. ಮೊ.೯೪೪೯೮ ೭೩೪೭೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಿವಿಡಿ

ಬೆಳಗು	ಸೊಬಗು	ಸಾಗು
●	ಮುನ್ನುಡಿ	vii
●	ನೆನಹು	xxiii
●	ಹೊಂಬೆಳಗು	೧
೧.	ಕಾಲತಾಲ	೭
೨.	ಪ್ರಾಕೃತಿಕ ಪಾತ್ರ	೧೬
೩.	ಸಂಸ್ಕೃತಿ	೨೧
೪.	ಚಿನ್ನಾದ	೩೦
೫.	ಸಂಸ್ಕೃತಿ	೩೮
೬.	ಸಂಸ್ಕಾರ	೫೧
೭.	ಅಕ್ಷರಾಂಬರ	೬೦
೮.	ಸಂಸ್ಕೃತಾಮೃತ	೬೮
೯.	ವಿದ್ಯಾವಿಲಾಸ	೮೩
೧೦.	ಪೀಠ ಪ್ರಸಾದ	೯೩
೧೧.	ಪ್ರಾಸ್ತಾವಿಕ ಪ್ರಜ್ಞೆ	೧೦೨
೧೨.	ಪ್ರಸಾದಾಲಯ	೧೧೧
೧೩.	ಉತ್ಸವ	೧೧೯
೧೪.	ವಿದರ್ಭ – ವಿಕಾಸ	೧೩೧
೧೫.	ಪರಿಪಾಲನ	೧೩೯
೧೬.	ಮಂಟಪೋತ್ಸವ	೧೪೯
೧೭.	ಭಾವದುಡಿಗೆ	೧೭೬
೧೮.	ಬಯಲಿಲ್ಲದ ಬಯಲು	೨೦೯
೧೯.	"ಮಹಾಮಾನವತಾದಿ ಶ್ರೀ ಸಂಗನಬಸವ ವಿಜಯ" ಮಾಹಕಾವ್ಯದ ವೈಚಾರಿಕ ನೆಲೆಗಳು	೨೨೩
●	ಅನುಬಂಧಗಳು	೨೩೦

■■

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಿನ್ನಿಧಿ

ಹೊಂಬೆಳಗು

ಸೂಚನೆ :

ಚನ್ನ ಚಿನ್ನಿಧಿವರ್ಯರಾ ಸಂ
ಪನ್ನ ಜೀವನಚರ್ಯರುನ್ನತಿ
ಯನ್ನೆ ಬರೆಯುವ ಕಾರಣರಿವುದು ಮೊದಲು ಸಮದರ್ಶಿ ||

ವಾಚನ :

ಶ್ರೀ ಮಹಾಂತ ಪ್ರಶಾಂತ ಕಾಂತಿಯೊ
ಳಾ ಮನೋಲ್ಲಾಸಲೆ ವಿಭೂಷಿತ
ವಾ ಮಧುನುಡಿಗಳೆಡೆಯ ಬಡಿಸುತ ಭಕುತರೊಡಲದೊಳ ||
ಸೋಮಧರ ಸದುಭಕುತಿಯಾಮೃತ
ಸಾಮಯಿಕ ಧಾರೆರೆಯುತವರೊಳ
ನೇಮದೊಳ ಚಿರದುದಯ ಸುವೃತಿ ಗುರುಪದಕೆ ಶರಣು || ೧ ||

ಅಡಿಗಡಿಗೆ ಗಣಮನದಿ ಮೌಕ್ತಿಕ
ಮಿಡಿಗಳನೆ ಕೊಡಮಾಡುತವರೊಳ
ಗಡಲದಾಳದೊಳುಳಿಸಿ ಬೆಳಗುತ ಬೆಳಸುತಾತ್ಮಗತ ||
ಬಿಡದುಳಿಸುತಾ ನುಳಿಯುತುಳಿಸಿಹು
ದೊಡೆಯ ಚಿನ್ಮಯ ಚನ್ನಬಸವನ
ನುಡಿಯ ಹುಡಿಯೊಳ ಮೀಯುತಲಿ ಸಲ್ಲಿಸುವೆ ಶರಣಾರ್ಥಿ || ೨ ||

ಕಂಪು ಕನ್ನಡ ಕುಮುದಿನಿಯೊಳಗ
ಲಂಪು ಬಡದನುಭಾವ ಸೊಬಗಿನ
ಸೊಂಪು ಅರುಣೋದಯ ಸದಾಗತದಿರವ ಭರಿಸುತ್ತ||
ಇಂಪು ಇಂಗಡಲಲೆಯೊಳೆಲ್ಲರ
ತಂಪದಿರಿಸಿದ ಬಸವ ಬಳಗದ
ಪೆಂಪು ಪಂಥ ಪ್ರಸಾದ ಮೋದಿಗರಿಗಿದೊ ನುಡಿನಮನ || ೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮನದಣಿಯದಂತಾಗೆ ಶರಣೆಯ
ರನಿತು ಹಾಡಿಹುದಾತ್ಮದೊಲವಿನ
ಘನತೆಯ ಘನೀಭೂತವಾಗಿರಿಸುತ್ತಲೋದುಗರ ॥
ಮನಮಹಾನತೆಯೆಡೆಗೆ ಸೆಳೆಯು
ತ್ತುಣಿಸುತುಣಿಸುವ ಚುಂಬಕದನಿರಿ
ಅನಘ ನಾಗಾಂಬಿಯಳ ಬಳಗವ ಸ್ಮರಿಸಿ ಸಾಗುವೆನು ॥ ೪ ॥

ಕತ್ತಲೊಳಗೆಲ್ಲರಿಗು ಬೆಳಕಿನ
ಬತ್ತಿಗಳೆ ತಾವಾಗುತಲ್ಲದೆ
ಹೊತ್ತು ಹೊತ್ತಿಗೆ ಹೂವದಂತಿರಿಸುತ್ತ ಜೀವಿಗಳ ॥
ಹೊತ್ತನರಿಸುತ ಹರ್ಷ ಹೊನಲೊಳ
ಗುತ್ತಮೋತ್ತಮ ಕಾರ್ಯದೊಳ ಪದ
ಗತ್ತ ಗೂಡಿಸುವಂಥ ಗಣ ಶರಣರಿಗೆ ಶರಣಾರ್ಥಿ ॥ ೫ ॥

ಭೂತ ಭಾವಿಸುತಿತ್ತಲೆಂದಿನ
ಬೇತದೊಳಯೋಜಿಸುತ ಕಂದನ
ಮಾತ ಭಾವಿತರಾಗುತಿಳೆಯೊಳಗೆಲ್ಲರೆದುರಿನೊಳು ॥
ಮಾತು ತೊದಲಿನನಂದನೆನಿಸುತ
ಲಾತುಮದ ಸುಖದೊಳಗೆ ಸಂತಸ
ಸೇತು ಮೂಡಿಸುತಿಹ ಮಹಂತರ ಪದದೊಳಾಡುತ್ತ ॥ ೬ ॥

ಹಲವು ವೈಚಾರಿಕದ ಲೇಖನ
ಛಲದಿ ಮಂಡನ – ಮುಕ್ತ – ಮಂಥನ
ಕುಲುಮೆಯೊಳಗಿಟ್ಟಂಥ – ಪರಿಶುದ್ಧಿಸಿದ ರಸವಸ್ತು ॥
ನಿಲುಮೆ ಸಂಪಾದನೆಯದೊಲವಿನ
ಚಿಲುಮೆಯಾ ತಾತ್ಪರ್ಯ ತೆರೆಯೊಳ
ಗಳೆದಳೆದು ಮುಖ ನೋಡಲಾಗದೆ ಮೂಡಿಸುತ ಶಿಸ್ತು ॥ ೭ ॥

ಪರತರದ ಪಟ್ಟಾಧಿಕಾರದೊ
ಳಿರಿಸುತಲಿ ಮುಂಬರುವ ದಿನದೊಳ
ಗಿರುವ ಬಗೆ – ಹೂ ತರುವೆ – ಹುಲ್ಲನು ತಾರೆನುವ ಶಪಥ ॥
ಪರಿಧಿ ಪಾಲಿಸುವವರ ಬಿಡದನು
ಸರಿಸಿ ನಡೆವರ ನಿಯತಿಯೊಳ ಸಹ
ಜರಳು ಭಾವಿತನಾಗುತೀ ಶುಚಿ ರಚನೆ ರಂಜನದಿ ॥ ೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶರಣರನುಭವ ದಿವ್ಯಪಥಪದ
ನೆರಳ ನುಡಿಯೊಳ ಹೆಣೆಯುತಿರಲದೆ
ಹಿರಿಮೆ – ಬಸವನ – ಚನ್ನಬಸವನ – ವೇಮನ – ನಿರಾಳ ||
ಪರಮ ಬಯಲೋಲ್ಲಾಸ – ಬಯಲಾ
ಳರಳು – ಮಡಿವಾಳೇಳ ಕಾವ್ಯದು
ಸರಣಿ – ಷಟ್ಪದಿ – ಲಿಂಗನಾಯ್ಕನ ಹಳ್ಳಿ ಪೂಜ್ಯರದು || ೯ ||

ವಿರತ ಗುರುಪರ – ಚಿದ್ವಿಲಾಸದು –
ಶರಣ ಗಣ – ಶಿವಯೋಗಿ ಸಂಗಮು –
ಸರಣಿ – ಕನಕ ವಿಜಯದು – ನೀಲಾ – ನಾಗಲಾಂಬೆಯಳ ||
ಸರಿ – ಗಣೇಶ ಪುರಾಣವಲ್ಲದೆ
ಭರಿತ – ಚೌಪದಿ – ತ್ರಿಪದಿ – ರಗಳೆಯೊ
ಳರಳಿದಾ ಬಳಕಿದುವೆ ಚಿನ್ನಿಧಿ ಚರಣ ಷಟ್ಪದಿಯು || ೧೦ ||

ಬರೆಯೆಂದರಾರು :

ಕಾಶೀ ಪೀಠಾಧ್ಯಕ್ಷ ದಕ್ಷ ವಿ
ಕಾಶ ದಿಶೆ ಲಿಂಗಾಯತದ ಮತ
ಭಾಷೆ ಭೂಷಿತ – ದಾರ್ಶನಿಕ ಚಕ್ರವರತಿನಿತು – ಹಲ ||
ಕೋಶ ಭಾಷಿತ ಚಂದ್ರಶೇಖರ
ಭಾಷೆಯಾಲಿಸುತೀ ಕೃತಿಗೆ ಮನ
ಹಾಸುತೊಲವಿನ ನಿಲವದೊಳ ಚಿನ್ನಿಧಿಯ ಚಲುವೆಸಳು || ೧೧ ||

ಎಂಥನಾಯಕನಿವನು :

ಈತ ಸತ್ಕುಲವಂಶಿ ಸಾತ್ವಿಕ
ಸೇತು ಗತಿ ಗಾಂಭೀರ್ಯ ಸಂಸ್ಕೃತಿ
ಮಾತು ಮಾತಿಗೆ ವೀರಶೈವಾಚಾರವಭಿಮಾನಿ ||
ಖ್ಯಾತ ಚರ ಅಥಣೇಶನಾಶಯ
ಮಾತಿನಂತಾದಾತ ಮಹಿಮ ವಿ
ಭೂತಿ ವೈಭವವಾಸದಾಂಗ ಸಮಾಜ ಮುಖ ಮುಕುರ || ೧೨ ||

ಯಾರಿಗಿದುಯೋಗ್ಯ :

ಬಾಗಿ ಬಯಸದ ಕರಕೆ – ಪುಕ್ಕಟೆ
ಯಾಗಿರಿಸಿದರು – ಬದಿಗೆ ಸರಿಸುವ
ಸೋಗಿಗಳಿಗಿದು ದೂರ ಹೊಲದಿಹ ಬಣ್ಣದಾ ಬೆದರು ||
ಆಗಿರುವಗೆ – ಶಮಾದಿ ರಹಿತಗೆ
ನಾಗ ನಿರಿಗದು ರುಚಿಸದಿದು – ಸೊಗ
ಸಾಗಿರುವ ಭಕುತರಿಗೆ ಮೋದಕದಂತೆ ಮಾಧುರಿಯು || ೧೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಾರದಂಗಡಿ – ಗುಟಕ ಗುಟುಕಗೆ
ಜಾರತನಗುರಿಗರಗೆ ನೆರೆನೊರೆ
ಧಾರೆನಿಪ ಕಪ್ಪು ಹಣದೊಳಿರುವವಗೆ ಸರಿ ಬರದು ॥
ನೇರ ಬುಧರವಮಾನಿಸುತ ಹೊರ
ಹಾರ ಹಾಕುವಗೆನಿತು ಈ ಕೃತಿ
ಸಾರವೆಂಥದು – ಜಂಗಮವಿರೋಧಿಗಿದು ಬಹುದೂರ ॥ ೧೪ ॥

ಗ್ರಹಿಸುವದೆಂತು :

ತಪ್ಪು ಕಂಡಿರಬಹುದು ಹಲಮುಖ
ಒಪ್ಪು ನಿಮ್ಮವರೆದುರಿನೊಳಗದೆ
ಹೆಪ್ಪು ಹಾಕಿದ ರೀತಿಯಂತಿಹುದೆರಕದಂತೆನ್ನಿ ॥
ಅಪ್ಪಿಕೊಂಡಿಹ ವಿಬುಧ ಗಣರಿದ
ಕೊಪ್ಪುವಂಥದು ಮರೆತರೂ ಬಿಡ
ದೊಪ್ಪು ವೃದ್ಧತೆಯಂತೆಯೇ ಗ್ರಹಿಸುವಿಕೆ ನಿಮದೆನ್ನಿ ॥ ೧೫ ॥

ಯಾರೆ ಗುರುತಿಸುತಿರಲಿ ಗುರುತಿಸ
ದಾರೆ ಸಾಗಿರಲೇನು ತಮ್ಮನು
ಸಾರ ಡೌಲಧಿಕಾರ ಖಾರದೊಳಿರುತಲಿರಲೇನು ॥
ಸಾರ ಸಂದರ್ಭರಿತು ಶಬ್ದಾ
ಪಾರದಾಗರೊಳೀಸುತಾತ್ಮಿಯ
ಧಾರೆ ಭಾಸ್ಕರ ಕರದೊಳೀ ಕೂಡೆ ಕಾವ್ಯಕೊಡಚೇನು ॥ ೧೬ ॥

ಸುಮ್ಮ ಗಣಬಗೆ ಬರೆಯುತಾಂ ಬಲು
ಚಿನ್ಮಯತೆಯನನುಭವಿಸುವ ಹದ
ಸಮ್ಮುದದೊಳಾ ಕಾಣುತ್ತ ಸಾಗುವದೆನ್ನದಾರ್ಚನೆಯು ॥
ಸೊಮ್ಮ ಸುಜ್ಞಾನಿಗಳಿದೋದುತ
ಸಮ್ಮತಿಸುತಿರೆ ಸಪ್ರಸಾದತೆ
ಸಮ್ಮುದರಕೆನಿಸುವದು ಫಣೆಗೆ ವಿಭೂತಿ ಸುಪ್ರೀತಿ ॥ ೧೭ ॥

ಪಲ್ಲೆಯಾವದೆಯಿರಲಿ ತರುತದ
ರಲ್ಲಿ – ಜೀರಿಗೆ – ಲವಣ – ಸಾಸಿವೆ
ಸಲ್ಲುತಿರಲಲ್ಲಲ್ಲಿ ಸಹ ಸಿಹಿಯಂತೆ ನೋಡಿಲ್ಲಿ ॥
ಫುಲ್ಲಲಿತ ಚಿನ್ನಿಧಿಯ ಕಾವ್ಯೋಳ
ಮೆಲ್ಲ ನಿರುತಿಹ ಚರನಿರಂಜನ
ಸೊಲ್ಲುಸಹಿತಂ ಗಣ ಹಸಾದಾನುಭವ ಋತವಲ್ಲಿ ॥ ೧೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಿತ್ರ ಮೂಡಿಸುವಲ್ಲಿ ಕುಂಚದು
ಪಾತ್ರ ಹಲವಿಧ ಬೆಣ್ಣೆ ಬೆಡಗಿನ
ಜಾತ್ರೆ ಸಹಜಿರುವಂತೆ ಶರಣರಿಗೆಲ್ಲ ನುಡಿತಾಳಿ ॥
ಚೈತ್ರತೆಯಯಿರವಾಳ ಕಂಗಳ
ಮಾತ್ರೆ ಮಂಗಳ ಮೇಳ ಚಿದ್ರಸ
ಪಾತ್ರೆಯೊಳರಸಗಾಳ ತೆರೆದಿಟ್ಟಂಥ ರಸಬಾಳಿ ॥ ೧೯ ॥

ಮಲ್ಲಿಗೆಯ ಸೌರಭವ ಕರದೊಳ
ಗೆಲ್ಲ ಹಿಡಿಯುತ ತೋರಿಸುವದೆನ
ಗಿಲ್ಲಿ ಕಠಿಣದು ತಿಲದೊಳಿರಿಸಿ ಸುಗಂಧ ಪಡೆವಂತೆ ॥
ಮೆಲ್ಲನರಳುವದನ್ನೆ ನೋಡುತ
ಬಲ್ಲತನವಿಹುದೆತ್ತ ನನದಿಹು
ದಿಲ್ಲಿ ಚೆನ್ನಿಧಿ ಮಹತೆ ಮಾನಸ ನನಸ ಬಿಡದಂತೆ ॥ ೨೦ ॥

ನನ್ನ ತಿಳಿಮೆಯ ಬಲದ ಬೆಳಕೊಳ
ಗೆನ್ನಿ ಷಟ್ಪದಿ ಕದಳಿಗೊನೆಗಳಿ
ಗೆನ್ನ ವಿದುಷರಡಿ ಅಡಿ ಹಾಕುತ ಪಕ್ವ ಪರಿಯೊಳಗೆ ॥
ಬಣ್ಣ ತರಲಾವಾಗ ಹೊರಗದೆ
ಚನ್ನ ಚೇತನ ಚರ್ಯ ಚಂಪಾ
ರಣ್ಯ ಮಾನ್ಯತೆ ಹೃದಯಿದಕೆ ನಿಮದಿರಲಿ ಸಹಿ ಕಹಳೆ ॥ ೨೧ ॥

ಭೋಧಕನೆಂತು :

ಒಪ್ಪುವಂಥಹ ಹಿರಿಮೆ ಕಾವ್ಯದೊ
ಳೊಪ್ಪುವಂಥದ ಮಾರ್ಗದರ್ಶನ
ಹೆಪ್ಪು ಹಾಕಿರಲಿದರ ಮಂಥನದೊಳಗೆ ಸೌಲಭ್ಯ ॥
ಒಪ್ಪಿರುವ ಕಮಲಿರವ ಲತೆಯೆಡೆ
ತಪ್ಪಿ ಗರಜಲ ಹನಿಸದೇ ಸಹ
ಜೊಪ್ಪಿದೆಡೆಗಪ್ಪಟದ ಮಧುರನುಭಾವ ಸವಿಲಭ್ಯ ॥ ೨೨ ॥

ಹುಣಚಿಗಿಡದೆಡೆ ಕಲ್ಲೆಸೆಯುವಿಕೆ
ಯೆಣಿಕೆ ಮಾವಿನ ಫಲಕೆಡೆಯ ಗುರಿ
ಹಣಿಕೆ – ಸಿಂದಿಯ ಗೊಣೆಗದಾರದು ನೋಡೆ ನೋಡೆನುನಾ ॥
ತನಿಖೆಯೊಳ ಹುಳಗಾಳ ತಗೆದೊಗೆ
ದುಣಿಸುವಂತೆಯೆ ಮೇಲೆನಿಪ ಮಣಿ
ಯೊನಪ ತಿಳಿಸಿರೆ ಲೇಸು – ಶ್ರೋತ್ರಿಯರಿಗೆ – ಶ್ರೋತೃವಿಗೆ ॥ ೨೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುನ್ನರಾರೂ ಬರೆಯದಂಥಹು
ದೆನ್ನ ಮಾನಸ ಮಾತ್ರೆಗಾಣುತ
ಚನ್ನುಡಿಗಳಿಡುತಿರಲಿ ಮತ್ತಾ ತಮ್ಮಗುರಿಯಿಡಿದು ॥
ಬೆನ್ನುಡಿಗಳೇನಿಡಲಿ ಅವರಿವ
ರೆನ್ನುವಿಕೆಯಿರಲೇನು ಕಡೆದಿಹ
ಬೆಣ್ಣೆ ಬಡಿಸಿರಲಿದುವೆ – ಘೃತದಂತಾಗದಿಹದೇನು ॥ ೨೪ ॥

ಬರೆಯುವವರಾರು :

ಶುದ್ಧವಹುದಂಕಲಗಿಯಡವೀ
ಸಿದ್ಧ ಚರಣಾಶ್ರಯದಿ ಸ್ಥಾಪಿಸ
ಲೆದ್ದ ಪುರಮರೆಗುದ್ದಿ ಮಠವಿದುವಡವಿಸಿದ್ಧೇಶ ॥
ಬದ್ದಿದಕೆ ಗುರುವಂಶದೊಳು ಕ್ರಮ
ಬದ್ದ ಗುರು ಗುರುಪಾದ ಕೃಪೆಯಿಂ
ದೆದ್ದ ನಿರುಪಾಧೀಶನಿಂ – ಶ್ರೀಕಾರ ಪರಿತೋಷ ॥ ೨೫ ॥

ಅಂತೂ ಹೊಂಬೆಳಗು ೨೫ ಕ್ಕಂ ಶಿವಂ
ರವಿವಾರ ಹಸ್ತಾ ೮-೧೧-೨೦೧೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು - ೧

ಕಾಲತಾಲ

ಸೂಚನೆ :

ಚರಿತನಾಯಕ ಜನನ ಹಿನ್ನೆಲೆ
ಹರಳುಗಳು ಸಾಮಾಜಿಕಾದಿಯೊ
ಳಿರುವ ಕರುಳಿಳೆ ಬೆಳೆಯೊಳಡಗಿಹುದೆಸಳ ಹೊಲಬ ಹುಳಿ ॥

ವಾಚನ :

ಮುಂದುವರೆಯುತ ಸಾಗಿ ಸಾಗಿಹು
ದಂದತೆಯದೊಳಗಿರದೆ ಕಳೆದಿಹು
ದಂದಿನಾ ಮಾತೇಕೆನದು ಮನೆಯಿಂದ ಹೊರಬರುತ ॥
ಹೊಂದಿಹುದ ಮನೆಯೆಡೆಗೆ ಮರಳುವಿ
ಕೆಂದ ಪರಿಯೆನಬೇಕೆ ಕಾರಣ
ನಂದ ಜನನಿಯಳೆಡೆಯ ನಯನಿಡುವಂತೆ ಸಮತಿದುವು ॥ ೧ ॥

ಮೂಲವರಿಯದೆ ಮುಂದಿನಾ ಗತಿ
ಮೇಲ ಎಂತಹುದಯ್ಯ ಭೂಮಿ ವಿ
ಶಾಲತೆಯ ಬಲವರಿತು ಬಿತ್ತನೆಯಂತೆ ಪದಮಂತೆ ॥
ಮಾಲೆಗೊಳಿಸುವ ಮೊದಲು ವರಗುಣ
ಶೀಲ ತಿಳಿಯುವರಂತೆ ತತ್ಸಮ
ತಾಲ ಕಾಲ ವಿಶಾಲ ಬಾಲದೊಳಡಗಿದಾ ಸಂತೆ ॥ ೨ ॥

ವಿಶ್ವದಿತಿಹಾಸದೊಳಗಡಗಿಹು
ದಶ್ವದೋಟಂತಿಹುದವರೊಳಿಹು
ದಾ ಸಹಿತ ಗತಿಯೊಳಗೆ ಮುಳುಗೇಳುತ್ತದಾಡಳಿತ ॥
ಶಾಶ್ವತೆನಿಪಂತಾಗುತಾಶಾ
ಹೃಶ್ವೆನದೆ ಹೊರಟವರ ಮನದನಿ
ದಶ್ವಿನಿಯ ತಾರಾಂಗ ಭಾವಿಸಿದವರದೇ ಕುಣಿತ ॥ ೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಾಗೆ ನಮ್ಮೀಭಾರತದೊಳನು
ವಾಗಿ ಸಾಯುತ್ತವರು ಭಾವಿಸು
ತಾಗ ಸಾಧಿಸಿದಂಥ ಕುರುಹಗಳೀಗ ಕಂಗೊಳಿಸಿ ॥
ಬೇಗೆ ಗೊಳಿಸುತಲಿಹವು ತಳಮಳ
ಭಾಗಿಯಾದವರಿಲ್ಲೆನದು ಚಿಂತನ
ಭೋಗಿಯಾಗದ ಕಾರಣೆಂದರಿಯುವದು ಅದಕೆಲ್ಲ ॥ ೪ ॥

ಹೆಳವ ಬಳಿ ಕುಳಿ ಕುಳಿತು ಮನೆತನ
ಸುಳುಹ ವಂಶಾವಳಿಯ ತಿಳಿಯು
ತ್ತಳೆಯುವಿಕೆಯಂತಾಗಿ ದೇಶವಿಲಾಸದಿತಿಹಾಸ ॥
ಕಳೆದವರುಸಿರೆಳೆತೊಳೆಕುಳೆಕಡು
ಕಳವಳದೊಳಗಿಹುದನರಿಯುತದೆ
ತಿಳಿವದಭಿರುಚಿ ತನಗಿರಲದೇ ಜೀವನದ ಕೋಶ ॥ ೫ ॥

ರಾಜಕೀಯ ಪರಿಸ್ಥಿತಿ :

ನಮ್ಮವರು ಹೊರದಿಶೆಗೆ ಯುದ್ಧವ
ನೆಮ್ಮಿ ಸಾರಿಹುದಂಥ ಘಟನೆಗ
ಳುಮ್ಮಹದೊಳಿರುವಿಕೆಯ ಕಂಡಿಹುದೆತ್ತಬಹುವಿರಳ ॥
ನಮ್ಮ ನಮ್ಮಲ್ಲೇಕತೆಯ ಬರ ಬಿಡ
ದುಮ್ಮಳಿಸಿಕೊಂಡಿಹುದಲವರಿಗೆ
ಕೆಮ್ಮ ಕೆಮ್ಮುತ ಬರುವದಾಯ್ತದೆ ತುರಕರದು ನೋಡಿ ॥ ೬ ॥

ಹಿಂದು ಸಂಸ್ಕೃತಿ ಸಂಪದೆಲ್ಲವ
ಹೊಂದುತಿದನೇ ತಮ್ಮ ನಾಡೆಡೆ
ಗಂದು ಒಯ್ಯುದೆ ಕಂಡು ಬರುತಿಹುದಿಂದು ಆ ದಿಶೆಗೆ ॥
ಹಂದೆ ಗುಣಗಳೆಯಿಲ್ಲಿ ತುಂಬಿಹು
ದೆಂದವರದನಿಸಿಕೆಯು ಫಲಿಸುತ
ಲಂದಿನಿಂದಿವರೆಲ್ಲ ಬಂಧನದೊಳಿರುವಿಕೆಯಾಯ್ತು ॥ ೭ ॥

ಕ್ರೂರತನ ಕಣ್ಣೆದುರು ಕಾಣುತ
ದಾರೊ ಎಂಬಂತಿವರಭಾವನ
ತೋರಿಕೆಯೊಳಹುದಿದರ ಫಲವೇ ಜರ್ಜರಿತೊಳಿಹುದ ॥
ನೇರ ಮತಿಯೊಳಮೂಡದಾ – ಖಲ
ಚೂರಿಯೊಳಗಾಗುತ್ತ ಮರೆಯೊಳ
ಸೇರಿ ಬಾಳುವದಾಯ್ತೆನುವದೇ ಖೇದ ಸಂಗತಿಯು ॥ ೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಲ್ಲಿ ಮೊಗಲರ ಮಂಗನಾಟಿರ
ಲಿಲ್ಲಿ ಬಹಮನಿಯಾದಿಗರ ಗರಿ
ಗುಲ್ಲು ಗೆರೆಯೊಳಸುತ್ತವರೆ ಕಂಡಂತೆ ಕಿಡಿಯಂತೆ ||
ಮೆಲ್ಲನದೆ ರಟಗೋಳಿ ಬೆಳೆದಂ
ತಲ್ಲಿ ಕಂಡೆಡೆಗವರದೇ ತಂ
ತ್ರಲ್ಲಿ ಚೌದಿಶೆ ಧೂಸ ನಯನೊಳಗಿದ್ದುದರಿತರಿತು || ೯ ||

ಬಂದು ಸೇರಿದರಂದು ಆಂಗ್ಲರು
ಚಂದನೋಟದೊಳಂದು ಭಾರತ
ಸಿಂಧು ದಿಶೆ ಹಿಡಿದಿತ್ತಲತ್ತ ಕುತಂತ್ರತೆಯನಾಟಿ ||
ಸಂದಿ ಸಂದಿಯೊಳದನೆ ಬಿತ್ತುತ
ಲಂದು ಪುಂಡಿಯ ಸುಂಕದಾಂಕಣ
ಹಂದರೊಳಗಾ – ಭಾರತೀಯರ ಜೀವಕಂಟಕದಿ || ೧೦ ||

ನೋಡಲವರಿವರಾಟದೊಳ ಬಡಿ
ದಾಡುತಾಟದೊಳೆಲ್ಲ ಭಫ್ನೆಡೆ
ಗೂಡಿದಂತಿಂತೆಲ್ಲ ಮುಂದದೆ ಲೂಟಿ ಹಲಪರಿಯೆ ||
ಬಾಡದಿಹ ಕೊಳೆಯಂತೆ ಹೊಲದೊಳ
ಬೀಡಿ ಬಿಟ್ಟಂಥವರ ಭಾವನೆ
ರಾಡಿಯೊಳ – ಸಾಮಾಜಿಕ ಪರಿಸ್ಥಿತಿಗಳೆನಬೇಕು || ೧೧ ||

ಕೀಡಿಗಳ ಸುಂಕಂತೆಯವರಿಂ–
ದೇಡಿಯಂಥಹ ಮನದ ಕುಂಡದೊ
ಳಾಡಲಿದೆ – ಸಂಗ್ರಾಮ – ಝೂಂಸಿಯದಂತೆ – ಕಿತ್ತೂರ ||
ನೋಡಿರೆ ಸುಭಾಶ್ಚಂದ್ರರಾತುರ
ನಾಡೆ ಗಾಂಧೀಜಿಯವರ ಧೀರತೆ
ಜೋಡಿಯೊಳಗಾದುದನು ಮರೆಯದು ಹೆಜ್ಜೆಹೆಜ್ಜೆಯೊಳು || ೧೨ ||

ಸಾಮಾಜಿಕ ಪರಿಸ್ಥಿತಿ :

ಅಂದು ಕರ್ಮಠರೊಲವದಿಂ ಬಿಡ
ದಂದು ಬಂದಿಹ ಜಾತಿಮತ ಭೇ
ದಂದುವೇ ಮುಂದೊರೆದಗತಿ ಸತಿ ಹೋಗುವಾ ರೀತಿ ||
ಬಂದವರದೊತ್ತಾಯದೊಳಬಿಡ
ದಂದು ಬದಲಾದಂಥ ಜಿಂಪ್ಹಾ
ನಂದದಿ ಮನುಸ್ಮೃತಿಯ ಮನ್ನಿಸುತವರದೇ ಚಾಳಿ || ೧೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾರಿಗಾಸ್ವಾತಂತ್ರ್ಯ ಬರದೆನು
ತ್ವಾರಿ ಕೊಡ್ರುವ ಬಳಗ ಹಲಬಲಿ
ಭೂರಿಯೊಂದೆಡೆ – ದೇವದಾಸಿಯರಾಟ ಮಂದಿರೊಳು ॥
ಹಾರ ಹಗುರೆನುವಂತೆಯೆ ಸದಾ
ಚಾರನೊಪ್ಪಿದ ಬಸವ ದಿವ್ಯ ವಿ
ಚಾರ ಹೊರತಾದಂಥ ಮಾಧ್ಯತೆ ಮೂಢದೆಡೆಗವರು ॥ ೧೪ ॥

ಚಾತುರ್ವರ್ಣ್ಯ ಗೀತ – ಸಾರು
ತ್ತಾತುರತೆಕರೆ ಭೋಧಿಸುತ ಮತಿ
ಮಾತ ಬಲೆಯೊಳಗಿರಿಸುತಾ ಚಲ್ಲಾಟ ಕರ್ಮಿಗಳು ॥
ಮಾತೆ ಮುತ್ತೆಂಬಂತೆನುವ ನಿ
ರ್ಭೀತರವರದೆ ರಾಜರಾಶ್ರಯ
ಗೀತದೊಳಗಿಹುದೆಲ್ಲವಂ ಇತಿಹಾಸ ಸಾರುತಿದೆ ॥ ೧೫ ॥

ಜಾತಿಪದ್ಧತಿ ಹಾಂಸೆಯಂತಿಹು
ದಾ ತರಾತುರಿ – ಕಸಬುಗಾರಿಕೆ
ನಾತಿಡಿದೆ ಸಾಧಾರಗೊಂಡಂತೆನುವ ಪರಿಪಾಠ ॥
ಪ್ರೀತಿ ತೋರಿಕೆ ಪಾತ್ರದೊಳಗಿನ
ಬೇತವೇ ಬೇರಾಗದಿಹುದದೆ ಸ
ಮೇತವರ ಮುಖಗಣತಿಯತೆರದಿರಿಸಿ ಬಿಡುತಿತ್ತ ॥ ೧೬ ॥

ವ್ಯಾಸ ಬೋಯಿತಿ ಮಗನು – ಸೂಳ್ನುಡಿ
ಕೋಶ ಬಸವನ ಡಿಂಡಿಮಕೆ ಆ
ಯಾಸಗೊಂಡಂಥವರ ನುಡಿಯೊಳ ಹಳೆಯ ಹುಳಿ ಹೆಂಡಿ ॥
ಹಾಸುತಾಂಗಳದೊಳಗೆ ಹಸಿ ಸಂ
ಭಾಷಿಸುತ ವೇದಿಕೆ ವಿಲಾಸದೊ
ಳಾಸೆ ಮುಂದಿನ ಚಂದ ಮರೆಯದ ಹಿಪ್ಪಿಯದ ಪೆಂಡಿ ॥ ೧೭ ॥

ಧಾರ್ಮಿಕ ಪರಿಸ್ಥಿತಿ :

ಅರಸರಾಶ್ರಯದೊಳಗಿರುವವರ
ಹುರಿಯದಂತೆಯೆ ಹಾಡ ಹಾಡುತ
ಲಿರುವ ಪಾಠ್ಯಕ್ರಮದಿ ಸಾಗಿಹುದವರದೇ ನೋಟ ॥
ಪರಮದಾಗಮದಾಳ ಮುಚ್ಚಿಡು
ತರಳು ಸಂಸ್ಕೃತ ಭಾಷೆಗಲಿಸು
ತ್ತಿರುವ ಡೌಲದ ಗತ್ತಗಾಣುತ ದೀನರೆಲ್ಲರರು ॥ ೧೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತುರುಕರಾಕ್ರಮಣದೊಳಗವರದೆ
ಹಿರಿದ ಕತ್ತಿಯ ಬಲದೊಳಾ ದಿನ
ಸರಣಿ ಹಿಂದುಗಳನು ಮತಾಂತರಗೊಳಿಸಿದಂಥ ಬಗೆ ॥
ಅರಿಸುತಿವೆಯಾ ಘಟನೆ ಚಿತ್ರಗ
ಳಿರಿಸುತಿವೆ ಇತಿಹಾಸ ಪುಟದನು
ಸರಿಸಿ ಹಣ ಮುಂತಾದ ಸೌಲಭ್ಯಗಳ ಕೊಡಮಾಡಿ ॥ ೧೯ ॥

ಹಿಂದುಗಳ ಬದಲಾಯಿಸುತ ಬಿಡ
ದಂದು ಈ ಸಂಸ್ಕೃತಿಗೆ ಪೆಟ್ಟುಗ
ಳಂದು ಬಿದ್ದಂತಿಂದು ಸಹಿತ ಕಾಣಬಹುದಲ್ಲ ॥
ಮುಂದಿಡುತಲವರೆಲ್ಲ ನಡೆ ಸಂ
ಬಂಧಗಳ ಕಟ್ಟುಗಳ ನಡೆಸಿರ
ಲಂದಿರುವೆ ನೋಡಿತ್ತ ಸಂದಿಯೊಳತ್ತ ಬಿಡದೊತ್ತ ॥ ೨೦ ॥

ಬೆಳೆಸುತದನೇ ಪೋರ್ಚುಗೀಜರು
ಬಳಿಬಳಿದುಬೆಳೆಸುತ್ತ ತಾಂತ್ರಿಕ
ಹುಳಿಯ ಹಿಂಡುತ ಸುತ್ತಲಾ ಅಧಿಕಾರ ಬೆಳೆಸುತ್ತ ॥
ಸುಳಿದವರದೇ ಗುರಿಯ ಗಾಂಭೀ
ರ್ಯೊಳಗೆ ಕೊನರುತಲಿತ್ತ ಧಾರ್ಮಿಕ –
ಚಳುವಳಿಯದಾಂಕುರೆಳೆ ಚಿಗುರೊಡೆಯುತದೆ ಬೆಳೆ ಮುಂದೆ ॥ ೨೧ ॥

ಚರ ವಿವೇಕಾನಂದರವರಿಂ
ದರಳುತಾ ಪಶ್ಚಿಮೆಡೆಗದು ಪರ
ತರದ ಸಂಸ್ಕೃತಿ ಬೆಳಗುತದೆ ನೋಡತ್ತ ಬಿಡದತ್ತ ॥
ಮರೆಯೊಳರಳಿದ ಕುಸುಮ ಕಂಪನ
ಹರವದಾಗುತ್ತಿರುವ ಪರಿಯೊಳ
ಗಿರುವಿಕೆಯ ಸಂಕೇತದೊಳಗಲ್ಲಮನದೀ ಮಾತು ॥ ೨೨ ॥

ನಾಡೆ ಶುಭ ಲಾಭಾಂಶ ನುಡಿಮಿಡಿ
ಯೋಡಿ ಹಿಂದಣ ಹೆಜ್ಜೆಯನು ಮನ
ಗೂಡಿ ನೋಡುತ ನೋಡಿ ಕಂಡಲ್ಲದಯೆ ನಿಂದ ಹೆಜ್ಜೆಯನು ॥
ನೋಡಿ ಅರಿಯಲು ಬಾರದೆನುವಾ
ಗೂಢದೊಳಗಡಗಿರುವ ಗಮ್ಯತೆ
ಗಾಡಿಯೊಳಗಿರುವಿಕೆಯೆ ಜೀವನಧರ್ಮವೆನಬೇಕು ॥ ೨೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿಕ್ಷಣ ಪರಿಸ್ಥಿತಿ :

ದೀನರಿಗೆ ದೂರಾದ ಮಾತಿದು
ಹಾರಿಕೆಯ ಹೊರಗೆಲಸದೊಳಗನು
ಮಾನವಿಲ್ಲದೆ ಧುಡಿದುಡಿವ ಕಟ್ಟಿನೊಳ ಬಳಲುವಿಕೆ ॥
ಮಾನ ಹೀನತೆಯೊಳಗೆ ಕುದುರೆಯ
ಜೀನದಂತಿಹುದಿವರ ಜೀವನ
ಗಾಣದೆತ್ತಿನ ಹಾದಿ – ವಧು ವೇದನೆಯ ರೀತಿ ಗತಿ ॥ ೨೪ ॥

ದೇವಭಾಷೆಯ ಬರೆದವರಿಗೆ ಸ
ದಾವಕಾಲದಿ ಮೀಸಲಿರಲೆನು
ವಾ ವಿವರಣೆ ವಿಲಾಸವದುವೇ ಮುಂದುವರಿದಂದು ॥
ತಾವೆ ಪ್ರಶ್ನಿಸಲಿದಕೆ ಬೆಲೆ ಬರ
ದಾವದೆಂಬುದನರಿತೊಳಗೊಳಗೆ
ನೋವನನುಭವಿಸುತಿರುವಿಕೆ ಅಲ್ಲೆನದು ನಿಜನೋಡೆ ॥ ೨೫ ॥

ವಿವಿಧ ಮತಭಾಷೆ ಋಷಿ ರಚನೆಯೊ
ಳವಧಿರದ ನಡೆದಿಹುದವಾ ದಿನ
ಪವನದಡಗಿದ ಸುರಭಿ ಸಿರಿ ಸಾಹಿತ್ಯ ಛಂದಾದಿ ॥
ವಿವಿಧ ಸಂಸ್ಕೃತಿ ತಿಳಿಸುತರಿಸುವ
ತವಕರವರಿವದಾಂತರಿಕ ಕಲೆ
ಕವಿದುದನು ಹೊಸತನದೊಳಾದಂತಾಗುತನು ಹಾದಿ ॥ ೨೬ ॥

ಆರ್ಥಿಕ ಪರಿಸ್ಥಿತಿ : (ಆರ್ಥಿಕ + ಆಮೆ) :

ಅರ್ಥವಿಲ್ಲದೆ ದೇಶ ಬಾಳದು
ದಾರ್ಥಿಕತೆ ಬಲವಿರದೆ ಜೀವನ
ಸಾರ್ಥಕತೆ ದಿಶೆ ಸಾಗದದುಯಿಂತೆಂಬ ಬುಧವಾಣಿ ॥
ವ್ಯರ್ಥಗಳೆಯದೆ ಕೆಲರ ದುಡಿಮೆಯೊ
ಳಾರ್ಥಿಕತೆಯಿಂ ಬಲದೊಳಾದರೆ
ಅರ್ಥ ಹೀನತೆಯೊಳಗಧಿಕತೆ ವಿಭಾಗ ಕಾಂಬುವದು ॥ ೨೭ ॥

ಬಡವ ಬಡವನೆ ನೋಡಿ ಬದಿಯೊಳ
ಗುಡುಗು ಹಾಕುತಲಿರುತಲೊಡಲೊಳ
ಬೆಡಗದೈಷಾರಾಮದೊಳಗವರತ್ತ ತಿಳಿರಿತ್ತ ॥
ದುಡಿದು ಬಳಲುವರೆಡೆಗೆ ಬೆಲೆಯೆನಿ
ತಿಡದವರ ಜೀವನದು ಉರಿಬಿಸಿ
ಲೊಡಲದಾಶೆಗೆ ಬೇಯುತಿರುವಿಕೆ – ಕಳಲುತಿಂದಪಶು ॥ ೨೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಳ್ಳವರಗುರಿ ಬರಿಗಳಿಕೆ – ಹೊರ
ಗೊಳ್ಳೆಯವರಂತಾಗಿರುತ ಬಲು
ಗಳ್ಳರಾಗುತ್ತಳೆಯದಂಥಹ ಸಂಚಯದಿ ನಲಿಕೆ ॥
ಎಳ್ಳು ಹುರಿದಂತಾಟಗೂಡುತ
ಲುಳ್ಳಲಾಭದ ತೆರಿಗೆ ತುಂಬದ
ಕಳ್ಳ ಗುಣ ಗುರಿಯಾದವರು ಇಲ್ಲೆನದುದಾಸಮಯೆ ॥ ೨೯ ॥

ಪ್ರತೀಕ್ಷಾ :

ಇತ್ತಕರುನಾಡೊಳಗೆ ತಿಳಿದಿರ
ಲಿತ್ತ ಲಿಂಗಾಯತರ ಜೀವನ
ಗತ್ತಗಲಿಸುವರಿದ್ದರೂ ಗೋದಾವರಿಯದಾಚೆ ॥
ಚಿತ್ತದವರೆಡೆ ಲಕ್ಷ್ಯಹರಿಸುತ
ಹೊತ್ತನರಿಸುವ ಪೂಜ್ಯರಾ ಕೊರ
ತೆದ್ದು ಕಾಣುತ್ತವರು ನಮ್ಮೆಡೆಗಾರೊಯೆನುತವರು ॥ ೩೦ ॥

ಸದಯ ಸತ್ಪುರುಷರ ಸಮಾಗಮ
ದೊದವಿ ಕಾಯುತಲಿದ್ದಿತವರದು
ಹೃದಯ ಹೂವಾಗಿರಿಸುತಾತುರ ಕಂದನಂತಾಗಿ ॥
ಪದಪದಕೆ ದಾರಿಯನೆ ಕಾಯುತ
ಲದರದೇ ಚಿಂತನದೊಳಿರುವಿಕೆ
ಪದರೆನದ ಪರಿಪಕ್ವದಾಶೆಯೊಳಗನುದಿನದೊಳದೆ ॥ ೩೧ ॥

ಕಾಲತಾಳಕೆ ತಡೆಗಳಾರದು
ಮೇಳಗೊಂಡರು ಸರಿಯೆ ಗರ್ವದಿ
ಮೇಳಗೊಳದಿರಲದರ ಗತಿಗಿನ್ನಾರದಿಹುದಾಜ್ಞೆ ॥
ತಾಲ ತಪ್ಪದ ರೀತಿ ಜೀವಿಗ
ಳೇಳಿಸುತ ಬೀಳಿಸುತಲೆಡೆ ಬಿಡ
ದಾಳುತಿಹುದಿದರೆಡೆಗಲೆಲ್ಲರರಿರವದನಿವಾರ್ಯ ॥ ೩೨ ॥

ಶರಣ ಸಂತ ಮಹಾಂತರೆಲ್ಲರ
ರಿರವು ಕಾಲದ ಆಳಿಕೆಯದೊಳ
ಗಿರದೆ ನಡೆಸುವಿಕೆಯ ನಡೆಸುತಧಿಕಾರಲಿರಲೆಡೆಗೆ ॥
ಸರಿದುದನು ನೆನಪಿಸುತ ಮುಂದಿನ
ಮೆರಗು ತನ್ನಾಧೀನದಿರಿಸುತ
ಲಿರುವ ಪುರುಷೋತ್ತಮರ ಕಾಣ್ಬಾಶೆಯಲಿ ಆವೇಳೆ ॥ ೩೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೊಡಗಿ ತತ್ಕಾಲೀನ ಸತ್ಕ್ರಿಯೆ
ಯೆಡೆಗುಳಿಯುತ ಯಶಸ್ವಿ ಪೂರ್ಣನ
ಅಡಿಯೆ ಲೋಕದ ಜೀವಿಗಳ ಪಾವನವ ಮಾಳ್ಪಗುರಿ ||
ದೃಢದಿ ಸತ್ವದದಾತ್ಮಧೀರನ
ಕಡೆ ಕಟಾಕ್ಷದಿ ಪಾವನಾಶೆಯ
ದೊಡಲಿಗರದೆ ಮಹಾಂತನಾಪಥ ನೋಡುತತ್ತಗತಿ || ೩೪ ||

ಕಾಲಕಾಲವಿದೆನುತ ತನ್ನೊಳ
ಕೀಳಕಲ್ಮಷ ಕುಡಿಯ ಕೊನರಿಸು
ತೇಳುತಾ ಕೊನೆ ಬಳಿಯವರ ತನ್ನೆಡೆಗೆ ಸಹಿತಾಗಿ
ಮೇಳಗೊಳಿಸುವರವರ ನಿಜಪದ
ಶೀಲ ಗೂಡುತ ಪಾವನತೆಗನು
ಕೂಲ ಕಾಲಾತೀತನಾಪಥ ಕಾಯುತಿಹ ಕಾಲ || ೩೫ ||

ಜೀವಿಸಿರಲೇನಾಯ್ತು ಸಲ್ಲುವ
ಭಾವನೆಯ ತನ್ನೊಳಗೆ ತುಂಬಿಸು
ತಾವದೇ ಸಲ್ಲದುದ ಕಡೆ ಸಿಲುಕಿಕೊಳದಂತಾಗಿ ||
ಈ ವಿಚಾರಾಚಾರದೊಳಗಿರು
ತಾ ವಿಮಲದೆಡೆಗಿರಿಸುವಂಥಹ
ದೇವ ದಾರಿಯ ನೋಡುತಿದ್ದಿತು ಕಾಲ ತಾಲಗತಿ || ೩೬ ||

ಕಾಲಗತಿಸಿದ ರೀತಿ ಭ್ರಮರ ಸ
ಕಾಲದೊಳಗದೆ ರೂಪಗೊಳಿಸುವ
ದಾ ಲಯದಗತಿಯಂತೆ ಮಾನವ ಜೀವಿಗಳನೆಲ್ಲ ||
ಸಾಲು ಸಾಲಾಗಿರಲದೇ ಸಮ
ಪಾಲಿಸುವರಾಗಮನ ತವಕದಿ
ಮೇಲು ಮತಿಗಳ ಕಾಣುವಾಶೆಯೊಳಿದ್ದಿತಾ ದಿನದಿ || ೩೭ ||

ಹಳೆಯ ಹುಳಿಯನು ನೆನೆದು ನೆನೆಯುತ
ಲಳಕುತೀ ವ್ಯಥೆ ಸರಿಸುತರಿಸುತ
ಲುಳಿದು ಮುಂದಿನ ಹಾದಿ ಹುಡುಕುವ ಹೊಲಬ ಹರವುತ್ತ ||
ಕಳೆಯೊಳಡಗಿದ ಕಳೆಯ ನಯನೆದು
ರಳಿಯದಂತೆಯೆ ಉಳಿಸುತದರೊಳ
ಬೆಳಸಿ ಪಾಲಿಸುವಂಥವನ ದಿಶೆಯಾಶೆಯೊಳಗವರು || ೩೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಲರ ಜನನೋದ್ದೇಶ ಬಗೆ ಶ
ಬ್ದೊಳಗೆ ನೋಡಿರೆ ವಿವಿಧ ಪರಿಯೊಳ
ಸುಳುಹುಗಾಣಲುಬಹುದು ಹಿಂದಿನ ಕಾವ್ಯದೊಳಗಲ್ಲಿ ||
ನಿಲವ ಉತ್ತರದಿಶೆಯೊಳಿರುತಿರ
ರೊಲವ ಬಲಹೀನರರ ಜೀವನ
ಚಲುವಗೊಳಿಸುವ ಭಾವಪೂರ್ಣ ಕಾಣುವಾಶೆಯೊಳು || ೩೯ ||

ಸೊರಗುತಿಹ ಸಾಮಾಜಿಕದ ಬಗೆ
ಯಿರವರಿತು ಚಿತ್ಕಿರಣ ತೆರೆಯು
ತ್ತರಿಸಿ ಪಾಲಿಸುವಂಥದುತ್ಕಟ ಹೊಂದಿರುವ ಭಾವಿ ||
ಚರಣಗಾಣುವದಿಶೆಯೊಳಗೆ ಪರ
ತರ ಸದಾಶೆಯೊಳಗಿರುವವರೆಡೆ
ಚರಣ ಸಂಸ್ಕೃತಿಗಲಿಸುವಾತನ ಲಕ್ಷ್ಯದೊಳ ಸಾಕ್ಷಿ || ೪೦ ||

ಅಂತೂ ಬೆಳಗು ೧ಕ್ಕಂ ಪದ ೪೦ಕ್ಕಂ ಒಟ್ಟುಪದ ೬೩೬ಕ್ಕಂ ಶಿವಂ
೧೦-೧೧-೨೦೧೫ ಮಂಗಳವಾರ ಸ್ವಾತಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು - ೨

ಪ್ರಾಕೃತಿಕ ಪಾತ್ರ

ಸೂಚನೆ :

ಚರಿತನಾಯಕ ಜನನ ಪುರದನು
ಸರಣ ಕಂಗಳದೆವೆಯ ಗುರಿ ಗರಿ
ಚರಣ ಚಂದ್ರಕಿ ಚಮಕು ಚಂದ್ರಿಕೆ ಚಂದ ಚಂದುಳ್ಳಿ ॥

ವಾಚನ :

ಭಾರತದಿ ಕರ್ನಾಟಕದ ವಿ
ಸ್ತಾರ ಪಾತ್ರ ಪ್ರಭಾತದೊಳಗಾ
ಮೋರ ಗರಿ ಇತಿಹಾಸ ಭವ್ಯ ಪರಂಪರೆಗೆ ಸಾಕ್ಷಿ ॥
ಧಾರೆ ಸುಂದರಗಡಲ ಬೆಡಗಿನ
ತೀರ ಸಂಕುಲ ಪಕ್ಷಿ ಪಲ್ಲವ
ಹಾರ ವನ್ಯಮೃಗಾದಿ ಜಲಪಾತ ಗಿರಿಧಾಮ ಕಲೆ ॥ ೧ ॥

ಇಲ್ಲಿಹುದು ಮಹಮಾತೃಭಾಷೆಯ
ಬಲ್ಲ ಕವಿಕುಲ ಬಳಗ ಭೂಷಿತ
ರಿಲ್ಲಿ ಸಹಿತಾಧುನಿಕ ಸಾಹಿತಿಗಳ ವಿಹಾರಸಿರಿ ॥
ಫುಲ್ಲಲಿತ ನೀರಜ ಸಮಾನತೆ
ಯಲ್ಲಿರುವ ಜಿಲ್ಲಾದಿಗಳ – ಬಿಡ
ದಿಲ್ಲಿರುವಪರಿಯೊಳಗೆ ಹಾವೇರಿ ಬಗೆ ಬೆಳಗು ಪರಿ ॥ ೨ ॥

ಹಾವೇರಿ ಜಿಲ್ಲೆ :

ಮೊದಲಿದೇ ಧಾರ್ವಾಡ ಜಿಲ್ಲೆಯ
ಪದರದಂತಿಹುದೀಗದೇ ಸರಿ
ಕದದೆರೆದ ಮನೆಯಂತೆ – ಸಜ್ಜಾದೇಳುತಾಲೂಕ ॥
ಹೃದಯಗೂಡಿಹುದಿದಕೆ ಹಳೆ ಕಾ
ಲದ ದಿಶೆಯೆಡೆ ವಿಹಾರಗೂಡಿರೆ
ಲದರದೇ ಪ್ರಾಗೈತಿಹಾಸಿಕ ಕುರುಹಗಳದೆ ಕರೆ ॥ ೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೊರೆತ ಕಲ್ಲಿನ ಆಯುಧಗಳುಪ
ಕರಣಗಳವೇ ಸಾಕ್ಷಿ ಹೇಳು
ತ್ತಿರುವದೆ ಶಿಲಾಯುಗದ ಸಲಕರಣೆಗಳೆ ಪ್ರತ್ಯಕ್ಷ ॥
ಸರದಿಯೊಳ ಪೌರಾಣಿಕ ಕಥಾ
ವರಣ ಗೊಂಡಿಹುದನ್ನು ಶಾಸನ *
ಬರಹಡಿಂಡಿಮ ಮರೆಯಲಾಗದು ಸೂಚಿಸಿದ ನಕ್ಷೆ ॥ ೪ ॥

ರಾಜಧಾನಿಗಳಾದುದೇಸುವಿ
ರಾಜಿಸಿದ ಚಾರಿತ್ರ್ಯ – ಗುಪ್ತರು
ರಾಜಿಸಿದ ಪರಿಶಾತವಾಹನರಾಡಳಿತ ಕುರುಹು ॥
ರಾಜಿಸಿಹುದಾ ಬ್ರಾಹ್ಮಿಲಿಪಿ ನಿಜ
ದೋಜೆಗಳು – ಮತ್ತಾ – ಕದಂಬರು
ಗೋಜೆನದ ರೀತಿಯೊಳಗಾ ಸಾಗಿಹುದ ತಾಮ್ರಪಟ ॥ ೫ ॥

ಹಾಗೆ ಚಾಲುಕ್ಯರರು – ಹೊಯ್ಸಳ
ಹೋಗಿ ಕಳಚೂರ್ಯರರು ಯಾದವ
ಸಾಗಿದಂತೆಯೆ – ರಾಷ್ಟ್ರಕೂಟರು – ವಿಜಯನಗರರಸ ॥
ಯೋಗ ಬಳಿಕಾ ಮಾಂಡಲೀಕರ
ದಾಗುತ – ಮರಾಠಿಗರು – ಆಂಗ್ಲರ
ಭಾಗವೆನಿಸಿತ್ತಾಗ ನೋಡಿರೆ ನೋಡಿರಿತಿಹಾಸ ॥ ೬ ॥

ನೋಡಲೀ – ಭೂ – ಕಪ್ಪು ಮಿಶ್ರಿತ
ಜೋಡು ಕಂಪದೆ ಮಣ್ಣು – ಅರೆಮಲೆ
ನಾಡೆನಿಸಿ – ನೀರಾವರಿ ವಿಭಾಗದೊಳ ಸಮೃದ್ಧಿ ॥
ನಾಡಿನೊಳ ತುಂಗಾ – ವರದ ನದಿ
ಮೂಡುತಾ ಕಡೆಗಾಗಸಾಗಿರೆ
ನಾಡಿನೊಳಗಿಹುದಿದುವೆ – ಧರ್ಮಾನದಿಯದೊಯ್ಯಾರ ॥ ೭ ॥

ಕೆರೆ ಸರಾಗದಿ ಹಲವು ನಾಮದೊ
ಳುರೆ ಸು ಶೋಭಿಸುತತ್ತ ಬೆಟ್ಟದ
ಬೆರಗಡಿಯ ಬೆಳೆ ಕಬ್ಬು ಸಾವೆಯು ಮೆಕ್ಕೆ ಜೋಳಾದಿ ॥
ಗಿರಿಯೊಳಹುದಾ ತೇಗು ಮಾವಿನ
ನಿರತನೆರೆ ಬನ – ಜಾಲಿ – ಮೂಲಿಕೆ
ಸರಣಿಯೊಳಿದೆ ಹಿರೇಕೆರೂರ ವಿಭಾಗ ತಾಲೂಕು ॥ ೮ ॥

---

* ಕರ್ನಾಟಕ ಗ್ರಾಮಚರಿತಕೋಶ – ಹಾವೇರಿ. ಸಂ – ಪ್ರೊ. ಅಂಬಳಿಕೆ ಹಿರಿಯಣ್ಣ – ೨೦೧೫ ಭಾಗ ೧, ಪುಟ – ೩೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಿರೇಕೆರೂರ :

ಪಟ್ಟಣದಿ ದೊರೆತಂಥ ಶಾಸನ
ಮಟ್ಟ ಹೊರಗೊಳ ನೋಡಲಿದನುಡಿ
ಗಟ್ಟಿಯಿದೋ – ಕೆರೆಯೂರು – ಸಿರಿಕೆರೆಯೂರು ಹಿರಿ – ದೆಂಬ ||
ಮಟ್ಟ ಹಿನ್ನೆಲೆಯನರಿಸಿರೆ – ಬೊರ
ಗಟ್ಟ ಜಾಲೀಕಟ್ಟ ಸರಿ ಅಡ
ಗಟ್ಟಿಯೆಂತೆನು – ಕೆರೆಗಳ ಬಲದ ಕಾರಣದಿ ನೋಡೆ || ೯ ||

ಈ ವಿಭಾಗದೊಳೊಂದರಲ್ಲಿಯೆ
ತೀವಿ ಶೋಭಿಸುತ್ತೈದು ಕೆರೆಗಳು
ಜೀವಿಗಳಿಗದು ಬದುಕುದಕೆ ಜೀವಾಳವೆನಿಸಿಹವು ||
ಹಾವಭಾವದ ಹೂವ ಸಮ ಶುಭ
ದೇವ ನೀರಾವರಿಯ ಕಾಣಿಕೆ
ಸಾವಯವ ಸಂಸ್ಕೃತಿಗೆ ಹದ ಪದತಾಳದಂತಿಹುದು || ೧೦ ||

ಕೃಷಿಯ ಕಂಗಳದೊಳಗೆ – ಹತ್ತಿಯು –
ಹೆಸರು – ಗೋವಿನಜೋಳ – ಸಾವಿಯು
ಫಲಸು – ಮಾವದು – ವೀಳ್ಯದೆಲೆ – ಅಲಸಂಧಿ – ಬೆಳೆಯಿರಲು ||
ಹಸುವು – ಎಮ್ಮೆಯು – ಮೇಕೆ – ಕೋಳಿಯು
ಸಸಿನೆಯೊಳ – ಕುರಿ – ಮೇಕೆ – ಪಾಲನ
ದಿಶೆಯೊಳಿರುವಿಕೆ ಕಾಣಬಹುದ್ಯೆ – ಸಾತ್ವಿಕಾಹಾರ || ೧೧ ||

ಜಂಗಮರು – ಬಣಜಿಗರು – ಸಾದರು
ಲಿಂಗವಂತರು – ನೊಣಬ – ಕುರುಬರು
ರಂಗದೊಳ – ತಳವಾರ – ವಡ್ಡರು – ಹರಿಜನ – ಲಮಾಣಿ ||
ಸಂಗತೊಳಗೆಲ್ಲರರ ಭಾಷೆಯು
ತುಂಗವೆನಿಪಾ ಬಸವಗನ್ನಡ
ಸಂಗತೊಳಕೆಲರದದು ಉರ್ದುವು – ಇತ್ತ ಮಿಲ್ಲುಗಳು || ೧೨ ||

ಅರ್ಥದಿಶೆ – ಬ್ಯಾಂಕಗಳು ಹಲ ಸಹ
ಜಾರ್ಥಿಕದ ಸಂಘಗಳು ಎಡಬಿಡ
ದಾರ್ಥ ಗುರಿ ಅಂಗಡಿಗಳಾ – ಶಶಿವಾರಸಂತೆ ಸಿರಿ ||
ಅರ್ಥಪೂರ್ಣ ವಿಶಾಲ ಲಕ್ಷ್ಯಸು
ಧಾರ್ಥಗಳಿಗನುಸಾರ ವಿದ್ಯಾ
ಸಾರ್ಥಕತೆಯೆಡೆ ಪದವಿ ವಿದ್ಯಾಲಯಗಳಾದಿಗಳು || ೧೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಖನಿಜ ದ್ರವ್ಯದು ತೆರೆದುಕೊಂಡಿಹು
ದೆಣಿಕೆ – ಚಿನ್ನದ ಭೂರಿ ನಿಕ್ಷೇ
ಪಣೆತು ಕಂಡಿಹುದೆನ್ನಿ ನೆರೆ ತಾಲೂಕಿನೊಳಗಲ್ಲಿ ||
ಅನುದಿನದೊಳುದ್ಯಮಗಳಲ್ಲಿಯ
ಗಣೆಯೊಳಗೆ ನಡೆದಿಹುದ ಭಾವವಿ
ದೆನಿಸಿಹುದು ಮಲೆನಾಡಿನ ಸೆರಗಿನೊಳಗಿಹುದು ಮತ್ತೆ || ೧೪ ||

ಹಲವು ಪರಿ ವೇತನವ ಪಡೆಯುವ
ದೊಲವಿನ ಫಲಾನುಭವಿಗಳು – ಕಲೆ
ನೆಲೆಯೊಳಿಹ ನಟಬಳಗ – ಸತ್ಯಾಗ್ರಹಿಗಳಾದವರು ||
ಅಲೆಗಳಂತವರಂತು ಸಾಗಿಹು
ದುಲುಹದೊಳು ಮಾಸೂರ ಪುರ ಸಹಿ
ತುಲುಕುತಿದ್ದಿತ್ತಾಗದೆಂಬುದ ತಿಳಿಯಬಹುದಿಲ್ಲಿ || ೧೫ ||

ಮಾಸೂರ ಮೆರಗು :

ಸರಣಿಯೊಳಮಾಸೂರ ಗ್ರಾಮಾ
ಭರಣದೊಳ ನೋಡುವಗೆ ಹಿನ್ನಲೆ
ಹರವುಗಳ ಸಹಿತಿಲ್ಲಿ ಕಾಣಲುಬಹುದು ಸೆಲೆಯೋಟ ||
ಹರಿ ಹರಿದು ಬಂದಿಹುದ ಸಂಸ್ಕೃತಿ
ಕರುಳು ಹಸ ಹಲ ಬಗೆಯ ಬೆಡಗಿನ
ಭರಣಿಯೊಳಗಡಗಿಹುದ ಕಾಣುವದದೆ ಕದಳಿ ತೋಟ || ೧೬ ||

ನೋಡಲಿದು ನಿಡನೇಗಿಲ ಪುರದ
ನಾಡೆ ಶಾಸನದಲ್ಲಿದಕೆ ನುಡಿ
ಗೂಡಿಹುದಿದಕೆ ಮಾಸವೂರ್ – ಸರ್ವಜ್ಞನವನಂದು ||
ಹಾಡಿಹನು ಸರಿ ಮಾಸನೂರೆನು
ತಾಡಿದರು ಮುಸರೂರೆನುವ ಜನ
ನಾಡಿಯೊಳಗಿಹುದೆಂಬುದನು ತಿಳಿಯುವದು ಓದುಗರು || ೧೭ ||

ಮತ್ತೆ ಮತಿವಂತರಿದಕದು ಪುರ
ಹತ್ತರಿಹುದ ಕುಮದ್ವತಿಯ ನದಿ
ಚಿತ್ರದೊಳ ಜಲ ಸುಳಿಯ ಕಾರಣವಿದಕೆ ಮಾಸೂರು ||
ಗತ್ತರಿತು ಕರೆದಂತೆಯೇನಿರ
ಲಿತ್ತದಕೆ ಕೆರೆ ಉತ್ತರಕೆ – ತಿಳಿ
ರಿತ್ತ – ಪೂರ್ವಕೆ ನದಿಯು – ದಕ್ಷಿಣಕಿಹುದು ಅರಣ್ಯತೆರೆ || ೧೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಲ್ಲಿ ಮೆಣಸಿನಕಾಯಿ – ಶೇಂಗಾ –
ನಿಲ್ಲದಿಹುದುಪ ಬೆಳೆಯು ತೋಟದೊ
ಳಲ್ಲಿ ಅಡಿಕೆಯು ಬಾಳೆ – ತೆಂಗು ವಿಹಾರ ಉಪಹಾರ ॥
ಪಲ್ಯಜೋಳದ ರೊಟ್ಟಿ – ಹಿಂಡಿಹು
ದಲ್ಲಿ ಹೋಳಿಗೆ ಕರಿಗಡಬು – ಊ
ಟಲ್ಲಿ ತಿಳಿ – ಕುರಿಮೇಕೆ ಸಾಕುವದು ಬದಿ ತಿಳಿರಿಲ್ಲಿ ॥ ೧೯ ॥

ಇಲ್ಲಿ ಕಲ್ಮೇಶ್ವರನ ಮಂದಿರ
ದಲ್ಲಿ ಕಲೆ – ಚಾಲುಕ್ಯ ಶೈಲಿಗ
ಳಲ್ಲಿ 'ಕಂಗೊಳಿಸಿಹುದು ಮತ್ತೆ ಹಲವು ಗುಡಿಗಳಿಹವು ॥
ಬಲ್ಲ ಗಣಪತಿ – ವೀರಭದ್ರರ
ದಿಲ್ಲಿ ಬೀರೇಶ್ವರರ ಮಂದಿರ
ಸಲ್ಲಿದಂತೆಯೆ ನೋಡಿ ಚೌಡೇಶ್ವರಿಯ ಗುಡಿಯಿಹುದು ॥ ೨೦ ॥

ಹಸನುಮತಿ ಸರ್ವಜ್ಞನಾ ಪಿತ
ನುಸಿರವೀ ಪುರವೆಂಬುವಿಕೆ ಪದ
ದೆಸವನುಡಿಗಳರಿವುದು ಜನಪದ ವಾಣಿಯೊಳಗಿಹುದೀ ॥
ಉಸಿರ ಮದಗದ ಕೆರೆಯ ಬಗೆ ಕಥ
ನಸಲು ಜನಮನವಾಣಿ ಇತಿಹಾ
ಸ ಸಸಿ ಬಯಲಾಟಗಳೆ ಸಾಕ್ಷಿಯು ಸಂಭ್ರಮಾತಿಶಯ ॥ ೨೧ ॥

ಸುತ್ತ ನೋಳ್ಪುದು ಮಠಗಳನು ಬಿಡ
ದಿತ್ತ ಗದಿಗಿ – ವಿರಕ್ತ ಮಠಗಳು
ಮತ್ತಿದೋ ಕ್ಯಾಸ್ ನೂರೆನುವಿಕೆ – ಹಿರೇಮಠವುಸಹಿತ ॥
ಚಿತ್ತವೀಪುರ ಚರಿತನಾಯಕ
ನಿತ್ತ ಜನಿಸಿಹುದಾರ್ಥವೀ ನುಡಿ
ಗತ್ತದೊಳಗರಿಯುವಿಕೆ ಮುಂದಿನ ಬೆಳಗಿನಾಂಗಳದಿ ॥ ೨೨ ॥

ಅಂತೂ ಬೆಳಗು ೨ಕ್ಕಂ ಪದ ೨೨ಕ್ಕಂ ಒಟ್ಟು ಪದ ೮೭ಕ್ಕಂ ಶಿವಂ
ಆಕರ : ಕರ್ನಾಟಕ ಗ್ರಾಮಚರಿತೆ ಕೋಶ - ಹಾವೇರಿ - ಸಂ. ಪ್ರೊ. ಅಂಬಳಿಕೆ ಹಿರಿಯಣ್ಣ
ಭಾಗ ೧-೨, ೧೮-೧೧-೨೦೧೫ ಬುಧವಾರ ಶ್ರವಣ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು - ೩

ಸಂಸ್ಕೃತಿ

ಸೂಚನೆ :

ಚರಿತನಾಯಕ ಜನನಿ ಜನಕರ
ಭರಿತ ಜೀವನ ಭಾವ ಗಮ್ಯತೆ
ಭರಣಿಯೊಳಗಡಗಿಹುದ ಮೌಕ್ತಿಕ ಭಾತಿ ಚಿದ್ದ್ಯುತಿ ॥

ವಾಚನ :

ಹಳ್ಳಿಯೊಳಗ್ಗರಡಿಹುದ ಹೂವುಗ
ಳಲ್ಲಿ ಮೆಲ್ಲನೆ ನಗರ ತಲುಪು
ತ್ತಲ್ಲಿ ಮೂಲದ ಮಧುರ ಮೋದತೆ ಮೌನಮೌನದೊಳು ॥
ನಿಲ್ಲದಲೆ ಹಂಚುತ್ತಲಾ ಬಿಡ
ದಲ್ಲಿ ಸಹಜಾಲ್ಹಾದ ಭರಿಸಿಹು
ದೆಲ್ಲ ಕಾಣುತ ಕಲೆಯ ಕೊನರಿಸುವವರೆ ಬಹುಕಡಿಮೆ ॥ ೧ ॥

ಇಲ್ಲಿ ಜನ ನಡವಳಿಕೆ ತಿಳಿಯುವ
ದಿಲ್ಲಿಹುದೆ ಪರಿಚಯಿಸುವಿಕೆ ಸಹ
ಜಲ್ಲಿ ಹಲವು ಸ್ಪರ್ಧೆಗಳವೆ ವಿಶಿಷ್ಟತೆಯ ಪಡೆದಿಹುದು ॥
ಇಲ್ಲಿ ತೆರೆಯೊಂದೆಂಬ ಭಾವನೆ
ಯಲ್ಲಿ ಸಹಜಡಗಿಹುದದೆ ಕಳು
ಬಳ್ಳಿ ಬಾಡದ ಬೆಳ್ಳಿಯಂತಹ ಶುಕ್ರ ಮಹತಾರೆ ॥ ೨ ॥

ಸರಳದಾತ್ಮೀಯತೆಯು ಎಲೆ – ರಸ
ಭರಿತಪರಿ – ಫಲರುಚಿಯು – ಪರಿಮಳ
ಪರಿಕಲಿತ ಪವನೊಳ ವಿಲಾಸಂತಾಗಿ ನೀರವದ ॥
ನಿರಘ ನಿರುಪಮದಿಹ ನಿರಂಜನ
ಸರಣಿ ಸೌಖ್ಯತೆಯಂತೆ ಜನಮನ
ದಿರಿಸುವಾ ಸಂಸ್ಕೃತಿಯ ಸೊಬಗದು ನಗರದೊಳಗುಂಟೆ ॥ ೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಲ್ಲಿ ಸಹಜ ಸ್ವಾವಲಂಬನೆ
ಯಿಲ್ಲಿ ಸಂಸ್ಕೃತಿಯೊಳ ಸುರಕ್ಷಿತ
ವಲ್ಲಿ ಸಹಕಾರಾಂಗದ ಮನೋಭಾವ ಸಂಬಂಧ ॥
ಇಲ್ಲಿ ನೆಲ ಸುಪ್ರೀತಿ ಗಾಢತೆ
ಯಲ್ಲಿ ಹಳೆಯ ಪರಂಪರೆಯ ನೆರ
ಳಿಲ್ಲಿದೆ ಚಿರಂತನದ ಭಾವಾತ್ಮಕತೆ ಸುರಸೋಕ್ತಿ ॥ ೪ ॥

ಇಲ್ಲಿ ಹಲಮತಗಳಿರುತಿರೆ ಬಿಡ
ದಿಲ್ಲಿ ನುಡಿ ಸಂಬಂಧ ಹಲವಿಧ
ದಲ್ಲಿ ಹಬ್ಬ ಸದಾವಕಾಲಾಚರಣೆ ಹೊಂದಿಹವು ॥
ಇಲ್ಲಿ ಉತ್ಸವನಂತೆ ಸಂಭ್ರಮ
ದಲ್ಲಿಯೇ ಸ್ಪರ್ಧೆಗಳ ಸಡಗರ
ದಲ್ಲಿ ಸಾಮಾಜಿಕತೆ ಕಾಂಬುದು ಸಾಮರಸ್ಯ ಖುಷಿ ॥ ೫ ॥

ಆಂತರಿಕ ಕೆಲ ಬಿಡಿಸಲಾಗದ
ಹಂತೆ ಮಂಥನ ಮೌಢ್ಯವದೆ ನೋ
ಡಿಂತು ತೋರದ ಕೀಳರಿಮೆ ಅಜ್ಞಾನದಾಚರಣೆ ॥
ಹಂತ ಹಂತದಿ ಪಾಳೆಗಾರರ
ಹಂತಿ ಹೊಡೆದಂತಾಗಿ ಹಲವರ
ದಂತು ಅವರಾಡಳಿತದಂತೆಯೆ ಆದಲು ಬದಲೆನ್ನಿ ॥ ೬ ॥

ಕೋಟೆ ಕೊತ್ತಲ – ಭಾವಿ – ಕೆರೆ – ಬಹು
ತೋಟ – ಕೈಕಸಬುಗಳು ಧಾರ್ಮಿಕ
ಮಾಟದೊಳ ಸಾಗುವಿಕೆ ಭೂಕೃಷಿ ಕಲೆಯೊಳಾಗುತ್ತ॥
ರಾಟಿ – ಕಾಯಕ ಸಹಿತ ಧಾರ್ಮಿಕ
ನಾಟಿಗದು ನೀರೆರೆಯುತಲಿ ಪರಿ
ಪಾಟಗಳ ಮುಂದೊರಿಸಿಕೊಳ್ಳುತ ಬಂದಿಹುದ ಪುರದಿ ॥ ೭ ॥

ದತ್ತಿ ಪಡೆದ ಮಠಗಳೊಳದೆ ಬಿಡ
ದೋತ್ತರತೆ ಗುರುಕುಲಸದಾಗತ
ದತ್ತ ನಡೆಸುತ ಬಂದಿಹುದ ಜತೆ ಧಾರ್ಮಿಕೋತ್ಸವದೀ ॥
ಹೊತ್ತರಿತು ಕಾರ್ಯಾಂಗ ಗೂಡಿಹು
ದತ್ತ ಮನರಂಜನೆಯಗಳವೆ ಮನ
ಮುತ್ತಿಕೊಂಡಿಹುದನ್ನು ತಗೆಯುವದೆಂತೊ ತತ್ಸುಖದಿ ॥ ೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಳ್ಳಿಯೆನಿಸಿದರೇನುದರೊಳಹು
ದೊಳ್ಳೆ ಹೂಯೆಸಳಲ್ಲಿ ಭಾವನೆ
ಬಳ್ಳಿಯಾತ್ಮೀಯತೆಯದಾಡಂಬರಿರದೆಸಳೆಳ್ಳು ॥
ಬಳ್ಳಿಯೊಳಗಡಗಿಹುದು ಸುರಭಿಗ
ಳಿಲ್ಲಿ ಹಂಬಲ ಹರುಷ ತಾಂಬೂ
ಲಿಲ್ಲಿ ಹೊಂಬೆಳಕುಳ್ಳದೆಡೆ ಕಂಗಳದ ಕಳುಕುಳ್ಳಿ ॥ ೯ ॥

ಹೊಂದಿ ಹೊಂದಾಣಿಕೆಯ ಹರ್ಷಾ
ನಂದ ಹೊನಲೊಳಗೆಸಳ ಕಳೆಯೊಳ
ಮಂದ ಮಂದಸ್ಮಿತದ ನಗುತಿಹುತಿಹುದ ನನೆ ನೆಲ್ಲಿ ॥
ಚಂದ ಚಂದ್ರಿಕೆ ಚಲುವ ಚಿಗುರಾ
ನಂದಮಯ ಪ್ರತಿಬಿಂಬ ಸರಸೊಳ
ಗಿಂದವೆಂಬಂತಿವರ ಭಾವನೆ ಸವಿಯ ನುಡಿ ನಲ್ಲಿ ॥ ೧೦ ॥

ಧಾರೆಯೆರೆದಿಹುದಾಗಸದ ಮನ
ಸೂರೆಗೊಳಿಸುವ ಕಾವ್ಯ ಕುಮುದಿನಿ
ಮೇರೆಗೊಳಿಸಿಹುದಂಥವರೆ ಜನಿಸಿಹರು ತಿಳಿರಿಲ್ಲಿ ॥
ಶೂರ ಸಂಪದ ಸಿರಿಯ ತೊರೆಯೊಳ
ಮೋರ ಮೀರಿಸುವಂಥ ಮಾಟದ
ಚಾರು ಪುರುಷರ – ನಾರಿಯರ ಕೊಡಮಾಡಿಹುದ ವಲ್ಲಿ ॥ ೧೧ ॥

ಛರ ಚರಿತ – ವಿರತರನು – ಸಹಿತುರೆ
ಹಿರಿಮೆ – ಗುರು – ಶರಣೆಯರ –ಸಿದ್ಧರ
ಸರಣಿ ಸವಿ ಕವಯಿತ್ರಿಯರ ಧಾರೆರೆದುದೀ ಪಳ್ಳಿ ॥
ದೊರೆತುದಲ್ಲಿಯೆ ಹರುಷ ಹೊನಲೊಳ
ಗಿರುತ ಬದಿಯವರನ್ನು ಸಹಿತಾ
ಗಿರಿಸುವಂಥಹ ಸತ್ಪ್ರತಿಭೆಯ ಸಮರ್ಪಿಸಿದ ಬೆಳ್ಳಿ ॥ ೧೨ ॥

ಮಾನವೀಯತೆ ಮೌಲ್ಯ ತಿಳಿದ ಸ
ಮಾನತೆಯ ಭಾವಿಕತೆಯೊಳಗೆ ಸ
ದಾ ನಿರುಪಮತೆ ನೋಟ ನೀರವದೊಳಗೆ ನೀರಜತೆ ॥
ಮಾನ ಬರುವಂತಿವರ ಜೀವನ
ಭಾನು ಮಂದಿರದೊಳಗೆ ಪರಹಿತ
ಜೇನ ಸದ್ರುಚಿಯಂತೆ ಸಂಸ್ಕೃತಿಯೊಳಗಿವರ ಚರಿತೆ ॥ ೧೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೊಡುಗೆ ಹಲರೀತಿಯಲಿ ಬೆಳೆ – ಫಲ –
ಬಿಡದೆ ಧಾರೆರೆದಂತೆ – ಕಲೆಯೊಳ
ತೊಡಗಿ ತಮ್ಮನೆ ಕಮ್ಮಚತುರಾದಿಗಳು ಸಹಿತಾಗಿ ॥
ತಡಸಲದ ಗಾಂಭೀರ್ಯ ಗಾಯನ
ಗಡಲ ಸೆಡಗರ ಸರಿಗಮ ಸರಣಿ
ಸೊಡರು ಪಳ್ಳಿಯೊಳಿಂದವೆಂಬುದ ತಿಳಿಯಬಹುದಲ್ಲ ॥ ೧೪ ॥

ತೀಡದಂಥಹ ಪೈರು ಪಚ್ಚದ
ಮೋಡಿಯಂತಹ ಬಕುಲ ಹಲಸು ಸ
ದಾಡುವಂತಹ ಸಸ್ಯ ಸಂಕುಳ ಸಹಿತ ಮೊಲ ಜಿಂಕೆ ॥
ಜೋಡುಗೊಂಡಿಹ ಬೆಟ್ಟಗಿರಿ ಗರಿ
ಗೂಡು ಗಮ್ಮತ ನವ ಸದಾವ್ರತ
ನಾಡಿಯಂತಹ ಪ್ರಕೃತಿ ಬದಿ ಮಾಸೂರೆನುವ ಪುರದಿ ॥ ೧೫ ॥

ಪರತರ ಹಿರೇಮಠದಿ ಸದ್ಗುಣ
ಸರಿತಸಿರಿ ಪರಮೇಶ್ವರಯ್ಯರು
ಸರಿಯೆ ಸುವ್ರತಿ ಸತಿಯು ಸದ್ಗುಣೆ ಶೀಲೆ ರುದ್ರಮ್ಮ ॥
ಇರುತಿಹರು ಲಿಂಗಾಯತದ ಪಥ
ಪರಿಯ ಸಂಸ್ಕೃತಿ ಸೊಬಗ ಸೆಲೆಯೊಳ
ಗಿರುತಿಹರು ಮನಸೊಪ್ಪಿ ತನ್ನಿರಿಯಾತ್ಮ ಸಾಕ್ಷಿಯಲಿ ॥ ೧೬ ॥

ಪುಣ್ಯ ಪುರುಷೋತ್ತಮರ ನೆನೆಯುತ
ಚೆನ್ನ ಚಿನ್ಮಯ ಶಾಂತರಾ ನುಡಿ
ಯನ್ನೆ ಲಕ್ಷಿಸುತನುದಿನ ಕಾಣುತ ಕರುಣದಲಿ ಜನರ ॥
ಖಿನ್ನತೆಗೆ ಸಾಂತ್ವನತೆ ಹೇಳುತ
ಮುನ್ನ ಮಹಿಮರ ತತ್ವ ಸಂತತಿ
ಯನ್ನೆ ಮನದೊಳಗಿರಿಸುತ ಸಮಯ ನಿಷ್ಠೆಯೊಳಗಾಗಿ ॥ ೧೭ ॥

ಶರಣ ಜನರ ಸದು ಹೃದಯ ನಳಿ
ನರಳಿಯೊಳು ಶೋಭಿಸಿದ ಪಾದವ
ನುರೆ ಸದಾ ಅರುಣೋದಯದಿ ಪಠಿಸುತ್ತಲನುದಿನದಿ ॥
ಪರಿಯ ಪರಮೇಶ್ವರಿಯ ನಾಮವ
ಚರಣದೊಳಗಾಗುತ್ತ ಧರ್ಮದೊ
ಳಿರುವಿಕೆಯ ಚರಿತಾರ್ಥ ದಂಪತಿಯಿರುತ ಹದ ಹದದಿ ॥ ೧೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಮ ಪಾವನ ಪಂಚಮುಖಿ ಚಿರ
ತರದ ಮಹಿಮಾ ಶಂಭುಲಿಂಗನ
ಸರಣಿಯದೆ ಕೈವಲ್ಯ ಪದ್ಧತಿ ನಿಜಗುಣಿಯಗವನ ॥
ಸುರಸದೊಳ ಪಾಡುತ್ತಲದಲನು
ಸರಿಸಿ ಭಕುತರಿಗಿದನೆ ತಿಳಿಸುತ
ಲಿರುವಿಕೆಯು ಜನಮನಕಿದೇ ಪದಪಾಠವೆನಿಸಿಫನ ॥ ೧೯ ॥

ಪರತರದ ಗುರುಲಿಂಗ ಜಂಗಮ
ಚರಣ ಭಾವಿತನೀತ ನಿರುಪಮ
ಭರಿತ ಭಾವಿಕ ತೂಕ ತತ್ವಫದಾರ್ಥ ಚರಿತಾರ್ಥ ॥
ನಿರತ ನಿರ್ಮಲ ಸಿರಿ ಸದಾಕೃಷಿ
ಕರಣ ಕಂಗಳದೊಳ ಸದಾಮೃತ
ಸರಿತ ನಡೆನುಡಿಯೊಳಗೆ ಸುವ್ರತನೆನಿಸುತನು ಸೂತ್ರ ॥ ೨೦ ॥

ಆರೆ ಬರಲಿವರಡಿಗೆ ಭಾವ ಸ
ಸಾರದಿಂ ಸನ್ನುತಿಯದೊಳಗೆ ವಿ
ಚಾರವಾ ಬಸವಾದಿ ಶರಣರ ಸೂಕ್ತಿಸೊಬಗಿನಲಿ ॥
ಸಾರಬಡಿಸಿರಲವರ ಭಾವನೆ
ಭಾರವೆಲ್ಲವು ಸಹಜ ಸುಮ ರಮ
ಹಾರದಂತಾಗುತ್ತದಾಗಿಹುದಾರು ಬಲ್ಲರರು ॥ ೨೧ ॥

ಪರವಧುವ ಮಹದೇವಿಯೆನುವನ
ಸರಣಿ ಸುಖದೊಳಗಿವನದೆಡೆಬಿಡ
ದೆರಕ ಹೊಯ್ದಂತಿಹುದಗಾಣುತ ಭಕುತರಿಗೆ ಹೆಮ್ಮೆ ॥
ಕರುಣೆ ಕಂಗಳದೊಳಗೆ ಜನಹಿತ
ಹರವು ನಯನವೆಯಂತೆ ಭಾವಾ
ಭರಣ ತೋರದ ಪರಿಯೊಳಿವರಂ – ತಿಳಿಯುವದೆ ಯೆಮ್ಮೆ ॥ ೨೨ ॥

ಚಿಕ್ಕ ರೈತನ ಹಾಗೆ ದುಡಿಮೆಯ
ದಿಕ್ಕಿನೊಳಗಿವರಿರವು ನೋಡಿರ
ಲಕ್ಕರೆಯ ಘನಮನದು – ಮನೆ ಬಡತನದ ಮೆರಗಮಿಗೆ ॥
ಎಕ್ಕದೆಲೆ ಕಳೆ ಶೀಲ ಸಂಯಮ (ಬ.ವ – ೩೨೫)
ನಕ್ಕುನಗಿಸುವ ಕಂದ ಕರೆಯೊಳ
ತುಕ್ಕು ಹಿಡಿಯದ ಧಾತು ಸಮತಾ ಮೇರೆ ಮಾತುಲಿಗೆ ॥ ೨೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೀಗೆಯಿರುತಿರಲೇನು ತನ್ನಗೆ
ಯಾಗಿ ಏನೊಂದಾಡದಯೆ ಸಲಿ
ಸಾಗಿ ತನ್ನೊಳ ತಾ ಗುರು – ನಿರಂಜನರ – ಚರಣೆಡೆಗೆ ॥
ಬಾಗಿ ಬಂದಿಹ ಭ್ರಮರದಂತೆ ಸು (ಬ.ವ – ೩೨)
ರಾಗಿರಿಸಿರೆನ್ನುತ್ತಲನುಮಯ
ವಾಗಿರುತ ಸಂಸಾರದಲಿ ನೆನೆಯುತ್ತ ಗುರುಪದವ ॥ ೨೪ ॥

ಯೋಚಿಸುತಲಿರುತಿರ್ದ ಮಾನಸ
ದಾಚರಣದೊಳಗನುಭವಾಮೃತ (ಬ.ವ – ೨೩)
ವಾ ಚರಣ – ನೀನೀವಕಾಲಕ್ಕಿಲ್ಲದಿಲ್ಲೆನುವ ॥
ಶ್ರೀ ಚಿದಾಮಯ ಬಸವ ಸೂಕ್ತಿಸ
ದಾಚರಣ ದೈನಂದಿನದೊಳನು
ಸೂಚಿಸುವ ಪರಿ ನಡೆಯೊಳಗೆ ನುಡಿ ಕೇದಿಗೆ ತೆನೆ ಪರಿ ॥ ೨೫ ॥

ಸರಿಯೆ ತಾನಿರುವಂತೆ ಭಕುತರಿ
ಗರಿಸುತಿದ್ದನು ನುಡಿಗೆ ತಕ್ಕಂ
ತಿರಲು ನಡೆಯಿದೆ ದೇವನೊಪ್ಪುವನೆಂಬ ಸಾತ್ವಿಕದ ॥
ಸುರಭಿ ಜೀವನ ಸಾರ್ಥಕತೆನುವ
ಪರಿಯನರಿಸುತಲಿರುವದೀತನ
ಚರಿತವಾಗಿರಲಿದಕೆ ಸತಿಯಳ ಸಮ್ಮತಾಮ್ರ ಫಲ ॥ ೨೬ ॥

ರುದ್ರಮ್ಮನಿರವು :

ಹಣ್ಣೊಳಿಹ ಸುರಸೆಳೆಯ ಪರಿ ಸಂ
ಪನ್ನ ಜೇನೊಳಗಿರ್ದ ಮಧುರತೆ
ಚಿನ್ನದೊಳಗೇಕಾದ ಬಣ್ಣದು – ಸರಸ – ಶ್ರೀಗಂಧ ॥
ಎಣ್ಣೆಯೊಳ ಕಾಣದುದ ಸೌರಭ
ಬೆಣ್ಣೆ ಭರಿತಾಕಾರ ಮೌಕ್ತಿಕ
ಬಣ್ಣದಿಹ ಶೀತಲತೆ ಭರಿತಿರುವಂತೆ ರುದ್ರಮ್ಮ ॥ ೨೭ ॥

ಭಾವನಾ ಕರ್ಪೂರದಿರವು ಸ
ದಾವಕಾಲದೊಳಗದೆ ಹರವನು
ಭಾವ ಪದಪದ ಮೋದೆ ಸಮತಾ ನೋಟ ಸಂವಾದೆ ॥
ಜೀವರೆಡೆ ಮಾತೃತ್ವ ಮಮತಾ
ಭಾವೆಯಾಗಿರುವಿಕೆಯ ಸತಿಯ ವಿ
ಭಾವನೆಯ ಪತಿ ಹೊರತು ಮತ್ತಾರರಿವಳಿವಳಿರವ ॥ ೨೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕ್ಷೀರದೊಳ ಯಾಲಕ್ಕಿ ಕಂಪ ಸ
ಸಾರ ನಯನೊಳಗುಲುಕು ತಂಪ ವಿ
ಚಾರ ಶೋಭಿತ ಕೈರವ ಹಸಿತ ಸೊಂಪ ಸಹೃದಯ ॥
ಸಾರ ಸಾಂದರ್ಭಿಕದ ಪರಿಮಳ
ಹಾರ ಹಂಸಿಯ ಮಾನಸೊಳಗುಪ
ಹಾರ ಪದಸೇವಾ ಪರಂಪರೆ ರೀತಿ ಸಾರಮಯ ॥ ೨೯ ॥

ತಾನೆ ತನ್ನೊಳ ನೋಡಿಕೊಳ್ಳುತ
ಜಾಣೆ ಸರಿದೂಗಿಹುದಲನುದಿನ
ಮಾನದೊಳ ನಡೆವಂಥ ಸತ್ಕ್ರಿಯೆ ಭಾವ ಬಿಡದಂಥ ॥
ಹಾನಿ ಲಾಭದೊಳಾಂತರಿಕ ನುಡಿ
ಗಾನ ಗರಿಗೆದರಿಹುದ ನಿಜ ಸ
ಮ್ಮಾನ ಲಕ್ಷಿಸುತಿವಳ ಸುಳುಹದು – ನೋಟ ವಿಶ್ರಾಂತ ॥ ೩೦ ॥

ಸತತ ಸುಪ್ರಿಯಳಂತೆನಿಸುತನು
ಗತಿ ಮಹಾನತೆ ಮೆಂತೆನಿಸುತಲಿ
ಅತಿ ಮನೋಹರವೆನಿಪ ಸಹಜಾನಂದ ಪಡುವಂತೆ ॥
ಪತಿಯ ಬಳಗಕೆ ಕಲ್ಲು ಸಕ್ಕರೆ
ಕಥನ ಕಲ್ಪಿಸುವಂತೆ ಹೊರಗೊಳ
ದಿತಿ ಮಧುರಪೊಂದಂತಿಹುದ ಪತಿಬಲ್ಲ – ಸಾತ್ವಿಕರು ॥ ೩೧ ॥

ಜ್ಯೋತಿಮತಿ ವಿಸ್ತರಣ ವಾಸ್ತವ
ಮಾತಿನೊಳ ವಿಸ್ಫುರಣ ವೈಭವ
ಪ್ರೀತಿ ಪಂಥ ಪ್ರಸಾದ ಚಿರನವ ಸೇವ್ಯ ಭಾವ ರವಿ ॥
ಮಾತಿನೊಳ ಮಾಣಿಕ್ಯದಂತಿಹು
ಧಾತುಮದ ಮುಮ್ಮಾತವಾ ನಿ
ರ್ಭೀತವೆನಿಸುತ್ತಿವಳ ದೈನಂದಿನದ ಜೀವಸವಿ ॥ ೩೨ ॥

ಮನೆಯ ಹಿರಿತನ ಹೊಲಬ ಮನಸಿನ
ಗಣಿತಗೂಡದೆ ಬಂಧು ಬಾಂಧವ
ರೆಣಿಕೆ ಸಾತ್ವಿಕ ಸೂತ್ರ ಗೌರವಿಸುತ್ತ ಪದಪದಕೆ ॥
ಅನುದಿನದಿ ನೀರಜದು ನಗುತಿಹು
ದೆಣಿಕೆಗಳನೊಡಂತೆ ಈದಿಶೆ
ಹೆಣಿಕೆ ಚಿರತಮ ಮೂಡಿ ಮೂಡಿಸುತಿತ್ತು ಮನಮನಕೆ ॥ ೩೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈರ್ವರಿರವು :

ಇರುವನಯನೆರಡಂತೆಡಬಲದಿ
ಕರಗಳೆರಡರ ಸಂತೆ ಕೇಳುತ
ಲಿರುವ ಕವಿಗಳ ಪರಿಯು ಒಂದೇ ನಾದ ನೋಡಂತೆ ||
ಸರಿಯೆ ನಾಸಿಕ ಹೊಳ್ಳೆರಡುಗಳು
ಪರಿಮಳವ ಗ್ರಹಿಸುವಿಕೆ ಸಮನೆನು
ತಿರುವದನು ಭಾವಂತೆ ದಂಪತಿರೀರ್ವರಿರವಂತೆ || ೩೪ ||

ನದಿಯ ಸಮತಾಳಂತೆ ನಾವಿಕ
ನೆದರರದಿಂ ಕರ ಹುಟ್ಟು ಹಾಕುವ
ಸದರಳೊಡಗಿದ ಬಲುಮೆ ನೇಮದು ಸೋಮಕಿರಣಂತೆ ||
ಪದದು ಸರಿಗಮ ಸರದೊಳಡಗುತ
ಲದರ ಸಂಗಮ ಕೇಳ್ವಕಿವಿಗದೆ
ಮಧುರದೊಳ ಬೆರೆತಂತೆ ಮಧು ಮಣಿಯೋತು ತಿಳಿರಿಂತೆ || ೩೫ ||

ಪಕ್ಷಿಗಿಹ ಪಂಖೆಸಳು ಚುಂಚದ
ರಕ್ಷೆಯೊಳ ಮುಖದಂತ ಜೋಡನೆ
ಸಕ್ಷಮತೆಯಂತಾಗಿ – ಕಿರುನಾಲಿಗೆಯ ಸಮಗೌಪ್ಯ
ಸೂಕ್ಷ್ಮತೆಯದೊಡನಾಟದಿ ವಿಶಾ
ಲಾಕ್ಷಿ ನಿಜದಿರುವಿಕೆಗೆ ನಿಜಘನ
ಸಾಕ್ಷಿ ಪರಮೇಶ್ವರಯನಿರಲೆಂದಿನೊಲು ನಿರಿರೌಪ್ಯ || ೩೬ ||

ಹೆಜ್ಜೆ ಮೊದಲೆನುದಾವುದದು ಕಿರಿ
ಗೆಜ್ಜೆಗಳದೇನಿರಲಿ ಹೊರಡುವ
ಬಿಚ್ಚಿ ಬಿಚ್ಚಿಡುವಂಥ ನಾದ ನಿದಾನ ಕೇಳಂದ ||
ನಿಚ್ಚಳೆದುರಿನ ವಸ್ತುಗಳೆಡೆಗೆ
ಸ್ವಚ್ಛ ನೋಡುವಿಕೆಯೊಳಸಮತಾ
ಮುಚ್ಚು ಮರೆಯೆನಿತಿರದುದೀರ್ವರ ಸಹಜ ಸೌಗಂಧ || ೩೭ ||

ಇರವು ಸಾದಾ ಮೆರಗು ಸದ್ಗುಣ
ಸುರುಳಿ ಸೀದಾ ಶೆರಗು ಮನಸೊಳ
ಹೊರಗು ಜನಮನ ತೂಗಿಸುವ ತಾದಾತ್ಮ್ಯ ಭಾವಸವಿ ||
ಹಿರಿಮೆ ಪತಿಮತಿ – ಸರಿಯೆ ಸತಿಮತಿ
ಸರಣಿ ಸೌಮ್ಯತೆಯೀರ್ವರಿರುವಿಕೆ
ಭರಿತವಾ ಸಂತುಷ್ಟಿಯನದಿನ್ನೇನು ಕಥನ ಛವಿ || ೩೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಗರಿಮೆ ಧರ್ಮಾರ್ಥ – ಸೂತ್ರದೊ
ಳಾಗುತಿರಲದೆ ಫಲ ಯಥಾರ್ಥ ಪ
ರಾಗ ಭಾವ ಸುಸೂತ್ರ ಸೊಬಗವಕಂಡು ಭಕುತರರು ॥
ಶ್ರೀ ಗರಿಮೆಯನುದಿನದಿಗಾಣುತ
ಲಾ ಗುರಿಯೊಳಗೆ ಗಮ್ಯದಿಹ ಚರ
ಣಾಗವಾಗಿಹುದೆನುವದಾಲಿಸಿ ವಿಸ್ಮಿತಾದವರು ॥ ೩೯ ॥

ಪುರದಿ ಹಿರೆಮಠದಯ್ಯನವರಿರ
ವರಿತು ಸಾಗುವಕೆಲರು ಹಲಕೆಲ
ಸರಳರಿಸಲಾವಾಗದನು ಪರಿಪಾಲನೊಂದೆಡೆಗೆ ॥
ನಿರತದಾಚರಣೊಳಗಿರುವಿಕೆಯ
ನರಿತ ಪತಿವರ ಸಂತಸಾಂಬುಧಿ
ಭರಿತಲನುದಿನ ಶಿವಪುರಾಣ ವಿಚಾರ ಬಿಡದುಡಿಗೆ ॥ ೪೦ ॥

ಆಲಿಸುತ ರುದ್ರಮ್ಮ ಪದ್ಧತಿ
ಪಾಲಿಸುತ ಪದಪದಕೆ ಗೌರವ
ಶೀಲ ಗ್ರಹಿಣಿಯೆ ಗ್ರಹವೆನಿಸುವಂತಾದ ಸುಪ್ರಜ್ಞೆ॥
ತೌಲನಿಕ ಶಿವಕತೆಯೊಳಾಗುತ
ಲೀಲೆ ಮೆಲುಕಿಸುತಾತ್ಮಗ್ರತದಿರೆ
ಕಾಲಗತಿ ತಕ್ಕಂತೆ ಸುತರಿಗೆ ಜನ್ಮ ಕೊಡುತಿರಲು ॥ ೪೧ ॥

ಹಿರಿಯನಿಗೆ ಗಂಗಾಧರಯ್ಯೆನು
ತಿರುತಲಿರೆ – ನಂತರದ ಸುತನಿಗೆ
ಹರ ಸುನಾಮದೆ ನೀಲಕಂಠಯ್ಯೆನುತ ಸಾಧ್ವಿಮತಿ ॥
ಚರಿತ ಬಸವಾದಿಗಳ ಜೀವನ
ಭರತಿಯೊಳಗೀಸುತ್ತ ಸಾಗುತ
ಲರಳಿಸುತರಿವರೊಳಗೆ ಧಾರ್ಮಿಕ ದೀಪ್ತಿಪರ ಸುಜ್ಞೆ ॥ ೪೨ ॥

ಸತಿಯ ಸಂಸ್ಕೃತಿ ಶೀಲ ನಾಲೆಯೊ
ಳತಿಶಯದಿ ಮುಂದೊರೆದುದೆಲ್ಲವ
ಋತಸದಾಗತ ಕಾಣುತಲಿ ಮೋಳಿಗೆಯ – ಸತಿ ಬಲ್ಮೆ॥
ತತಿಯ ನೆನಪಿಸುತಾತ್ಮಗತ ಪಥ
ಪಥಿಕನಾದಾತ್ಮೋಜ ತತ್ಪ್ರಭೆ
ಸತತಗಾಣುತಲಿರ್ದ ಸಂತಸ ಸೇತು ಸಮನಲ್ಮೆ ॥ ೪೩ ॥

ಅಂತೂ ಬೆಳಗು ೩ಕ್ಕಂ ಪದ ೪೩ಕ್ಕಂ ಒಟ್ಟು ಪದ ೧೩೦ಕ್ಕಂ ಶಿವಂ. ೫-೧೨-೨೦೧೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು - ೪

ಚಿನ್ನಾದ

ಸೂಚನೆ :

ಚರಿತನಾಯಕ ಜನಿಸಿಹುದ ನುಡಿ
ಸರಣಿ ವಿವರಣ ಚರಣ ಸಹಜಾ
ಕರಣದೊಳಗಡಗಿಹುದನರಿವುದು ಶರಣ ಸಜ್ಜನರು ||

ವಾಚನ :

ಮಟ್ಟ ಮಹತಾ ಮತಿಯೊಳನುದಿನ
ಗಟ್ಟಿ ಗಾಂಭೀರ್ಯಾರ್ಥ ಮಾತೆಯ
ದಿಟ್ಟಿಯದು ಹದ ತಪ್ಪಿ ಕುಟ್ಟುವ ರೀತಿಯಾಗಿರದೆ ||
ನೆಟ್ಟ ನಿರುಪಮ ಮಠದ ಸಂಸ್ಕೃತಿ
ಬೆಟ್ಟದೊಳಗರಳಿಹುದ ಹೂತತಿ
ಗುಟ್ಟದಂತಿಹುದಪ್ಪಟದ ಅಪರಂಜಿಯಂತಾಗಿ || ೧ ||

ನೋಡುತ ಸಮಾಜದಲಿ – ಕಹಿ –ಶುಭ
ದಾಡಲೆಡೆ ತಿಳಿಸುತಲವರೊಳಗೆ
ಮೂಡಣೋದಯದಂತೆ ಸಕಲರ ಹೃದಯವಿರಲೆನುತ ||
ಕಾಡಿನೊಳಗರಳಿಹುದ ಮುಳ್ಳೊಳ
ತೀಡದಂತಿರುವಂತೆ ಹೂವಿನ
ಹಾಡ ಸಮತಿಹುದವರ ಕಾಣುತ ಗೌರವಿಸುತಲ್ಲಿ || ೨ ||

ನುಗ್ಗಿ ಬರುವ ಸಮಸ್ಯೆಗಳಿಗದು
ಕುಗ್ಗದಯೆ ಸಾಚಾರ ಸತ್ಸುಖ
ಸುಗ್ಗಿ ಸಂಪದದಿರುತ ತಾವರೆ ಪತ್ರ ಪನಿಯಂತೆ ||
ಬಗ್ಗಿ ಬಂದವರಿಂಗೆ ಸಮ್ಮತ
ಮಗ್ಗಿಗಲಿಸುತ ಮಾತೆ ಸಮತಾ
ಕಗ್ಗ ಕಂಗಳದಾಂಗಳದಿ ಪಾಲಿಸುತಳಿವಳಂತೆ . || ೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಂಚನವ ಮೆಚ್ಚದಲೆ ಕಾರು
ಣ್ಯಾಂಚಲದಿ ಭಕುತರ ಪೊರೆಯುವ ಖ
ಜಾಂಚಿಯಂತಿಹುದಿವಳ ಹೃದಯಾಂಕಣದಿ ಭಕುತಗಣ ॥
ಕಂಚು ಕಂಠದ ನಾದ ಸುಸ್ವರ
ಸಂಚಿಯೊಳ ಮಾತೆಯಳ ನೆನಹಿನ
ಚುಂಚು ತುಟಿಯೊಳಗೆನ್ನದಯೆ ಮನದಿಂಬಿರಿಸಿದವರು ॥ ೪ ॥

ಬಂದವರ ಅನುಮಾನಗಳ ಬಿಡ
ದಂದು ತಿಳಿಯುತಲನುವಿನಿಂದನು
ಬಿಂದುಗಳ ಧಾರೆರೆದು ಪರಿಹರಿಸುತ್ತಲಿರುವಿಕೆಯು
ಗಂಧಗುರಿ ನುಡಿಮುತ್ತಿನಂತಾ
ನಂದ ಪೂರ್ಣದು ರನ್ನದೀಪ್ತಿಸು
ನಂದ ಕಂದದ ನಗುವಿನಂತಾಗಿರುವ ಮಾತೆಯಳು ॥ ೫ ॥

ತಪ್ಪದಿಹ ನಡೆನುಡಿಯ ನೋಡಿರ
ಲೊಪ್ಪುವಂತಾಗಿಹುದ ಮಾತಿನ
ಹೆಪ್ಪು ಮನ ಸಂಬಂಧಗಳ ಜೋಡಿಸುತ ಬಲುಗಟ್ಟಿ ॥
ಒಪ್ಪುತೊಪ್ಪಿದ ನೋಟ ನಲ್ಮೆಯ
ಹೆಪ್ಪು ಹಾಕುವ ರೀತಿ ಖುತಮನ
ಕೊಪ್ಪಿಹಳು ರುದ್ರಮ್ಮ ಮಕ್ಕಳ ಪಾಲಿಸುವ ಜತೆಗೆ ॥ ೬ ॥

ಬಡವ ಸಿರಿವಂತರೆನದುದೆ ಭಾ
ವುಡಿಗೆಯಿಡುವಿಕೆ ಮಾನವೀಯದ
ನುಡಿಯೊಳಿದುವೇ – ನಮ್ಮ ನಮ್ಮವರೆನುವ ಬಸವೋಕ್ತಿ ॥
ನಡವಳಿಕೆಯಿದು ಮುಂದಿನವರಿಗೆ
ಕೊಡುಗೆಯಾದಂತೆನಿಸುತಿದ್ದಿತು
ಅಡೆತಡೆಗಳೇನಿರಲಿ ಬಕುತರಿಗರಿಸುವಿಕೆ ಪಥವ ॥ ೭ ॥

ಬದುಕಿನೊಳ ಸಂತಸತೆ ತರುವಂ
ತೊದವಿ ಬೋಧನೆ ಫಲದು ನಯನೊಳ
ಸದರ ಸಂಭ್ರಮ ಸೊಬಗ ತೆರೆದೆದ್ದರಿಸುತಿರಲಿತ್ತ ॥
ಸದಯ ಸೆಡಗರದೊಳಗೆ ಸನ್ಮತಿ
ಮಧುರೆ ಮೂರನೆ ಗರ್ಭ ಧರಿಸಿರ
ಲಿದುವೆ ಬಳಗೊಳ ನಂದ ಭರಿಸುತಲಿತ್ತು ಗರಿಗತ್ತು ॥ ೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೋಡಲಿದು ಮತ್ತೊಮ್ಮೆ ಮಾತೆಯೊ
ಳಾಡುವಿಕೆ ಭಾವಾಂಗದೊಳಗೊಳ
ಗಾಢತಮ ಈಗೊಂದು ಪರಿ ಬೇರೆನಿಸುತಿರೆ ಚಿತ್ತು ||
ತೀಡದಿಹ ತಿಳಿಬಯಲ ಗಮ್ಯತೆ
ಗೂಢದೊಳಗದೆ ಸತ್ಸದಾ ಮಹ
ಮೋಡ ಮರೆತೆರೆ ಮಿಂಚಿನಂತಿಹ ಸತತದಾಪೇಕ್ಷೆ || ೯ ||

ತುಂಗ ಜಂಗಮ ನೆನಹು ಪದ ಉ
ತ್ತುಂಗವಾ ಬಯಕೆಗಳು ಶುಭ ಲಾ
ಭಾಂಗ ಸಾಮಾಜಿಕದ ಹಿತತಖುದೆಣಿಕೆ ಬಿಡದಾಗಿ ||
ಅಂಗವಿಸುತಿರಲಾಗ ಶ್ರಾವಣ
ತುಂಗ ಮಾಸದಿ ವೀರಭದ್ರನ
ರಂಗದೊಳಗೆ ಪುರಾಣ ಪ್ರವಚನ ಬಗೆಗೆ ತಿಳಿಯುತ್ತ || ೧೦ ||

ಧೀರ ಜಂಗಮ ಪುಂಗವೆನಿಪಾ
ಚಾರ ಪುರ ಯೆಡೆಯೂರ ಕ್ಷೇತ್ರದ
ಮೇರೆನಿಪ ಚರ ಸಿದ್ಧಲಿಂಗೇಶ್ವರರ ಚರಿತಾಂಗ ||
ಸಾರ ಸಾಂದರ್ಭಿಕದಿ ಬಿಡದನು
ಸಾರ ನಡೆದಿರಲಿತ್ತಲನು ದಿನ
ಹಾರ ಭಾವಿತೆಯಾಲಿಸುತ ಶಿವನೇ ಬಸವೆನುತುರೆ || ೧೧ ||

ನಿತ್ಯ ಸಂಧ್ಯಾ ಸಮಯೆ ಸಕ್ರಮ
ತಥ್ಯ ತೀರ್ಥಾಗಸದ ಗರಿಮೆಯ
ಗತ್ಯ ತಿಳಿದಿರಲೆಂಬುವಂತೆಯೊ ಸಮಯರಿತು ಬರುತ ||
ಸ್ತುತ್ಯ ಸಡಗರ ಸ್ತವನ ಸುಖ ಸಾಂ
ಗತ್ಯ ಷಟ್ಪದಿಯಾಳ ಸೆಲೆ ನೆಲೆ
ಅತ್ಯಧಿಕದಾತುರದಿ ತಪ್ಪದೆ ಆಲಿಸುತ ಮಾತೆ || ೧೨ ||

ಬರುತ ಮಠದೆಡೆಗದರದೇ ಶುಚಿ
ಸರಸದಿಹ ನೀರಜದ ಸಮತಾ
ಗಿರುತಲಾನಂದದಲಿ ತನ್ನೊಳ ತಾನೆ ಮೆಲುಕಿಸುತ ||
ಹಿರಿಮೆ ಹಂಸಿಗೆ ಜನ್ಮ ಕೊಟ್ಟಿಹು
ದರಿಯಲಾ ಮಾತೆಯಳೆ ಧನ್ಯಳು
ದೊರೆಯಬಹುದೇ ಭಾಗ್ಯವಾ ಕಾರಣಿಕ ಪುರುಷಂಗೆ || ೧೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾತೆಯೆನಿಸುವ ಭಾಗ್ಯಪಲ್ಲಸ
ಮೇತದೊಳಗರಳಿಹುದ ಪುಷ್ಪ ಸ
ದಾತಿಶಯ ಪರಿಮಳವ ಬೀರುವ ತೆರದಿರುವ ಮಾನ
ಆತುಮದಿ ತನ್ನೊಳಗೆ ತಾನೇ
ಗೀತಗೂಡುತ್ತಿಹುದ ನರಿಯುವ
ದಾತುರಿರೆ ಸರಳೆಂತು ಹೇಳಲಿ ಹೆಣೆಯುತಿಹ ಕುಣಿಕೆ || ೧೪ ||

ಕೇಳಿದಧ್ಯಾಯಗಳ ಹೆಪ್ಪಸ
ದಾಳ ಮನದಿರಿಸುತ್ತ ಚಿತ್ತ ಚ
ರಾಳ ದಿವ್ಯತೆ ಸಹಿತ ಲೀಲಾರ್ಥಗಳ ಮನನಿಸುತ ||
ವೇಳೆ ವೇಳೆಯ ಸದುಪಗೊಳಿಸು
ತ್ತೇಳುತನುಪಥಮತಿಯೆ ತೂಗುತ
ಮಾಲೆಯೊಳಗಡಗಿಹುದ ಶೀಲ ವಿಶಾಲ ತಾಲಗತಿ || ೧೫ ||

ಮುಗಿದ ಶ್ರಾವಣ ಶ್ರವಣ ಸೂಳ್ನುಡಿ
ಸೊಗಸ ಸಂಪಿಗೆ ಮೇಳ ಬದುಕಿನ
ಬಗರಿ ಗತಿಯೊಳಗಿರ್ದ ಗಮ್ಯತೆಯಂತೆನುವ ಭಾತಿ ||
ಬಗಿಸುತಲಿ ಚರವರನ ಮಹ ಮತಿ
ಚಿಗುರಿಸುತಲನುದಿನದ ಜೀವನ
ನಿಗದಿಡಿದ ಲಿಂಗಾರ್ಚನ ವಿಭೂತಿ ಪ್ರಸಾದೊಳಗೆ || ೧೬ ||

ಕುಳಿತಿರಲಿ ಕಾರ್ಯಾಂಗ ಕಲಮೊಳ
ಮುಳುಗಿರಲದೇ ಮಾನಸಿಕ ಮುಖ
ದುಲುಕದೊಳಗಿರುವಿಕೆಯ ಪತಿಗಾಣುತ್ತ ತನ್ನೊಳಗೆ ||
ಕಳೆದ ಗರ್ಭಿಣಿಯಾದುದಾ ದಿನ
ದೊಳಗಿರುವ ಬಯಕೆಗಳ ನೋಡಿರ
ಲೊಲವದೀಗಿನ ರೀತಿ – ವೈರಾಗ್ಯತೆಯ ಸುಳುಹುಗಳು || ೧೭ ||

ಲಿಂಗ ಪೂಜಾಲೋಲತೆಯ ಜತೆ
ರಂಗದೊಳ ವಿದ್ಯಾರ್ಥಿಗಳ ಮನ
ಸಾಂಗ ಕೊರತೆಯ ಬಗ್ಗೆ ಯೋಚನೆ – ಉಣಿಸುವಾಕಾಂಕ್ಷೆ ||
ಸಂಗತದಿ ಸಂಪನ್ನ ಚಿನ್ಮಯ
ತುಂಗ ತದ್ವಿಧಿ ಚನ್ನಬಸವ ಚಿ
ದಾಂಗ ಚಿತ್ಕಳೆ ಚರಿತನುಚರಣ ಕಿರಣ ನಿರತಾಕ್ಷಿ || ೧೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೇಳುವಾತುರ ಯತಿ ಮಹಾಂತರ
ಮೇಳ ಚರಿತಾಂಕಣದಿ ಮತಿಯನು
ಗಾಲ ನೆಲಿಸುವಿಕೆಯನೆ ಕಾಣುತ ಬಂಧುಗಳಿಗೆಲ್ಲ ||
ಕಾಲ ಕಳೆಯದೆ ಪರಹಿತದ ನುಡಿ
ನಾಲೆ ಹರಿಸುವದೆಲ್ಲ ಮತಿಗನು
ಕೂಲವೆನಿಪಂತಿವರು ಮೆಲುಕಿಸುತಿತ್ತಲಿರಲಿತ್ತ || ೧೯ ||

ಮಾತೆಯೊಳ ನಿಯತಿಯನು ಗತಿ ಮತಿ
ಮಾತೆಯಂತಿಹುದಿವಳ ಸಮತಾ
ಚೇತದೊಳ ಪತಿವರ್ಯ ಗುರುಪಥ ಲೀನ ಶಿವಪಥದಿ ||
ರೀತಿಮಯ ಶಿವಚಿಂತೆ ಶಿವಮತಿ
ನೀತಿ ದಂಪತಿಗಳಿರವದುವೆ ಸ
ಮೇತ ಲೇಸೆನಿಸುವ ಸುಪಥಲೀರ್ವರದೆಯೆನುವಂತೆ || ೨೦ ||

ಶಾಂತ ಸುಖದೊಳಗಾಗುತನುಭವ
ಕಾಂತಿಯೊಳ ಸ್ಮರಿಸುತ್ತಲಿರೆ ಫಳ
ತಂತು ಮಾನಸಮೂಡಿ ಗರ್ಭದ ಮೇಲೆ ಸಹಿ ಚಿತ್ತ ||
ಹಂತ ಹಂತದಿ ಹೂವು ಹರ್ಷದೊ
ಳಾಂತು ವಿಕಸಿತವಂತೆ ಶಿಶುವೊಳ
ಗಂತು – ಚಕ್ರವ್ಯೂಹ ಗತಿ ಗರ್ಭದಲಿ – ತಿಳಿದಂತೆ || ೨೧ ||

ಸುಳುಹು ಭಾರತ ಕಥನ – ಪಿತನಿಂ
ಸುಳಿದ ವೇದದ ಭಾಗವಾಲಿಸು
ತುಲುಹಿದಂತೆನುವಂತೆ – ಮಾತೆಯ ಮಾನಸಾಮೃತದು ||
ಫಳ ಫಳನೆ ಹನಿ ಹೊನಲ ನೆಲದೊಳ
ಗಿಳಿದು ಬೇರೊಳ ಬೆರೆತ ಮೇಲ್ಮೆಯು
ಕಳೆ ಕದಳಿ ಗೊನೆ ನಗುವ ಪರಿಯೊಳ ಸಾಗುತೆಂಟನೆಯ || ೨೨ ||

ತಿಂಗಳದು ನಡೆದಾಗ ಗರ್ಭಕೆ
ಲಿಂಗ ಸಂಸ್ಕಾರವದು ಪದ್ಧತಿ
ತುಂಗ ಸತ್ಕ್ರಿಯ ನಡೆದು ಸಾಗಿರಲೆಂದಿನಂತೋಲು ||
ತಿಂಗಳನ ಕಿರಣಾಳಿಗಳು ರಮ
ಗಂಗೆಯೊಳ ನೀಳಡಗಿದಂತಾ
ರಂಗ ಮಾತೆಯ ಮಾನಸೊಳಗದೆ ಹೊಂಬೆಳಗದಂತೆ || ೨೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಂತ ನಿಂತೆಡೆ ಸಿದ್ಧಲಿಂಗಾ
ಕುಂತು ಕುಂತೆಡೆ ಸಿದ್ಧಲಿಂಗಾ
ಸಂತತೊಳ ಮನೆಗೆಲಸಗೂಡಲದೇನು ನಾದ ಮುದ ॥
ಶಾಂತ ಸಮ್ಮುದ ಹೃದಯ ಮೆದುಳ – ನಿ
ತಾಂತ ಕನಸೊಳ ಅಚ್ಚುಗೊಳ್ಳುತ
ಸಂತತದೆ ಗರ್ಭಾಂಶದೊಳ ಮೊಳಗುತಿದೆ ನಾಮ ರಮ ॥ ೨೪ ॥

ವೈದ್ಯ ಗರ್ಭದ ಬೆಳವಣಿಗೆಗಾ
ಸಿದ್ಧರಸವಟ ಗರ್ಭಪಾಲ್ರಸ
ಶುದ್ಧ ಸಕ್ರಮ ನುಂಗಿಸಲು ಬೆಳೆವಂತೆ ತಿಳಿರಂತೆ ॥
ಸಿದ್ಧಲಿಂಗೇಶೆಂಬ ನಾಮದ
ಮುದ್ದ ಮಾಧುರಿ ನಾಭಿ ನಾಡಿಯೊ
ಳಿದ್ದು ತಟ್ಟಿದ ಫಲವು ಹುಸಿಯೆನದಂಥದೆಂಬುದರಿ ॥ ೨೫ ॥

ಒಮ್ಮೆ ನೆನೆವಳು ಬಸವ ಬಳಗವ
ನೊಮ್ಮೆ ನೆನೆವಳು ನಾಗಲಾಂಬೆಯ
ಸುಮ್ಮ ಗಂಗಾಂಬೆಯಳ ಸಹ ನೀಲಾಂಬೆ ನಿರುಪಮಳ ॥
ಒಮ್ಮೆ ಚಿನ್ಮಯ ಚನ್ನಬಸವನ
ನೆಮ್ಮಿದಾ – ರಾಮಯ್ಯನನ ಬದಿ
ಹಮ್ಮಳಿದ ಶರಣರರ ಜೀವನಿರವನೆ ತಿಳಿವ ಜತೆ ॥ ೨೬ ॥

ಚನ್ನ ಛವಿ ಸದ್ಭಾವ ಸವಿ ಸಂ
ಪನ್ನದೊಳ ತಮ್ಮಿಷ್ಟಲಿಂಗವ
ಚನ್ನ ಪೂಜಿಸುವಂತೆ ಗರ್ಭಕೆ ಕಟ್ಟಿದಾಲಿಂಗ ॥
ಹಣ್ಣು ಹೃದಯದಿ ಪೂಜಿಸುತ ಕ್ರೀ
ಮುನ್ನಡೆಸಿ ಸಾಗುತ್ತಿರಲು ಸಂ
ಪನ್ನ ಗಂಡು ಮಗುವಿಗೆ ಜನುಮವ ಕೊಟ್ಟಳೀ ಮಿತಿಗೆ ॥ ೨೭ ॥

ಆಗ ಮಾಸೂರೊಳಗೆ ಹಬ್ಬಿದ
ಪ್ಲೇಗ ರೋಗದ ಹಾವಳಿಯದೊಳ
ಗಾಗಿರೆ ಹೆರಿಗೆಗಾಗಿ ಸಂಬಂಧಿಗಳಿರುವ ಸನಿಹ ॥
ಸಾಗಿ ರಟ್ಟೀಹಳ್ಳಿ ಗ್ರಾಮದೊ
ಳಾಗ ಕಬ್ಬಿನ ಕಂತಿ ಮಠದಿರು
ತಾಗ ಜನ್ಮವ ಕೊಟ್ಟಳಾ ಮಹತಾಯಿ ಶುಭತಾರೆ ॥ ೨೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಸಿನತೇದಿಪ್ಪತ್ತು – ಮೂರನೆ
ಕುಶಲ ಮಾರ್ಚದ ಮಾಸ ತಿಳಿರಿದ
ಹಸನು ಹತ್ತೊಂಬತ್ತು ನೂರ್ದಿನೇಳಸವಿಯಂದು ॥
ಹಸಿತ ಮುಖ ವೇದನೆಯ ಹೊರತಾ
ದೆಸೆವ ಮೂರ್ತಿಗೆ ಜನನ ಕೊಟ್ಟಿಹು
ದುಸಿರಿನೊಳ ಶಿವ ನಾಮ ಸಹಜಾರಾಮ ರವಿಯುದಯೆ ॥ ೨೯ ॥

ಧಾರೆ ಫಾಲ್ಗುಣ ವದ್ಯ ದ್ವಾದಶಿ
ವಾರ ಮಂಗಳ – ತಾರೆ ಶ್ರವಣಾ
ಧಾರ ನಾಲ್ಕನೆ ಚರಣ – ರವಿ ಕುಜ ಮೀನ ಲಗ್ನದಲಿ ॥
ನೇರ ಧನ ಗುರುಮಿಥುನೆ ಕೇತು ಸ
ಸಾರ ಪಂಚಮೆಶನಿಯು ಕುಂಭದೊ
ಳೀರು ಶುಕ್ರ ಬುಧ ಹರಸಲ್ ಗ್ರಹಗಳಿರಲಿತ್ತಲುರೆ ॥ ೩೦ ॥

ಹರ್ಷಗೊಂಡಿತು ಭಕ್ತ ಬಳಗ ಸ
ಹರ್ಷ ಹೊನಲೊಳ ಪುರದ ಪ್ರಜೆಗಳು
ಹರ್ಷ ಹೂವಿನ ಗವನ ಸೊಬಗಿನ ಸುಂದರಾತಿಶಯ ॥
ಹರ್ಷದಿರೆ ಲಲನೆಯರ ಬಳಗದು –
ಹರ್ಷದೊಳ ಶಿಶುವಿಂಗೆ ಜಂಗಮ
ಸ್ಪರ್ಶಗೊಳಿಸಿರೆ ಇಷ್ಟಲಿಂಗವ ಸಂಗತೆನುವಂತೆ ॥ ೩೧ ॥

ನಾಡೆ ಕಬ್ಬಿನ ಕಂಥಿ ಮಠದಿಹ
ನಾಡಿ ಪಟ್ಟಾಧ್ಯಕ್ಷರೆನಿಪಾ
ಜೋಡಿ ಸನ್ಮತಿ ಸಿದ್ಧಲಿಂಗ ಶಿವಾನುಭವಿ ಶಿಶುಗೆ
ಆಡುತಾ ದಿನ ಸಿದ್ಧಲಿಂಗೆನು
ತಾಡಿದಾ ಬಳಿಕಾಗ ಮುಂದದೆ
ಕೂಡಿ ಶುಭದಿನದಂದಿದೇ ಶುಭ ನಾಮ ಬಳಗವದು ॥ ೩೨ ॥

ನಂತರದಿ ಮಂಗಲೆಯರಿಂ ಶುಭ
ಶಾಂತ ಸುಖದೊಳ ಭಾವನೆಯ ಹದ
ಹಂತದೊಳಗಾ ಸಿದ್ಧಲಿಂಗಯ್ಯೆನುತ ಜನನಿಯಳ ॥
ಅಂತಃಕರಣದ ಭಾಷೆ ಮನ್ನಿಸು
ತಿಂತು ಸಾನಂದದೊಳ ಜೋಗುಳ
ಸಂತಸದಿ ಪಾಡುತ್ತ ನಡೆದರು ಪಡೆದು ಬಾಗಿನವ ॥ ೩೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇತ್ತನೋಡಿರೆ ಹೊಂಬೆಳಗ ಹೊಳೆ
ಹತ್ತಿ ಅರಳಿದ ರೀತಿ ಪ್ರಕೃತಿಯೊ
ಳುತ್ತ ಮೋತ್ತಮುವೆನ್ನುವಂತೆಯೆ ಪಲ್ಲ ಪಲ್ಲವೊಳು ॥
ಸುತ್ತ ವಾ ಚಿನ್ನಾದ ಪಂಚಮ
ಗತ್ತದೊಳ ಹೊರಗೇನಿರಲಿ ಒಳ
ಗಿತ್ತ ಶಿಶುವಿನ ಶುಭವೆನಿಪ ನನ್ನಾದ ಸೆಳಹುಬಲು ॥ ೩೪ ॥

ಅಂತು ಬೆಳಗು ೪ಕ್ಕಂ ಪದ ೩೪ಕ್ಕಂ ಒಟ್ಟು ಪದ ೧೬೪ಕ್ಕಂ ಶಿವಂ
ತಾ. ೧೩-೧೨-೨೦೧೫ ರವಿವಾರ ಪೂರ್ವಾಷಾಡಾ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು - ೫

ಸಂಸ್ಕೃತಿ

ಸೂಚನೆ :

ಚರಿತನಾಯಕ ಬೆಳೆಯತೊಡಗಿದ
ಸರಳ ವಿಕಸಿತ ನನೆಯ ಪರಿಯಂ
ತಿರಲಿವನೆಡೆ ಕಟಾಕ್ಷ ಅಥಣೀಶನದು ನುಡಿನ್ಯೈಜ ॥

ವಾಚನ :

ಚಿನ್ನ ಚಿನ್ಮಯ ತೇಜ ತೊರೆ ಮುಖ
ಬಣ್ಣದಾಳಿಂಬರಲೆ ನಖ ಸಂ
ಪನ್ನ ಪದ್ಮೆಸಳಂತೆ ನಯನೋಜೆಯೊಳ ಚಿದ್ಬಿಂದು ॥
ರನ್ನದೊಳ ಹೊರಗೊಂದೆ ಕಲೆ ಬೆಳೆ
ಯೆನ್ನುವಂತಿಹುದೀತ ನಯದೆಳೆ
ಕಣ್ಣೆವೆಯ ನವತೇಜದೆಡೆ ಬಳಗೆಲ್ಲರಾಟೋಟ ॥ ೧ ॥

ಹರುಷಿ ಮಲಗಿರಲತ್ತ ದೀಪದ
ಅರಳು ಕಿರಣೆಡೆ ನೋಟ ಬೀರುತ
ಉರುಳದಯೆ ಮಿರಿ ಮಾಟದೆಡೆ ಲೀನಾಗುತಿರುತಿರುತ ॥
ಕರುಳು ಕಂಗಳ ಕರೆಯನರಿತಂ
ತೆರಗುತ ಪಯೋಧರೆಡೆಗಾಗುತ
ಲಿರವದೊಳ ಮೌನೀಶನೆನಿಸುತ ನಿಯತಿ ನ್ಯೈಜದಲಿ ॥ ೨ ॥

ಭಿತ್ತಿಪತ್ರದ ಮಾಟವೆನದುದ
ಮತ್ತರಮ ಭಾವುಕತೆ ಸವಿಯೊಳ
ಗಿತ್ತ ನಿಜವೆಂಬಂತೆ ಯೋಗದ ಯುಗಲ ನೋಟೊಂದೆ ॥
ಬತ್ತದಿಹ ಭಾವೋಜ ಸೂಚನ
ಗತ್ತಗರಿಗೆದರಿಹುದ ಆಟ ಸ
ಚಿತ್ತದೊಳ ಬದಿ ಮಾತೆಯಳ ಮರೆತಂತೆಯೆನುವಂತೆ ॥ ೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಂದನೆಚ್ಚರದೊಳಗೆ ಸಂಧ್ಯಾ
ಹಂದರದ ಹೂವಂತೆ ಹದುಳಾ
ನಂದ ಮಂದ ಸುಗಂಧ ಸೊಬಗಿನ ಸೊಡರುತಾನಂತೆ
ಸಿಂಧು ಸಂಗ ತರಂಗ ಶಬ್ದಾ
ನಂದದೊಳಗದೆ ತಿಳಿರೆ ಪ್ರಣವಾ
ನಂದದೀತನದಿರವ ಸಕಲರಿಗೆಲ್ಲ ಚಕಿತಂತೆ || ೪ ||

ಕಾಣುತಿಹ ಮಾತೆಗದು ಲೀಲೆ ಸ
ಮಾನವೆನುವಂತಾದರೇನನು
ಮಾನವಿಲ್ಲದ ಗರಿಮೆ ಗಮ್ಮತ ಗರಿಗೆದರಿಹುದಿದ
ಮಾನಿನಿಯರಿಗಿದರ ವಿಚಾರಗ
ಳೇನು ಹೊಳೆಯದೆ ಆಡಿಸುತಿರಲು
ತಾನು ಜನನಿಯಳೆಡೆಗೆ ಕುಲಕುಲನೆ ನಗುತಿಹ ಮೆಲ್ಲ || ೫ ||

ಮಾನಿನಿಯರೆತ್ತಿದರೆ ಅಳುತಿಹ
ಜಾಣೆ ಜನನಿಯ ಕರದಿ ನಗುತಿಹ
ತಾನೆ ತನ್ನೊಳ ತಾನೆಯಾಡುತಲಿರುವನೇಕಾಂತ ||
ಕಾಣೆಯೆನಿಸದ ಕವನ ವಾಚನ
ಜೇನರಸದಂತಾದ ಸುಖದೊಳ
ವೀಣೆ ಸುಮ್ಮಿರುವಂತೆ ಸಮ್ಮತ ಸಾನು ಶಿವಶಾಂತ || ೬ ||

ನೋಡುವಂತಿರಲೀತ ವಾತ್ಸ
ಲ್ಯಾಡುವಿಕೆಯೊಳ ಚಂದ ಚಂದನ
ತೀಡಿ ತೀಡಿರಲದರ ಗರಿಮಾ ಗಂಧ ಸಂಬಂಧ ||
ಜೋಡು ಜೋಡಾಗುತ್ತಲಿರುತಾ
ಗಾಢ ನೋಟಕನೊಳ ತಡೆಯಿರದ
ತೋಡಿ ರಾಗ ಸರಾಗ ಲಯನಯ ನಿಲಯದೊಳಸಂದ || ೭ ||

ಚಿತ್ತ ಕಂದನ ಮಾಟ ಮಲ್ಲಿಗೆ
ಮುತ್ತ ಶುಭ್ರ ಸದಾಟ ಮೆಲ್ಲಗೆ
ಗತ್ತವಾಕಾಶದೊಳ ಬೆಳಗುವ ಶುಕ್ರ ಗುರು ಸಲಿಗೆ ||
ಭಿತ್ತಿ ಭಂಡಾರಂತೆ ಗುರು ಮಠ
ದಿತ್ತ ನೀ ಚಿದ್ದೀಪ ಸಮತಾ
ದಿತ್ಯ ಸತತಾದಂತೆ ಸುಖದಾ ಹರ್ಷ ಹೂ ಹೊಲಿಗೆ || ೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಾಲಗಲ್ಲದ ಹೊನಲ ಸೆಲೆಯೊಳ
ಮಾಲೆ ಮೌಕ್ತಿಕ ತೊದಲು ತೆನೆಯೆ ವಿ
ಶಾಲ ವೈಶಿಷ್ಟ್ಯತೆಯ ಹಸಿರಿನುಸಿರಿನದಾ ಸ್ಪರ್ಶ ||
ಸೋಲುಗೆಲವೆನದಂಥ ಕಂಗಳ
ನಾಲೆಯೊಳಗರಳಿಹುದ ತೇಜನು
ಶೀಲ ಸತ್ಪ್ರಭೆ ಮೂಡುತಡಗದ ಸೆಳೆತ ಸಾಹರ್ಷ || ೯ ||

ಮೇರು ಮಾತೆಯ ಕರುಳ ಕಳೆ ಮೊಲೆ
ಹಾಲುಗುಡಿಯುತ ಜನನಿ ಹಾಡುವ
ಲಾಲಿ ಕೇಳುತ ಬೆಳಗತೊಡಗಿದ ಮುತ್ತು ಮೌಲ್ಯದಲಿ ||
ಲೀಲೆಗಾಣುತ ಆಸರಕಿರದ
ಮೇಳವಾ ಬ್ಯಾಸರಕಿ ಹೊರತಾ
ಮಾಲೆಯಂತಿಹ ಜನನಿಯಳ ಕಾಣುತ್ತ ಬಳಿಬಳಗ || ೧೦ ||

ಮಾತೆಕರದೊಳ ನಗುವ ಬದಿಯೊಳ
ಪ್ರೀತಿಯಿಂ ಲಲನೆಯರು ಪಾಡಿರ
ಲಾತುಮದಿಯೊಪ್ಪದಯೆ ಅವರೆಡೆಗಾಗದಯೆಯಿತ್ತ ||
ಗಾನ ಮಾಡುತ ತನ್ನದೇ ಸ್ವರ
ಮಾನದೊಳಗಿರಲಿದರ ರಾಗ ವಿ
ದೇನು ಹೇಳುವರಾರು ಹೇಳದ ಹಂಸಗತಿಯಾದ || ೧೧ ||

ಚಂದಿಯೊಳಗಾಡುತಿರೆ ಬಳಗಾ
ನಂದ ಗಂಧದ ಗುರಿಯ ನಯದೊಳ
ಮಿಂದು ತೇಲುತಲೊಮ್ಮೆ ಯಾಲಾಪದಿರೆ ಗಾಂಭೀರ್ಯ ||
ಸಿಂಧು ಗಾಯಕಬಲ್ಲ ತೊದಲಲೆ
ಗಂಧ ಸಹಜಾನಂದ ತೊರೆ ಸಂ
ಬಂಧ ಮಠದಾವರಣದೊಳ ಸಂತಸತೆ ಸವಿ ಚರ್ಯ || ೧೨ ||

ತುಂತುರಿರೆ ಬಾಲಕನು ಚರ ನಿರ
ತಾಂತ ಕಬ್ಬಿನಕಂಥಿ ಪೂಜ್ಯರ
ಅಂತಃಕರಣದೊಳಿರುತಲನುದಿನ ಪಾದ ಕರುಣೆಯಲಿ ||
ಸಂತಸಾಂಗಣದೊಳಗೆ ಬೆಳೆಯುತ
ಕಾಂತಿ ಮುಗ್ಧಾಕರ್ಷಕ ಸರಳ
ಶಾಂತ ಸಂಪದ ನಿತ್ಯ ನೋಟ ಸ್ಫೂರ್ತಿ ಕಂಪದಲಿ || ೧೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚರರಿವರು ಕಂದನೊಳ ಕಲೆ ಕಳೆ
ಅರಳುತಿರುವಿಕೆ ಕಂಡ ತವ್ಮೊಳ
ಭರಿಸುತಲದೇನೇನೊ ಮೆಲುಕಿಸುತಿರುತ ಮುಂದಿನದ ||
ಬೆರಗು ಬೆಳಗಿನ ಭಾಗ್ಯ ಪರತರ
ಚರಣ ಚಿತ್ರಭೆ ಚಾರು ಚಂದ್ರಿಕೆ
ಕಿರಣ ಕಾಣುತಲಿರುತಲಿರಲೇನಿತ್ತ ಮಾತೆಯಳು || ೧೪ ||

ಸುರಸದಾಲಿಸುತಿತ್ತ ಜನನಿಯ
ಹರುಷದಾಗರದೊಳಗೆ ತೇಲುವ
ಸರಳ ಚೈತ್ರದ ಸಮತೆ ಕಂದಗೆ ಮೊದಲ ಗುರುವಾಗಿ ||
ಅರಳಿಸುತ ಮುಖದೊಳಗೆ ಪರ
ತರದ ಶಿವನೇ ಬಸವ ಶಿವನೆಂ
ದರಿಸಲಾ – ಬಚವಾ ಶಿವನೆನುವಲೀತನನುವಾಗಿ || ೧೫ ||

ನಗುತ ರಸಮುಖದಿಂದಲುದಿಸಿಹು
ದಗಲು ಕಮಲೆಸಳಿನದೆ ಕಂಪನ
ದಿಗಿಲಗೊಳಿಸದ ಅಚ್ಚು ಮೆಚ್ಚಿನ ಮಧುರ ಮೋದಕತೆ ||
ಮುಗಿಲೊಳಡಗಿದ ಮಿಂಚಿದೆನ್ನದ
ಹಗಲಿರುಳ ಮಿತಿ ಹೊರತೆನಿಪ ನಗು
ನಗುಮುಖದುದಿಸಿದಂಥ ದಂತಗಳೆರಡದಾ ಸಮಯ || ೧೬ ||

ನೋಡಲಿವು ಪಂಚಾಂಗದೊಳ ಜತೆ
ಗೂಡಿಹುದ ಶಶಿ ಶುಕ್ರ ಯೋಗದೆ
ಜೋಡು ಫಳಕೆಂಬಂತೆ – ಶ್ರುತಿಯೊಳಗಂತು ಸಾರಿಹುದ ||
ನೋಡು ನೋಡಾ – ದ್ವಾಸುಪರ್ಣಾ
ಗೂಢ – ಶಿವ – ಜೀವರ – ಸಮರಸತೆ
ಮೂಡಣೋದಯ ಸುಂದರದ ಸೌಭಾಗ್ಯವೆಂಬಂತೆ || ೧೭ ||

ಸುಂದರದ ಮುಖದೊಳಗೆ ರಮ್ಯಾ
ನಂದಗೊಂಡಿರೆ ಜನನಿ ಜನಪದ
ಗಂಧ ಜೋಗುಳ ಪಾಡಲಾ ಚಳುವಳಿಯ ರೋದನದು ||
ನಂದ ಗುರು ಚರವಿರತ ಬಂದವ
ರಂದವರ ಕಾಣುತ್ತ ಹರುಷಾ
ನಂದ ಲಲ್ಲೆಯ ಮಾತು ಬಚವಾ ಶಿವನೆನುವಸನದು || ೧೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತೆತೊಟ್ಟಿಲ ಗುಬ್ಬಿ ಚಟ್ಟದೊ
ಳತ್ತ ಮಧ್ಯದಿ ದರ್ಪಣೆಡೆ ಬಿಂ
ಬತ್ತ ತನ್ನದೆ ಮೂಡಿರಲದನೆ ನೋಡುತಾಡುವಿಕೆ ॥
ಗತ್ತ ಗುರಿಗಳದೇನಿರಲಿ ನಿಜ
ದಿತ್ತ ಬಿಂಬಾದಾರವೆಂಬಂ
ತ್ತಿತ್ತ ಲಕ್ಷ್ಯದ ಹಾಡ ಗಮ್ಯವರರಿವರಾರಿದನು ॥ ೧೯ ॥

ಮಿಸುನಿ ಮಮತೆಯ ಹಾಸಿಗೆಯೆ ಹಸ
ಭಸಿತನೀತನು ನಲಿಯುತಿಹುದೀ
ಕುಸುಮ ಕಂಗಳದಂತೆ ತೊದಲಿನ ತೇರನೆಳೆಯುತಿದ ॥
ರಸಿತೆಗಾಣುತಲಿವನ ಸಮತೆಯ
ಸಸಿನದಂತಿರಲನ್ನ ಪ್ರಾಶನ
ಹಸಿತ ಸಂತಸದೊಳಗೆ ಮುಗಿಸಿದರಂದು ಶುಭದಿನದಿ ॥ ೨೦ ॥

ಸುಳಿಯುತಂಬೇಗಾಲ ಸುಂದರ
ಚಲನವಲನದ ಚಂದ ಚಂದ್ರಿಕೆ
ಚಲುವ ನಿಲವಿನದೊಲವದುಲಿಕೆ ಸಕಾಲ ಬೆಳೆ ನಲಿಕೆ ॥
ಒಲವದಂತೆನಿಸುತ್ತ ಭಕುತರೊ
ಲಲೆಯ ನಲ್ಮೆಯ ಭಾವ ಬೆಳೆಗದು
ಮಳೆಗೆರೆದದಂತೆನಲಿದೇನಿದು ತಿಳಿಯದಾಂತರಿಕ ॥ ೨೧ ॥

ಇನಿತನಿತು ಸಾಗುತ್ತಲಂದಿನ
ದಿನದೊಳಗೆ ತಪ್ಪೆಜ್ಜೆಯಾರಂ
ಬೆಣಿಕೆ ಪದಕಿರು ಗೆಜ್ಜೆಯಾಂಗಳ ಚಿತ್ತ ಸುಮ ಸಜ್ಜೆ॥
ಹಣಿಕೆ ಹಾಕುವ ರೀತಿವನ ನುಡಿ
ನೆನಕೆಯೆನುವಂತಾಗುತೆಳೆ ಕಳೆ
ಕುಣಿಕೆ ನೋಳ್ಪರ ನಯನವಂ – ಹಾಕುತ್ತಲಿರಲೇನು ॥ ೨೨ ॥

ತಾರೆನಗು ನೋಡಲ್ಲಿ ಮುಗ್ಧಾ
ಪಾರ ಮಧು ಮುಗುಳಿಲ್ಲಿ ಶುದ್ಧಾ
ಚಾರವೆಂಬಂತಿವಗೆ ಹಣೆಗೆ ವಿಭೂತಿ ವಿಧಿವಲ್ಲಿ॥
ಚಾರುತರ ರುದ್ರಾಕ್ಷಿ ಕಂಠಾ
ಹಾರ ಶೋಭಿತಲಿಹುದ ಕಾಣುತ
ಪಾರ ಮಾತೆಯ ಮನಸೊಳಗೆ ಮೆಲುಕಿಂತು ತಿಳಿರಿಲ್ಲಿ ॥ ೨೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾತೆಸ್ವಗತ :

ಹೀಗೆ ಶಿಶುಲೀಲಾಟವೇನಿರೆ
ಹಾಗೆ ತಾನಾಲಿಸಿದ ಶ್ರಾವಣ
ದಾಗಯೆಡೆಯೂರ್ ಸಿದ್ಧಲಿಂಗೇಶನ ಮಹಾನತೆಯ ||
ಯೋಗವದೆ ಶಿವಯೋಗಿ ವರ್ಯವಿ
ರಾಗದಂತಾಗುವಿಕೆಯನುವ ಸು
ರಾಗ ಮನದೊಳ ಮೂಡುತಿಹುದಾಶ್ಚರ್ಯವೆನಿಸುತಿದು || ೨೪ ||

ಇಂತು ಎನ್ನೊಳಗೇಕೆ ಭಾವಿಸು
ತಿಂತೆಣಿಕೆ ಚಿಗುರೇಕೆ ಸೇವನ
ಕಾಂತಿ ಕಳೆ ಕಮನೀಯ ಕಲ್ಪರಸಾಮೃತಾಭಾಸ ||
ಸಂತತೆನ್ನೊಳಲದೆ ತರಂಗೊಲ
ವಿಂತು ತೇಲುತಲಿರುವ ಹಿನ್ನೆಲೆ
ತಂತು ನಾನೇನರಿಯೆಲೆನ್ನುತಲಾಲಿಸುತಲೆಣಿಕೆ || ೨೫ ||

ಹೀಗೆ ಗಂಗಾಧರನ – ಚಿಕ್ಕವ
ನಾಗಿರುವದೀ ನೀಲಕಂಠನ
ಭಾಗ ಭಾವಿಯ ಜೀವನದ ಬಗೆಯಂತು ಪರಿನೋಟ ||
ಯೋಗವೀ ಸುತ ಸಿದ್ಧಲಿಂಗನ
ದಾಗುವಾ ವೈರಾಗ್ಯ – ಮೆಲುಕಗ
ಳಾಗುವಿಕೆಯಿದನೆಲ್ಲ ನೋಡುತನಾಡಿ ನೋಡಿದರೆ || ೨೬ ||

ಅಂದು ಮುಕ್ತಮಹಾತ್ಮರಿಗೆ ನಿಜ
ದಂದುವರಿಗಾ ಜನನಿಯೆನಿಸಿಹು
ದಂದತೆಯ ಮಹಯೋಗ ನನಗಹುದೆಂದು ಭಾವಿಸಲೆ ||
ಕಂದ ಕನಸದು ಕಂಗಳಾಲಯ
ಹೊಂದಿ ಮುಖದೊಳಗರಳುವಂತಿಹು
ದಿಂದು ಪಾವನೆಣಿಕೆಗಳೇನಿಹುದೆನುತಲಿರಚಿತ್ತ || ೨೭ ||

ಸಿದ್ಧಲಿಂಗನು ನೀನೆ ನೀ ಪರಿ
ಶುದ್ಧ ಪಾವನ ನೀನೆ ನೀನು ವಿ
ಶುದ್ಧ ವಿಭವ ವಿಚಾರಿ ನೀನೇ ನೀನು ನನ್ನಪ್ಪ ||
ಸಿದ್ಧ ಬಸವನ ಗುರು ನಿರಂಜನ
ಶುದ್ಧ ಸಂಗಮ ದೇವ ಜಂಗಮ
ಖುದ್ದು ಘನಗಣ ಮುಂದೆ ನೀನಹುದೆನುತಲಾನಂದ || ೨೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಾರ ಹರ್ಷದ ಹೊನಲ ವರ್ಷಾ
ಪಾರ ಶೀತಲದಿಂದ ಲತೆಸಾ
ಕಾರ ಮೋರ ವಿಹಾರ ಗರಿಗೆದರು ಸರಿ ವೀಳ್ಯೆಯದ ॥
ನೇರ ಬಳ್ಳಿಯು ನುಗ್ಗಿಯಾಶ್ರಯ
ಮೀರಿ ಬೆಳೆದಂತೀತಲನುದಿನ
ಚಾರು ಚಿತ್ರಭೆಯಂತೆ ಬೆಳೆಯುತ್ತಿರಲೆರಡು ವರ್ಷ ॥ ೨೯ ॥

ತುಂಬಿ ತುಳುಕುತ್ತಿರಲು ಮೊದಲಿಹು
ದಂಬೆಗಾಲೋಟಳಿಯುತದೆ ತಲೆ
ದಿಂಬಿನಂತಹ ಮೆತ್ತನೆಯ ಹದ ಪದವನಿಡುವಿಕೆಯ ॥
ತುಂಬಳಿದ ಫಲದಂತೆ ಗಲ್ಲದ
ಬಿಂಬಗಳೆ ಮಠ ತುಂಬ ತುಂಬದೆ
ಬಿಂಬಿಸುತಲಿರಲೇನಿದುವೆ ಉಲ್ಲಾಸವಾಕಾಶ ॥ ೩೦ ॥

ಎದ್ದು ಬೇಡುವನದೆ ವಿಭೂತಿ ವಿ
ಶುದ್ಧ ಧರಿಸಿದ ಬಳಿಕ ಪಿತನೆದು
ರೆದ್ದು ಬಚವಾಚಿವನೆ ಬಚವಾ ಮಂತ್ರ ಮಲ್ಲಿಗೆಯ ॥
ಮುದ್ದೆ ಮೆಲ್ಲುಡಿ ಮಾಲೆ ಹೆಣೆಯುತ
ಲಿದ್ದಲನುದಿನಲಿದನೆ ಕಾಣುತ
ಲಿದ್ದ ಬಳಗಕೆ ತಲುಪಿತಾ ಮಾಸೂರ ಪುರಕಂದು ॥ ೩೧ ॥

ಅಥಣಿ ಪುರಚರ ತೀರ್ಥಿ ತುಂಗ ಪ್ರ
ಮಥ ಮಹಾಂತ ನಿತಾಂತ ಘನ ಗಣ
ಪಥ ಪಥಿಕ ವೈರಾಗ್ಯ ವೈಭವದೊಳ ವಿರಾಜಿಸುವ ॥
ಋತ ಸದಾಶಯ ಗತಿ ಭವ್ಯದೊ
ಳತಿಶಯದಿ ನಡೆವಂಥ ಜಂಗಮ
ತತಿಯೊಳಾ ಸುರಿವಂತೆ ವರ್ಷಾಪರಿಯೊಳಾಗಮಿಸಿ ॥ ೩೨ ॥

ಪಾವನವಗೊಳಿಸುತ್ತಲಿರವ ಸ
ದಾವಕಾಲದಿ ಭಕುತ ಜನರಿಗೆ
ದೇವ ತಾನಾಗುತ್ತ ಹರಸುತಲಿರುವ ಶಿವಯೋಗಿ ॥
ಭಾವನೆಯ ತಕ್ಕಂತೆ ತತ್ವಲ
ನೀವ ಮಹಿಮ ಮಹಾ ವಿಭೂಷಿತ
ನಾ ವಿಚಾರಗಳತ್ತದೇ ಪಸರಿಸುತಲಿತ್ತ ತೊರೆ – ॥ ೩೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಿಟ್ಟ ಹಸುವಿನ ಪಯ ತರಂಗಗ
ಳಿಟ್ಟ ಘಟದೊಳಗಿದೆ ರಸಾಯನ
ಮಟ್ಟ ನವನೀತಾದಿ ಮಾರ್ಪಟ್ಟಂತೆ ಜನಮವಿದು ॥
ಗಟ್ಟಿಗೊಳ್ಳುತಲಿಹುದ ಸಕಲೆಡೆ
ಗುಟ್ಟ ಗಂಗಾಧಾರೆಯಂತಿಹ
ನೆಟ್ಟ ನಿರಘ ನಿರಂಜನರ ನುಡಿ ಕೋಡಿಯೊಳಗೀಸಿ ॥ ೩೪ ॥

ಗಟ್ಟಿಗೊಂಡವರೆಷ್ಟೊ ಚಿರತಮ
ಪಟ್ಟ ಪಡೆದವರೆಷ್ಟೊ ತತ್ಸಮ
ಬಟ್ಟೆಯೊಳಗಾಗುತ್ತ ಜೀವನ ಪಾವನತೆಯೆಡೆಗೆ ॥
ಕಟ್ಟ ಕಡೆತನಗದನೆ ಭಾವಿಸು
ತಿಟ್ಟ ಸಮಯೋಚಿತದೊಳಾದವ
ರುಟ್ಟಿಹುದ ವೇಷಕ್ಕೆ ಬೆಲೆ ತಂದವರು ಕಂಡೆಡೆಗೆ ॥ ೩೫ ॥

ನೋಡುತಾ ಭಾವಿಯದ ಮೆಟ್ಟಲ
ಗೂಡುವಂಥಹುದನ್ನೆ ತಿಳಿದಿಹು
ದಾಡುತದತೆರೆದಿರಿಸುವಂಥಹ ಪುಣ್ಯ ಪುರುಷಾತ್ಮ॥
ಬಾಡದಂಥಹ ಬಸವ ಸಂಸ್ಕೃತಿ
ನಾಡಿಯೊಳಗಾದಂಥ ಚರಪದ
ನೋಡುವಾಶೆಯ ಮೂಡುತಿವಳೊಳಗಾಗ ನಿಜವಾಗ ॥ ೩೬ ॥

ಎಲ್ಲಿ ಬಸವ ಪುರಾಣ ನಡೆಯುವ
ದಲ್ಲಿವರ ಸಹಜಾಗಮನ ಬಿಡ
ದಲ್ಲಿ ಚಿದ್ಘನವಾಣಿ ವಿವರ ನಿಜಾರ್ಥನಿರುಪಮಲೆ ॥
ನಿಲ್ಲದಲೆ ಪಲ್ಲವಿಸಿದಂಥ ಪ್ರ
ಫುಲ್ಲ ಪಸರಿಸಿಹುದನು ತಿಳಿಯುತ
ಮೆಲ್ಲ ಪರಮೇಶ್ವರಯನೊಳಗದೆ ಮೂಡುತದೆ ಭಾಗ ॥ ೩೭ ॥

ದರ್ಶನವ ಪಡೆವಾಶೆ ಚರಣೊಳ
ಗರಳುಗೊಳುರುಚಿ ಭಾಷೆ ಭಾವನೆ
ಭರಿತಗೊಳುತಿದೆ ಮನದೊಳಗೆ ಮಡಿ ಮೂಸೆ ಹಂದರದಿ ॥
ಸುರುಳಿಗೊಂಡಿಹನನೆಗಳೆಲ್ಲವು
ಸರಳ ವಿಕಸಿತ ಪರಿಯೊಳಂತಾ
ಗಿರುವರಿವ – ಅಥಣೀಶ ಬಂದಿಹುದರಿಯುತಿವರೆಡೆಗೆ ॥ ೩೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೂರು ಮಕ್ಕಳ ಜತೆಗೆ ಸಂತಸ *
ಹಾರದೊಳ ಸಾಗುತ್ತತಲುಪುತ
ಮೇರು ಪುರ ಹಾವೇರಿ ಹೊಸಮಠಕಂದು ಫುಲಕಿತದಿ ॥
ಧಾರೆ ದೀಪ್ತಿಯದಾಂಗಳದಿ ಮುದ
ಮೋರ ಪದವಿಡುತಿರಲವರೊಳಗ
ಸಾದರಾನಂದವದೆ ಮುಖದೊಳಗೆದ್ದು ತೋರುತದೆ ॥ ೩೯ ॥

ಸಲಿಸಿ ನಮನವ ದಿವ್ಯ ದೀಪ್ತಿಯ
ಚಲುವ ಚಿನುಮಯ ತೇಜಕದು ಬಿಡ
ದುಲಿವ ಮಾನಸದಾಶೆಯಂತೆಯೆ ಕುಳಿತುಕೊಳಲಿವರ ॥
ಒಲುಮೆ ಹೃದಯದ ಹೊನಲದೊಳ ಮೊಳೆ
ಮೊಳೆದ ಹರ್ಷದ ಹೂವ ಹರವುತ
ಲಲಿತದಿರಲಿವರೆಡೆಗೆ ಮೂವರೆಡೆ ನಯನಿಡಲಾಗ ॥ ೪೦ ॥

ಮಗುಸಿದ್ದಲಿಂಗಯ್ಯನ ತೊದಲು :

ಚಿವನೆ ಬಚವಾ ಬಚವ ಚಿವನೇ
ಸವಿಯ ತೊದಲಲೆಯೊಳಗೆ ನುಡಿದಿಹು
ದಿವನೆಡೆಗೆ ನೋಡುತ್ತಲಿವನೊಳಗಡಗಿಹುದ ನಾದ ॥
ರವಿ ಸದಾವೃತ ಭಾವ ಗಮ್ಮತ
ನಿವಹದಿಹ ಮುಖತೇಜ ಸಾತ್ವಿಕ
ಸವೆಯದಂಥಹುದೆನುತ ಭಾವಿಸುತಾಗ ಅಥಣೀಶ ॥ ೪೧ ॥

ಶ್ರೀ ಮುರಘೇಂದ್ರವಾಣಿ :

ಯೋಗ ದಂಪತಿಗಳಿವರೆಡೆಗೆ ಸ
ರಾಗ ಕರುಣಾಮೃತದ ಕಿರಣೆಡು
ತಾಗ ಸಂಗತಲಿವರ ಬರುವಿಕೆಯರಿತು ಬಳಿಕಾಗ ॥
ಯೋಗಿವರ್ಯನುಮೋದ ಮಕ್ಕಳ
ನಾಗಲೊಬ್ಬೊಬ್ಬರನು ನೋಡುತ
ಸಾಗುತೀ ಕಿರಿ ಸಿದ್ದಲಿಂಗಯ್ಯನನ ಕಡೆ ನೋಡುತ್ತ ॥ ೪೨ ॥

---

* ತಾ. ೧೪–೯–೧೯೨೦ ಚಿತ್ರದುರ್ಗದ ಪೂಜ್ಯರ ದಿನಚರಿಯಲ್ಲಿ ಬರೆದದ್ದು ಕಂಡದ್ದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನುಡಿಯ ತೊಡಗಿದ ಜನನಿ ಜನಕರ
ಮುಡಿಯೊಳಡಗಿದ ಭಕ್ತಿ ಭಾವಿಸು
ತೆಡೆಯದಂಥಹ ತವಕದೊಳ ತಲ್ಲೀನರಾದಂಥ ||
ದೃಢಸುಶೋಭಿತ ಸತತ ಸತ್ಪಥ
ಸೊಡರದೊಳಗಿರುವಂಥರಿವರೆದು
ರೊಡಲದೊಳ ಮೂಡಿಹುದದೇ ಮನಗಂಡ ಶಿಶುಭಾತಿ || ೪೩ ||

ಕಂಡು ಕಂಗಳ ಕಾಂತಿ ಕಮಲೊಳ
ಕಂಡುಕೊಂಡಿಹ ತೇಜ ತತ್ಪಥ
ತೊಂಡು ತೋರದ ತೀರ್ಥಿಯಾಗುವ ಬಲ್ಮೆ ತ್ರುಟಿರಹಿತ ||
ತುಂಡು ತುಂಡೆನದಂಥ ಪಥ ಮನ
ಗಂಡು ಪರಿಪಾಲಿಸುವದಾ ಹೂ
ಕುಂಡದಡಗಿಹುದರಿತರಿಯುತಿಂದೆಂದ ಶಿವಯೋಗಿ || ೪೪ ||

ಅಥಣೀಶನ ವಾಣೀ :

ಅಂದಣವನೇರುವನು ಗಣ ಹಿತ *
ಬಂಧು ತಾನೆನಿಸುವನು ವಿದ್ಯಾ
ನಂದದೊಳಗಾಗುತ್ತಲದರೊಳ ತೊಡಗಿಸುತ ಹಲರ ||
ಗಂಧಗರಿಮಾಗಿರಿಸಿ ಸಹಜಾ
ನಂದದೊಳ ತಣಿಸುತಿರಲಡೆ ತಡೆ
ಬಂದಿರಲು ಸಹಿಸುತ್ತ ಪಾತ್ರ ಯಶಸ್ವಿಗೊಳಿಸುವನು || ೪೫ ||

ಉತ್ತರೋತ್ತರಸಾಗಿ ಸಾಗುತ
ಹತ್ತರೊಳ ಹನ್ನೊಂದೆನಿಸುತನು
ಭಿತ್ತಿ ಬಲಿಸುತ ಗುಡಿಗೆ ಗೋಪುರದಂತೆ ಶೋಭಿಸುವ ||
ಚಿತ್ತ ಜನಹಿತ ದಿಶೆಗೆಯಿರಿಸುತ
ಲತ್ತ ಲೇಳ್ಗೆಯ ಬಯಸುತಾ ಮತಿ
ಭಿತ್ತಿಯೊಳ ಬಿತ್ತುತ್ತ ಲಿಂಗಾಯತ ವಿಚಾರಗಳ || ೪೬ ||

---

* ಬೀಳಗಿ ತಾಲೂಕ ಸೊನ್ನ ವಾಢೆಯಲ್ಲಿ ೧೦–೧–೧೯೭೬ ರಂದು ಉತ್ಸವ ಮುಗಿದ ಮರುದಿವಸ ಸನ್ನಿಧಿಯವರೇ ಈ ವಿಷಯ ಸಮಕ್ಷಮ ಹೇಳಿದ್ದು. ಈ ವೇಳೆ ಬಾರ್ಶಿಯ ಪರಂಡಕರ ಮಠದ ಶ್ರೀಗಳೂ ಇದ್ದರು. ಕಿಟ್ಟದ ಹಳ್ಳಿಯ ಎಚ್. ಎಂ. ಗಂಗಾಧರಸ್ವಾಮಿ ಬಿ. ಹಿರೇಮಠ ಹಾಗು ಬಾರ್ಶಿಯ ಮಾಣಿಕ ಸಹ ಇದ್ದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜತೆಗೆ ಆಯಾ ಭಾಗದೆಚ್ಚರ
ಸತತಿರಿಸುತ ಮಹತ್ವ ತಾತ್ವಿಕ
ಖುತ ಮಹಾಂತ ನಿತಾಂತ ನಿರುಪಮ ಸಿರಿಯೊಳರಳುತ್ತ॥
ಯತಿ ವಿಹಾರದೊಳುಳಿದು ತಾಣಕೆ
ಅತಿಶಯದಿ ಗೌರವತೆ ತರುತಿಹು
ದತಿಶಯೋಕ್ತಿಗಳೆನದುದೆನ್ನುತ ಹರಸುತಾ ದಿನದಿ ॥ ೪೭ ॥

ಇನಿತು ಘನತೆಯ ಮಗುವಿನಾ ಮಹ
ಜನನಿಯೆನಿಸುವ ಭಾಗ್ಯ ಭೋಗ್ಯಗ
ಳನಿತು ನಿನಗಿಹುದಮ್ಮ ನೋಡಿರೆ ಪಿತನ ಹೆಸರು ಸಹ ॥
ಜನಜನಿತಗೊಳಿಸುವನು ಅಲ್ಲದೆ
ಜನಿಸಿದಂಥಹ ಪುರದ ನೆನಹದು
ಮಣಿಯ ಪೋಣಿಸಿದಂತೆ ಸಾಗುವನೆನುತ ಹರಸುತಲಿ ॥ ೪೮ ॥

ಮಕ್ಕಳಿಗೆ ಖಾರೀಕು ಬಳಗಕೆ
ಪಕ್ವ ಕರದಿಡುತದನೆ ಮುಂದಿನ
ದಿಕ್ಕು ದಿಕ್ಸೂಚಿಯನು ಮುಂದಿರಿಸಲವರಾಗಂದು ॥
ಕಕ್ಕುಲಾಂತಃಕರಣ ಕಿರಣಗ
ಳುಕ್ಕುವಂತಿಡೆ – ಹಾಲ ಹದ್ಯಸ
ದೊಕ್ಕಣೆಯ ಮೆಲುಕಿಸುತರಿರೆ ಶಿವಯೋಗಿಯಿಂತೆಂದ ॥ ೪೯ ॥

ಹೋಗಿ ಬನ್ನಿರಿಯನಲುಭಾವನು
ವಾಗಿ ನಮನವ ಸಲ್ಲಿಸುತ ಶಿವ
ಯೋಗಿಗಳ ಪದ ನೆನಯುತಲಿ ಮರಳುತ್ತ ಪುರದೆಡೆಗೆ ॥
ಆಗ ಜಂಗಮ ನುಡಿದ ಮಿಡಿಮಣಿ
ಯೋಗಗೊಳಿಸುತ ಮಾತೆ ಪಿತ ಗಣ
ಸಾಗಿದರು ಭಾವಿಯದ ಜೀವನ ಕಾಣ್ವದಾಶೆಯಲಿ ॥ ೫೦ ॥

ಮೂರುವರುಷದ ಕಂದ ಬಗೆ ವಿ
ಸ್ತಾರವಾನುಡಿ ಭಕುತರೆದುರಿಗೆ
ಸಾರ ವಿವರಿಸುತಲಿಹುದನು ಕೇಳುತವರಿವರಾಗ ॥
ನೇರ ಮಾತೆಯ ಮುಖದಿ ಶಬ್ದಾ
ಕಾರ ಗೊಂಡಿಹುದನ್ನೆ ಕೇಳುತ
ಹಾರ ಹರ್ಷದೊಳತ್ತಲಿತ್ತದು ಸುದ್ದಿ ಸಹಿ ಮುದ್ದಿ ॥ ೫೧ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶುದ್ಧಸಕಲೆಡೆ ಜಂಗಮನ ದಿಟ
ಬದ್ಧ ವಾಣಿಯ ಸುಪ್ರಭಾಂಕಣ
ಸಿದ್ಧಗೊಂಡಿಹುದದನೆ ಹಿಂದಿನ ಘಟನೆಗಳದಿಂದ ॥ *
ಮುದ್ದೆ ಮನನಿಸುತಿದ್ದುದಾ ನಡೆ
ದದ್ದೆ ಕಾಣುತಲೀಗಲೀತನೊ
ಳಿದ್ದುದೇ ಪುಟಿದೆದ್ದು ತೋರುವದಿಶೆಯ ನೋಡುತಿರೆ ॥ ೫೨ ॥

ಚರಿತನಾಯಕಲಿತ್ತಲೆಂದಿನ
ಇರುವಿಕೆಯ ಚಲ್ಲಾಟದೊಳಗನು
ಭರಿತ ಬೆಳೆಯುತಲಿದ್ದಲನುದಿನ ಲತೆಯ ಬೆಳೆದಂತೆ ॥
ನಿರತ ಬೇರಿನ ಬಲದಿ ಜಲ ಹನಿ
ಸರಣಿ ಯಾಶ್ರಯದೊಳಗೆ ಸಂಪಿಗೆ
ಸಿರಿಯು ತೆರೆದಿಡುವಂತೆಯಾ ಕೌಮುದಿಯ ಕ್ಷಮತೆಯಲಿ ॥ ೫೩ ॥

ಚಿನ್ನ ಬಣ್ಣದ ಬೆಳಕು ಚಂದಿರ
ತನ್ನ ತಾನೇ ಹೊಳೆಯುತಿಹ ಸಂ
ಪನ್ನತೆಯ ವೈರಾಗ್ಯ ವೈಭವ ಮೊಳಕೆಗಳ ಕಂಡು ॥
ಚನ್ನ ವಿಬುಧರು ಯೋಚಿಸುತಲಿರೆ
ಮುನ್ನ ಜಂಗಮ ನುಡಿದ ಚನ್ನುಡಿ
ಯನ್ನೇ ವಿವರಿಸಲಿದನು ಕೇಳುತ್ತವರು ಬಿಡದಿತ್ತ ॥ ೫೪ ॥

ಚರಿತನಾಯಕ ಸಿದ್ಧಲಿಂಗನು
ನಿರತದಾಲಿಸುತಿದ್ದ ಮಠದೊಳು
ಗರಳುತಿಹುದನೆ ದರ್ಶನಥಣಿಯಲೀಲೆ ನುಡಿಮಾಲೆ ॥
ಹಿರಿಮೆ ಮಠಕದು ನೇಮಿಸಿಹುದಾ
ಮರಿಯ ಕಾಣುವ ರೀತಿ ಈತನ
ಹಿರಿಮೆ ಕಣ್ಮಣಿ ಭಾವ ಬಲ್ಮೆಯೊಳಿರುವ ಭಕುತರರು ॥ ೫೫ ॥

---

* ಚಿತ್ರದುರ್ಗ ಶ್ರೀ ಜಯದೇವ ಜಗದ್ಗುರುಗಳಾಗುವ ಬಗ್ಗೆ ಹಾಗೂ ಶ್ರೀಶೈಲದ ಶ್ರೀ ಜ. ವಾಗೀಶ ಪಂಡಿತಾರಾಧ್ಯರ ಪೀಠಾರೋಹಣದ ಬಗೆ ಶಿವಯೋಗಿಗಳು ನುಡಿದದ್ದು ಪ್ರಸಿದ್ಧ ಇದನ್ನೆ ನೆನಪಿಸುತಲಿದ್ದರು ಪುರ ಜನರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಪಿಗೆಯ ಸೌರಭದು ಪರಿಸರ
ಕಂಪುಗೊಳಿಸುವ ರೀತಿ ಸಕಲೆಡೆ
ಗಿಂಪುದಿಂಬಾಗುತ್ತಲಿದೆ ಅಥಣೀಶನಾವಾಣಿ ॥
ಹಂಪಿಯೊಳ – ಶಿಲೆಯೊಳಗೆ ಮೂಡಿಹು
ದಿಂಪು ಸರಿಗಮನಾದ ಗೌಪ್ಯದೊ
ಪೆಂಪು ಪಲ್ಲವಿಸುವಿಕೆಯದನೆ ಕಾಣ್ವದಾಶೆಯೊಳು ॥ ೫೬ ॥

ನೆರೆ ಹೊರೆಯ ಮಠದೊಳಗೆ ವಟುಗಳ
ಕೊರತೆ ಭರಿಸುವರವರ ವರ ನುಡಿ
ಬೆರಗು ಭರತಿಯಗೊಂಡಿಹುದನಿದನಾರು ಒಪ್ಪುದರು ॥
ಕರದ ಕೂರಿಗೆ ಕೊಳವೆ ಬೀಜಗ
ಳುರುಳಿ ಭೂದೊಳಗಡುಗುವಂತಿಹು
ದರಿಯಬೇಕಿದನಾಗ ಆಯಾ ಮಠದ ಭಕುತರೊಳು ॥ ೫೭ ॥

ಅಂತು ಬೆಳಕು ೫ಕ್ಕಂ ಪದ ೫೭ ಕ್ಕಂ ಒಟ್ಟುಪದ ೨೨೧ ಕ್ಕಂ ಶಿವಂ
೧೯-೦೨-೨೦೧೫ ಶನಿವಾರ ಉತ್ತರಾಭಾದ್ರಪದ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು - ೬

ಸಂಸ್ಕಾರ

ಸೂಚನೆ :

ವಚನ ಕಲಿಯುವ ಜತೆಗೆ ಅಕ್ಷರ
ರುಚಿರದೆಡೆ ಮನಭರಿಸಿ ಸಾಗಿದ
ಶುಚಿರ ಸಂಪದ ಸಿದ್ಧಲಿಂಗಯನಾಗ ಪದಯೋಗ ||

ವಾಚನ :

ಎಂದಿನಂತಿರೆ ಜನನಿ ಸುತರಾ
ನಂದ ಮುಖಗಾಣುತ್ತಲಿರುತಿರ
ಲಂದು ಸಿದ್ಧನ ಭಾವಿ ಜೀವನ ಮೆಲುಕು ಗೂಡುತ್ತ ||
ಹೊಂದಿಹುದ ಪೌರ್ಣಮೆಯ ಪುಷ್ಪಾ
ನಂದ ಬೆಳದಿಂಗಳದ ಬೆಳಕೊಳ
ಗಂದು ತುತ್ತಿರಿಸುತ್ತಲಿರುವಿಕೆ ಹಿರಿಸುತರ ಜೊತೆಗೆ || ೧ ||

ಆದರೇನಿವಳೊಳಗೆ ಶ್ರಾವಣೊ
ಳಾದ ಪ್ರವಚನ ಮೆಲುಕುಗೂಡುತ
ಲಾದರದಿ ಸಾಗಿರಲು ಬಸವಪುರಾಣ ಕಥನಂದು ||
ಸಾಧು ಮುಖಿಯವರಿಂದ ನಡೆದ ಹ
ಸಾದ ನುಡಿಯೊಳ ಬಸವ ಲೀಲೆಗ
ಳಾದರದಿ ಕೇಳುತ್ತವನದೆ ವಿಚಾರ ಪರಹಿತದ || ೨ ||

ಸಕಲ ಜೀವರ ಲೇಸ ಬಯಸುವ
ನಿಖಿಲ ನಿರುಪಮ ನೀತಿ ನೀರಜ
ಮುಕುರದೊಳ ಪ್ರತಿಬಿಂಬಿಸುವಪರಿ ಮಾನಸದೊಳದನೆ ||
ಬಕುಲರಳುವಂತಿರಿಸುತರಳಿಸು
ತಖಿಲ ಶರಣರ ಮನದಿ ಮೂಡಿಸು
ತ ಕಳೆ ಭರಿಸಿಹುದಾದಿ ಚಿಂತನದೊಳ ಹಿರೇಮಠದೀ || ೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪತಿಯೆದುರು ಚರ್ಚಿಸುತಲದರೊಳ
ಗತಿಶಯದ ಸಾಮಾಜದ ಬಹು
ಹಿತ ವಿಚಾರಾಚಾರಗಲಿಸುವ ಸಪ್ತ ಸೂತ್ರಗಳ ॥
ಸತತ ಮಥನಿಸುತಿರುತಲಿದನೇ
ಸುತರ ಮುಖದಿಂದನಿಸುವಾ ಪರಿ
ಪತಿತ ಪಾವನ ಸಿದ್ಧಲಿಂಗಯ್ಯನನ ಬಿಡದಾಗಿ ॥ ೪ ॥

ನುಡಿಸುವಿಕೆ – ಕಳಬೇಡ ಮಿಡಿಬಿಡ
ದುಡಿಯುತಿಹ – ಕೊಲಬೇಡ ಹುಸಿಯನು
ನುಡಿಯುವದೆ ಬೇಡೆನುವ – ಅನ್ಯರಿಗರೆಡೆಗೆ ಅಸಹ್ಯ ॥
ಪಡದೆಯಿರಬೇಕೆನುವ – ತನ್ನದೇ
ಬೆಡಗು ಬಣ್ಣಿಸಬೇಡ ಇದಿರದು
ಹುಡಿಯ ಹಾರಿಸಬೇಡೆನುವದಲ್ಲದೆಯೆ ಮತ್ತಿಸಿತು ॥ ೫ ॥

ತಂದೆ ತಾಯಿಯು ನೀನೆ ನೀನದು
ಬಂಧು ಬಳಗದು ನೀನೆ ನೀನದು
ಇಂದು ಮುಂದೆಯು ನೀನಲದೆ ಮತ್ತಾರು ಹೇಳಯ್ಯ ॥
ಸಿಂಧು ಕೂಡಲಸಂಗಮನ ಬಿಡ
ದಂದು ಪಾಲಿಸಲೆನುವ ಭಾವನೆ
ಬಿಂದು ತೆರೆದಿಡುವಂತೆ ನಿತ್ಯದಿ ನುಡಿವ ಸಿದ್ಧಸುತ ॥ ೬ ॥

ತಪ್ಪದಿಹ ಪರಿಪಾಠ ನೋಡಿರ
ಲಪ್ಪುವಂತಿದ್ದಿತಿದು ಮುಂದಿನ
ಅಪ್ಪಟದ ಜೀವನಕೆ ಸೂತ್ರಿದೆ ಸೊಬಗ ತಳಪಾಯ ॥
ಮುಪ್ಪುರಿಯಬಲದಂತೆ ನಡೆಯೊಳ
ಗಪ್ಪಿ ಕೊಂಡಿರಲಿದುವೆ ಜನಮನ
ಕೊಪ್ಪುತೊಪ್ಪುತ ಶೋಭೆಗೊಳುತಿರಲೇನು – ರುದ್ರಮ್ಮ ॥ ೭ ॥

ಮುಂದೆ ಗರ್ಭಿಣಿಯಾಗಿ ಸಕ್ರಮ
ದಂದು ಜನುಮವಕೊಡಲವರಿಗಾ
ನಂದದಿಂದಲಿ ಬಸವರಾಜಯ್ಯಂದಪರಿ ಸರಣಿ ॥
ಹೊಂದಿ ಮೃತ್ಯುಂಜಯ್ಯ ನಂತರ
ನಂದನಿಗೆ ಶಿವಮೂರ್ತಿ ಪೆಸರಾ
ನಂದದಿಟ್ಟರೆ ಸುತೆಯರಿಗೆ ಬಸವಣ್ಣೆಮಳು ಮತ್ತೆ ॥ ೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಂತರ ಮಹಾದೇವಮ್ಮಳಿನೆ –ಸರಿ
ಸಂತಸ ಮಹಾನಂದಮಳಿನುವ
ಕಾಂತಿಸುಮ ಸಂತಾನ ಭಾಗ್ಯದೊಳಿಂತು ಸಾಗಿರಲು
ಆಂತರಿಕ ಸಂಸ್ಕೃತಿಯನೇ ಬಿಡ
ದಂತುರೆಳೆ ಬೆಳಗುತ್ತ ಸಾಂಪ್ರತ
ಶಾಂತಮತಿಯಂತಿರಲಿ ಬನ್ನಿರಿಯಿದ್ದ ಸಿದ್ಧನೆಡೆ ॥ ೯ ॥

ನಂದದಿಂ ಮಾತೆಯಳು ನಾಯಕ
ಗಂದು ಗರಿ ವಚನಾನ್ನಮಣಿ ಮುಖ
ಮಂದಿರಲಿ ಮುದ್ರಿಸುತಳಿಹ ತುತ್ತಿಡುವಂತೆ ಬಿಡದಂತೆ ॥
ಚಂದ ಚಂದನ ಮೂರ್ತಿ ಮಹದಾ
ನಂದಳಿವಳಿಗೆ ನೋಳ್ಪಗೆಂತಿಹು
ದೆಂದು ಹೇಳೆನು – ಶಾಂತದೀತನ ಮಾತೆ ಮೌಕ್ತಿಕದು ॥ ೧೦ ॥

ಐದು ವರ್ಷಗಳಾದರೇನು ನಿ
ನಾದ – ಚಿಣಿಫಣಿ–ಓಟೆ–ಸರಿಗೆರೆ
ಹಾದಿ ಗೋಲೀಗುಂಡು ಗುರಿ – ಗಿಡಮಂಗದಾಟದೆಡೆ ॥
ನಾದ ಗೆಳೆಯರ ಕೂಡು ತಾಡು
ತ್ತಾದರದಿ ಕಾಣುತ್ತ ಪಿತಪದ
ಮೋದಿಸುತ ರುದ್ರಾಕ್ಷಿ ಭಾತಿವಿಭೂತಿ ಸುಪ್ರೀತಿ ॥ ೧೧ ॥

ನೋಡಲಿವ – ಬಂಗಾರ ತೇಜೊಳ
ಗಾಡುತಿರೆ ಕರುನಾಡ ಕಳೆ ಬೆಳೆ
ಗೂಡಿನೊಳಗದೆ ಬಸವಗನ್ನಡ ಭಾವನಾತ್ಮಿಕತೆ ॥
ನಾಡಿಗರೊಳಗಿರಲಿದುವೆಂಬಂ
ತಾಡುವಿಕೆ ಗಾಣುತ್ತ ಭಕುತರು
ಮೂಡಣೋದಯ ಬೆಳಕಿನೊಳಗಾಗಿಹುದೆ ಸತ್ಪುಣ್ಯ ॥ ೧೨ ॥

ಹರುಷ ಹೊನಲಾಬ್ಧಿಯದೆ ಹೊನಲೆನು
ತರಳು ಮಂದಸ್ಮಿತದಿ ಸೂಸುತ
ಲಿರುತಿಹುದ ಹಸ ಹಾಲು ಗಲ್ಲದೊಳಗದೆ ಸಾಹರ್ಷಿ ॥
ಸರಿ ಸರೋಜಿಸಳ ನಯನವೆಯದೊ
ಳಿರುಳು ಪರಿಹರಿಸುತ್ತಿಹುದದೆಂ
ಬರಿಮೆ ಗೋಚರಿಪಂತೆ ಸೂಸುತ ಹೂವನುಡಿ ವರ್ಷ ॥ ೧೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಮ್ಮೆಯೀತನುಕಾವಿ ಬಣ್ಣದ
ಕಮ್ಮನೆಯ ವಸ್ತ್ರವನು ತಂತಾ
ನೊಮ್ಮನದಿ ಸುತಗೊಂಡು ನಿಂತಿಹುದನ್ನೇ ಮಹತಾಯಿ ॥
ಹಮ್ಮಿರದ ಹರ್ಷಾಂಗದೊಳಗದೆ
ಬಿಮ್ಮಿರದ ಸಮತೋಲಭಾವನೆ
ಉಮ್ಮಹದೊಳಾಂಗಳದೊಳ ಸುತನಿರವನೆ ಕಾಣುತ್ತ ॥ ೧೪ ॥

ಮಾತೆಯೊಳಗಾ ದಿನದಿ ವಿರತನು
ಮಾತಿದುವೆ ತೆರೆದಿಟ್ಟದಂತಿಹು
ದಾತುಮದ ಮುರುಘೇಂದ್ರ ಶಿವಯೋಗಿಗಳ ನೆನೆಯುತ್ತ ।
ಮಾತದುವೆ ಪ್ರತ್ಯಕ್ಷ ವೀ ಬಿಡ
ದೀತನೊಳ ನಡೆದುದು ಭವಿಷ್ಯದ
ಬೇತವೀ ಮಳೆಬರುವ ಸೂಚನೆ ಮಿಂಚು ಈಶಾನ್ಯ ॥ ೧೫ ॥

ದಿಶೆಯೊಳಗೆ ಕಂಡಂತೆನಿಸುತಿದೆ
ಹಸನದಾಶೆಯ ಭಾಷೆ ಭಾಸುರ
ದಸಲು ಕಿರಣ ಸದಾವೃತದ ಸಂಪೂರ್ಣ ತೆರೆದಿಟ್ಟ ॥
ಕುಶಲದೊಳಗಾದಂತೆ ಸುತವರ
ನುಸಿರದೊಳಗದೆ ತುಂಬಿ ತುಳುಕುತ
ಫಸಲು ಪರಿಪಕ್ವಾಗು ಪೂರ್ವದಿ ಚಿಬ್ಬು ಕಂಡಂತೆ ॥ ೧೬ ॥

ಬೆಳಗು ವೇಳೆಯ ಬ್ರಾಹ್ಮಿಸೂಚನ
ತಿಳಿಮೆಯನೆ ಚಿಂವ್‌ಗುಡುವ ಗುಬ್ಬಿಯ
ಸುಳುಹು ಶಬ್ದದು ಕುಕ್ಕುಟದ ಸಹಿ – ಬಿಂಬ ಮೂಡಣೆಡೆ ॥
ಹೊಳಹು ಹೊಂಬೆಳಗಂತೆ ನನೆಗಳ
ರಳುತಿರುವ ಪರಿಪಾಠ ದಂತಿಹು
ದುಲುಹು ಸಮತೆನುವಾತ್ಮ ಸಾಕ್ಷಿಯಿದೆನುತ – ರುದ್ರಮ್ಮ ॥ ೧೭ ॥

ಗರಭನಿಂತಿಹುದಂದಿನಾ ದಿನ
ದಿರುವ ಬಯಕೆಯ ಬೆಡಗು ವಾಂತಿಯ
ಸರಣಿ ಸಂಭ್ರಮದಾಂತರಿಕಗಾಣುತ್ತ ಬಳಗದೊಳ ॥
ಹರುಷ ಹೊನಲಾದಂತೆ ಸರಸತಿ
ಹರಿವ ಗೌಪ್ಯತೆಯೊಡಲದುದಿಸಿಹು
ದರಳು – ತೇಜದ ಮೊಳಕೆಯಂತಿಹುದೆನುತ – ಮಹತೆಯನು ॥ ೧೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಮ ಕಬ್ಬಿನ ಕಂಥಿ ಚರವರ
ಚರಣದೊಳ ಮುರಘೇಂದ್ರ ವಿರತರ
ಸರಣಿ ಈತನ ಬಗೆ ಭವಿಷ್ಯದೊಳಾಗುವಿಕೆಯ ನುಡಿ ||
ಕಿರಣದಂತರಳಿಸಿಹುದನೆ ತೆರೆ
ದಿರಿಸಲೀತನದಿರವ ಲಕ್ಷಿಸು
ತಿರುವಿಕೆಯದಾಗಿರುವ ಬಗೆ ತಿಳಿಸುತ್ತ ವಿಂಗಡಿಸಿ || ೧೯ ||

ಈ ಮೊದಲು ಶಿವಯೋಗಮಂದಿರ
ದಾ ಮಹಾನತೆ ಹಾನಗಲ್ಲದ
ಸೋಮಸಮ ಚಿರತಮದ ಶೀತಲ ಶಾಂತ ಹೃದಯಾಂತ ||
ಶ್ರೀ ಮಹಾನತೆ ಗುರಿಯೊಳಗೆ ವಟು
ನೇಮ ಪೀಠಿಕೆಯನೆ ತಿಳಿದಿಹು
ದೀ ಮಹಾಮಾತೆಯಳು ಸುತನೊಳ ನಿಯಮಗಳ ಬಿಡದೆ || ೨೦ ||

ಮುದ್ದೆಯೀತನ ಮನಸಿನೊಳದನೆ
ಹೊದ್ದಿಸುತ ನೀರಿನೊಳ ನೈದಿಲೆ
ಯೆದ್ದು ಶೋಭಿಸುವಂತೆ ನೊಸಲ ವಿಭೂತಿ ಮುಂತಾದ ||
ಶುದ್ಧ ತಮದಾಚಾರಗಲಿಸುತ
ಳಿದ್ದು ಕಬ್ಬಿನಕಂಥಿ ಚರವರ
ಶುದ್ಧ ಸದ್ಭಾವನೆಯದಾಸರದೊಳಗೆ ತಪ್ಪದಿಹ || ೨೧ ||

ದಿನದುದಯು ರವಿಯಂತೆ – ಪೌರ್ಣಿಮೆ
ದೆಣಿಕೆಯೊಳ ಪರಿಪೂರ್ಣಕಲೆಯೊಳ
ಕುಣಿಕೆ ಕಿರಣಗಳಂತೆ ಬೆಳಗಿನ ವೇಳೆ ನನೆತಾನೆ ||
ಬನದೊಳಗೆ ಸಲೆ ಮೌನದರಳಿರ
ಲೆಣಿಕೆ ಹಾಕುವರವರ ತನ್ನೆಡೆ
ಗನಿತು ಮನಸೆಳೆವಂತೆ ತಪ್ಪದ ರೀತಿಯಿವಳದದು || ೨೨ ||

ಎದ್ದನಂತರ ಮಲಗು ಪರ್ಯಂ
ತುದ್ದಗಲದೆಡೆಬಿಡದ ಚರಣದೊ
ಳಿದ್ದ ಪದ್ಧತಿಗಲಿಸುವಿಕೆ ಗಡಿಯಾರ ಗತಿಯಂತೆ ||
ಹದ್ದು ಮೀರಿದ ಹೆಜ್ಜೆ ಹದುಳೊಳ
ಗಿದ್ದು ದೀತನ ದೀಪ್ತಿ ನಡೆನುಡಿ
ಯೆದ್ದ ಕಮರದ ರೀತಿ ಮೆದುಳೊಳಗಿರಿಸುತನುವಂತೆ || ೨೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತುಂಬಿಸುತ ಮಾನಸೊಳಗತಿಥಿಯ
ಹಂಬಲದಿ ಗೌರವಿಸುವಾ ನುಡಿ
ಬಿಂಬವರಳಿಸಿ ಕರೆಯುತುಪಚರಿಸುವ ವಿಚಾರಗಳ ||
ಹಂಬಲದಿ ಹೂಯೆಡೆಗೆ ಬಾಲೆಯ
ತುಂಬೊಲವದಿರವಂತೆ ರೀತಿಯೋ
ಳಿಂಬುಗೊಳಿಸುತ್ತಾಗವಟುಸದ್ಧರ್ಮದಿರುವಿಕೆಯ || ೨೪ ||

ತಟ್ಟೆಯೊಳಗೆಡೆ ಬಡಿಸಿದಂಥಹು
ದೊಟ್ಟು ಏನೊಂದಗಳು ಬಿಡದಂ
ದಿಟ್ಟಹುದ ಕೆಡಿಸದಲೆ ಗ್ರಹಿಸುವ ಪಾಠ ಪೀಠಿಕೆಯ ||
ಗಟ್ಟಿಗೊಳಿಸುತಲನ್ನದಗುಳಿನ
ಗುಟ್ಟ ದೊಳಗಡಗಿಹುದ ಬಲ್ಮೆಯ
ಮಟ್ಟಕದು ಬೆಲೆಗೊಡುವ ಪದ್ಧತಿ ಪಾಲನದ ಸಮಯ || ೨೫ ||

ಮೌನದೊಳಗುಣ್ಣದಯೆ ಅರ್ಪಿಸು (ಬ.ವ.೭೮೬)
ತಾನೆ ಬಿಡದನು ತುತ್ತಿಗೊಮ್ಮೆ ಸ
ದಾನು ಭಾವಿತನಾಗಿ ನೆನೆಯುತ ಶಿವನ ಸವಿಯೊಳಗೆ ||
ಜಾಣ ನೀಗ್ರಹಿಸುತ್ತಲಿರುತಿರ
ಲೇನೆನಲಿ ಮುದಸುಪ್ರಸಾದತೆ
ಭಾನು ಕಿರಣದು ಸರಸದಿಂ ಪ್ರತಿಬಿಂಬಿಸಿದ ರೀತಿ || ೨೬ ||

ಇಂತೆನುತಲನುದಿನದಿ ಪದ್ಧತಿ
ಪಂಥ ಪಲ್ಲ ಪ್ರಕಾಶಗೊಳುತಿಹು
ದಿಂತು ನೋಡಿರಲಿವಗೆ ನಡೆದಿರಲೈದು ವರುಷವದು ||
ಶಾಂತ ಪಿತವರನರಿತು ಶುಭದಿನ
ಹಂತ ನಿಶ್ಚಯಿಸುತ್ತಲೀತಗೆ
ಸಂತಸೋತ್ತರ ಅಕ್ಷರ ಸ್ವೀಕರಣ ಯೋಚಿಸುತ || ೨೭ ||

ಇರುವ ಪಟ್ಟಾಧ್ಯಕ್ಷರ ಸುಮುಖ
ದಿರಿಸುತ ಸಮಾರಂಭವಿದು ನಯ
ನರಳು ಭಾವನೆಯೆದುರು ಚರವರ ಸಿದ್ಧ ಕರದಿಂದ ||
ಹರುಷದಿಂದೊಂಕಾರ ಬರೆಸುತ
ಲರಿಸುತಿದರರದ ಮೇಲ್ಮೈ ಮಾಧುರಿ
ಮೆರಗ ಮುದ್ದೆಯ ಮುಖದಿರಿಸುತಲಿ ಸಕ್ರಮದಿಚರನು || ೨೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾತೆ ಪಿತ ಬಳಗೆಲ್ಲ ಕಾಣುತ
ಲಾತುಮದಿ ಸಂತಸವ ಪಡುತ ಸ
ಮೇತ ಮಾತೆಯಳೆಂದಿನಂತಿರಲಿವಗೆ ಹಿತವೆನಿಪ ||
ನೀತಿ ನಿರುಪಮವೆನಿಪ ಶರಣರ
ಭೂತಿಯಿಂದುದಯಿಸಿದ ಸೊಳ್ನುಡಿ
ಸೇತು ಸಂಬಂಧಿಸುತಲನುಮತಿ ಭಾನು ಕಿರಣಸಮ || ೨೯ ||

ನಿಂದಿಸದ ನುಡಿಯಿರಲಿ – ಮನಸಿಗೆ
ಬಂದ ನಡೆಯೆನಿತೆನಿತು ತರದಾ
ನಂದ ಮುಖದೊಳಗದುವೆ ಪರಹಿತ ಭಾವ ಬೆಳಗಿರಲಿ ||
ಕುಂದುಬಾರದ ಭಾವ ಸವಿಯೊಳ
ಮುಂದುವರೆಯುತ ಬದಿಯವರಸಹಿ
ತಂದು ಈ ದಿಶೆ ತರುವುದಾಗಿರಲೆನುತ ಮಹಾತಾಯಿ || ೩೦ ||

ಕಬ್ಬಿಣದ ಅದಿರನ್ನು ಪದ್ಧತಿ
ಹೆಬ್ಬಯಕೆಯೊಳ ಸಂಸ್ಕರಿಸಲದೆ
ನಿಬ್ಬೆರಗಗೊಳುವಂತೆ ಪರಿಶುದ್ಧತೆಯದುಚ್ಛತಮ ||
ಕಬ್ಬಿಣದು ದೊರೆತಂತೆ ಸುತನೊಳ
ಕಬ್ಬುರಸ ಭರಿಸುತ್ತಲಿದೆ – ಹಸ
ಹಬ್ಬ ಚಿರವೆನಿಪಂತಿಡುತ ಸಂಸ್ಕಾರ ಸೂತ್ರಸುಮ || ೩೧ ||

ನೋಡೆ ಚಿನ್ನಕೆ ಮುದ್ರೆಯಿಡಲೆಡೆ
ನಾಡೆ ಸಫಲಾದಾಗ ಮೂರ್ತಿಯು
ಮೂಡಣದ ಮೆರಗಂತೆ ಸೌಂದರ–ಸಿದ್ದಲಿಂಗಯನ ||
ನಾಡಿ ನಾಡಿಯೊಳುಚ್ಚ ಬೌದ್ಧಿಕ
ಕೋಡಿ ಕೊನರುತ್ತಿಹುದ ಕಾಣುತ
ನಾಡೆ ಪತಿ ಬಳಗಕ್ಕದೆ ಮಹಾಪೂರ ಮಧುಗವನ || ೩೨ ||

ಹೀಗೆ ಸಾಗಿರೆ ಸಸಿಗೆ ತಕ್ಕಂ
ತ್ಹಾಗೆ – ರಕ್ಷಿಸುವಂಥ ಹನಿ ಖನಿ
ಭಾಗ –ದಿನಕರ ಕಿರಣ – ಮಿಶ್ರಣ ಗರಿಮೆಯಿರುವಂತೆ ||
ಹಾಗೆ ಹೊನಲಿದೆ ಭಾವನಾತ್ಮಕ
ವಾಗಿ ಪೂರೈಸುತ್ತಲಿರುತಿರ
ಲಾಗಿವಗೆಯೆಂಟನೆಯ ವರ್ಷಾರಂಭವಾಗಲ್ಕೆ || ೩೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಯ್ಯಾಚಾರ :

ಹಿರಿಮೆ ಮಾಹೇಶ್ವರದ ದೀಕ್ಷಾ
ವರಣ – ಮಾನಸಕಿದನೆ ಮುದ್ರಿಸು
ತರಿಸುತಿದರ ವಿಶಾಲ ದಿನಚರಿ ದೀಪ್ತಿಸಹಜಾಪ್ತ ॥
ಸರಣಿ ಸಂಸ್ಕಾರಾಂಗ ಅಳವಡಿ
ಸಿರಲಿದೇ ಮುಂದಿನದ ಮೆಟ್ಟಲ
ಮೆರಗಕಿದು ಚುಕ್ಕಾಣಿಯಂತರಿಸುವಿಕೆಯೆಲ್ಲವನು ॥ ೩೪ ॥

ಕೇಳಿ – ಕೇಳುತ ಸಿದ್ಧಲಿಂಗ ಸು
ಶೀಲತೆಯ ಸಂಭಾವ್ಯ ಸತ್ಪ್ರಭೆ
ನೀಳದೊಳಗಾಗುವಿಕೆ ಸಕ್ರಮವೆಲ್ಲ ಪುಲ್ಲಲಿತ ॥
ಮೇಳವಿಸಿಕೊಳ್ಳುತ್ತಲಾ ಬೆಳೆ
ಬಾಳೆ ಫಲ ಪರಿಪಕ್ವ ಬದ್ಧತೆ
ಬಾಳಲೋಚನಗೊಪ್ಪುವಂತಿಹುದಿವನದೇ ಲಲಿತ ॥ ೩೫ ॥

ಇರುವಿಕೆಯಗಾಣುತ್ತ ಜನನಿಯೊ
ಳರಳುತರಳುತ ನಯನ ಕವನೊಳ
ಗುರೆ ತರಂಗ ನಿಶಬ್ಧ ಗೀತದೊಳಿದುವೆ ಬಿಡದಾದ ।
ವಿರತವರ ಅರ್ಥಣೀಶ ನುಡಿದಿಹು
ದರಳುತಾತ್ಮೊಲವಿಂದದೆಸಳಿನ
ಚರಣ ಚಿತ್ತದಿ ಸುಪ್ರಕಾಶಿಸಲದನೆ ಕಾಣುತ್ತ ॥ ೩೬ ॥

ಬಿಡದಿದನೆ ಸದ್ಭಕ್ತರೆದುರೊಳ
ಗಿಡುತಲಿಹುದಾಲಿಸುತಲಿದೆ ಮೊಳ
ಕೊಡೆಯಲಿದಕಿದೆ ಸಿಂಚನದ ಸಮ ಸಂಪದಾಗುತ್ತ ॥
ಕಡಲದೊಳಗುದ್ಭವಿಸಿದಾ ಸುಧೆ
ಸೊಡರಿಗಾಧಾರಾಗುತೊಳಗೊಳ
ದೃಢ ವಿಕಾಸಾಗುವಿಕೆ ಜನನಿಯ ಹೊರತಿದಾರರಿಯ ॥ ೩೭ ॥

ತಾನೆ ನೆನಪೆನಗಿದುವೆ ಪುಟ – ತಂ
ತಾನೆ ಮಹತೆ ಮದಾಲಸಾ ಸತಿ
ಜಾಣೆ ಸುತರಿಗೆ ಸನ್ಮಾತಿಯಭರಿಸಿರಲು ಸದ್ದಿಶೆಗೆ ॥
ಜಾಣರಾಗುತ ಚಿತ್ಪ್ರಕಾಶ ಸ
ಮಾನರಾದಂಥವರ ಹಿನ್ನೆಲೆ
ಮಾನನೀಯ ವಿಚಾರ – ಮಾತೆಯಳಿಂದಲಿರಲಿದುವೆ ॥ ೩೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜನನಿ ಮೊದಲನೆ ಗುರುವು– ಎಂಬುವ
ಜನಜನಿತ ನಾಣ್ಣುಡಿ ಶಿಖಾಮಣಿ
ಯೆಣಿಕೆಯಿದನೆನಿತಲ್ಲಗಳೆಯದ ಸೆಲೆ – ಶಿಲಾಲೇಖ ||
ಹಣಿಕೆ ಹಾಕುತಲಿತ್ತ ಪುರದೊಳ
ಗುಣಿಸುವಂತೆಯೆ ನೆರೆಹೊರೆ ಪುರದ
ಹಣತೆ ಹೊಳೆದಂತೆನಿಸಿ ಜನಮನದೊಳಗೆ ರಸಪಾಕ || ೩೯ ||

ಕಂಡವಗೆ ನೆನಪದುವೆ – ಕಾವ್ಯದ
ಕುಂಡದೆಳೆ ಬಸವಂಗೆ ಅಕ್ಕನ
ಚಂಡು ಹೂವಿನ ಮಾರ್ಗದರ್ಶನ – ಸಮ ಶಿವಾಜಿಯನ
ಗಂಡುಗಲಿ ಮಾಡಿಹುದ ಪ್ರಜ್ಞಾ
ಕೆಂಡ ಜೀಜಾಬಾಯಿಯನುಭವ
ನುಂಡಿಹುದ – ಇತಿಹಾಸ ಸಾಕ್ಷಿರಲಾವ ನುಡಿ ಸುಮನ || ೪೦ ||

ಅಂತು ಬೆಳಗು ೬ ಕ್ಕಂ ಪದ ೪೦ ಕ್ಕ ಒಟ್ಟು ಪದ ೨೬೧ ಕ್ಕಂ ಶಿವಂ

೧೩-೧-೨೦೧೬ ಬುಧವಾರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು - ೭

ಅಕ್ಷರಾಂಬರ

ಸೂಚನೆ :

ಮಾತೃ ಭಾಷೆಯ ಕಲಿಯ ತೊಡಗುತ
ಛಾತ್ರನಾದ ಕುಶಾಗ್ರ ಚಿತ್ತಪಥ
ಪಾತ್ರ ವಿದ್ಯಾಲಯದಿ ಶೋಭಿಸಿದನೆನುವಾತ ಋತ ||

ವಾಚನ :

ಸ್ವಚ್ಛ ಸಾಂಪ್ರತ ಶಿಸ್ತುಸಂಪದ
ನಿಚ್ಚಳದಿ ಬೆಳೆಸುತ್ತಲಿದೆ ಪಡಿ
ಯಚ್ಚು ಪುಟಿದಂತಾಗಿರಿಸುವದೆ ಶಿಕ್ಷಣದ ಮೌಲ್ಯ ||
ಗಚ್ಚು ಗಾರೆರೆದಂತೆ ಹೊರಗೊಳ
ಗುಚ್ಛ ಸಮ ಪುಲ್ಲಸಿತ ವಿಬುಧರು
ಮೆಚ್ಚುವಂತಿರಲದುವೆ ಸಂತಸ ಧಾರೆಯಿಡೆ ಬಲ್ಯ || ೧ ||

ಕನ್ನಡಿಯು ಸೌಂದರ್ಯವನೆ ಬಲು
ಚನ್ನ ಪ್ರತಿಬಿಂಬಿಸುವ ಪರಿ ಸಂ
ಪನ್ನದೀ ಮಾಧುರ್ಯ ಪರಿಶುದ್ಧತೆಯದೀ ಭಾಷೆ ||
ಚನ್ನ ಚಂಪಾ ಬಸವಗನ್ನಡ
ವೆನ್ನಿರಿದರೊಳಗಿಹುದ ಮೆಲ್ನುಡಿ
ಯೆನ್ನಿರೀ ದಿಶೆಗಿಹುದು ಮಾಸೂರೆಡೆಯಸುತ ಮುತ್ತ || ೨ ||

ಇಲ್ಲಿದೆ ವ್ಯಾಕರಣ ವೈಭವ
ಪಲ್ಲವೆನುತಿದರೊಳಗಡಗಿಹುದ
ನೆಲ್ಲ ವಾಚನ ಕಲೆಯೊಳಗೆ ಸಂಸ್ಕರಣಗೊಳಿಸುತ್ತ||
ಸಲ್ಲಲೋದುಗನಿರವನಾ ಸಹಿ
ತೆಲ್ಲವರಿ ಪೋಷಿಸುತಲಿರವ
ನ್ನಿಲ್ಲಿಹುದ ಶಿಕ್ಷಣದ ಸಂಸ್ಕಾರಿಲ್ಲಿ ಅಲೆವಲ್ಲಿ || ೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಲ್ಲಿಹುದ ಮಾನವನೊಳಗೆ ನಿಜ
ದಿಲ್ಲಿ ಬೆಳವಣಿಗೆಯ ಮಾಡುವ
ಬಲ್ಲ ನಿಯಮವೆ ಶಿಕ್ಷಣವಿದೆನು ತಜ್ಞರಾ ಕಥನ ||
ಮೆಲ್ಲ ಮೆಲ್ಲನೆ ನಾಗರಿಕ ದಿಶೆ
ಯಲ್ಲಿ ಸಂಸ್ಕೃತಿಯಿರಿಸಿ ಬದುಕೊಳ
ಸಲ್ಲಲಿತಲಿರಿಸುವದೆ ಶುಭಶೋದ್ದೇಶವಿಹುದೆಂಬ || ೪ ||

ಸೂತ್ರದೊಳ ಜೀವನದ ಗುರಿ ಗರಿ
ಗಾತ್ರವಾ ಸೋದ್ದೇಶ ಕಲಿಯುವ
ಮಾತ್ರೆಯೊಳಗರಳಿಸಲಿಹುದನರಿಯುವಿಕೆ ಪ್ರಾಮುಖ್ಯ ||
ಚೈತ್ರಲೆಗಳಡಗಿಹುದ ಜತೆ ಪಾ
ವಿತ್ರ್ಯ ಶಿಕ್ಷಕ ಸೂತ್ರ ಶೀಲ ವಿ
ಚಿತ್ರನಿಸದಾಚಾರ ಪೂರ್ಣವಿರಲದೆ ತಾದಾತ್ಮ್ಯ || ೫ ||

ಇದರ ಫಲ ಮಾನವನ ಜೀವನ
ಪದವ ರೂಪಿಸುವಾತ್ಮ ಸಾಕ್ಷಿಯೊ
ಳಿದರದೆ ಪದ ಸಮಾನವಾವುದೆರಡನೆಯದೆ ಹೊಣೆಯು ||
ಸದರ ಬಳಿಕಿದೆ ಪಿತನದಿರಲೇ
ನಿದರ ಬಳಿಕ ಸಮಾನದೆಂಬುದ
ಕರದೆರೆದು ನೋಡಲಿದೆ ದರ್ಪಣದಂತೆ ತಿಳಿಸುವದು || ೬ ||

ಸರಳ ಜೀವನ ಹೊಂದುತಲಿ ಗುರಿ
ಚರಣದಿರುವವರನ್ನೇ ಎತ್ತುತ್ತ
ಲಿರುವ ಕಾಯಕವಾ ಸಮರ್ಪಣ ಸಾರುವಂತಿಹುದು ||
ಕರ–ಶಿರ–ತಲೆಯದೇಳಿಗೆಯ ದಿಶೆ
ಯಿರಿಸುವಾದರ್ಶತೆಯ ಪದದೊಳ
ಗಿರುವವನೆ ಪರಮೊಚ್ಚ ತಿಳಿ–ಶಿರ ಹೊನ್ನ ಕಳಸವದು || ೭ ||

ಈತನಿರಿಸುವ ಹೃದಯ–ಶಿರದಿ ಸ
ದಾತಿಶಯ ಸಮತೋಲನೊಳಗೆ ಸ
ದಾತುರತೆಯದೆ ಭಾವನಾತ್ಮಕ ಕಲೆ ವಿಲಾಸತೆಯ ।
ಆತುಮದ ಸಾಕ್ಷಿತ್ವ ಸಂಭ್ರಮ
ಸೇತು ಪಥ, ಹಿಡಿಸುವಿಕೆಯೀತನ
ದಾ ತತಿಯದೆ ಸಮಾಹಿತವಿದೇ ಸಾಕ್ಷರಾಂಬರದು || ೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಲ್ಲಿ ಸಹಜಡಗಿಹುದು ಸುದೃಢ
ದಲ್ಲಿ ಸಾತ್ವಿಕ ಶಕ್ತಿಗಳರಳು
ತಿಲ್ಲಿ ಸದ್ಗುಣ ಮಾನಫೀಯತೆಯ ಸಹಜಾದರ್ಶ ||
ಇಲ್ಲಿಹುದು ಸಹಜೋತ್ತರೋತ್ತರ
ಪಲ್ಲ ಸತ್ವಾಧ್ಯಾತ್ಮ ಶಿಕ್ಷಣ
ಸಲ್ಲುತಿಹುದೆಂತೆಂಬುದಾ ವಿಶ್ವಾಸದಾಕರ್ಷ || ೯ ||

ಕಲಿಸುವಾಶೆಯು ಗುರುಗಳೊಳಗಿರೆ
ಕಲಿಯುವಾಶೆಗಳಿರಲಿದಕೆ ಬೆಲೆ
ನೆಲೆಯ ನೋಡಿರೆ – ಗಂಟೆ – ನಾಲಿಗೆಯಿರಲು ನಾದಸೆಲೆ |
ಚಲುವ ಜಾಂಗಟೆಯೊಳಗಿಹುದ ರವ
ವಲನ ಚಿಮ್ಮಲು ಬೇಕದಕೆ ಕರ
ದುಲುಹ ಕೊಡತಿಯ ಮೇಳವಿಗೆ ದನಿ ಹಾರದಾ ಓಲೆ || ೧೦ ||

ಹೀಗಿರುವ ಕಡೆ – ವಿನಯ – ನಿರ್ಭಯ
ಯೋಗ ಕರುಣ ವಿಚಾರಶೀಲ –ಸ
ರಾಗ – ಸತ್ಕ್ರಿಯ ಮಾಲೆ ನರರ ಸಮಾನ ಪ್ರೀತಿಸುವ ||
ಯಾಗ ಸಹಜುಪಕಾರ ಸನ್ಮತಿ
ಯೋಗಗಲಿಸುವ ಶಿಕ್ಷಣವೇ ತಿಳಿ
ರೀಗ ತರು–ಮರ–ಬೇರದಂತಿಹುದಂತೆ ಮಹತಾಯಿ || ೧೧ ||

ಸೂಕ್ತ ಸಹಜಾನುಭವದಾ ಸವಿ
ಯುಕ್ತ ಕಲೆ ನಿರ್ಮಾಣದೆಡೆಗಾ
ಸಕ್ತಿ ಮನದೆರೆದಂಥ ನಡೆ–ನಗು ನಗುವ ಕಂದನೊಳ ||
ಶಕ್ತಿ ಮೀರಿ ಚಿದಾತುರಾ ವ್ಯ
ಕ್ತಿತ್ವಗೊಳಿಸುವ ದಾತ್ಮಬಲ–ಸ
ದ್ಭಕ್ತಿಯಿವರೊಳಗಿಹುದರಿತೆ – ಮಹತಾಯಿ ಆ ದಿನದಿ || ೧೨ ||

ಗುರುಕುಲದ ರೂವಾರಿ – ಆ ದಿನ
ದರಿಸುವ – ಮುನಿ – ಮಹರ್ಷಿಗಳ ಶುಭ
ಚರಣವೇನಿರಲಿಂದಿವರ ನೋಟಾಟದೊಳ – ಬಾಲ ||
ಅರಳಿದರವಿಂದಸಮದಂತಿರಿ
ಸಿರುವಿಕೆಯ ಕರ್ತವ್ಯರಿವರೊಳ
ಗಿರುವದೆಂದರಿತೇ ಮಹಾಮತಿ ಜನನಿಯಾದಿನದಿ || ೧೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೃದಯ ಹೂವರಳಿಸುತದರೆಡೆಗೆ
ಮಧುರ ಕಂದ ಪತಂಗ ಬರುತಿರು
ತದರದೇ ಪ್ರಜ್ಞಾನ ರೇಣು ಗ್ರಹಿಸಲದಕೊಂದು ||
ಸದರದನು ಕೊಡಮಾಡುವಿಕೆಯ ಸು
ಮಧುರ ಸದ್ಭಾವನೆಯ ಸಂಪದ
ಚದುರರಿವರೆಂದೆನುವದರಿತೇ – ಜನನಿಯಾ ದಿವಸ || ೧೪ ||

ಅತಿಥಿ ಛಾತ್ರಪರೂಪಿ ಗುರುಕುಲ
ದ ತತಿಯರಿತಾಗಮಿಸುತಲಿ ಸಹ
ಜತುಲದಿಂ ಸಫಲತೆಯ ಪಡೆದಂಥವರ ಮನವರಿತು ||
ಸತತ ಸಖನಂತಾಗುತಿವರೊಳ
ಖುತ ನಿತಾಂತಿರಿಸುವದೆ ಗುರುವಿನೊ
ಳತಿ ಮನೋಹರವೆಂಬುದರಿತೇ – ಮಾತೆಯಾದಿನದಿ || ೧೫ ||

ತೋಟದೊಳಗಾ ಯಾತ ಹೊಡೆಯಲು
ಮಾಟ ಮೇಲದು ಕೆಳಗೆ ಗಾಲಿಗ
ಳಾಟವಿರದಿರೆ ಸಾಗಲಾರದು – ಬೀಸುಕಲ್ಲಿಗದು ||
ಗೂಟ ತಳದಿರೆ ಮೇಲೆ ಮಾಪದ
ಸಾಟಿ ಕರದಿರೆ ಸಾಧ್ಯ ಹಿಟ್ಟದು
ಪಾಠಗೊಳಲೀರ್ವರರು ಬೇಕೆನುದರಿತೆ ಪಿತನಂದು || ೧೬ ||

ಇಂತು ಶಿಕ್ಷಣದೆಡೆಯದೀ ನಿಜ
ದಾಂತರಿಕಹುದರಿಯುತರಿಯುತಾ
ಗಂತು ಜನನಿಯು ಸಿದ್ಧಲಿಂಗನ ಶುಭಮೂಹೂರ್ತದೊಳು ||
ಸಂತಸದಿ ಕಳಿಸುವಿಕೆಯಹುದು ಸ
ದಾಂತಕರುಣೆಯ ಬಲುಮೆಯೊಳಗೆ ನಿ
ತಾಂತವಾದಿಶೆನೆಲೆಗೊಳುವ ಮಹದಾಶೆ ಯೊಳಗಂದು || ೧೭ ||

ವಿದ್ಯೆಯಿಂದಹುದಾ ಪ್ರಯೋಜನ
ಸದ್ಯ ತಾನರಿಯುತ್ತಲದ ಸಂ
ವೇದ್ಯವೆಂಬುದನರಿಯುತಾ ಜ್ಞಾನಕೆಸಮಾನೆನಿಪ ||
ವಿದ್ಯೆ ಮತ್ತೇನಿಲ್ಲವೆಂಬುವ
ಪದ್ಯ ಪದ್ಮ ಹಸಾದದಿಂದಾ
ಸಾಧ್ಯವೇನಿಲ್ಲೆಂಬುದರಿತೇ ಯೋಚಿಸುತಲಿಲ್ಲಿ || ೧೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಿಳಿವಳಿಕೆ ಬಿಡದುಂಟು ಕದಳಿಯ
ಕಳೆಯು ಸಹಜಿಲ್ಲಿಹುದನಿದ ಬಿಡ
ದಳೆಯುತಲಿ ಸದ್ವಿದ್ಯೆಗಿದುವೇ ತಾಯಿ ಬೇರೆನುತ ॥
ನೆಲೆ ತಿಳಿಯಲಿದರಿಂದ ಹಲಮುಖ
ದಳೆಯದಂಥ ವಿಚಾರದೊಳು ನಿಜ
ದುಳಿಯಲೆಂಬುದಗುರಿಯೊಳಗೆ ಮಾತೆಯಳು ನಿಶ್ಚಯಿಸಿ ॥ ೧೯ ॥

ಮಟ್ಟ ಕಬ್ಬಿನಕಂಥಿ ಮಠದೊಳ
ಮೆಟ್ಟಲದೆ ಪ್ರಾಥಮಿಕ ಶಿಕ್ಷಣ
ಗುಟ್ಟದೊಳ ಸೇರ್ಪಡಿಸುತಲ್ಲಿಯ ಪೂಜ್ಯರಾಶ್ರಮದಿ ॥
ಇಟ್ಟು ಬರುತಿರಲೀತ ತನ್ನಿರಿ
ಮಟ್ಟಲೊಳ ಶಿವಭಾವ ಪೂರ್ಣದಿ
ರಟ್ಟಹಳ್ಳಿಯೊಳುಳಿದ ಪಾಠ್ಯಕ್ರಮದೊಳನುದಿನದಿ ॥ ೨೦ ॥

ಮಲ್ಲಿಗೆಯ ಲತೆಯನ್ನೆ ಸದ್ರುಚಿ
ಯಲ್ಲೆ ಬೆಳೆಸಿದರೇನು ತನ್ನಿರ
ವಲ್ಲಿ ತಾಬಿಡದಂತೆ ನನೆ ಹಂದರದಿ ಹರವುತ್ತ
ಪುಲ್ಲಸಿತಗೊಳಿಸುತಿಹುದಂತೆನು
ತಿಲ್ಲಿವನ ಭಾವೆಸಳವಾ ಪರಿ
ಫುಲ್ಲ ಕುಸುಮ ಸದಾವೃತಾಧ್ಯಯನಾಳಲೀನತ್ತ ॥ ೨೧ ॥

ಗಿಳಿಗಳೆಲ್ಲಿಯೆಯಿರಲಿ ನೋಡುವ
ದೊಲವದರ ದನಿರಂಗದಾಡುವ
ಚಲುವ ಫಲದೆಡೆಗಿರುವದಾತುರದಂತೆಯೀತನದು ॥
ಒಲವು ಜೇನ್ನೊಣದಂತೆ ಸಮಸಿರಿ
ಸೆಲೆಯ ರೇಣವ ಮಾತ್ರ ಗ್ರಹಿಸುವ
ಚಲುವದಂತಿಹುದನುದಿನದೊಳಭ್ಯಾಸ ಭೂಷಣದಿ ॥ ೨೨ ॥

ಇದ್ದರೇನಿವನೆಡೆಗೆ ಪೂಜ್ಯರೊ
ಳಿದ್ದ ನೋಟದೊಳದುವೆ ಜನನಿಯೊ
ಳಿದ್ದುದೇ ಅಥಣೀಶನಿಂದ ಭವಿಷ್ಯನಿವನ ಬಗೆ ॥
ಮುದ್ದೆಯೊಳಗೀತನನ ಮುಂದಿನ
ಹುದ್ದೆಯೊಳಗಾಗಿರಿಸುವಾ ದಿಶೆ
ಬದ್ಧ ನಡೆಯೊಳಗರಿಸುವಿಕೆಯಾಗಿತ್ತವರ–ಹೀಗೆ ॥ ೨೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಂದನಿರಿ ಕರಕೊಂಡವರ ಬಳಿ
ನಂದದಿಂದಾಡುತ್ತ ಹಸಮುಖ
ಹೊಂದುತದರೊಳ ತಾನೆ ಸಹಜಾನಂದ ಸಂಪಿಗೆಯ ॥
ಸಂದಿ ಪರಿಮಳ ತುಂಬ ಹರಡಿಸು
ತಂದದರೊಳೆಲ್ಲರರ ಬಿಡದಾ
ನಂದದೊಳಗಿರಿಸುವಿಕೆಯಂತಾಗಿತ್ತಿವನದೆ ನಯ ॥ ೨೪ ॥

ಕುಂಟು ನೆಪಯೆನಿತಿಡದ ಕಲಿಕೆಯೊ
ಳಂಟಿಕೊಂಡಿಹನೀತ ಸಖ ಜೊತೆ
ತುಂಟತನಗೂಡದಯೆ ಗರಿಗಾಂಭೀರ್ಯದಿರುತಿರುತ ॥
ದಿಂಡಲದಗಿಡ ಸತ್ವಸಾತ್ವಿಕ
ದಂಟದೊಳಗೆ ರಸಾಯನದ ಸಮ
ತುಂಟು ದೈನಂದಿನದ ಪಾಠ್ಯಕ್ರಮದಿ ಸರಳಿರುತ ॥ ೨೫ ॥

ಕಲಿಕೆಯೊಳ ತಲ್ಲೀನ ಗದ್ದಲ
ದೊಳಗೆನಿತಿರದೆ ತನ್ನದೇ ಗುರಿ
ಯೊಳಗಿರುತಲಂದಿನದೊಳಭ್ಯಾಸ ಬಿಡದಾಕಾಂಕ್ಷೆ ॥
ನಿಲವದಿರುತಿರಲಿವನ ಪ್ರಗತಿಯ
ಫಳಿಗೆಯಲ್ಲವ ಲಕ್ಷಿಸುತ ನಿಯ
ಮೊಳ ಸದಾಮಯನಾಗಿಹುದಗಾಣುತ್ತ ತೋಷದಲಿ ॥ ೨೬ ॥

ವಿದ್ಯೆಯೆಂಬುದೆ ನಿಜದ ತವನಿಧಿ
ಸಾಧ್ಯಗೊಳಿಸುವದೆಡೆಗಿರುತಲಿದ
ಸಾಧ್ಯವೆಂಬುವ ನುಡಿಯ ಬದಲಿಸುವಂತೆ ತಪ್ಪದಿಹ ॥
ಅಧ್ಯಯನದೊಳಗಾದುದೆಲ್ಲವ
ಸಾಧ್ಯಗೊಳಿಸುತಲಿದ್ದುದೆಲ್ಲ
ಹೃದ್ಯವಾಗಿಹುದರಿಯುತಿರ್ದರುಕಂಥಿ ಚರವರರು ॥ ೨೭ ॥

ನಿತ್ಯದೀತನ ಮುಖದಿ ಶರಣರ
ಸ್ತುತ್ಯವೆನಿಪ ವಿಚಾರ ವೈಖರಿ
ತಥ್ಯ ವಚನ ವಿಹಾರದೊಳಗಿಹುದದನೆ – ಸಹೃದಯ
ನಿತ್ಯ ಚರವರರೆದುರು ಕೇಳುತ
ಪಥ್ಯದೊಳಗಿರುತಿಹುದ ಜನನಿಯೊ
ಳತ್ಯಧಿಕ ಸಂತಸತೆ ಪಿತನೊಳಗಾದುದೆನಬೇಕು ॥ ೨೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತಿವನ ಶಿಕ್ಷಣವು ಪ್ರಾಥಮಿ
ಕಂತು ಮುಗಿದಿರಲಂದು ಸಾಗಿದ
ನಂತು ತಿಳಿಯೆ ಶಿಕಾರಿಪುರ ತಾಲೂಕದೊಳಗಿಹುದ ॥
ಇಂತೆನಿಪಕಡೆನಂದಿ ಹಳ್ಳಿಯೊ
ಳಂತು ಬುಧಗುರು ಮೂರ್ತಿ ಶಾಸ್ತ್ರಿಗ *
ಳಾಂತರಿಕ ಕಾರುಣ್ಯದೊಳ ವರುಷೆಂಟು ಕಳೆಯುತ್ತಾ ॥ ೨೯ ॥

ಶಬ್ದ ರೂಪಾವಳಿಯ ಜೊತೆ ಕೋ
ಶಾಬ್ದಿಯೆನಿಪಾ ಅಮರಕೋಶ ನಿ
ಶಬ್ಧದೊಳಗಡಗಿಹುದ ಮೌಕ್ತಿಕ ಮುದ್ದೆ ಮೆರಗುತನ ॥
ಸ್ತಬ್ದತೆಯೊಳಾಂಬರದಿ ತೋರ್ಪಸು
ಶಬ್ದತೆಯ ವೈವಿಧ್ಯ ಮೆದುಳೊಳ
ಗಾಬ್ದದಂತೆ ವಿಹಾರದೀತನ ವಾಣಿಯೊಳ ಝನನ ॥ ೩೦ ॥

ಕೇಳುತಾನಂದಿಸುತ ಶಾಸ್ತ್ರಿಗ
ಳಾಳ ಮನದೊಳ ಮಧುರ ಕುಂಭ ಸು
ರಾಳ ಗೂಡಿಹುದಿದನು ಬದಿಯವರಾರರಿವರಿದನು ॥
ನಾಳ ನನೆಯೊಳ ಪರಿಮಳದ ತೆರೆ
ಮೇಳಗೊಂಡಿಹುದಾರು ಕಾಣದ
ಬಾಳೆ ಫಲದೊಳ ರುಚಿಯದಂತೆನಿಸಲಿದೆ ಸಮ್ಮಾನ ॥ ೩೧ ॥

ಸಿದ್ಧ ಕಲಿಯುತಲಿದ್ದ ಶೀಲ ವಿ
ಶುದ್ಧ ನಡವಳಿಕೆಯನೆ ಪಾಲಿಸು
ತಿದ್ದುದನು ತಿಳಿದಂಥ ಮಾತೆಗೆ ತೀರದಾ ತೋಷ ॥
ಸದ್ದಿರದೆ ಪಸರಿಸುವ ಪೌರ್ಣಿಮೆ
ದಿದ್ದುದಾಚಾರಂತೆ ಶೀತಲ
ಸಿದ್ಧಿ ಸತ್ಕಳೆಕಾಣುತಿವನೊಳ ಸು ಪ್ರಕಾಶ ಹಸ ॥ ೩೨ ॥

ನಿತ್ಯನಿಯಮಿತ ಮಾತಿನೊಳಗಾ
ಭೃತ್ಯ ಭಾ ಖುತ ರೀತಿ ರೂಪಾ
ದಿತ್ಯ ನೀರವ ವಿಸ್ತರಣವಾದಂತಿವನ ದಿವ್ಯ ॥
ಸತ್ಯ ಸಾತ್ವಿಕ ಸೊಬಗದಾ ಸೊಡ
ರತ್ಯಧಿಕವೆಂಬಂತಿದರಳು
ಸ್ವಾಸ್ಥ್ಯ ಸಂಭ್ರಮಸಾರಿ ಸಾರುತಲಿದ್ದಿತಾ ದಿನದಿ ॥ ೩೩ ॥

---

* ಕಾಶೀಪೀಠ ಜ್ಞಾನಗಂಗಾ – ಸಂ.ಕೆ.ವಿ. ರಮೇಶ ೨೦೦೮ ಇಸ್ವಿ ಪುಟ ೨೧೯.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಗುಳು ಮುಖದೊಳ ತಾರೆ ಗುರುಗರಿ
ಸೊಗಸದೊಳದೇದಿಪ್ಯಮಾನದೆ
ನಿಗದಿಡಿದೊಳಾಂಬರ ಚಿದಾಗರದಂತಿಹುದಲೀತ ॥
ನಿಗಮನಿಧಿ ಜಂಗಮನು ಸಂಗನ
ಸೊಗಸು ಗಣರೆಡೆ ಮನದೆರೆದು ನುಡಿ
ನಗುತಲಿರುವಿಕೆಯಂತಿಹುದ ಸಕಲರಿಗಳವದೆಂತು ॥ ೩೪ ॥

ಹಮ್ಮಳಿದ ಹಂಸಗತಿ ಮತಿ ಮತ
ಸುಮ್ಮ ಸುಖದೊಳಗಾದ ತದ್ಗುರಿ
ಸೊಮ್ಮದೊಳ ಶೋಭಿಸುತಲಿರುತಿವನ ಬಗೆಯಮಿಗೆ ॥
ಕಮ್ಮ ಚರಗುರು ಮುಖದಿ ಮನದೊಳ
ಸುಮ್ಮನಿರುತಿಹುದೀಪ್ತಿ – ಪ್ರತಿಬಿಂ
ಬೆಮ್ಮದೀತನದಿರವ ನಿರುಪಮ ಚಿಗುರ ಮರುಗನಗೆ ॥ ೩೫ ॥

ಅರೆದ ಚಂದನ ಗಂಧ ಗರಿಮೆಯ
ದರಳು ಕಬ್ಬಿನ ರಸದ ಪಾಕದ
ಪರಿಧಿಯಂತಿಹುದೊಲವ ಸಹಜಾಂತರಿಕದೀತನನ ।
ಸರಣಿ ಕಲ್ಪನೆಕಂಪ – ಕಂಗೊಳಿ
ಸಿರುವದಾ ವೈಶಿಷ್ಟ್ಯ ಚಿನ್ನದ
ಚರಣದಾಂತ ವಿಭೂತಿಯನೆ ಮೆಲುಕಿಸುತವರು ಸುಮನ ॥ ೩೬ ॥

ಅಂತೂ ಬೆಳಗು ೭ ಕ್ಕಂ ಪದ ೩೬ ಕ್ಕಂ ಒಟ್ಟು ಪದ ೨೯೭ಕ್ಕಂ ಶಿವಂ
ಪೌಷ್ಯಶುದ ದ್ವಾದಶಿ ಗುರುವಾರ ಮೃಗಶಿರ ೨೦-೧-೨೦೧೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು - ೮

ಸಂಸ್ಕೃತಾಮೃತ

ಸೂಚನೆ :

ದೊರೆತ ಮಠದಧಿಕಾರಕಾತಂ
ಕೆರಗಲಾ ತೊರೆದೆದ್ದು ಸಾಗಿದ
ಸರಳವಾರದ ಪಾಠಶಾಲೆಗೆ ಸಿದ್ಧಲಿಂಗಯ್ಯ ||

ವಾಚನ :

ಸೊಗಸುತನದಿಂ ಕಲಿಸುವಾದಿಶೆ
ನಗಿಸುತಲ್ಲಿಯ ಛಾತ್ರರೆಲ್ಲರ
ನುಗೊಳಿಸುತದೇ ಸತ್ವ ಸಂಪದ ಶಾಸ್ತ್ರಿಗಳ ರೀತಿ ||
ಅಗರುಬತ್ತಿಯ ಬೆಳಗು ಪೂರ್ಣದೊ
ಳಗೆಗೆ ಜಲ ಸಿಂಚನದ ಪರಿಯೊಳ
ನಿಗದಿಡಿದು ಬೋಧಿಸುತಲಿರ್ದುದ ಪರಿಧಿಯೊಳ – ಸಿದ್ಧ || ೧ ||

ಕಲಿಯುತಿದ್ದನುವಾದ ಭಾಷೆಯ
ಸಲಿಸುತಿದ್ದವರಿಂಗೆ – ಪಾಠದೊ
ಳುಳಿಯುತ್ತಿದ್ದನು ಸಕ್ರಮನುದಿನ ಸೇತು ಸುಪ್ರೀತಿ ||
ಗೆಳೆಯ ಜತೆಗನುಶೀಲ ಪಾಲನ
ಸಲುಗೆಯೊಳ ಶಾಂತೆಳೆ ಸದಾತನ
ಲಲಿತ ನಂಬುಗೆ ಸತ್ಯಸೂಳ್ನುಡಿಯೊಳಗದೇ ನೀತಿ || ೨ ||

ನೇಮ ನಂದಾದೀಪವೆನುತ ಸ
ದಾ ಮನೋರಮದುನ್ನತಿಯ ಪಡೆ
ವಾ ಮುಕುಲಿತ ಸದಾನುರಾಗದೊಳಿರವಲೀತನದೆ
ಸೋಮ ಬಳಿಕಿರಣಾಳಿ ವಿಸ್ತರ
ಭಾನು ಬೆಳಗುವ ಭವ್ಯದಾ ಭಾ
ವಾನುಕರಣಂತೇರಿರವದೆ ಸಕಲೆಡೆ ವಿಸ್ತರದೆ || ೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರತಿಭೆ ಗುರುತಿಸಿಹುದ ನಿಧಾನದೊ
ಳಿತಿ ಮಹಾನತೆಯಡಗಿಹುದವಾ
ಪಥ ಪಥದಿ ಬೆಳವಣಿಗೆಯನೆ ಲಕ್ಷಿಸುತ ಪಾಠಕನು ॥
ಖಿುತ ನಿಧಾನದೊಳರಳುವಾ ಸುಮ
ದತಿಶಯದಿ ಪರಿಮಳಳಿ ವಿಕಸಿತ
ದತುಲ ಗಾಣುತಲಿವನೆಡೆಗೆ ಮನಸಿಡುತಲುರೆ ನಿತ್ಯ ॥ ೪ ॥

ಸೂಕ್ಷ್ಮಗಮನಿಸಿ ಸಿದ್ಧನಭಿರುಚಿ
ಲಕ್ಷ ಸಹಜಾಸಕ್ತಿ ಸಂಪಿಗೆ
ನಕ್ಷೆಗದು ಬಲಗೊಳಿಸುವಂಥಹ ಹಾದಿ ಹುಡುಕುತ್ತಾ।
ಅಕ್ಷಯದ ಭಾವದಲಿ ಪೋಷಣೆ
ಪಕ್ಷವೆನ್ನದೆ ಸದಾತುರನುದಿನ
ರಕ್ಷಕನೆ ತಾನಾಗುತಾಂತರಿಕಿದನೆ ಮೆಲುಕಿಸುತ ॥ ೫ ॥

ಯಾವ ವಿಷಯದೊಳೀತ ಹಿಂದಿಹು
ದಾ ವಿವರರಿಯುತವಗೆ ಬೆಂಬಲ
ಭಾವ ಪೂರ್ಣದೊಳಿಡುತಲಿರುವಿಕೆಯದುವೆ – ಬೌದ್ಧಿಕತೆ ॥
ಭಾವನಾತ್ಮಕ ದೈಹಿಕಾದಿಯೋ
ಳಾವ ಬಾಧೆಯಬರದ ರೀತಿಯೋ
ಳಾ ವಿಚಾರಿಸುತಿರ್ದ ಹಿನ್ನಲೆಗಿಟ್ಟ ಸಂಸ್ಕಾರ ॥ ೬ ॥

ಮಾತೆಯಿಂ ಸದ್ಭಾವನೆಯ ತೊರೆ
ಯಾತ್ಮವಿಶ್ವಾಸಾಳ ತಾಳ್ಮೆಯ
ನೀತನೊಳಗರಳಿಸಿದ ಪರಿಯದು ಮಂದ ಮಾರುತದಿ ॥
ಪ್ರೀತಿ ಪಲ್ಲವದೊಳಗಿರಿಸಿದಾ
ಭಾತಿ ಆತ್ಮಸ್ಥೈರ್ಯ ಸಂಯಮ
ಸಾತಿಶಯ –ನಡೆ ಮೌಲ್ಯಗಳ ಬೆಳೆಸಿಹುದನೆಲ್ಲವನು ॥ ೭ ॥

ಮಗು ಮನಸುಗೊಂದಲವಗೂಡದ
ಬಗೆಯ – ಸತ್ಯ–ಸುಧರ್ಮ–ಸಹನೆಯ
ನಿಗದಿಡಿದು ಬಿಂಬಿಸುತಳೊಳ್ಳೆಯ ಬಾಲ್ಯ ಸಂಸ್ಕಾರ ॥
ನಗುತ ನಗಿಸುತ ನೀರಜದಬೆಲೆ
ಬಿಗಿಯಿಹುದ ಸಂಗತಿಯ ತಳಹದಿ
ಹಗಲಿರುಳು ನೈತಿಕದ ನೆಲೆಗಟ್ಟನೊಳಗಿರಿಸುದಕೆ . ॥ ೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮನಸನರಳಿಸುವಂಥ ಕಲ್ಪನೆ
ಕೆನೆಯೆ ಶೋಭಿಸುವಂತೆಯೇ ಭಾ
ವನೆಯದಾ ವ್ಯಕ್ತಿತ್ವ ರೂಪಿಸುವಂಥ ಹಿಂದಾದ ॥
ಘನ ಮಹಾಂತ ಸುಶಾಂತ ಸಂತತ
ಮಣಿಹದೊಳ ವಿಖ್ಯಾತವರ ಕಥೆ
ಚಿನುಮಯದ ಚನ್ನಬಸವನ ಸಾಧನೆಯ ಪುಟ ಮತ್ತೆ ॥ ೯ ॥

ಧಾರವಾಡ ಮೃತ್ಯುಂಜಯರ ಗತಿ
ಧಾರೆ ಮುರಗೋಡದ ಮಹಾಂತರ
ಚಾರು ಬುಧ – ವಾಗೀಶರೋದುವಿಕೆ – ಜಯದೇವ್ ಪ್ರಭೆ ॥
ಶೀಲಮಯ ಸಾವಳಗಿ ಜಂಗಮ
ಲೀಲೆ ಹಾನ್ಗಲ್ಲೇಶ್ವರಾ ಗುರಿ
ಬಾಲ ಲೀಲೆ ಮಹಾಂತ ಮಹಿಮೋಜೆಗಳ ಬಿಡದಾಗಿ ॥ ೧೦ ॥

ಪಲ್ಲಪೂರ್ಣ ಪ್ರದೀಪ ಸಮತಾ
ನಿಲ್ಲದಿಹ ಜಾನಪದದೊಳಗದೆ
ಸಲ್ಲಲಿತ ಸುತಗೊಪ್ಪು ಭಾಷೆಯೊಳಲ್ಲಿ ವಿವರಿಸಿದ ॥
ಬೆಲ್ಲದಂಥಹ ಭಾವ ಬೆಳೆಸಿಹು
ದಲ್ಲಿಯದ ಕತೃತ್ವ ಶಕ್ತಿಯ
ನೆಲ್ಲ ಮನನಿಸುತಿತ್ತ ಶಾಸ್ತ್ರಗಳಿಲ್ಲಿ ಬಿಡದಿಲ್ಲಿ ॥ ೧೧ ॥

ಸಿದ್ಧಲಿಂಗಯ್ಯನೊಳಗದೆ ಸ
ಮೃದ್ಧಿಗಾಣುತ ನಡೆಯೊಳೆಳೆತ ವಿ
ಶುದ್ಧಿ ಪಾರ್ಥನನಿರಿಯ ಸಮತಾಧ್ಯಯನದಾತುರತೆ ॥
ಪದ್ಧತಿಯೋಳಾ ಏಕಲವ್ಯದ
ಶ್ರದ್ಧೆ ಸಾಧನೆ ಕರ್ಣ ವಚನದ
ಮುದ್ದೆ ಪಾಲನ – ಪ್ರಜ್ಞೆ ಪಥದೊಳ–ಛಾತ್ರ ಸೂತ್ರೂರತೆ ॥ ೧೨ ॥

ಶ್ರದ್ಧೆಯೊಳಗಿಹುದೆಂಥ ಸಂಶಯ
ತದ್ದು ಇವನೊಳಗಿರದು ರಸ ಸ
ಮೃದ್ಧಿ ಮಾಧುರಿ ಮನದ ಸಂಭ್ರಮ ಶಾಂತರಸ ನಿದ್ದೆ ॥
ಸಿದ್ಧನೊಳ ನೀರವ ವಿಜಯ ತವ
ಕೆದ್ದು ತೋರದ ತಾಳ್ಮೆ ಬತ್ತದ
ಗದ್ದೆ ಮೌನಾದಾರ್ಯ ನಂಬಿಕೆಯಾತ್ಮ ವಿಶ್ವಾಸ ॥ ೧೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏನಿರರುದಾ ಸ್ಪರ್ಧೆ ಭಾವನೆ
ಮೇಣದೊಳಗಡಗಿಹುದ ನೈತಿಕ
ಮಾನವೀಯತೆ ಗೊಪ್ಪ ಸದ್ಗುಣ ಸಂಪದಾಕಾಶ ।
ನೂನವಿರದ ವಿಧೇಯತೆಯ ಗುಣಿ
ತಾನೆ ಬಳಿ ಮಿತ್ರರೊಳಗಿದನೆ ಸ
ಮಾನ ತೆರೆದಿಡುತಿಡುವಿಕೆ ಮಹಾಗುಣೆಯ ವಾಸ್ತವಿಕ ॥ ೧೪ ॥

ಈತನೆನಿಸಿದನಾಗ ಸಖರಿಗೆ
ಯೋತು ಸಹಜಾಧಾರ ಬೆತ್ತದ
ರೀತಿ ಗೋಡೆಯೆ ಕನ್ನಡಿಗೆ ತಳಹದಿಯೆ ಆದಂತೆ ॥
ಜ್ಯೋತಿಯಂತೆನುತೆಲ್ಲರೊಳಗಾ
ಮಾತಿನೊಳ ಪರಿಪಾಲನೆಯ ಸು
ಪ್ರೀತ ಶುದ್ಧಾಚರಣೆಯೊಳ ಕರ್ರವ್ಯಸುಪ್ರಜ್ಞೆ ॥ ೧೫ ॥

ಸಿಸ್ತು ಸಂಯಮ ಶಮದಮಾದಿಗ
ಳಾಸ್ತಿಯೆಂಬಂತೆನುವದಾಚರ
ಣಾಸ್ತಿಯಾಗಿತ್ತಿಹುದ ಹಗಲಿರುಳರಳು ಮಲ್ಲಿಗೆಯ ॥
ವಾಸ್ತವತೆ ಮುಂಧೋರಣೆಯ ಪಥ
ವಸ್ತು ಸಕ್ರಮ ಬದ್ಧ ಬೌದ್ಧಿಕ
ಸುಸ್ತುಗೊಳದಿಹುದಿವನ ಬಗೆ – ನುಡಿದಿಹುದ ಅಥಣೀಶ ॥ ೧೬ ॥

ವಾಣಿ ಬಲುಮೆಲುಕಿಸುತಲಿವನೆಡೆ
ಕಾಣ್ಕೆ ಸುಹೃದನೋಟ ಪಾಠಗ
ಳೇನಿರಲಿ ಅರ್ಥೈಸುತಲಿದೆ ಸಮಾಜ ಹಿತಕಾಗಿ ॥
ಕಾಣುವಂತಾಗಿರಿಸುವಾಶೆ ಸ
ದಾನುಭಾವಿತನಾಗಿರುತಲಿರು
ವಾ ನಯವಿನಯದೀತನ ಬಗೆಗೆ ಸಕಲೆಡೆಗೆ ಸುದ್ದಿ ॥ ೧೭ ॥

ಸೋಮುಸಮ ಸುಮ ಶಾಂತ ಸಂಪದ
ರಾಮಣೀಯಕ ಮಧುರ ಮಾತು ವಿ
ರಾಮದೊಳ ಗಾಂಭೀರ್ಯ ನಿರುಪಮ ನಿರಘ ನಿರಪಾಯ ॥
ಶ್ರೀ ಮಹಾಭಸಿತಾಂಗ ಪಾವನ
ನೇಮ ನಿಯಮಿತಲೋಲ ಲಕ್ಷ್ಯವಿ
ರಾಮಿನಿರವನರಿಯುತಲಿವನ ಬಗೆಗದೆ ನುಡಿಯುತಿರೆ ॥ ೧೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಮಲ ವಾಗ್ಝರಿ ಮಹತೆ ಸುಲಲಿತ
ಸುಮತ ಮತಿ ಮಹನೀಯ ಶುಭಸಿರಿ
ಯಮಿತ ಶುದ್ಧಾಂತಃ ಕರಣವದೆ ಬಿಂಬಿಸುತಲಿರುವ ||
ಕಮಲ ಕಳೆನಯನಾಳಿ ನೆಲೆ ನಿರು
ಪಮದ ಸಂತಸನೀವ ನಿರ್ಮಲ
ದಮಲ ಭಾವದೊಳಿಹನ ಪದ್ಧತಿ ತಿಳಿಯುತತ್ತೆಲ್ಲಾ || ೧೯ ||

ಚಿತ್ತದಿ ಸಮಯನಿಷ್ಠೆ – ಪರಹಿತ
ಗತ್ತ ಗಮ್ಯತೆ ರಮ್ಯ ಶೀತಲ
ಭಿತ್ತಿ ಭಾವನೆ ಕಾಮನೆಯೊಳಾತುರಿದೆ ನಿಜದಿತ್ತ||
ಮೊತ್ತವದೆ ಬೇರ್ಪಡಿಸಲಾಗದು
ದೋತ್ತಮತೆಯಿದೆ ವಿಮಲ ಮಾನಸ
ಮುತ್ತದೊಳಗದೆ ಅರಿವೆ ವಿದ್ಯಾದೈವೆನುವ ಪಥ್ಯ || ೨೦ ||

ಕರುಣ ಕಂಗಳಕಮಲದೊಳಗಿಹು
ದರಳು ಸದ್ಧರ್ಮವದೇ ಸತ್ಯಾ
ಭರಣ–ವಿರತಿ–ವಿವೇಕದು ನಿರಭಿಮಾನತೆಯೊಳಾದ ||
ಪರತರದ ವರವಿದ್ಯೆಲಾಲಸ
ಶರಧಿಯೊಳಗೀಸುವಿಕೆ ಧೋರಣೆ
ತರಣಿ ಕಿರಣಂತಾಶಿಸುತಲಾದಿನದಿ ಪ್ರತಿಭಾಂಗ || ೨೧ ||

ಭಾಗಿಯಾಗಿಹುದಿವನಕಡೆ ಬಿಡ
ದಾಗ ಭಾವನೆ ತಮ್ಮ ಮಠಕನು
ವಾಗಿ ವಟುವಾಗಿರಿಸಿಕೊಳು ಬಗೆ ಯೋಚಿಸುತ ಮೊತ್ತ||
ಮಾಗಿ ಮಾಸದೊಳಾ ದ್ವಿಜರ ದನಿ
ಯೋಗವಾ ನಿಶ್ಯಬ್ಧವಧಿಕತೆ
ಯಾಗಿರುವಪರಿ ಸುತ್ತ ಮುತ್ತಲದಾಗಿತೆನಬೇಕು || ೨೨ ||

ಮೃದುವಚನ – ಚಿಂತನ ವಿಲಾಸದೊ
ಳುದರ ಸುಚರಿತ ನಿತ್ಯದೋತ್ತಮು
ಸದರ ಸಂಗತಿ ಧರ್ಮರತಿಯೊಳಾಗಿಹುದ ನೋಟ ||
ಚದುರ ಚಿದ್ಗುರಿಯದುವೆ ಶಿವಮತ
ಮಧುರದೊಳಗಾಗುತ್ತಲಿರುತಿಹು
ದೊಡವಿ ತಲ್ಲೀನಾಗಿರುವನೆಡೆ ನಿತ್ಯ ನುಡಿ ತೋಟ || ೨೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೂಸು ಮುಖ ಸೌಂದರ್ಯ ಮಿಸುಣಿಯ
ಭಾಷೆ ಹೊರಗೊಳ ಒಂದೇ ಶೋಭಾ
ಕಾಶ ಪೂರಿತ ಪುಷ್ಪ ಸಮ್ಮುದಯಾಳ ನುಡಿಯಾಂಗ ॥
ಹಾಸಿಕೊಂಡಿಹ ಸುಪ್ರಸನ್ನತೆ
ನಾಶಿಕದ ನಿರ್ಮಲನಿರಾಮಯ
ಮಾಸದಿಹ ಮನಸಾರ್ಥಮೇಲ್ಮೆ ಪುನೀತನಿರವಾಂಗ ॥ ೨೪ ॥

ಕೇಳಿ ಕೇಳುತ ನೆರೆಹೊರೆಯ ಪುರ
ಸಾಲು ಮಠದಧಿಪತಿಗಳಾದವ
ರಾಳ ಮನದೊಳ ಲೆಖ್ಖಗೂಡುತಲಿರ್ದುದಾಶ್ಚರ್ಯ ॥
ಮೇಲೆ ಸದ್ರುಚಿ ಫಲದೆಡೆಗೆ ಗಿಳಿ
ಮೇಳವಾದಂತೆನಿಸಿತಾ ದಿನ
ವೇಳೆ ಗೂಡಿದ ಗಾಯನದ ಲಯರಂಗಮಯ ಚರ್ಯ ॥ ೨೫ ॥

ಯಾರು ಈತನದಾರ ಸುತನಿವ
ನಾರು ಸಂಸ್ಕೃತಿಯೊಳಗೆ ಬೆಳೆಸಿದ
ರಾರು ವಿದ್ಯಾಕಲಿಸಿದಂತವರೆತ್ತ– ಬಾವಿಯದ ॥
ನೇರಚರ ಅಥಣೀಶ ನುಡಿದ ವಿ
ಚಾರ ತಿಳಿಯುತಲಂತಿವನ ಕಡೆ
ಸಾರಿ–ದಿನಕರನೆಡೆಗೆ ಪುಷ್ಪದ ಪಾಠವಾದಂತೆ ॥ ೨೬ ॥

ಕೇಳತೊಡಗಿದರಂದು ತಿಳಿಯುತ
ನೀಳಪಿತನಡಿಯಂದು–ವಿದ್ಯಾ
ಶೀಲವರ ಗುರುಮೂರ್ತಿ ಶಾಸ್ತ್ರಿಗಳೆಡೆಗೆ ಬರುತಂದು ॥
ಮಾಲೆ ಸಂಸ್ಕೃತ ಕಾವ್ಯದೊಳಗೆ ವಿ
ಶಾಲ ಲಕ್ಷಿತನಾಗುತೆಲ್ಲವ
ನಾಲಿಯೊಳಗಡಗಿಸುತಲಿದ್ದಂತವನ ತಿಳಿ ತಿಳಿದು ॥ ೨೭ ॥

ಆಶೆಗೂಡುತ ಸಿದ್ಧಲಿಂಗನ
ಭಾಷೆ ಭಾವನೆಗಂಡು ಗಮ್ಯಸ
ದಾಶೆ ಗೂಡುತ ಹೋದವರ ಪಂಕ್ತಿಯೊಳು ತಿಳಿಮುಖ್ಯ ॥
ಕ್ಯಾಸನೂರಿನ ಮಠಕೆ ಮರಿಯಾ
ವಶ್ಯಬೇಕಾಗಿರುವ ಕಾರಣ
ತೋಷ ತುಂಬೊಲವಿಂದ ಕಾಣುತ ಸಿದ್ಧಲಿಂಗಯನ ॥ ೨೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಿವ್ಯತೇಜಃ ಪುಂಜ ಲಕ್ಷಣ
ಭವ್ಯ ಭಾವನೆ ಭರಿತ ಭಾಸುರ
ನವ್ಯ ನವನೀತಂತೆ ಒಳಹೊರಗೊಂದೆಯೆಂಬಂತೆ ॥
ಕಾವ್ಯದಂತಃಭ್ರೂತದಿಹ ಸಂ
ಭಾವ್ಯ ಭಾವ ವಿಭಾವದುದ್ಭವ
ಅವ್ಯಯಾಮೃತ ಶಾಂತರಸ ಸೊಬಗಂತೆ ನಿಲವಂತೆ ॥ ೨೯ ॥

ನಿಲ್ಲದಿಹ ಸಂಗೀತ ಶೀತಲ
ದೆಲ್ಲೆಯಾಗಸದೊಳಸದಾಂಬರ
ಮೆಲ್ಲ ಮೀರಿದ ರೀತಿ ಸಕಲೆಡೆ ತಟ್ಟುತೆಬ್ಬಿಸಿದ ॥
ಹುಲ್ಲದೊಳ ಪರಿಶುಭ್ರ ಪಟಸಮ
ಹುಲ್ಲೆ ಹೊಳಹಿನ ರೀತಿಯವರೊಳ
ಗಲ್ಲಿದಲ್ಲಿಂದಲ್ಲೇ ಪಲ್ಲವಿಸುತ್ತಲಿತ್ತ ಚರ ॥ ೩೦ ॥

ಕ್ಯಾಸನೂರಿನ ಪೂಜ್ಯರಿಗೆ ರವ
ಹಾಸಲವರೊಳಗಾತುರದ ಸವಿ
ಶೇಷ ಭಾವಿತರಾಗುತೀಕಡೆನಂದಿ ಹಳ್ಳಿಗದು ॥
ತೋಷದೊಳಗಾಗಮಿಸುತಿವನ ವಿ
ಕಾಸ ವಿದ್ಯಾವೈಭವದ ಜತೆ–
ಹಾಸಿ ಹೂವಾದಂಥ ಮುಖತೇಜಸ್ವಿಯನೆ ಕಂಡು ॥ ೩೧ ॥

ಈತನಾ ನಯನೊಳಗೆ ಮುಂದಿನ
ಮಾತೆ ಮುಕ್ತಾದಂತೆ ಮೆರಗ ಸ
ಮೇತ ಗಾಣುತ ತಮ್ಮೊಳಗೆ ತಾ ಯೋಚಿಸುತಲಿವನ ॥
ರೀತಿಯಿಂತಮ್ಮಠಕೆಯೊಪ್ಪುವ
ಮಾತ ಶಾಸ್ತ್ರಿಗಳೆದುರಿಡುತಲಿದೆ
ಮಾತು – ಶ್ರೀಶೈಲ ಮಹಸನ್ನಿಧಿಯೆದುರು ತಿಳಿಸಿಹುದ ॥ ೩೨ ॥

ಅಲ್ಲಗಳೆಯದ ನಿಜದ ನಿರುಪಮ
ಪಲ್ಲವಿಯ ಪದಪಂಥವೆಂಬುದ
ನಿಲ್ಲಿಡುವೆನಾ ಸಮಯ ಘಟಿಸಿದ ಘಟನೆ ನೀರಜದು ॥
ಸಲ್ಲಲಿತ ವಟು ಸಿದ್ಧಲಿಂಗ ಪ್ರ
ಫುಲ್ಲಿತ ಪದ ವಿಚಾರ ವೈಖರಿ
ಪಲ್ಲ ಮೆಲ್ನುಡಿಯೊಳ ಸದಾ ಖುತ ಮಾತು ಮಾಣಿಕ್ಯ ॥ ೩೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಲ್ಲದೊಲವ – ಪ್ರಶಾಂತ ಪದ್ಮಜ
ದುಲ್ಲಸಿತ ಮೌನಾರ್ಥ ಮಂದಿರ
ದಲ್ಲಿ ಹುದರದರಾಳ ದೀಪ್ತಿಯದಾಪ್ತನೊಂದೊಂದು ॥
ಉಲ್ಲಸಿತ ಹೊಂಬೆಳಗ ಹೊನಲೊಳ
ಮೆಲ್ಲನರಳುವ ಮಲ್ಲಿಗೆಯ ಮುಖ
ದಲ್ಲೆ ಹೋಲುವ ಹೆಂಪು ಹೆಕ್ಕಳ ಹಣಿಕೆ ಹೆಜ್ಜೇನು ॥ ೩೪ ॥

ಇಂತು ತಿಳಿಸಿಹುದೆಲ್ಲ ಪೀಠ–ನಿ
ತಾಂತ ಶಾಖಾಮಠದ ಪೂಜ್ಯರ
ಸಂತಸದ ಸದ್ವಾಣಿಯಾಲಿಸುತಿವರದಭಿರುಚಿಯ ।
ಕಂತು ಕಂಗಳದಾಂಗಳದಿ ಬಿಡ
ದಿಂತು ಸತ್ಪ್ರತಿಬಿಂಬಿಸಿದ ನುಡಿ
ತಂತುಗಳನಾಲಿಸುತಲೊಪ್ಪಿಗೆಯಿಡುತಲಾದಿನದಿ ॥ ೩೬ ॥

ಹಿಂದೆ ನಡೆದಿಹುದೆಲ್ಲ ತಿಳಿಯುತ
ಲಂದು ಪರಮೇಶ್ವರಯ – ರುದ್ರ
ಮ್ಮಂದು ಸಮ್ಮತಿಯಿಡಲು ಸಿದ್ಧತೆಗೊಳಿಸುತಾ ದಿನದಿ ॥
ನಂದ ಗುರುಮೂರ್ತಿಗಳು ಕರೆಸು
ತ್ತಂದು ಭಕ್ತರ ಭಾವಶುಚಿಯೊಳ
ಗಂದು ಸಕ್ರಮ ಜೋಡನೆಯ ಕೂಡಿಸುತ ಸಂತಸದಿ ॥ ೩೭ ॥

ಕ್ಯಾಸನೂರ : ಪಟ್ಟಾಧಿಕಾರ ೧೯೩೬ ಇಸ್ವಿ

ಕ್ಯಾಸನೂರಿನ ಮಠ ಪರಂಪರೆ
ಭಾಷೆಯಾ ಶ್ರೀಶೈಲ ಪೀಠ ಸ
ದಾಶೆಯದೊಳಿಹುದೆಂಬ ಕಾರಣರಿವರ ಸೂತ್ರದಲಿ ॥
ತೋಷ ಕರುಣೆಯ ಕಿರಣದೊಳ ಪದ
ಭಾಷೆ ಶಾಖಾಮಠವಿದೆ ಗುಂತ್ಕಲ್
ಕೋಶದೊಳ ಪಟ್ಟಾಧಿಕಾರ ಮುಗಿಸುತಿವರಿಗೆ ಹೊಸ ॥ ೩೮ ॥

ಸರಿಯೆ ಜಯಗುರು ವೃಷಭ ಸಾಮಿಗ
ಳುರೆ ಕರೆಯುತಭಿನಾಮದಲಿವರು
ಪರತರದ ಅಭ್ಯಾಸದೊಳಗೆಂದಿನೊಲು ಸಾಗಿರಲು ॥
ಅರಿಯಲೀ ಮಠ ಪೂರ್ವ ವಂಶಜ
ಕುರಿತು – ನ್ಯಾಯಾಲಯದಿ ದೂರುಗ
ಳಿರಿಸಲಿದು ಕೆಳಮಟ್ಟದಲಿ ಸೋಲಾಗಿ ಬಳಿಕವರು ॥ ೩೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಂದೆ ಸಾಗಿ ಅಪೀಲ ಮಾಡಿರ
ಲಂದು ದಿನಗಳೆಯುತ್ತ ಸಾಗಿರ
ಲಂದದರಕಡೆ ಸಾಗಿ ಸಫಲತೆಗೊಳ್ಳುವಾದಿಶೆಗೆ ॥
ತಂದೆ ಪರಮೇಶ್ವರಯನವರಿಗೆ
ಮುಂದುವರೆಯಲು ಸಾಧ್ಯವಾಗದೆ
ಮಂದಗತಿಗೂಡಿರಲಿದರ ಪರಿಣಾಮವಾ ದಿನದಿ ॥ ೩೯ ॥

ವಾದ ಪ್ರತಿವಾದಗಳು ನಡೆದು ವಿ
ವಾದದೊಳಗೆ ವಿರುದ್ಧ ನಿರ್ಣಯ
ವಾದಕಾರಣ ಚಿಂತೆಯೊಳಗಾದಾಗ – ಶಾಸ್ತ್ರಿಗಳು ॥
ಆದುದೆಲ್ಲವನರಿತು ಸೊನ್ನಲ
ಹಾದಿ ಹಿಡಿಯಲು ತಿಳಿಸಿ ವಾರದ
ಆದರೆನಿಪಾ ಪಾಠಶಾಲೆಯೊಳಿರಿಸಲದರಂತೆ ॥ ೪೦ ॥

ಸೂತ್ರದಂತಿರೆ – ಕ್ಯಾಸನೂರಿನ
ಪುತ್ರವರ್ಗದ ಮಠವಿಹುದ ಪರಿ
ಪಾತ್ರದೊಳಗಪಯಶವ ಕಂಡಿಹುದರಿಯಬೇಕಿಲ್ಲಿ ॥
ಗಾತ್ರ ಘಟನೆಯ ಮೆಲುಕಿನೊಳಗೆ ಸು
ಸೂತ್ರದಾಧ್ಯಯನೊಳಿರೆ ತಿಳಿಯುತ
ಚೈತ್ರ ಸಿರಿಗಿರಿ ಸನ್ನಿಧಿಯರುತ್ಸವದು ನಡೆವಬಗೆ ॥ ೪೧ ॥

ಕಲಿಸುತಿಹ ಜಗದೀಶ ಶಾಸ್ತ್ರಿಗ
ಳೊಲವದಿರಲವರೆದುರು ತಿಳಿಸುತ
ಲಲಿತದಪ್ಪಣೆ ಪಡೆದು ಬರುತಾ ಕ್ಯಾಸನೂರಿಂಗೆ ॥
ನಿಲವ ಶ್ರೀಗಿರಿ ಸನ್ನಿಧಾನದೊ
ಳೆಳೆಯ ಮನದಿಂಗಿತವ ನಿರ್ಣಯ
ನೆಲೆಯ ತಿಳಿಸಲಿದಾಲಿಸುತಲೆಂದಿವಗೆ ದಿನದಿ ॥ ೪೨ ॥

ಶ್ರೀಶೈಲ ಸನ್ನಿಧಿವಾಣಿ :

ಈ ಮಠದ ಗೊಡವೆ ಬದಿಗಿರಿಸು
ತಾ ಮಹಾಕಾಶಿಗದು ಸಾಗುತ
ದೇ ಮಹೋನ್ನತಿ ಅಧ್ಯಯನ ಮಾಳ್ಪುದದೇ ಶುಭವೆನುತ ॥
ಸೀಮೆ ಸೀಮೋಲಂಘನ ಫಲ ಸ
ದಾಮಯೆನಿಪಾ ಸಂಸ್ಕೃತಿಯ ಸೆಲೆ
ಸಾಮಯಿಕ ನಿನಗಾಗಬಹುದಿದನರಿತು ನಿಶ್ಚಯಿಸು ॥ ೪೩ ॥

ಚನ್ನಿಧಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಟ್ಟಿಗಟ್ಟಿದ ಬಳಿಕಲರಸನ
ದಿಟ್ಟ ಲಕ್ಷಣಯೋಚನದು – ಜಲ
ತೊಟ್ಟುಯಿಂಗಿಹುದೆಡೆಗೆ ನೋಡುತ ಕುಳಿತ ಪರಿಯಂತೆ ||
ಹೊಟ್ಟೆ ತುಂಬಿದ ಬಳಿಕಲುಣಿಸಿದ
ಗಟ್ಟಿಗರ ಜಾತಿಯನು ಕೇಳುವ
ಮಟ್ಟಸಮವಿದು ಪುತ್ರವರ್ಗಪರಂಪರೆಯ ಶಂಕೆ || ೪೪ ||

ಈ ಮಠದ ನಿರ್ಣಯವ ಬದಿಗಿರಿಸು
ತಾ ಮಹಾಗುರಿಯೊಳಗೆ ಗತಿಸುತ
ಲಾ ಮಹೋನ್ನತಿಯಾಧ್ಯಯನ ಸಂಕಲ್ಪ ನಿನಗಿರಲಿ ||
ಸೀಮೆ ದಾಟುತಲಲ್ಲಿ ಸಂಸ್ಕೃತಿ
ಧಾಮದೊಳಗಾವಾಸ ಮಾಡುವ
ದಾ ಮುಖದೊಳಗರಿಯುವದಿರಲಿದೆ ನಿಶ್ಚಿತಾತುರದೀ || ೪೫ ||

ಹಸಿದು ಮೆಕ್ಕೆಯ ಫಲವನುಂಬುದೆ–
ಹಸಿಬಿಸಿಯನುಣದಯ್ಯ ಉದರಕೆ
ರಸಭರಿಸಲಾರದದು –ದತ್ತಕವಾದ ಬಳಿಕಾತ ||
ಉಸಿರು ಹಿನ್ನೆಲೆ ಮನೆಯದೆಡಗಿಹು
ದೆಸೆವನೋಟವದೆಂತು ಹೇಳಾ
ಹಸಕು ಗುರಿ ದಿಶೆಸರಿಸುತಾಸಾಗಪ್ಪ ನಂಬಿದನು || ೪೬ ||

ಹೊಳೆಯು ತುಂಬಿರುವಾಗ ಅಂಬಿಗ
ನುಲುಹು ತಿಳಿವುದು ಇಳಿದನದಿಯೊಳ
ಗುಳಿದು ಮಾಡುವದೇನು ಲೋಕಾನುಭವ ತೂಗುತರಿ ||
ಕಳಚಿದಾ ಪರಿಯೆಡೆಗೆ ಹಾವದು
ಸುಳಿಯದಂತಿಹುದದರದಿರವನು
ಅಳೆಯುತಳೆಯುತ ಹೊರಡು ಕಾಶಿಗೆ ನಿನಗುಚಿತವಿದುವೆ || ೪೭ ||

ಸಲ್ಲದಿಹ ಸೊಬಗೆಡೆಗೆ ನೋಟದ
ನೆಲ್ಲು ನಾಟಿಗಳೇಕೆ ಮತಿಪಥ
ಸಲ್ಲದೆಡೆಗೆ ನಿರಾಶೆಯೆಂಬುದೇ ಭೇಷಜಿಹುದಿದಕೆ ||
ಪುಲ್ಲಲಿತ ಫಲಭರಿತ ಗಿಡದೆಡೆ
ಕಲ್ಲು ಕಲ್ಸೆದಾಗ ಸಾರ್ಥಕ–
ಕಳ್ಳಿ ಸಿಡಿ ಹಾಯ್ದೆಡೆಗೆ ಲತೆಯೆಡೆಗೆಂಥ ಹೂ ಹಣ್ಣು || ೪೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಟ್ಟ ಮುಳ್ಳನು ತಗೆಯುತದ ಕಿಸೆ
ಗಿಟ್ಟುಕೊಳುವರೆ ಖೊಬ್ಬರಿಯಿರದ
ಪಟ್ಟೆ ಪಾಕಕ್ಕೆಂತು ಬಳಸುವರೆತ್ತ ಬರಿಬರಿದು ||
ಗುಟ್ಟಪದ ಮನದಿರಿಸುತಿದರೆಡೆ
ಗಿಟ್ಟ ನಿನ್ನ ವಿಚಾರ ಧಾರೆರೆ
ನೆಟ್ಟ ಹಂತಿಯ ಮೇಟಿ ಕಟ್ಟಿಗೆಯಂತೆ ಯೋಚಿಸುತ || ೪೯ ||

ಗಟ್ಟಿಗೊಳ್ಳುತ ಸಾಗು ಶಿಕ್ಷಣ
ದಿಟ್ಟ ಮಾಪಕ್ಕೆರೆದು ನಿಷ್ಠೆಯ
ಗುಟ್ಟಗರಿಮೆಯ ಗಂಧಲೇಪಿಸುತಲ್ಲಿ ಸಚ್ಚರಿತ ||
ಬೊಟ್ಟು ಮೆದುಳಿಗೆಯಿಡುತಲಲ್ಲಿಯ
ಬಟ್ಟೆಯನ್ನೆ ಸಮಾಜ ಹಿತದೊಳ
ಗುಟ್ಟನರಳಿಸಿ ಸಾಗು ಹದುಳದಿಯೆನುವದಾಲಿಸುತ || ೫೦ ||

ಸನ್ನಿಧಿಗೆ ಸಾಷ್ಟಾಂಗ ಸಲ್ಲಿಸು
ತುನ್ನತದ ಸಂಭೋದನೆಯ ಸಿಹಿ
ಯನ್ನೆ ಮೆದುಳಿಗೆಡೆ ಬಡಿಸುತ ಸೊಲ್ಲಾಪುರದೆಡೆ ಪದ ||
ಮುನ್ನ ನಡೆದುದನೆಲ್ಲ ಕನಸಿನ
ಹಣ್ಣೆನುತಬದಿಸರಿಸುತಾ ಘನ
ಚನ್ನಮುಂದಿನ ದಾರಿ ಹೆಣೆಯುತಲಿಂತು ಯೋಚಿಸುತ || ೫೧ ||

ಜಯಗುರು ಸ್ವಗತ :

ಲೇಸ ಕಂಡು ಮನಬಯಸಿ ಬಯಸಿ
ಆಶೆ ಮಾಡಿದಡಿಲ್ಲವಾ ಪರಿ (ಬ.ವ.೨೩)
ಯಾಶೆ ತಾಳೆಯಮರದೆಡೆಗೆ ನೋಡುತ್ತ ನೊಂದಂತೆ ||
ಭಾಷೆಯೇನಿರಲಯ್ಯ ನಿಜಪರ
ಮೇಶನೇ ನೀ ನೀವ ಕಾಲ
ಕ್ಯಾಶೆಯಂಥಹುದೆನುತ ಸಾಗುವೆ – ಸೊನ್ನಲಗಿಯೆಡೆಗೆ || ೫೨ ||

ಎನ್ನವಾಮಕ್ಷೇಮ ನಿನ್ನದು (ಬ.ವ.೬೦)
ಎನ್ನ ಹಾನಿ ವೃದ್ಧಿ ನಿಮ್ಮದು
ಎನ್ನದಾ ಮಾನಾಪಮಾನದು ನಿಮ್ಮನಿಮದಯ್ಯ ||
ಚನ್ನದಿಂ ಬೆಳದಂಥಲತೆಗದು
ತನ್ನ ಸತ್ಫಲ ಭಾರವಹುದೆಂ
ತೆನ್ನಲಹುದಾಧಾರದೆಂಥದುದೆನುತ – ಮುಂದೊರೆವೆ || ೫೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿನ್ನೊಲುಮೆಯಿರಲದರ ಫಲವೇ (ಬ.ವ.೬೬)
ನನ್ನಿಲುಮೆ ಸಿದ್ಧಿಸಿತು ಕೊರಡಿದು
ಕಣ್ಣಿಗೊಪ್ಪಂತಿದುವೆ ಕೊನರುವದಿಶೆಗೆಯೀ ಹೆಜ್ಜೆ॥
ನಿನ್ನ ನಿರಿಗೊಪ್ಪಂತೆ ಸಾಗು
ತೆನ್ನ ಸಹಜಭಿಲಾಷೆಗದು ಕೊಡು
ಗೆನ್ನುವಂತಾಯ್ತಿದುವೆ ಹರನೇ ಗಮ್ಯ ಗುರಿಗೆಜ್ಜೆ ॥ ೫೪ ॥

ವಾಚನ :

ಇಂತೆನುತ ನಿರ್ಲಿಪ್ತಮನಸೊಳ
ಗಂತು ಸನ್ನಿಧಿಯಾಜ್ಞೆ ಸೂತ್ರಗ
ಳಾಂತ ಮೆಲುಕಿಸುತೀತ ಮುಂದೊರೆದತ್ತತೆರೆಚಿತ್ತ॥
ಶಾಂತಿಕಂಗಳ ಕಂದ ಕುಮುದಿನಿ
ಯಂತೆಸೆವದಳ ಹೆಜ್ಜೆ ಹೂಯೆಸ
ಳಂತೆ ನಿರ್ಮಲ ನೀರವತೆಯೊಳ ತಲುಪಿ – ಶಾಲೆಗದು ॥ ೫೫ ॥

ಸಂತಸದಿ ಗುರು ಬೋಧದೊಳಗೆ ನಿ
ತಾಂತ ಭಾವುಕನಾಗುತೆಂದಿನ
ಹಂತ ಪಾಠ್ಯಕ್ರಮದೊಳಿರುತಾ ಮತ್ತೆ ಮುಂದಿನದ॥
ಪಂಥ ಹೇಗೆಂಬುವಿಕೆ ಯೋಚಿಸು
ತಂತು ಕಾಶಿಗೆ ಹೊರಡುವಾ ಬಗೆ
ತಂತುರದ ಮಳೆ ಹನಿಯ ಮಣಿಗಳ ಹೆಣಿಕೆ ಮಾಡುತ್ತ ॥ ೫೬ ॥

ಮೌನಮಣಿ ಸುಮುಕಾಂತದಂತಿಹ
ಮಾನದೊಳ ಮತಿ ಮನದ ಮಂಥನ
ಕಾಣದಂತಿಹುದಿದನು ತಿಳಿಯುವದಾತುರಾರಿಗದು॥
ಕಾಣೆನದ ಕರುಳಿರವರೊಳ ತಂ
ತಾನೆ ಉದಯಿಸುವಂತೆ ಜತ್ತದ
ಮಾನನೀಯದ ಸಂಗಮೇಶ್ವರರರಿತು ಮನದಾಳ ॥ ೫೭ ॥

ಮಿತ್ರನೀತನ ಭಾವ ಬಯಕೆ ಪ
ವಿತ್ರತೆಯ ಸಂಕೇತರಿತಿವಗೆ
ಚೈತ್ರ ಚಿತ್ರಸಮಾನರಿಸುತೀ ನನಗೆ ಬರುವಂಥ॥
ಗಾತ್ರದಾರ್ಥಿಕದರ್ಥ ಹಣ ಸ
ತ್ಪಾತ್ರ ಶಿಕ್ಷಣಕ್ಕಾಗಿ ನಿಮಗಿದೋ
ಖಾತ್ರಿ ಕೊಡಮಾಡುವೆನುದಾಲಿಸುತಲಿರುವಾಗ ॥ ೫೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಲವಾರ್ ಜಗದೀಶ ಶಾಸ್ತ್ರಿಗ
ಳಾ ಲತಾಂಗ ವಿಚಾರ ಸುಮದಳ
ನಾಲೆ ಹಿತಕರಮಾತು ಮುಂದಿನ ಹೆಜ್ಜೆಯಿಡುವ ಬಗೆ ||
ಮೇಲೆ ತಾಂಬೂಲಂತೆ ಮನಸಾ
ಪಾಲಿಸುವ ಭಾವನೆಯ ಸವಿಯೊಳ
ಶೀಲನಿವ ಸಮ್ಮತಿಸಿ ಸಾಗಿದ ಗೆಳೆಯರೊಡಗೂಡಿ || ೫೯ ||

ಶೋಷಣೆಯ ಹೊರತಾದ ಹೊನಲ ವಿ
ಭೂಷಣಾಗಿಹುದಾತ್ಮದೊಲವೊಳ
ತೋಷದಾ ಪ್ರಾಸಾದಿಕದ ಪಲ್ಲವದಿ ಪ್ರಸ್ತಾನ ||
ಹಾಸಿದಂಥಹ ಹೂವೊಳಾ ಸಂ
ತೋಷ ಪರಿ ಸವಿಹಾರ ಸಮತೆ ವಿ
ಶೇಷವಾನಂದದೊಳಸಾಗಿದ ರೈಲದೊಳ ತಾನು || ೬೦ ||

ಹಳ್ಳ–ಹೊಳೆ–ಕರಿಯರಳುವಾ ಪರಿ
ಬಳ್ಳಿ ಬೆಳೆಕಳೆ ತರುವಿನಾಶ್ರಯೊ
ಳುಳ್ಳ ಸಮ ಪಾತ್ರತೆಯ ಕಾಣುತ ಗಿರಿಯೊಳಗೆ ಸಲುಗೆ ||
ಹಳ್ಳಿಯೊಳ ಭಾವಾರ್ಥದಿಂ ಮನ
ಸೆಳ್ಳಿನಾ ಹೂ ಭಾವುಕತೆಯಾ
ಕುಳ್ಳಿಯೊಳ ಸಂತಸ ಗೆಳೆಯ ಬಗೆ ಯೋಚಿಸುತೊಳಗೊಳ || ೬೧ ||

ಗೆಳೆಯರೆಂದರೆ ಯಾರು – ಕಾಣದ
ತಳಮಳದ ಹಿನ್ನೆಲೆಯ ಹೊನಲೊಳ
ಸುಳಿದು ಸುಳಿಯುತ್ತದರ ಕಾರಣ ಹುಡುಕಿ ಹುಡುಕುತ್ತ||
ಮೊಳಕೆಗಾಣುತ ಚಿವುಟದಯೆ ತಾ
ಸುಳಿಯುತದಕೆ ಸಹಾಯ ಹಸ್ತದ
ಹೊಳೆ ಹರಿಸುತಾಂತಃಕರಣದೊಳಿರುವದೆ ಮತ್ತೇನು || ೬೨ ||

ಉಕ್ಕುತಿಹುದಾ ಹಾಲದೆಡೆ ಹನಿ
ತಕ್ಕ ತಕ್ಕಂತೆ ಫಲವರಿಯುತ
ನಕ್ಕು ನಗುತದರೆಡೆಗಿರಿಸುವಾತುರ ಯಶಸ್ವಿಯಿರೆ ||
ತಕ್ಕುದಾ ನವನೀತವನೆ ಮುಂದಿಹು
ದಕ್ಕರೆಯಗಾಣುದಕಿದುವೆ ತಾ
ದಿಕ್ಕನರಿಸುವ ಗುರಿಯೊಳಿರವೇ ಗೆಳೆಯ–ಸಖಶಾಮ || ೬೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಂದ ಮೊದಲಿನ ಹೆಜ್ಜೆಯಿಡುವಾ
ನಂದದಿಶೆ ತಾ ಸಹಿತ ಸರಿತಾ
ನಂದ ಜನನಿಯ ಜತನ ತವಕತೆ ಮಗುವಿನಾತುರಕೆ ॥
ಹೊಂದಿ ಸಹನಿರ್ವಹಣೆಯೊಳಗಾ
ನಂದ ಪಡುವಾತುರತೆಯಿರವಾ
ನಂದವೇ ಮತ್ತೇನು ಪರಿಭಾಷೆಯಿದೆ ಪಾವಿತ್ರ್ಯ ॥ ೬೪ ॥

ಬೇಸಿಗೆಯ ಬಿಸಿಲೊಳಗೆ ಬಾಡುತ
ಘಾಸಿಗೊಳುತಿಹುದೆಡೆಗೆ ವರ್ಷಾ
ಭಾಷೆಗೂಡಿಹ ಪರಿಯೊಳನಿರವ ನಿರುಪಮತೆ ಚರಿತೆ ॥
ಭಾಷೆ ಬರದಿಹ ಶಿಶುವಿನಾಳ ವಿ
ಶೇಷವಾತುರ ಮೌನ ಮುದ್ರೆಯ
ಕೋಶ ಕಂಗಳದಾಚರಣ ಸಮತೇನು ಸಖಸೊಬಗ ॥ ೬೫ ॥

ಇಂತು ಭಾವನೆ ಪೂರ್ಣಗೆಳೆಯರ
ದಂತಃಕರಣ ಬಲದೊಳ ಬರುತಿರ
ಲಂತು ದಿಶೆಯೆಡೆ ಮೌನಭಾಷೆಯೊಳಾಗುತ ಜಯಗುರು ॥
ಕಾಂತಿ ಕಂಗಳ ಕುಸುಮದೊಳ ಮಣಿ
ಕಾಂತಿಯನೆ ಭರಿಸುತ್ತ ಕುಸುರಿ ನಿ
ತಾಂತ ನನಸು ಫಲಿಸಿದ ನಳಿನ ಸುಹಾಸದೀಸುತ್ತ ॥ ೬೬ ॥

ಬೇರುಗಳ ಸಕ್ರಿಯ ಸುಶೀಲಾ
ಚಾರದಿಂ ತೆಂಗುಮರ ಫಲ–ಜಲ
ಧಾರೆಯಂತಾ ಪ್ರೇರಣೆಯದಾಧಾರೊಳಗೆ ತಲುಪಿ ॥
ಮೇರೆ ಜಂಗಮವಾಡಿ ಮಠಕೆ ಸ
ಸಾರ ಸುಖದೊಳ ಹೊಳೆಯುತಾ ವಿ
ಸ್ತಾರದೀ ಸುಜ್ಞಾನ ಪೀಠದೊಳಿಟ್ಟನಾ ಹೆಜ್ಜೆ ॥ ೬೭ ॥

ಹಾರದೊಳಗಡಗಿಹುದ ಶುಭ್ರವಿ
ಹಾರದಂತಿಹುದೆಳೆಯ ಕಳೆಯೊಳು
ದಾರದಂತಾತ್ಮಾವಲೋಕನದೊಳಗೆ ಜಯಗುರುವು ॥
ಸಾರಭರಿತಾಪಾರ ಭಾವನೆ
ಪೂರದೊಳ ನೀರಜದ ನಿಜದಾ
ಕಾರದೊಳಗರಳಿಸುದಕಾಗಮನಾಯ್ತು ಹರಿಹರವು ॥ ೬೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರಿಕೆಯೊಳಗಾ ಹೆಜ್ಜೆಯಿಡುವಾ
ತುರದ ಕಂದನ ತವಕ ತೆರೆಯೊಳ
ಗರಳಿ ತಲುಪಿದ ಗುರುವು ತತ್ಕಾಲೀನ ಪೀಠದೊಳ ||
ಪರಮ ಪಂಚಾಕ್ಷರ ಶಿವಾಚಾ
ರ್ಯರ ಪರಾತ್ಪರ ಚರಣಗೆರಗುತ
ಲರಳಿಸುತಲಾತ್ಮದಭಿರುಚಿಯೆಲ್ಲವನು ಬಿಡದಾಗಿ || ೬೯ ||

ಆಲಿಸಿ ಜಗದ್ಗುರುಗಳಾಗ ಸ
ಕಾಲದಾಗಮನಾಯ್ತೆನುತ ಗತಿ
ಶೀಲ ವಿಶ್ವಾರಾಧ್ಯಗುರುಕುಲದಿರಲು ಸಮ್ಮತಿಯ ||
ಸಾಲು ಮುಂದಿರಿಸುತ್ತ ಅಧ್ಯಯ
ನಾಳದೊಳಗಾಗುತ್ತ ಗತಿಮತಿ
ಮಾಲೆಯೊಳಗಿರಿರೆನುತ ಸೌಲಭ್ಯಗಳ ಕರುಣಿಸಲು || ೭೦ ||

ಒಪ್ಪಿದನು ಗೆಳೆಯಬಳಿ ಮತಿಪಥ
ಕೊಪ್ಪುತಲಿ ಕಲಿಸಿಹುದ ಛಂದಸೊ
ಳೊಪ್ಪಿಹುದ ಮಹಾಕಾವ್ಯಗಳ ನೆನಪಿಸುತಲಂದು ಗುರಿ
ಅಪ್ಪ ಶ್ರೀ ಗಿರಿ ತಿಳಿಸಿಹುದ ನುಡಿ
ಹೆಪ್ಪದೊಳ ಮುಳುಗೇಳುತೇಳುತ
ಲೊಪ್ಪಿದನು ಪೀಠದಲಿ ಪದ್ಧತಿ ಪದ್ಮಪದುಳಾಗಿ || ೭೧ ||

ಅಂತೂ ಬೆಳಗು ೮ಕ್ಕಂ ಪದ ೭೧ ಕ್ಕಂ ಒಟ್ಟು ಪದ ೩೬೮ಕ್ಕಂ ಶಿವಂ
೨೬-೧-೨೦೧೬ ಮಾಸೂರು ಮುಕ್ಕಾಂ (ತಾ. ಹಿರೇಕೆರೂರ)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು - ೯

ವಿದ್ಯಾವಿಲಾಸ

ಸೂಚನೆ :

ಕಾಶಿಯೊಳಗದ್ಧ್ಯಯನಶೀಲ ಸು
ಧಾಶೆನಿಪ ಸಾಹಿತ್ಯ ಸಂಪದ
ಕೋಶ – ಸಹಿತಾ– ನ್ಯಾಯ ಶಾಸ್ತ್ರದಿಲೀನ ಸಮ್ಮಾನ

ಸೂಚನೆ :

ವಿದ್ಯೆಯಿದು ತನುವಿಂಗೆ ಭೂಷಣ
ವಿದ್ಯೆಯಿಂ ಸದ್ಗುಣ ವಿಭೂಷಣ
ವಿದ್ಯೆ ಅಷ್ಟಾವರಣ ಪಂಚಾಚಾರ ಷಟ್‌ಸ್ಥಲದ ॥
ವಿದ್ಯ ವಿವರಣೆ ತಿಳಿಯುತಾ ಸಾ
ನಿದ್ಯದೊಳಗುಳಿಯುತ್ತವಿಬುಧರ
ಮದ್ಯದೊಳಜಯಗುರು ಶಿವಾಚಾರ್ಯರರ ದಿನಚರಿಯು ॥ ೧ ॥

ಇಲ್ಲಿರುವ ಸರಕಾರಿ ಸಂಸ್ಕೃತ
ದಲ್ಲಿ ಕಲಿಸುವ ಪದ್ಧತಿಯ ಪದ
ದೊಳ್ಮಮಾ ವಿದ್ಯಾಲಯದ ಪ್ರಾಧ್ಯಾಪಕಾದಂಥ ॥
ಬಲ್ಲಿದಾ ಶಿವದತ್ತಮಿಶ್ರರೊ
ಳಲ್ಲಿ ಕಲಿಕೆ – ನ್ಯಾಯ–ಶಾಸ್ತ್ರದೊ
ಳಲ್ಲಿರುತಲಾ – ಟೀಕಮಣಿ ವಿದ್ಯಾಲಯದೊಳಗದೆ ॥ ೨ ॥

ಚಾರು ತಾರಾಚರಣ ಭಟ್ಟಾ
ಚಾರ್ಯಬಳಿ ಸಾಹಿತ್ಯಶಾಸ್ತ್ರಾ
ಪಾರ ಸಕ್ರಮದಧ್ಯಯನದೊಳ ತೊಡಗಿಹುದ ಬಿಡದೆ ॥
ಸಾರ ಸಮ್ಮತರಾಗುತೆರಡೊಳ
ಮೇರು ಮಾಧುರಿಯೊಳಗೆ ಲೀನ ವಿ
ಹಾರದಿಂ ತೊಡಗಿಹುದ ತಿಳಿಸುವದವರ ದಿನಚರಿಯು ॥ ೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿತ್ಯದೀ ಪಥದೊಳಗಿರುತಲಾ
ಸುತ್ತ್ಯ ಸನ್ನಿಧಿಯಾಜ್ಞೆಯೊಳಗಾ
ಪಥ್ಯದಿಂ ಸೇವಾರ್ಥಿಯಾಗಿಹುದಿಲ್ಲಿ ತಿಳಿಯುವದು ॥
ಕೃತ್ಯದೊಳ ತಪ್ಪದಿಹುದಾಗ್ರತೆ
ಅತ್ಯಧಿಕ ತೊಡಗಿಹುದ ರೀತಿ
ಬೃತ್ಯ ಭಾವನೆಗವನ ಹಾಡುತಲಿದ್ದಿತು ಸುಮತೆರ ॥ ೪ ॥

ಹೀಗೆ ಪೀಠದೊಳಗೆ ಸದಾತುರ
ನಾಗಿ ಸಾಗುತಲಿದ್ದರೂ ಬಿಡ
ದಾಗಿರುತ ಸೋದ್ದೇಶ ತನ್ನೊಳಗೇನಿಹುದಲೊಳಗೆ ॥
ಬಾಗಿದಾ ಹೂ ಲತೆಯೊಳತಿಶಯ
ವಾಗುತರಳಿದ ಸೌರಭಾಂಕುರ
ಯೋಗದಂತಿಹನಿತ್ತದೇ ಅಭ್ಯಾಸದಿ ವಿಶೇಷ ॥ ೫ ॥

ಹಂಚಿಕೊಳ್ಳುತ ಪಾಠದನುಭವ
ಮಂಚದೊಳಗಿರುತಲ್ಲಿ ವಾಗ್ಝರಿ
ಕುಂಚದಿಂದಾರಾಂಗ ಛಾತ್ರರ ಮುಂದೆ ತೆರೆದಿಡುತ ॥
ಚುಂಚದಿಂ ಶುಕ ಹಣ್ಣ ರಸದನಿ
ಇಂಚರದನಾದಾಂಗ ತೆರರಿವ
ಕಂಚುಕಂಠದೊಳಂದು ಶಾಸ್ತ್ರಾಭ್ಯಾಸದೊಳಗಂದು ॥ ೬ ॥

ಚಿಂತನದೊಳಾದಾಗ ತೆರೆದಾ
ಸ್ವಂತಿಕೆಯ ಮಂಡನೆಗಪಯಶವ
ಪಂಥಕಂಡಿರಲದಕೆ ಮನಸಿನೊಳಗೆನಿತೆನಿತಿಡದೆ ॥
ಅಂತರಂಗವಲೋಕನೆಡೆಗೆ ನಿ
ತಾಂತ ಬರುತಿರಲಂತು ಕೊನೆ ಸಹ
ಜಾಂತು ಮೇಲ್ಮೆಯ ಪಡೆದರೂ ಸಮಶಾಂತ ಸಂತಸದಿ ॥ ೭ ॥

ಸೋತರೇನಿದು ಗೆಲುವಿಗೆ ಬಲು
ಬೇತ ಸೋಪಾನೆಂಬುವಾನುಡಿ
ಗೀತದನುಭವಿಯಿೀತ ಪಾಠಕರಿಂಗೆ ಸುಪ್ರೀತ ॥
ಖ್ಯಾತ ಜಂಗಮವಾಡಿ ಮಠದೊಳ
ಗೀತ ರಂಗ ಸುಶಾಂತ ಪರಿ ಪದ
ಪಾತ ಸನ್ನಿಧಿ ನುಡಿದ ಬೆಡಗೊಳ ಮಿಡಿಯು ತಾನಾಗಿ ॥ ೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಚ್ಚರಾಗಿರುತಿರುತ ಪಾಠದೊ
ಳುಚ್ಚಗುರಿ ಗರಿಗೆದರಿದಾ ಸ
ರ್ವೋಚ್ಚ ಭಾವಿತನಾಗಿ ಬಾವಿಯ ಬಗ್ಗೆ ಭಾಸುರದಿ ॥
ಅಚ್ಚ ಸಾತ್ವಿಕ ಶಕ್ತ ಅರೆದಿಹ
ಗಚ್ಚಿನಂತಾಗುತ್ತಲನುದಿನ
ಬಿಚ್ಚಿ ಬೆಳಗುವ ದೀಪ್ತಿಯಂತೆನಿಸುತ್ತಲಾಸರದಿ ॥ ೯ ॥

ಮಲಗಿ ಮಲಗಿದೆನೆನದ ಬದಕಿದು
ನೆಲೆಯನರಿಯದ ಒಲವಿನೊಳ ಬರಿ
ಮೆಲುಕು ಹಾಕುವದಲ್ಲಿ ಕಾಶಿಯೋಳಿರ್ದು ತತ್ವಾದಿ ॥
ಲಲಿತ ಸುಲಲಿತವಾಗುತದರೊಳ
ಗುಲುಕುವಾ ಶಿಶುಗರ್ಭ ಗರಿಮೆಯ
ನಿಲುಮೆಯೊಳಗಾಗಿರುತ ಸಾಗಿದ ಚರಿತನಾಯಕನು ॥ ೧೦ ॥

ಒಮ್ಮೆ ಬಾಹ್ಯ ದೃಷ್ಟಿಯೊಳ ಮ
ತ್ತೊಮ್ಮೆ ಅಂತರ್ಮುಖದಿರುತ ಮ
ತ್ತೊಮ್ಮೆ ಮುಂದೆ ಸಮಾಜಲೇಸನೆ ಬಗೆಗೆ ಸದ್ಭಾವಿ ॥
ಕಮ್ಮನೆಯ ಸುವಿಚಾರಿಗಳು ನಡೆ
ನೆಮ್ಮಿಕೊಂಡಿಹುದನ್ನೆ ಮನನಿಸು
ತೊಮ್ಮನದ ಕಾರ್ಯದೊಳ ತರಬೇಕೆನುತ ಘನಜೀವಿ ॥ ೧೧ ॥

ಸೇವೆಗೂಡುತಲಿದ್ದ ಪೀಠದೋ
ಳಾವದೇ ಕಾರ್ಯಾಂಗ ಕೊನರು ಸ
ದಾವಕಾಲದೊಳಿರಲಿ ಬೇಸರಿಸದಯೆ ಮನಭೂರಿ ॥
ಭಾವಪೂರಿತ ಸೇವೆಗೂಡುತ
ದಾವ ಶಬ್ಧವ ನುಡಿಯದಾಪರಿ
ಭಾವಿ ಸೇವಿಸುತದೆ ಪುರಾತನರಾಳ ನಿರಿಸೇರಿ ॥ ೧೨ ॥

ಮುಗುಧನಂತಿರುತಿರುತ ಮನಸೊಳ
ಗಗಣಿತದ ಲೇಸನ್ನೇ ಬಯಸುತ
ನಿಗದಿಡಿದು ಸಹಜೊಳಗೆ ಬೆಳಗಿರೆ ಮಾತ್ರ ಹೊರಹಾಗೆ ॥
ಜಗದ ಬೆಳಗಿಸಬಹುದೆನುತ ಮತಿ
ಜಗಜಗಿಸುತನುವೇಳೆ ಮೇಳದೊ
ಳಗದಿ ಭಾವಿತನಾಗಿರುತ ಪರಿಯಂತೆ ಅನುದಿನದಿ ॥ ೧೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡಿದೆನುವಿಕೆ ಮನದಿ ಹೊಳೆದರೆ
ಏಡಿಸುತ ಕಾಡಿತ್ತು ಪರಶಿವ
ನಾಡಿನೋಡಿರೆ ಶಿವನಡಂಗುರವೆನುತ ಹಿತವಾಗಿ ||
ಮಾಡಿ ಮಾಡಿದೆನೆನದ ಜೀವನ
ಗೂಡಲದೆ ತಾನಾಗುತರಿಯುತ
ಬೇಡಿಹುದ ಕೊಡುವಾತನೆನುತ ಬಸವಾತ್ಮಕರೆಯಂತೆ || ೧೪ ||

ನೋಡು ನಯನೆರಡಿರುತಿರಲು ಸರಿ
ನೋಡಬೇಕಾಗಿಹುದ ನೋಡು
ತ್ತಾಡಬೇಕಾಗಿಹುದನಾಡುತರಿರುತಲನುದಿನದಿ ||
ಕೂಡಿ ಕಂಗಳ ಕುಮುದಿನಿಯದೊಳ
ಬಾಡದಂಥಹ ಬೆಳಕದೊಳಗನು
ಜೋಡಿ ಜೋಡಾಗುತ್ತಸಾಗಿದ ಶಾಂತ ಸಂಭ್ರಮದಿ || ೧೫ ||

ಶಾಂತಸೆಲೆ ಸಂಪನ್ನ ವಿದ್ಯಾ
ಕಾಂತ ದಯಮಯ ಮಾನವೀಯತೆ
ಹಂತ ಧೀಮಂತಿಕೆಯ ಭಾವ ವಿಹಾರಿ ಸುವಿಚಾರಿ |
ತಂತು ತನ್ನೊಳ ಶೈಕ್ಷಣಿಕ ಸೂ
ತ್ರಾಂತಕರಣೊಳ ನೈತಿಕದ ನಿಜ
ಕಂತು ಕಂತೊಳ ತರುತ ಬಗೆ ಸಾಂಸ್ಕೃತಿಕದತ್ತತ್ತ || ೧೬ ||

ಕೆಲ ಕಲಿಯುದಕೆ ಬಂದವರ ಮನ
ದೊಲವದೇ ಒಂದೊಂದು ಪರಿಯಿಹು
ದಲೆಯದಂತಿಹನೀತ ಹೊರಗೊಳಗೊಂದೆ ಸದ್ಭಾವಿ ||
ನಿಲವ ಪುರದೊಳಗೊಂದು ಇರುವಿಕೆ
ಲಲಿತ ಕಟ್ಟಾಚಾರದೊಳಗದ
ನಳಿದು ಸಾಗುವರಂತೆನದುದೀತನದು ನುಡಿಸಜ್ಜೆ || ೧೭ ||

ಸರಳಿವನ ದಿನಚರಿಯು ದಿನಕರ
ದಿರವಹುದದೇ ಸುಪ್ರಕಾಶ ಸು
ಸರಣಿಯಂತಿಹುದಾತ್ಮ ಸಾಕ್ಷಿಯೊಳಾಂಗಣದಿ ಹೆಜ್ಜೆ ||
ಹಿರಿಮೆಯೊಳಗಿಹುದರಿಯುತಿಹ ಮಹ
ಗುರುಗಳೆಲ್ಲವನಿವನ ನಿಜದಿಹು
ದರಳು ಸಾಂಪ್ರತಸರಳಗಾಣುತ ತೋಷದೊಳಗವರು || ೧೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತಿರುತಲಿರುತಿದಕೆ ಜತ್ತದ
ಶಾಂತದಾಗರ ಸಂಗಮೇಶ್ವರ
ಸಂತತದ ಸಹಕಾರದಲಿ ಕಲಿಯುತಲಿರುತ ರೀತಿ ||
ಎಂತು ಯಾರೂ ಕಸಿದುಕೊಳದಿಹು
ದಾಂತರಿಕವಾನಂದ ಭರಿಸುವ
ದೆಂತೆನುವವಿದ್ಯಾಂಗದೊಳ ಫಲಗೊಳುತಲಿರಲಾಗ || ೧೯ ||

ಸನ್ನಿಧಿಯು ಲಿಂಗೈಕ್ಯರಾದ್ವಳಿ
ಕೆನ್ನಿ ಪೀಠಾಧಿಪತಿಗಳಿವರೆ
ಚನ್ನ ಚಿದ್ಘನವೀರಭದ್ರ ಶಿವಾನುಭವಿ ಸುಮತ ||
ಹಿನ್ನಲೆಯ ಪದ್ಧತಿಯದೊಳ ಸಂ
ಪನ್ನದಿಂ ಪಾಲಿಸುತ ಸಾಗಿದ
ರೆನ್ನಿ ಗುರುಕುಲಸಹಿತ ಸಾಂಪ್ರತದೊಳಗೆ ಇರಲಿತ್ತ || ೨೦ ||

ಚರಿತನಾಯಕ ಬರುತ ನಾಡಿಗೆ
ಸರಳ ಸನ್ಮತಿ ಸಂಗಮೇಶ್ವರ
ವರ ಜತೆಗೆ ಸಹಪಾಠಿಗಳು ಸಹಿತಾಗುತಾ ದಿನದಿ ||
ಭರಿತ ಭಕ್ತರಭಾವ ಬೆಡಗೊಳ
ಗಿಝತವರ ದೇಣಿಗೆಯವಾದೊರೆ *
ತಿರಲದೇ ಸಂಗ್ರಹಿಸಿ ಮರಳುತ ಕಾಶಿಯೆಡೆಗಂದು || ೨೧ ||

ಬರುತ ಸದ್ಗುಣ ಸರಿತ ಸಂಪದ
ನಿರತ ಶಾಂತ ಚಿದಾಂತದಿಂಪದ
ಚರಿತನಾಯಕನಾಂತರಿಕ ಇಂದ್ರಿಯವ ಜಯಿಸುತ್ತ ||
ತ್ವರಿತದಭ್ಯಾಸದೆ ಸದಾತುರ
ಭರಿತ ಮುದಿತನದೊಳಗು ನಿಜನಿಧಿ
ಕುರಿತ ಪಾಲಿಸುವಂಥ – ವಿದ್ಯೆಯದೊಳಗೆ ಮುಳುಗುತ್ತ || ೨೨ ||

ಸಾಗುತಿರಲಿವರೊಳಗೆ ಮೂಡು
ತ್ತಾಗುವಾಪ್ರತಿಬಿಂಬಿಸುವ ಮಣಿ
ಯಾಗುತಾಚರಣೊಳಗು ಗೌರವದಿಂದ ಗರಿಗತ್ತ ||
ಯೋಗ ತನ್ನೊಳಗಿರಿಸಿದಂಥ ವಿ
ಭಾಗ ವೈಭವ ನಯನದೊಳಗೆ ಸ
ರಾಗ ಸಫಲಾನಂದವೆನಿಸುವ ರೀತಿವನ ಚಿತ್ತ || ೨೩ ||

---

* ನೆನಹು ನೋಡಿರಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿನಯವಾರಿಧಿರೂಪದೊಳಗನು
ಗುಣೆಯಿರವ ಸಂತೋಷ ಸಂಪಿಗೆ
ಘನತೆಯೊಳಗಡಗಿರುವ ಸರಳತೆ ಸಂಯಮಾತ್ಮಜತೆ ||
ಹಣಿಕೆ ಹಾಕಿಹುದೆಡೆ ಸದಾ ಖುತ
ಕುಣಿಕೆ–ಕಂಗಳ–ಮತಿಸಮಾಹಿತ
ದೆಣಿಕೆ ಯಾತರಹುಲಿಕೆಯಿವರೊಳ ಕಂಡವಗೆ ಹಣತೆ || ೨೪ ||

ನೋಡಲಿದುವೇ ದ್ರವ್ಯವಾ ದ್ರುವ
ನಾಡೆ ಮಿಣಗುತ ತಾರೆಯೊಳ ನವ
ನಾಡಿಯೆಂತೆನಿಪಂತೆ ಗೋಚರವಂತೆ ನಿಜವಂತೆ ||
ಬಾಡದಿಹದಲೆಯಂತೆ ಮಾನಸ
ದಾಡಿಹುದ ಸೆಲೆಯಂತೆ ಸಂತಸ
ಗೂಡಿಹುದ ಶಿಶುವಂತೆ ಸದ್ರಸ ಸೊಬಗದೊಳಗಂತೆ || ೨೫ ||

ದೊರೆತದರೊಳಗೆ ತೋಷದಿರುತಿಹು
ದರಿತ ತತ್ವಳಿ ಹೆಣೆಯುತಿರುತಿಹು
ದರಳದೊಳ ಸಂತೋಷಪಡುತಿರೆ ಬಂದೆರಗಿದಂಥ ||
ಕೊರತೆಯೊಳ ಕೈರವತೆ ಕಂಗಳ
ದರಳೆಯೊಳ ಸಂತೃಪ್ತಿಸಮತಾ
ಕರುಳದೊಳಗದೆ ಶಾಂತತೆಯ ತೆರೆಯಿೀಸುತಿರುವಂಥ || ೨೬ ||

ನಿತ್ಯದಿ ಜಯಗುರು ವೃಷಭರೊಳ
ಗತ್ಯಧಿಕ ಹಲರಿದನೆ ಕಾಣುತ
ಪಥ್ಯದಿಹ–ನುಡಿ–ನೋಟ–ನಡೆ–ಹಿಡಿ–ಮುಡಿಯುತಿಹುದೆಡೆಗೆ ||
ಭೃತ್ಯ ಭಾವಾಸನ್ನಗೊಂಡಿಹ
ತಥ್ಯದೊಳಗವರಿರವ ನರಿಯುತ
ನಿತ್ಯ ಗೋಪುರದಡಗಿದಾ ಹೊಳಹಂತೆ ಸನ್ನಿಧಿಯು || ೨೭ ||

ತಮ್ಮ ಕಾರ್ಯಾಲಯದೊಳಗಿರುವ
ದೊಮ್ಮತದ ಕೆಲಸೊಳಗೆ ತೊಡಗಿಸು
ತೊಮ್ಮನದ ಕಾರ್ಯಾರ್ಥ ಗುರಿಗಣೆತಾರ್ಥ ತತ್ವಾರ್ಥ ||
ಕಮ್ಮನೆಯ ಬೆಳೆ ಕದಳಿ ಫಲರಸ
ಸುಮ್ಮನಡಗಿಹುದದೆ ನಿರಾಳವ
ನೆಮ್ಮಿ ಸಂತಸ ಪಡುತಲೊಳಗೊಳ ಮಾತೆ ಸಮತೀರ್ಥ || ೨೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರ್ಥದೊಳಗಡಗಿಹುದ ಬೆಲೆ ಚರಿ
ತಾರ್ಥ ಮೌಲ್ಯ ನೆಲೆಯೊಳಡಗಿದ ಪ
ದಾರ್ಥವನೆಯೆಡೆ ಮಾಳ್ಪ ಕುಶಲತೆ ಸಂತತೆಳೆಕೋಶ ||
ಸಾರ್ಥಕತೆ ಪಡಿಸುವಿಕೆಯಾತುರ
ಪ್ರಾರ್ಥನೆಯ ಪದಪದ್ಮದಿಹ ನಯ
ನಾರ್ಥ ವೈವಿಧ್ಯದೊಳ ಮನಗಾಣುತ್ತ ಸಂತೋಷ || ೨೯ ||

ಪಡುತಲಿರೆ ಪೂಜ್ಯರರ ಪೂರ್ವದಿ
ಮುಡಿದ ವಿಶ್ವಾರಾಧ್ಯಬ್ಯಾಂಕಿನ
ಒಡಲೊಳಡಗಿದ ನಾಳ ಮೇಳದದೊಳಗೆ ನಡೆದಿಹುದ ||
ಬಿಡದಿಹ ಅಚಾತುರ್ಯ ಕಂಡಂ
ತೆಡೆದ ಬಗೆ ಯೋಚಿಸುತಲಿರುತದ
ರೆಡೆಗೆ ಚಿಂತನಗೂಡುವಿಕೆಯೊಳಗಿರುತ ಸನ್ನಿಧಿಯು || ೩೦ ||

ಇದರೆಡೆಗೆ ಯೋಚಿಸುತಲಿರುತೊಳ
ಗಿದಕಿಹುದದಾವ ಬಗೆ ಪಥಗತಿ
ಪದರದಿಶೆ ಹದ ಹುಡುಕುತುರೆ ತಮ್ಮೊಳಗೆ ತಾವಾಗಿ ||
ಪದಪದದಿ ಗುರುಕುಲದೊಳಿವರೆಡೆ
ನೆದರಿಡುತಲಿರಲಲ್ಲಿವರೊಳಗೆ
ಚದುರ ಸದ್ಗುಣಶೀಲ ಜಯಗುರು ವೃಷಭರೆಡೆಗಧಿಕ || ೩೧ ||

ನೋಡಿ ನೋಡುತಲಿದ್ದರಾ ಮನ
ಗೂಡುತಾಡುತ ಸಿದ್ಧ ಸಿಹಿ ಗುಣ
ತೀಡದಂಥಹ ಭಾತಿ ಭಾಸುರದಹುದದಾ ಸುಘನ ||
ಕೋಡಿಯೊಳಗಡಗಿರುವ ಮೆರಗ ನಿ
ಗೂಢ ಗರಿ ಗಾಂಭೀರ್ಯಯಶಗುಣ
ಗಾಢ ಮೇಳ ಮಹಾಂತ ಕರಣದಿಹುದರಿತಾ ಸುಮನ || ೩೨ ||

ಎಲ್ಲವಂ ಮಥನಿಸುತ ನಿಶ್ಚಿತ
ವಲ್ಲಿಯೊಳ ಕಂಡಿಹುದ ನನೆಯೊಳ
ನಿಲ್ಲದಿಹ ಸೌರಭೆಳೆ ಸಲೆಸೌಂದರ್ಯ ಸೊಬಗವದೆ ||
ಮೆಲ್ಲಗರಳಿಸಿ ಪರಿಸರದಿ ಬಿಡ
ದೆಲ್ಲ ಭರಿಸುವ ಭರಣಿ ಭಂಡಾ
ರಿಲ್ಲಿವನೊಳಡಗಿಹುದ ನರಿತೇ ನಿಶ್ಚಯಿಸುತಾಗ || ೩೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಚ್ಚರಿಕೆಯೊಳಗಾಗಿ ಶುಭದಿನ
ದಚ್ಚರಿಯ ಪಡುವಂತೆಯೇ ಮನ
ಬಿಚ್ಚಿಡುತಲಕ್ಷರದಿ ಸಹಜಾತುರದಿ ಸಚ್ಚಿತ್ರ ॥
ನಿಚ್ಚಳೆನಿಪಾ ಮೃತ್ಯುಪತ್ರವ
ಗಚ್ಚಿಗುರಿಯೊಳಗಾತ್ಮಸಾಕ್ಷಿಯೊ
ಳಚ್ಚಳಿಯದಾ ಜಯಗುರು ವೃಷಭರಿವರ ಹೆಸರೊಳು ॥ ೩೪ ॥

ತುಂಬ ಭಾವಿಕರಾಗಿ ಬರೆದುದ
ನಂಬಬೇಕಿದನಂದು ಈ ಪ್ರತಿ
ಬಿಂಬ ಮಠದ ಮ್ಯಾನೆಜರ ರಾಮಪ್ರಸಾದರಿಗೆ ॥
ಇಂಬುಗೊಂಡಿಹಭಾವ ಸವಿರಸ
ನಿಂಬು ಚಿತ್ಪ್ರಭೆ ಚಂಬುಸನ್ನಿಧಿ
ಅಂಬುಜಾತ್ಮನ ಹೆಸರ ತಿಳಿಸುತಲಂದು ಸಾಗಿರಲು ॥ ೩೫ ॥

ಮುಂದೆಯದು ಆರಬ್ಧ ಗುಣಗುರಿ
ಹೊಂದಿ ಪೀಡಿತರಾಗುತಿರುತಿರ
ಲಂದು ವಾತ್ಸವ ವೀರಭದ್ರ ಮಹಾನುಭಾವಿಗಳು ॥
ಮುಂದೆ ಲಿಂಗೈಕ್ಯಾಗಲಾ ಬಳಿ
ಕಂದು ಕರುನಾಡೆಡೆಗೆ ತಿಳಿಸು
ತ್ತಂದು ಹಲದಿಶೆಯಿಂದ ಬಂದವರೆದುರು ಸ ಸಮಾಧಿ ॥ ೩೬ ॥

ಮಟ್ಟಗೊಳಿಸುವ ವೇಳೆ ಬರೆಯು
ತಿಟ್ಟದಾ ದಾಖಲೆಯ ಪತ್ರವ
ನೆಟ್ಟನಿರಿಯೊಳಬಂದಿಹುದ ಭಕ್ತರಿಗೆ ಭಾವದಲಿ ॥
ಕೊಟ್ಟಿಹುದ ಪೀಠಾಧಿಪತಿಗಳೆ
ಗಟ್ಟಿ ಜಯಗುರು ವೃಷಭರಿಗೆ ಬರೆ
ದಿಟ್ಟ ಲೇಖನ ಓದುತಾ ಕ್ರಿಯೆ ಮುಗಿಸುತಾ ಕ್ರಮದಿ ॥ ೩೭ ॥

ತಿಳಿವುದು ಜನೇವರಿಯ ದೆಣಿಕೆಯೊ *
ಳುಲುಹು ಇಪ್ಪತ್ತೈದು ತೇದಿಯ
ಸುಳುಹ ಹತ್ತೊಂಭತ್ತನೂರಾ ನಾಲ್ವತೆಂಟು ಸವಿ ॥
ಬಳಗ ಭಾವನೆಗೂಡಿ ಪದ್ಧತಿ
ಸಮಾಧಿ ಕ್ರಿಯೆಯೊಳ ಮುಗಿಸು
ತ್ತಳೆಯದಂಥಹ ಭಾವನೋವೊಳಗಂದವರದಾಯ್ತು ॥ ೩೮ ॥

---

* ೨೫–೧–೧೯೪೮ ರ ಲಿಂಗೈಕ್ಯ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತುಂಗಪೀಠದಿ ನಡೆದುದೀ ಘಟ
ನಾಂಗದೊಳ ತಮ್ಮೆಸರು ಪ್ರಕಟಿತ
ಸಂಗತಿಯನಾಲಿಸುತ ಜಯಗುರು ವೃಷಭರಿಗೆ ಚಕಿತ ॥
ಕಂಗಳದಿಕೊನರಿಸಿರೆ ಜತ್ತದ
ಸಂಗಮೇಶ್ವರಚರರು ಧೈರ್ಯವ
ರಂಗದೊಳ ತೆರೆದಿಡುತಲಾಫಳದಂದು ಮತಿವಿಹಿತ ॥ ೩೯ ॥

ಗೆಳೆಯ ಗರಿಮಾ ಗುರಿಯ ಗಾಂಭೀ
ರ್ಯಳೆಯದಾಶ್ರಯದೊಳಗೆ ಜಯಗುರು
ಕಳೆಯತೊಡಗಿದ ದಿನವ ಮುಂದಿನ ಮಾರ್ಗ ಪೀಠಾಳ ॥
ಅಳೆಯತೊಡಗಿದ ತಾನೆ ತನ್ನೊಳ
ಸುಳಿವದಲೆಯೊಳಗಾಗಿ ಸದ್ಗುರಿ
ಸುಳಿವ ಬಲ ತನಗೆಂತಹುದಿದೆನುತಾಳ ಮೇಳದಲಿ ॥ ೪೦ ॥

ಕಾರ್ಯದರ್ಶಿಯ ಕಥನ ಕವನೊಳ
ಕಾರ್ಯದೊಳಗವರಡಗಿಹ ಶಿವಾ
ಚಾರ್ಯರವರದೆ ಬರಹದಿಂದರಿಯುತ್ತಲೊಂದೊಂದು ॥
ಚರ್ಯದೊಳ ತರುವಂಥನುಡಿ ಗುರು
ವರ್ಯರಾ ಮನಸಾಳದೊಳ ಚಾ
ತುರ್ಯವಡಗಿಹುದರಿಯುತಾ ಚಿದ್ಭಾವದೈಶ್ವರ್ಯ ॥ ೪೧ ॥

ಬಾಗಿ ತಿಳಿಯುತಲೆಲ್ಲವಂ ಸಲಿ
ಸಾಗಿ ಸದ್ಗುರಿ ಕಾರ್ಯದೊಳ ನಿಜ
ವಾಗಿ ತರಬಹುದೆಂಥ ಯೋಚನೆಯೆನುತ ಭಾವಿಯದ ॥
ಯೋಗಯೆಂತಿಹುದೆನುತಲನುಬಿಡ
ದಾಗಿ ಚಿಂತಿಸುತಿರುವದೆಲ್ಲ ಸ
ರಾಗಕೆ ಸಮಾಧಾನಪಡಿಸುತ ಸಂಗಮೇಶ್ವರರು ॥ ೪೨ ॥

ಹೆಜ್ಜೆ ಹೆಜ್ಜೆಗೆ ಭಾವ ಹೂದಳ
ಸಜ್ಜನಿಕೆ ಕರದಿಡುತಲನುದಿನ
ಸಜ್ಜಿಕೆಯದೊಳಗಿಡುವ ಇಷ್ಟದ ಸಮತೆ ಸದ್ವಾಣಿ ॥
ಸಜ್ಜೆ ಊಬವಕಳೆಯುತದರಿಂ
ಕಜ್ಜವನೆ ಮಾಳ್ಪಂತೆ ಸತತಂ
ಸಜ್ಜುಗೊಳಿಸುತಲಿರ್ದರಾ ಸಖರೆಲ್ಲರನುವಾಗಿ ॥ ೪೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೃದ್ಯತಮಹಿತವಾಣಿಯೊಳಗಾ
ರಾಧ್ಯ ಸನ್ನಿಧಿ ಪದದಿ ಬೆಳಗುವ
ಚೋದ್ಯ ನನದಾಗಿಹುದಿದೆಂಬುವ ಭಾವಕದಳಿಯಲಿ ॥
ಸದ್ಯ ಸಾಧಿಸುವಂಥ ಸೂತ್ರಾ
ರಾಧ್ಯ ಗೂಡುತಲಿರುವದೇ ಪದ
ಪಾದ್ಯವೆಂದೆನುತಾತ್ಮಗತ ಮನನಿಸುತ ಜಯಗುರುವು ॥ ೪೪ ॥

ಅಂತೂ ಬೆಳಗು ೯ಕ್ಕಂ ಪದ ೪೪ ಕ್ಕಂ ಒಟ್ಟು ಪದ ೪೧೨ಕ್ಕಂ ಶಿವಂ
೧-೨-೨೦೧೬. ಸೋಮವಾರ ಸ್ವಾತಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು - ೧೦

ಪೀಠ ಪ್ರಸಾದ

ಸೂಚನೆ :

ಮೃತ್ಯುಪತ್ರಾಧಾರದೊಳ ಪಾ
ವಿತ್ರ್ಯ – ಪೀಠಾರೋಹಣದು ಚಾ
ರಿತ್ರ್ಯದೊಳಗುಳಿವಂತೆಯಿದು ಸುಜ್ಞಾನ ಸಾಂದ್ರದಲಿ॥

ವಾಚನ :

ನಿನ್ನೆಗಳದೇನಿರಲಿ ಇಂದಿನ
ಬೆಣ್ಣೆಯೊಳ ಬಿಂಬಾಳ ಹರಳಿಹು
ದನ್ನೆತಗೆದಿರಿಸುತ್ತ ಪರಿಶುದ್ಧಿರಿಸಿಕೊಳುವ ಬಗೆ॥
ಕಣ್ಣು ಮುಂದಿಹುದಿದುವೆಯಾರ್ಥಿಕ
ಮಣ್ಣಿನೊಳಗಿಹುದುಣ್ಣೆಯಂತಿರ
ಲೆನ್ನನುಡಿಯಿದಕಾವದೆನ್ನುತ ನಡೆದ ಜಯಗುರುವು ॥ ೧ ॥

ಪೀಠದಿಹುದಧಿಕಾರ ಸೂತ್ರದ
ಪಾಠಪದ್ಧತಿ ಪಲ್ಲವಿಯ ಪರಿ
ಪಾಠದೊಳಗಿಳಿದಿಳಿಯುತಾಳದೊಳಿರುವ ಮೌಕ್ತಿಕದ॥
ಮಾಟದೊಳಗಡಗಿಹ ಮಹತ್ವ ಪ
ದಾಟದಿಹ ಸಾಧಕತೆ ಬಾಧಕ
ನಾಟಿಗಳ ನರಿಯುತ್ತಲುತ್ತಮವಾದುದಾ ಗ್ರಹಿಸಿ ॥ ೨ ॥

ನಡೆಸುತ ಯಥಾವಸ್ತುಸಮಯದೊ
ಳಿಡೆಬಿಡದಿಡುತ ಚಿತ್ತಚನ್ನುಡಿ
ಮಿಡಿಯೊಳಗೆ ಮತಿಗತ್ತುಗಾಂಭೀರ್ಯಗರಿಯೊಳ ಸುತ್ತು॥
ಸೆಡಗರದೊಳಾವತ್ತುಹರ್ಷ ತು
ಕುಡಿಯೊಳಗೆ ನುಡಿಮುತ್ತುಮಾಲೆಯ
ಳಿಡುತದೇ ಹಿತಹೊತ್ತು ಹೊನಲೊಳಗಿರಲೆನುವ ಬಿತ್ತು ॥ ೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೊತ್ತರಿಯುತಾಚರಣೆಯೊಳಗಿರ
ಲಿತ್ತ ತೊಡಗಿರಲೇನಿದುವು ಬಿಡ
ದಿತ್ತ ಮಾಸೂರೊಳಗೆ ನಡೆದುದೆ ತಿಳಿಯುತೆಲ್ಲರೊಳು ||
ಹೊತ್ತರಳಿ ಹೂ ಹಗಲ ಹೊಂಪುಳಿ
ಹೆತ್ತ ಕರುಳೊಳ ಹೊಂಬಿಸಿಲ ಸಹ
ಚಿತ್ತವಳ ಮುಖ ಕಮಲದೊಳ ಖುಷಿಯಂತೆಯಿದೆ ಸುತ್ತ || ೪ ||

ಹೊಂಬರಹದಂತರಳುತದರೊಳ
ಗಿಂಬುದಿಂಬಾಗಿಹುದ ಹದುಳಿಳೆ
ಹೊಂಬೆಳಗು ಮುಖ ಹಂಸಿ ಅಥಣೀಶನ ಭವಿಷ್ಯನುಡಿ ||
ತುಂಬಳಿದ ಪರಿಪಕ್ವತಾಮ್ರದೊ
ಳಿಂಬು ತುಂಬಾದಂಥ ಪರಿಮಳ
ಹಿಂಬದಿಗೆ ಮುಂಬದಿಗೆ ವಿಸ್ತರಣಾಯಿತ್ತೇ ಹರಡಿ || ೫ ||

ಇಂತು ಕರುನಾಡೊಳಗೆ ನುಡಿ ಸಹ
ಜಂತದೇ ಮಾಸೂರದೆಡ ಬಲ
ಹಂತಹಂತದೊಳಿದುವೆ ಭೂಸೆಲೆ ವಿಕಸಿತಾದಂತೆ ||
ಸಂತತ ಪ್ರಕಾಶಿಸುವ ಪರಿಯೊಳ
ಗಂತು ಗರಿಮೆಯ ನಿಲುಮೆ ಚಿಲುಮೆಯ
ದಿಂತು ಕಂಡಿರಲೇನು ಕಾಶಿಯೊಳಿತ್ತ ಜಯಗುರುವು || ೬ ||

ದಿನಗಳೆಯುತಿರಲಾಗ ಮುಂದಿನ
ದಿನದೊಳಗೆ – ಪಟ್ಟಾಭಿಷೇಕದ
ಯೆಣಿಕೆ ಭಕುತರೊಳಗಿದ ಚರ್ಚಿಸಿ ಮಿತಿಯ ನಿಶ್ಚಯಿಸಿ ||
ದಿನಗಳೆಯದೇ ತಾವೇ ಹೊರಡುತ
ಲನುವದಿಂ ರಂಭಾಪುರಿಗೆ ತಲು
ಪಿ ನಯದೊಳಗುಜ್ಜಯಿನಿ ಸಹ–ಕೇದಾರ–ಶ್ರೀ ಶೈಲ || ೭ ||

ಸನ್ನಿಧಿಯವರಿಗಿರಿಸುತಲಿ ಸಂ
ಪನ್ನದಿಂದಾಗಮಿಸಿರೆನ್ನುತ
ಚನ್ನುಡಿಯನಿಟ್ಟಂತೆ ಹರಗುರು ಪದದಿ ಸಹಿತಾಗಿ ||
ಮುನ್ನಡೆದು ಸಕಲೆಡೆಗೆ ತಿಳಿಸುತ
ಬನ್ನಿರೆನ್ನುತ ಭಕ್ತರಿಗೆ ನುಡಿ
ಬೆಣ್ಣೆ ಭಾವದೊಳಿರಿಸಿ ಕಾರ್ಯ ಯಶಸ್ವಿಗೊಳಿಸೆನುತ || ೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪತ್ರಿಕೆಯ ಹೊರತಂದು ಸಕಲೆಡೆ
ಖಾತ್ರಿಯಿಂ ಕಳಿಸಲ್ಕೆ ಹರಗುರು
ಯಾತ್ರೆಗೂಡುತ ತಲುಪಿ ಕಾಶಿಗೆ ಮೂರ್ತಕದು ಬಿಡದೆ ॥
ಪಾತ್ರಕದು ತಕ್ಕಂತೆ ಪಥಗತಿ
ಗಾತ್ರ ಗುರಿಯೊಳಗಾಗುತನು ಪರಿ
ಸೂತ್ರ ಸಂಸ್ಕೃತಿ ಕಂಡು ತಣಿಯುದಕಾಗಿ ಭಾವದಲಿ ॥ ೯ ॥

ಬಂದರಾ ಮಾಸೂರ ಪುರದಿಂ
ದಂದು ಪೂರ್ವಾಶ್ರಮದ ಬಳಗಾ
ನಂದದಿಹ ರುದ್ರಮ್ಮ ಮಾತೆಯು – ಭಕ್ತ ಗಣಜತೆಗೆ ॥
ಬಂದರೀ ನೆವದೊಳಗೆ ಯಾತ್ರಾ
ನಂದ ಗುರಿ ಗರಿಮೆಯಲಿ ಬಿಡದಾ
ಗಂದು ಜಂಗಮವಾಡಿ ಮಠಕದು ನೋಡಲಿದೆ ಪೂರ ॥ ೧೦ ॥

ಆಂಧ್ರ – ಮಧ್ಯಪ್ರದೇಶ – ನೇಪಾ
ಳ್ದಂದು–ಬೀಳಗಿ–ಸೊನ್ನಲಪುರದು–
ಹೊಂದಿ ರಾಯ್‌ಚೂರ–ಕುಂದಗೋಳ–ಮಣೂರ–ದಿಶೆಯಿಂದ ॥
ಬಂದರು – ಶಿವಾಚಾರ್ಯ ಹಲಪುರ
ದಿಂದ ಶಾಸ್ತ್ರಿಗಳಾದಿ ಇಶ್ವಿಯೊ
ಳಂದು ಹತ್ತೊಂಭತ್ತು ನೂರಾ ನಾಲ್ವತ್ತೆಂಟರಲಿ ॥ ೧೧ ॥

ಇದ್ದ ಮಾಸ ನವಂಬರದೊಳನು
ಬದ್ಧವದೆ ಹದಿನಾಲ್ಕು ತೇದಿಯೊ
ಳಿದ್ದ ಕಾರ್ತಿಕಶುದ್ದ ತಿಥಿಹದಿಮೂರರೊಳಗಂದು ॥
ಮುದ್ದೆ ವಿಧಿವತ್ತಾಗಿ ಅಮೃತ
ಸಿದ್ಧ – ರಂಭಾಪುರಿಯವರ ಜತೆ
ಗಿದ್ದ – ಉಜ್ಜಯಿನಿಯವರದೆ ನಿರಿಬದ್ದುದಭಿಷೇಕ ॥ ೧೨ ॥

ಪಟ್ಟಬಂಧನ ಮುಕುಟ ಧಾರಣ
ಗುಟ್ಟು ಮುದ್ರಾ ಸಹ ಕಮಂಡಲ
ಮಟ್ಟವೆಲ್ಲ ವಿಧಾನದಿಂ ನೆರವೇರಿ ಸಮಯರಿತು ॥
ಗುಟ್ಟಗುರಿ ಶಾಸ್ತ್ರೋಕ್ತದೊಳ ನೆದ
ರಿಟ್ಟು ಪರಿಪೂರ್ಣತೆಯಗೊಂಡಿತು
ಕಟ್ಟ ಕಡೆ ಸಿಂಹಾಸನಾರೋಹಣದು ಬಿಡದಾಗಿ ॥ ೧೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಲ್ಲುತ್ತಿದು ನಡೆಯುತಿರೆ ಸಕ್ರಮ
ದಲ್ಲಿದೆ ಧನುರ್ಲಗ್ನದೊಳ ತಿಳಿ
ರಿಲ್ಲಿ ಸಿಂಹಾಸನದ ಶುಭಮುಹೂರ್ತದ ಕಳೆಯಲ್ಲಿ ॥
ಬಲ್ಲ ಭಕ್ತರರೆದುರು ಕಾಶಿಯೊ
ಳುಳ್ಳ ಮಹವಿದ್ವಾಂಸರೆದುರೊಳ
ಗಲ್ಲಿ ಗುರುಕುಲ ಬಳಗ ಭಂಡಾರೆದುರೊಳಾಯ್ತಲ್ಲಿ ॥ ೧೪ ॥

ಮಾಸ ಕಾರ್ತಿಕ ಶುದ್ಧ ತಿಥಿಯ ವಿ
ಕಾಸ ಹದಿಮೂರು ರವಿವಾರ ಸ
ದಾಶೆಯೊಳ ಕಾಣುತ್ತ ಶುಭ ರುದ್ರಮ್ಮ ಮಹಮಾತೆ ॥
ಶ್ರೀ ಸುಧಾಮಯ ಭಾವಪೂರಿತ
ಭಾಷೆಯೊಳ ಮಾಸೂರ ಪುರದಾ
ಭಾಸದಿಹ ಭಕ್ತಾಳಿಗಾಣುತ ಕರುಳ ಕರುನಾಡ ॥ ೧೫ ॥

ಆಲಿಸುತಲಿವರೆಲ್ಲ ಹೊಸತೆನಿ
ಪಾಲಿಸುತಲಿ ಜಗದ್ಗುರುಗಳಿವ
ರಾ ಲಲಿತ ವಿಶ್ವೇಶ್ವರ ಶಿವಾಚಾರ್ಯರೆಂದೆನುವ ॥
ಮೇಲೆ ಹೊಸ ಅಭಿದಾನವನು ಬಿಡ
ದಾಲಿಸುತ ಜಯ ಘೋಷಣೆಯ ಗಣ
ಸಾಲುಗೂಡುತ ಸುಪ್ರಸಾದ ಗ್ರಹಿಸಿ ಸುಖದಿರುತ ॥ ೧೬ ॥

ಬಳಿಕ ಸಾಯಂಕಾಲದಾ ಸಮ
ಯೊಳಗೆ ಸನ್ನಿಧಿ ತ್ರಯರು ಸಂತಸ
ದೊಳಗದೇ ಸಿಂಹಾಸನಾರೋಹಣವ ಮಾಡುತ್ತಾ
ಸೆಳಹು ಸಹೃದ ಭಾಷೆಯೊಳಗನು
ಸುಳುಹದೊಳಗೇ ದ್ವಯರುನಲ್ನುಡಿ
ಯೊಲವದಿಂ ತೆರೆದಿರಿಸಿದಾಬಳಿಕಂತು ಗಣನಿಧಿಯು ॥ ೧೭ ॥

ಜ. ವಿಶ್ವೇಶ್ವರ ಶಿವಾಚಾರ್ಯರಾಶಯ ನುಡಿ :

ನೆನೆದು ವಿಶ್ವಾರಾಧ್ಯರಾದಿಯ
ರನುವರೆಲ್ಲರ ಶುಭದ ವೇಳೆಯೊ
ಳನಘ ಸನ್ನಿಧಿ ಸಂಮುಖದೊಳಾಶಯದ ನುಡಿ ನಿಮಗೆ ॥
ಮನಸಿನೊಳಗಾನೇನು ಬಯಸದ
ಗುಣಿಸದೆನಗೀ ಭಾಗ್ಯ ಹಿನ್ನೆಲೆ
ಹೊನಲ ಕರುಣೆಯ ಕಿರಣ ಕಂಗಳವಿರದೆ ಸಿಗದೇನು ॥ ೧೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಂಡು ನಿಮಗೆಲ್ಲರಿಗೆ ಸಂತಸ
ಹೊಂಡದೊಳಗೀಸಿದನುಭವ ಮನ
ಗಂಡ ಮಾತಿರಲೇನು ಸಿಂಹಾಸನದ ಮೇಲ್ಮೆಯೊಳ ॥
ತುಂಡೆನದ ಕರ್ತವ್ಯ ಕಲೆಯೊಳ
ದಂಡೆ ತೋರದ ರೀತಿಹುದ ಮನ
ಗಂಡ ಮೆಲುಕಿಹುದೆಲ್ಲ ಪೂಜ್ಯರಿಗಿದರ ನಿಜದರಿವು ॥ ೧೯ ॥

ಬಣ್ಣದೊಳಗಡಗಿಹುದ ಬೆಂಕಿಯು
ತಣ್ಣಗಿಹ ಹೊಂಬೆಳಗ ಸಹಿತಂ
ಚನ್ನ ಚನ್ನಿಧಿಯೊಳ ಸದಾತುರದಿರವಯಿರಲೆಡೆಗೆ ॥
ಹಣ್ಣು ರಸಬರಿಸುವದು – ಎಡೆದೆಡೆ
ಕಣ್ಣೊಳಗೆ ಸಿಡಿ ಸಿಡಿದ ಸೆಡಗರ
ದೆನ್ನಿರಾ ಭಕುತರರು ಜಾಗ್ರತ ಸನ್ನಿಧಿಯದಿರವು ॥ ೨೦ ॥

ಆಶಯದ ನುಡಿಯೊಳಗೆ ಸಾಗುವ
ದಾಶೆ ನನಗಿರಲೇನು ಹೃದಯಸು
ಭಾಷೆ ನೀರಜ ನಿರ್ಮ್ಮಲವಿನಾ ಸೇವೆ ಬಲವಿದಕೆ ॥
ಹಾಸಿಕೊಂಡಿರಲೆಲ್ಲೆಡೆಗೆ ಮರೆ
ಧೂಸದೆಡೆ ಲಕ್ಷಿಸದೆ ಸಾಗುವ
ದಾಸೆಗದು ಸಫಲತೆಯ ಕೊಡುಗೆಗೆ ಬೇಕು – ಕಾರುಣ್ಯ ॥ ೨೧ ॥

ಕೂಸಿನಂತಿರಬೇಕು ಕರೆದೆಡೆ
ಹಾಸು ಮಂದಸ್ಮಿತ ಚಿದಾಮುಖಿ
ಸೂಸುತನದೊಳಗೇನಿಹುದು – ವೈಷಮ್ಯ ವೈಢೂರ್ಯ ॥
ಘಾಸಿಗೊಂಡಿಹ ಬಡವರೆಡೆಗನು
ಭಾಷೆ ಸಾಂತ್ವನ ಗೂಢಲೆಡೆಗಾ
ಶ್ವಾಸ ಸೆಡಗರ ಭಾವನೆಯದೊಳಗೊಂದೆನುವ – ಚರ್ಯ ॥ ೨೨ ॥

ಬಡವ ಬಲ್ಲಿದನೆಂಬ ಭೇದವ
ನಿಡದೆ ಗಮನ – ನಿಮಂತ್ರಣೆಡೆಗಾಂ
ನಡೆಯುತವರಿಗೆ ದರ್ಶನಾಶೀರ್ವಾದಿಡುವದಾಶೆ ॥
ಕಡೆತನಕೆ ನಡೆಸುವಿಕೆ ಮನದಾ
ಳೊಡಲದೇ ನೆಲಗಡಲೆ ಬಲ್ಮೆಯ
ದುಡಿಲದೊಳಗಿಟಕೊಂಡೆ ಸಾಗುವ ಭಾಷೆ ಬಿಳಿ ಸೀಸೆ ॥ ೨೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತೆ ಸಾಮಾಜಿಕದ ಚಿಂತನ
ಚಿತ್ತದೊಳ ಚಿಗುರಿಸುತ ಮನಸಾ
ಮುತ್ತಿಕೊಂಡಿಹ ವೀರಶೈವರ ಬಗ್ಗೆ ಕಾಳಜಿಯ ॥
ಹೊತ್ತು ಹೊತ್ತಿಗೆ ಮಾಡುತದರೊಳ
ಭಿತ್ತಿ ಸೈದ್ಧಾಂತಿಕತೆ ಬೆಳೆಸುವ
ಗತ್ತುಗಲಿಸುವ ಗುರಿಯೊಳಿರಲಿದೆ ಲೇಸು ಚಿರಕಾಸು ॥ ೨೪ ॥

ಬಡವರೆಡೆಗಾಗಿರುವ ಮನಸೊಳ
ನಡುವ ಮುಳ್ಳುಗಳಳಿಸುತವರೆಡೆ
ಮುಡಿಸುತಾಚಾರಾರ್ಥ ಚಾಮರ ನೆರಳಿನೊಳಗಿರಿಸಿ ॥
ಬಿಡುವಿರದ ಬಾಳುವೆಗೆ ಸಹಕಾ
ರಿಡುವದಾಶೆಯದೊಳಗೆ ಸಾಗುವ
ದೊಡಲದಿಶೆಗಾಬಲವು ವಿಶ್ವಾರಾಧ್ಯರದೆ ಮತ್ತೆ ॥ ೨೫ ॥

ವೀರಶೈವರೊಳಿರುವ ಕಾಯಕ
ಧಾರೆಯೊಳಗೆನಿಸಿಹುದ ಪಂಗಡ
ಹೇರುಪೇರುಗಳಳಿಸುತವರೊಳಗರಿಸುತಾ ಇಚ್ಛೆ ॥
ನೇರ ಧರಿಸಿರಲದಕೆ ಭೇದೆನಿ
ತೇರುಪೇರುಗಳಿಲ್ಲವೆಂಬುವ
ಪಾರಮೇಶ್ವರ ನುಡಿಯ ನಾಟಿಸುವಾರ್ಥ ಮನದಿಚ್ಛೆ ॥ ೨೬ ॥

ವಿದ್ಯೆಯಿಲ್ಲದೆ ಬಡತನದಿ ಸ
ದ್ವಿದ್ಯೆ ಪಡೆಯದೆ ಬಳಲುತಿಹರೆಡೆ
ಸದ್ಯ ಮುಂದಿನದಿಹುದ ಭಾವನೆ ಸಿದ್ಧಗೊಳಲಿಕ್ಕೆ ॥
ಹೃದ್ಯ ಪೂರ್ಣ ಸದಾಮಯಾತುರ
ಗದ್ದೆಗದು ಭಕ್ತಿ ಜಲನುಣಿಸುವ
ಹುದ್ದೆ ನಿಮದಾಗಿರಲಿದೇ ಜೀವಾಳವೆನಿಸುವದು ॥ ೨೭ ॥

ಮತಿ ಮತಾಂತರದೆಡೆಗದಾಗದ
ಗತಿಯೊಳಗೆ ಬಲಬರುವ ಮಾನಸ
ತತಿಯ ತಿಳಿಸುತ ತನ್ನ ಧರ್ಮದೊಳಿರುವ ಚೈತನ್ಯ ॥
ಸತತ ಚಿಗುರಿಸುವಂಥ ಸಾಚರ
ಣತಿ ಮನೋರಮವೆನಿಸುವಂಥಹ
ಖತ ಸದಾಚರ ನೆಲಿಸುವಾಮಹ ಕಾರ್ಯಕೈಂಕರ್ಯ ॥ ೨೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದನೆ ಬಲಗೊಳಿಸುದಕೆ ವಟುವಿನೊ
ಳಿದರ ಬಗೆ ಮಹಪಾಠ ಕೊಡುತಿರ
ಲಿದರಡೆಗೆ ಅವರಿಚ್ಛೆ ಮೂಡಿಸಿ ಮುಂದುವರಿಸುದಕೆ ॥
ನೆದರ ಚಿರವಿರುವಂಥ ಯೋಚನೆ
ಸದರಗೊಳಿಸುವದಿದಕೆ ಸ ಸಮಾ
ಜದ ತವಕ ತೆರೆಗಳು ನಿರಂತರಿರಲಿದೆ ಸಾಫಲ್ಯ ॥ ೨೯ ॥

ಇಂತೆನುತಲಾಶೀರ್ವಚನವನೆ
ಶಾಂತದಿಂದಾಲಿಸುತಲೆಲ್ಲ ಸ
ದಾಂತಃಕರಣದೊಳಿರಿಸುತಾಲ್ಹಾದಪಡುತ ಮರುದಿನ ॥
ಸಂತಸದ ಪಲ್ಲಕ್ಕಿಯುತ್ಸವ
ಹಂತ ಹರುಷದೊಳಾಗುವಾತುರ
ದಿಂತು ಅಂದಣ ಸಿಂಗರಿಸಿ ಸಂಭ್ರಮದಿ ಮರುದಿವಸ ॥ ೩೦ ॥

ಸನ್ನಿಧಿಯ ಪಲ್ಲಕ್ಕಿಯುತ್ಸವ
ಚನ್ನದಿಂ ವೈಭವದಿ ಸಾಗಿಹು
ದಿನ್ನಿತರ ಪುರವಾಸಿಗಳು ಸಂತಸವಪಡಲೇನೆ ॥
ಸನ್ನಿಧಿಯ ಪೂರ್ವಾಶ್ರಮದ ಸಂ
ಪನ್ನೆ ಜನನಿಯು ನೋಡುತಾಫಳ
ತನ್ನೊಳಗೆ ಅಥಣೀಶ ನುಡಿದ ಭವಿಷ್ಯ ಸಾಫಲ್ಯ ॥ ೩೧ ॥

ಪಡೆದಿಹುದ ಪ್ರತ್ಯಕ್ಷಕಾಣುತ
ಲೊಡಲೊಳಗೆ ಸಂತಸ ಸದಾತುರ
ಮುಡಿದ ಪರಿ ಸರಸೊಳ ಸರೋಜ ವಿಲಾಸದಂತಿವಳು ॥
ಅಡಿಗಡಿಗೆ ಮುರಘೇಂದ್ರ ವಾಣಿಯ
ಬೆಡಗಿನೊಳಗಿಹುದಾರು ಬಲ್ಲರು
ಪಡೆದ ಸನ್ನಿಧಿಯೊಳಗಿದೇ ಅಥಣೀಶನದೆ ನೆನಪು ॥ ೩೨ ॥

ಸನ್ನಿಧಿಯೊಳಾಗಿಹುದ ನೋಡುವ
ಚನ್ನಿಗರೊಳಾಲ್ಹಾದುದೊಳ ಮುಖ
ದಿನ್ನಿತರ ವಿದ್ವಾಂಸರೆಲ್ಲರು ಕಂಡು ಕೈರವದ ॥
ಚನ್ನವೆನಿಪೋತ್ಸವ ಚಿದಾಭರ
ಣೆನ್ನುವಂತೆನಿಸಿತ್ತು ಸಕಲೆಡೆ
ಸನ್ನುತಾ ದೈನಂದಿನದ ಪತ್ರಿಕೆಯೊಳಿದೆ ವಿವರ ॥ ೩೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓದಿ ತಣಿಯಿತು ಭಕ್ತಬಳಗ
ಲ್ಲೋದಿ ಮಣಿಯಿತು ಭಾವ ಬೆಳಕೊಳ
ಗಾದುದೆಲ್ಲವನೆನೆದು ನೆನೆಯುತಲಿರುವದೇ ನಲಿಕೆ ॥
ಸಾದರದಿ ಕಲ್ಪಿಸುತ ವಿವರಗ
ಳಾದುದನೆ ಸಕಲೆಡೆಗೆ ಸಾರುತ
ಮೋದದೊಳಗೆ ನಿನಾದಗೊಳಿಸುತ ಹೊರಟು ಪುರಪುರಕೆ ॥ ೩೪ ॥

ಇತ್ತ ರಂಭಾಪುರಿಯ ಪೂಜ್ಯರು
ಹೊತ್ತುಗಳೆಯುದ ಮುಂದಿಹುದ ಗತಿ
ಚಿತ್ತಯಂತಿರಲೆನುವದೆಲ್ಲವನರಿಸುತಾ ಧ್ವಯರು
ಚಿತ್ತ ಚಿದ್ಗುರಿ ಚರ್ಯದೊಳ ಯಶ
ದತ್ತ ಸದ್ಗುರಿ ಸಂತತಿರಲೆನು
ತತ್ತ ಕರುನಾಡೆಡೆಗೆ ಪಯಣಿಸಲಿತ್ತ – ತಿಳಿರಿತ್ತ ॥ ೩೫ ॥

ಛಾತ್ರ ಮರುದಿನದಿಹ ಪರೀಕ್ಷೆಯ
ಪಾತ್ರ ಗತಿಯೊಳ ಜಾಣ್ಮೆ ಮುದ್ರೆಯ
ಮಾತ್ರೆ ನೋಡುವ ನಕ್ಷೆಯೊಳಗಿರುವಂತೆ ಸನ್ನಿಧಿಯು ॥
ಚೈತ್ರ ಪಾಠದ ಮುಂದಿನಾಶಯ
ಗಾತ್ರ ಗೂಡಿಹುದದರೊಳಗದೆ ಪ
ವಿತ್ರ ಪರೆ ಪಡಿಯಚ್ಚುಗೊಳಿಸುವದೊಳಗೆ ತಲ್ಲೀನ ॥ ೩೬ ॥

ಚಿನ್ನಿಧಿ ಸ್ವಗತ :

ಆಗುತೊಳಗೊಳಗರಳಿಸುತ ಮೊದ
ಲಾಗು ಹೋಗಿಹುದಾಳದಳೆದು ಸ
ರಾಗ ಸುಲಭದ ದಾರಿ ಹುಡುಕಲು ಬೇಕೆನುತರೊಳಗೆ ॥
ಯೋಗ ಗೊಂಡಿಹ ಪೀಠದೊಳಗನು
ವಾಗಿ ಸಾಗುವ ಲೆಕ್ಕದೊಳಗೆ ಪ
ರಾಗ ತಮ್ಮೊಳ ಮೆಲುಕಿಸುತ ತೋರದ ಪರಿಮಳ ಪರೆ ॥ ೩೭ ॥

ಅರಲುಗೊಂಡಿಹ ಕೆರೆಗೆ ಗಗನದೊ
ಳರಳುತಾ – ತೊರೆಬಂದು ಹಾಯ್ದಂ
ತ್ಹರಹುವಾದಂತಾಯ್ತಿದುವು – ಬರಲಾದ ಸಸಿಯೆಡೆಗೆ ॥
ಸರಣಿ ತುಂತುರ ಸಿಂಚನೆಳೆಯೊಳ
ಗರಳಿದಂತಾದೆನಿಸುತಿದರೊಳ
ಹಿರಿಮೆ ವಿಶ್ವಾರಾಧ್ಯ ಸೇವೆಯೊಳಾನಿರಲಿದೇನು ॥ ೩೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸರಿ ಸಮಾಜದ ಸೇವೆ ಸೇವನ
ಹೊರತು ಹೊನಲೇನಿಹುದು ನಾಲಿಗೆ
ಸುರುಚಿ–ನಾಸಿಕ ಪರಿಮಳದ ತನುಬಲ್ಮೆ ಬಿಡದಾಗಿ ॥
ಅರಳುಮಲ್ಲಿಗೆಯಂತೆ ಅರಪಿಸು
ತಿರುತಲಿರವೇ ಸಂಸ್ಥಿತ ಋತ
ಗುರಿಯಿದೇ ಕಲ್ಯಾಣೆನುತತಾತ್ಮ ರತಿ ಮೇಲೇನು ॥ ೩೯ ॥

ಎತ್ತಣದ ಮಾಮರದು ನೋಡಿರ
ಲೆತ್ತಣದ ಕೋಗಿಲೆಯ ಸಂಬಂ
ದೆತ್ತಣದ ಅನುಬಂಧವಿದು ಪಾಠಕ್ಕೆ – ಪೀಠಕ್ಕೆ ॥
ಯೆತ್ತಣದ ಹನಿ ಬಿತ್ತು ತಿಳಿಯೊಳ
ಚಿತ್ತ ಸಿಂಪಿಯೊಳುತ್ತಮದ ರಸ
ಮುತ್ತವಾದಂತಾಯ್ತೆನಲೆ ವಿಶ್ವೇಶಬಲ್ಲನಿದ ॥ ೪೦ ॥

ಅಕ್ಷರವ ಮುಡಿದಾಗ ವಿದ್ಯೆಯು
ನಕ್ಷೆಯನ್ನರಿತಾಗ ಪಯಣದು
ಸಕ್ಷಮಾಚರಣೆಯಿರಲಿದೆ ಸಾಫಲ್ಯ ಮಣಿ ಮೌಲ್ಯ ॥
ಅಕ್ಷಿಯೊಳಗಾಕಾಶವಡಗಿದ
ಲಕ್ಷ ಲಲಿತಾದಾಗ ಪೀಠಾ
ಧ್ಯಕ್ಷಕಿದೆ ಚಿರಶೋಭಿಸುವದೆನ್ನುತಲಿ ಸೌಶೀಲ್ಯ ॥ ೪೧ ॥

ಹೊತ್ತನರಿತಾಡುವದೆ ಜೀವನ
ಗತ್ತವೆನದೇನೆನಲಿ ಭಾವಿಸು
ತೆತ್ತಣದ ಸುದ್ದೆನದೆ ಪದಸತ್ತ್ವಾರ್ಥದೊಳಗಾಗಿ ॥
ಹೊತ್ತರಿಯುತೊಪ್ಪಿಸಿಹುದಿದೆ ಚಿರ
ಮೊತ್ತ ಮಿರವೇ ಬಯಸದಂತಹು
ತಿತ್ತ ಸಂಗತಿಲಿಂಗ ಭೋಗೆನದೇನು ನಿಜನೋಡೆ ॥ ೪೨ ॥

ಕುಸುಮಗಳಿರಲಿದಕಿದೆ ಸೂತ್ರದೆ
ಸಸಿನದಾರಹುದಂತೆ – ತಾತ್ವಿಕ
ಹಸಿವಿಗಾಧಾರಾಗುತವರೊಳ ಭಾವನೆಯಸಸಿಗೆ ॥
ಎಸೆವ ನುಡಿ ಸಿಂಚನವದಿಂದದೆ
ಫಸಲರಸ ಭರಿಸುತ್ತ ಸಾಗುತ
ಕುಶಲದಿರಿಸುವದೆನ್ನ ಕಾಯಕವೆನುವೆ ಕಲ್ಪ ಮಿಗೆ ॥ ೪೩ ॥

ಅಂತೂ ಬೆಳಗು ೧೧ ಕ್ಕಂ ಪದ ೪೩ ಕ್ಕ ಒಟ್ಟು ಪದ ೪೫೫ ಕ್ಕಂ
ಜತ್ತ - ಮಂಗಳವೇಢಾ ೫-೨-೨೦೧೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು - ೧೧

ಪ್ರಾಸ್ತಾವಿಕ ಪ್ರಜ್ಞೆ

ಸೂಚನೆ :

ಸನ್ನಿಧಿಗಳಾದ್ಬಳಿಕ ಮೊದಲಿದೆ
ಯೆನ್ನಿ ಗುರುಕುಲಬಗ್ಗೆ ಲಕ್ಷಿಸು
ತನ್ನಿಧಿಯ ಬೋಧಾಂಗ – ನಿರ್ಣಯದಂತಿರುತ ತುಂಗ ॥

ವಾಚನ :

ಮೊದಲಗುರು ಮಾತೆಯಳ ಮಮತೆಯೊ
ಳದರದೇ ಕಾರುಣ್ಯಕಂಗಳ
ಉದರದೊಳಗಡಗಿಹುದ ಭಾವಿಯಜೀವನದ ಬುಗ್ಗೆ ॥
ಪದರ ಪದರೊಳಗಿರಿಸುತನುಭವ
ಸದರ ಶಾಬ್ದಿಕ ಲೋಕ ತಾರ್ಕಿಕ
ಬೆದರನಂತೆನದಂಥ ಮುಂದಿಡುತಲುಪಹಾರ ಹುರಿ ॥ ೧ ॥

ಸನ್ನಿಧಿ ವಾಣಿ :

ವಟು ಬಳಗ ವಾತ್ಸಲ್ಯಮಯ ಪಥ
ಪಟದಿ ಸುಳಿಯಲು ಸರ್ವಸಿದ್ಧತೆ
ಮಠದೊಳಿರಿಸುತ್ತಿದನು – 'ಛಾತ್ರಾದಿ ನಿಲಯಂ' – ಪದವ ॥
ದಿಟದಿರಿಸಿದಾ ಸುಪ್ರಸನ್ನರ
ಪಟಲದೊಳಗದೆ ಹುಸಿಯಿರದಮನ
ದಟಲ ಸಕ್ರಿಯೆಶೀಲದೊಳಗಿರಿಸುವ ಸದಾಶೆ ನುಡಿ ॥ ೨ ॥

ಚೈತ್ರ ಹೃದಯ ಮಹಾನತೆಯ ಗುರಿ
ಸೂತ್ರದೊಳ ಕಟಿಬದ್ಧವಿರುತ ಸು
ಸೂತ್ರ ಬಲವರ್ಧಿಸುವ ಭಾವದಿ ಸ್ಪಂಧಿಸುವ ಧ್ಯೇಯ ॥
ಗಾತ್ರ ಗುರು ಕುಲವಾಸಿಯೆನಿಪಾ
ಛಾತ್ರ – ಬಳಗಕ್ಕೆಲ್ಲ ಮುಂದಿನ
ಪಾತ್ರವೇನೆಂಬುದನೆ ತಿಳಿಸುತಲಿರವು ಅನ್ಯೋನ್ಯ ॥ ೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೊದಲು ತಾ ಆತ್ಮಾನುಸಂಧಾ
ನದೊಳಗುಳಿಯುತ ನಿಶ್ಚಿತಾರ್ಥದ
ಹದಕೆ ಬಂದಾಗದನೆ ಗುರುಕುಲವಾಸಿಗಳದೆದುರು ॥
ಪದಪದರ ತೆರೆದಿಡುತಲಿರುವರ
ಪದುಳ ಲೇಸದು– ವೀರಶೈವರ
ಪದದಿರುತಲೆಚ್ಚರಿಸುವಿಕೆ ನಿಜದಿರಲಿದುವೆ ಚರ್ಯ ॥ ೪ ॥

ತಿಳಿಸುವಾಚರಣದೊಳ ನೋಡಿರೆ
ಸುಳುಹು ಬದಲಾವಣೆಗಳಾಕರ
ಕುಳಿಗಳಿರುತಿರಲೇನು ಸರ್ವಾಚಾರ ಸಂಪದವ ॥
ಉಳಿಯುತಿದುವೇ ತನ್ನದೇ ಕೆಲ
ಕಳೆಯೊಳಗೆ ನೋಡಿದರೆ ತಿಳಿವುದು
ಬೆಳಸಬೇಕದು ಭಾರತದ ಸಂಸ್ಕೃತಿಯ ಸೌಹಾರ್ದ ॥ ೫ ॥

ಇಂತೆನುತಲಿರಬೇಕು ನಿಮ್ಮೊಳ
ಹಂತ ಹಂತ ವಿಶುದ್ಧ ಮನಸಿನ
ಕಾಂತಿ ಕಂಗಳದೊಳಗೆ ಪ್ರತಿಬಿಂಬಿಸಿರಲಿದೆ ಯೋಗ್ಯ ॥
ಪಂಥದೊಳ ಬರಿ ನಯನರಳಿಸುತ
ಲಂತುದುರ ಲಕ್ಷಿಸಿರಲಿದಕೇ
ನೆಂಥ ಸಫಲತೆ ಹೇಳೆ ಕಾರಣಸಾಗಿ ಮನದೆರೆದು ॥ ೬ ॥

ಕಲಿಕೆಯಿದು ಬರಿ ಹೊಟ್ಟೆ ಪಾಡಿನ
ಕುಲುಮೆಯಾಗುವದಲ್ಲ ಕಾರಣ
ಕಲಿಕೆ ಸಾಮಾಜಿಕದ ಸರ್ವಾಂಗೀಣದುನ್ನತಿಯ ॥
ಬಲುಮೆಯೊಳ ಸಾಗಿದರೆ ಸಂಸ್ಥೆಯ
ಒಲುಮೆ ತಂತಾನಾಗದೇನದು
ಛಲವಿರಲಿ ನಿಸ್ವಾರ್ಥ ಸೇವೆಯೋಳಾರ್ಥ ನೈತಿಕದೀ ॥ ೭ ॥

ಬಸವನೊಳಿಹ ಸಮಾಜ ಚಿಂತನೆ
ಯುಸಿರ ಸಕಲರ ಹಿತವ ಬಯಸುವ
ಕುಶಲತೆಯ ಸೂಚಿಸಿಹುದಾ ಸುಜ್ಞಾನಿ ಸಂಪದವ ॥
ಭಸಿತ ಸಂತ ಮಹಾಂತ ಚಿಂತನೆ
ಮಿಸುನಿಯೊಳ ಹೊರಗೊಂದೆ ಹೊಳೆಯುವ
ಹಸನದಾದರ್ಶವದು ಮಹದಾಸೋಹ ಮನನಿಸಿರಿ ॥ ೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನ್ನದಾನದಮಹತೆ ಮನು ಮುನಿ
ಚನ್ನಿಗರದಾದರ್ಶ ಸಂದೇ
ಸನ್ನಿರಪ ಹಿಂದಾದ ಪುಟಗಳ ನೋಡಿ ಕಲಿಯುವದು ॥
ಅನ್ನವಂ ಬ್ರಹ್ಮೆಂದು ತಿಳಿರೆಂ
ಬುನ್ನತಾತ್ಮಾದರ್ಶಿ ಶ್ರುತಿ ಸಂ
ಪನ್ನತೆಯ ತನ್ನೊಳಗಡಗಿಸಲಿದೆ ಫಲ ಪುಲಕಿತದು ॥ ೯ ॥

ಶಾಂತ ಸಹಜಾದರ್ಶ ಮೌಲ್ಯ ನಿ
ತಾಂತ ತಮ್ಮೊಳ ಗಣರು ಬಲಿಸುತ
ಲಂತವರಿಗಾಚಾರದೊಳ ತಂದಿಹುದದೆ ವಿಶಿಷ್ಟ ॥
ಕಂತು ಕಂತದಿ ಮಾನವರೊಳ ಸು
ಶಾಂತಿ ಭರಿಸಿಹುದವರ ಚಿಂತನ
ಕಾಂತಿ ನಿಮ್ಮೊಳ ಕುಳಿಯೊಡೆಯುವಂತಾಗಿರಲಿ ನಿಯಮ ॥ ೧೦ ॥

ಭಾಗ್ಯ ಭಾವನೆಗೂಡುತೊಳಗಾ
ರೋಗ್ಯ ಪೂರ್ಣ ಸಮಾಜ ರಚನೆಯ
ಭೋಗ್ಯ ಭಂಡಾರವನೆ ಒಡಗೊಂಡಿರಲದೇ ಸುತ್ತ್ಯ ॥
ಯೋಗ್ಯವಿರದ ವಿಚಾರಗಳೆಡೆಗ
ಯೋಗ್ಯವೆಂದೆನುತದಕೆ ಸಬಲಾ
ರೋಗ್ಯ ಸಾಧಾರಗಳನೇ ಮುಂದಿಡುವದಾಗಿರಲಿ ॥ ೧೧ ॥

ಮರ್ಮ ತತ್ವಾದರ್ಶ ಮಾನವ
ಧರ್ಮ ಹೃದಯಾಕರ್ಷಣೆಯ ಸ
ದ್ಧರ್ಮ ಶುಭದು ಸದೇವ ನಿರ್ಮಾಣೆಡೆಯದಾದರ್ಶ ॥
ಕೂರ್ಮ ಚಿಂತನೆ ಹರ್ಷ ಹಂಬಲ
ಊರ್ಮಿ ವೈಖರಿಯಂತೆ ಸಹ ಸ
ದ್ಧರ್ಮಿ ತಾವಾಗುತ್ತ ಸಾಗಿದೆಡೆಗೆ ಯಶಸ್ವಿಯದು ॥ ೧೨ ॥

ಅಂದು ಶರಣರು ನಾಡಿಗೆ ಸಮಾ
ನೆಂದವರ ಮುಂಧೋರಣೆಯ ಬಿಡ
ದಿಂದು ನಿಜ ನೀವೆಲ್ಲ ಯೋಚಿಸಿ ಸಾಗಬೇಕಲ್ಲ ॥
ನಂದಮಯ ನೈತಿಕತೆಯೊಳ ಬಿಡ
ದಂದವರ ನಡೆ ನುಡಿ ಸದಾಮಯ
ಗಂಧ ಕಂಡಿಹುದಾಳ ಗುರಿಗರಿ ತಿಳಿಯಬೇಕೆಲ್ಲ ॥ ೧೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಲಿತ ವೇತನದೊಳಗೆ ಮನೆತನ
ಬೆಳಗಿಸುವದಾತುರತೆಯಂತಾ
ಹೊಳಹುನಿಮ್ಮಲ್ಲಿರಲಿ ನಿಮ್ಮಾಚರಣೆಯೊಳಬಿಡದೆ ॥
ನೆಲಿಸಿದಂಥಹ ಮನೆಯ ನೆರೆಹೊರೆ
ಸುಳಿಯುತಿರಲವರೆಡೆಗೆ ಹಿತಮತ
ಮೆಲುಕು ಮಾನಸ ಮಂದಿರೊಳಗಿದೆ ಲೇಸು ಸಂತಸಿದೆ ॥ ೧೪ ॥

ಬಿಡದಿರಲಿ ಸಿಂಹಾವಲೋಕನ
ತುಡಿತಿರಲಿ ತಕ್ಕಂತೆ ಅಂಕಣ
ಮಿಡಿತದೊಳಗೀಸುತ್ತ ಮುಂದೊರೆಯುವಿಕೆಯಾ ಸುಮನ ॥
ಸೆಡಗರದ ಸೊದ್ದೇಶ ಕಣದೊಳ
ಸಿಡಿಲಕಾಳುಗಳಾಗದಯೆ ಶುಭ
ಸೊಡರು ಹಣತೆಯದಂತಿರಲಿ ಕೌಶಲತೆಯಾ ಕವನ ॥ ೧೫ ॥

ಎಣ್ಣೆ ಬತ್ತಿಯು ಕೂಡಲಾ ಸಂ
ಪನ್ನ ಸೊಡರಾದಂತೆ ಮನ ಮತಿ
ಹಣ್ಣು ಹದುಳಾದಾಗದರೊಳಾ ಮಧುರಬೆರೆತಂತೆ ॥
ಬೆಣ್ಣೆ ಭಾವಿಕರಾಗು ತೊಲವಿನ
ಕಣ್ಣೊಳಡಗಿಸಿಕೊಂಡ ವಿದ್ಯೆಗ
ಳುಣ್ಣಿಸುವದೆಲ್ಲರನು ಖಿನ್ನತೆ ಮಾಡದೆನಿತೆನಿತು ॥ ೧೬ ॥

ಹುಲ್ಲೆ ಬರಿಬೆಳೆದಿರದರದರೊಳ ಮುದ
ಹುಲ್ಲೆಗಳಿರೆ ಸುಶೋಭಿತವು ಮ
ತ್ತಲ್ಲೆ ಕುಸುಮಗಳರಳುತಿರೆ ಮತ್ತಷ್ಟದೇ ರಮ್ಯ ॥
ನಿಲ್ಲದಿಹುದ ನಿರುಪಮ ಕಾರ್ಯಗ
ಳಿಲ್ಲಿ ಹೊರತರುವಾತುರದ ಗಣ
ತಿಲ್ಲಿರಲದೇ ಸಾಮ್ಯ ಶೋಭಿಸುತಿರಲಿದೇ ಗಮ್ಯ ॥ ೧೭ ॥

ಕಂಬಳಿಗಳೆಲ್ಲಿರಲಿ ಆದರೊಳ
ತುಂಬಿಕೊಂಡಿಹ ಉಷ್ಣತೆಯು ಕರ
ತಂಬಿಗೆಯ ಒಳಗಿಹುದ ಬಯಲದು ತೋರದಿಹರೀತಿ ॥
ಕಂಬದಿಹ ಕಳೆ ಬಲ್ಮೆ ಬರಡದ
ಬಿಂಬದಂತಾಗಿರುತಲದೆ ಪ್ರತಿ
ಬಿಂಬಿಸುತಲಿರುತಿರಲದೇ ಕರ್ತವ್ಯ ಕೈಲಾಸ ॥ ೧೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಲ್ಲಿ ನಿಮನಡೆ ನೋಡುವವರೆನಿ
ತಿಲ್ಲೆನುತ ಮನಬಂದ ಬೆಡಗೊಳ
ಗಿಲ್ಲಿರಲದೇನೆಲ್ಲ ವಿಶ್ವಾರಾಧ್ಯ ನೋಡುತಿಹ ॥
ಎಲ್ಲೆ ಬೆಳೆಯಲಿ ಮರಗಲೆಯ ಕಂ
ಪಲ್ಲಿಹುದನಿರತೊಂದೆ ರಸರುಚಿ
ಯಲ್ಲಿರುವ ಪರಿ ನಿಮದಿರಲಿ ನೋಟಾಟ–ಕುಂಟಾಟ ॥ ೧೯ ॥

ಕಳಿಸಿಹರು ಭಕುತರರು ಬೆವರಿನ
ಬೆಳಗು ಹನಿಗಳ – ಹರಿಸುತದೆ ಹಣ
ಕಲಿತು ಬರಲಿಕ್ಕಾಗಿ ನಿಮಗೆಲ್ಲರಿಗೆ ಅರ್ಪಿಸಿದ ॥
ನಿಲುಮೆಗದು ಬೆಲೆಬರುವದಾಚರ
ಣೊಲವ ನಿಮದಾದಾಗವರಿಗಾ
ಬೆಲೆಯ ಕೊಟ್ಟಂತೆನಿಸುವದು ಗುರುಗಳಿಗು ಪೀಠಕ್ಕೆ ॥ ೨೦ ॥

ಮಣ್ಣಿನಿಂದ ಗಣೇಶ ಮೂರ್ತಿಗ
ಳನ್ನೆ ಮಾಡುವೆಡೆಗದೆ ಕೈ ಚಳ
ಕನ್ನೆ ಮೆಲುಕಿಸಿದಂತೆ ಸಾಧನ ಪಥದಿ ಪದಪದಕೆ ॥
ಮುನ್ನಡೆದು ಸಾಗುವಿಕೆಯಾಗಿರ
ಲೆನ್ನುಡಿಗಳಿನ್ನೇನು ಯೋಚಿಸಿ
ಮುನ್ನಡೆಯಿರೆನ್ನುತ್ತ ಸನ್ನಿಧಿ ನೋಡುತಿರುವರೆಡೆಗೆ ॥ ೨೧ ॥

ವಾಚನ :

ಲಕ್ಷಿಸುತ ನಾನಕರೊಳಗಿಹುದ
ನಕ್ಷೆ–ಏಕಾಗ್ರತೆಯ ಬಡಗಿಯ
ಅಕ್ಷಿಸಮ ಕ್ಷೌರಿಕನ – ಚಾಲಕ – ಅಕ್ಕಸಾಲಿಗನ ॥
ಸೂಕ್ಷ್ಮತೆಯ ಪರಿಯಂತವರದೆ ಸ
ಮಕ್ಷಮದಿ ಕಾಣುತ್ತ ಪ್ರಗತಿಯ
ದಕ್ಷತೆ ಪರೀಕ್ಷಿಸುತಲಿರುವಿಕೆಯವರದೆನಬೇಕು ॥ ೨೨ ॥

ಕೂಸುದೀಪವ ನೋಡುತಾ ಸಂ
ತೋಷದಿಂದಾಡುವಿಕೆಯದ ಪರಿ
ಭಾಷೆಯಾಲಿಸುತಾತ್ಮಗತ ಜನನಿಯಳ ಸಮವಂತೆ ॥
ಶ್ವಾಸದೊಳಗವರಿವರರಿರವ ವಿ
ಕಾಸ ದೆಷ್ಟರಮಟ್ಟಿಗದು ಯಶ
ಲೇಸ ಪಡೆದಿಹುದದನೆ ಯೋಚಿಸುತಿಂತುಸಾಗಿರಲು ॥ ೨೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶೋಧಿಸುತ ಹಿನ್ನೆಲೆಯ ದಿನದೊಳ
ಗಾದ ನಿಜದಿತಿಹಾಸ ಸಾಕ್ಷಿಯ
ಳಾದರದಿ ಸಂಯೋಜಿಸುತಲಾಧಾರಪತ್ರದಿರೆ ॥
ಆದರದಿ ಹಿಂದಾದ ಪೀಠದೊ *
ಳಾದುದಾ – ಬ್ಯಾಂಕದೊಳ ಠೇವಣಿ
ಯಾದರೇನದು ಸಾಲಗಾರನು ತುಂಬದಾದಾಗ ॥ ೨೪ ॥

ನ್ಯಾಯ ನಿರ್ದೇಶನ :

ಹಿಂದಿನಾ ಮಿತಿಯೊಳಗೆ ಕಾಗದ
ವೊಂದು ನ್ಯಾಯಾಲಯದ ಕರೆಬಿಡ
ದಂದೆ ಸೂಚಿಸಿದಂಥ – ವಿಶ್ವಾರಾಧ್ಯಬ್ಯಾಂಕದೊಳ ॥
ಹೊಂದಿಸಿದ ಠೇವಣಿಯ ಹಣ ತಮ
ಗಂದು ಕೊಡಿಸುದಕಾಗಿ ಬೇಡಿಕೆ
ಯಂದು ಮಾಡಿದ ಬಗ್ಗೆ ಅಭಿಮತ ತಿಳಿಸೆನುವ ಪರಿಯೆ ॥ ೨೫ ॥

ಕಿಡಕಿ ಬಾಗಿಲ ಮುಚ್ಚಿದರು ಹುಡಿ
ಬಿಡದೆ ಸಂದಿಯೊಳಿಂದ ಹೇಳದೆ
ಮುಡಿಯುತಲಿ ಮನೆಯೊಳಗೆ ಸಹಜಿರುವಂತೆ ಚಿನ್ನಿಧಿಗೆ ॥
ಎಡಬಿಡದಿಹ ಸಮಸ್ಯೆಗಳೆರಗು
ತಡಗದ ಪರಿಯೆ ತನ್ನಿರವತೆರೆ
ದಿಡುತಿರುವ ಪರಿಗಾಣುತಾ ಚಾಣಾಕ್ಷದಿಂದದನು ॥ ೨೬ ॥

ತಕ್ಕ ತಾರ್ಕಿಕ ನಿಯತಿ ಪಥಗತಿ
ನಿಕ್ಕಿನಿರಿಯೊಳ ಪಿಡಿಯುತದಕದೆ
ತುಕ್ಕು ಬಡಿಯದರೀತಿ ಸಹಜಸರಾಗಯುಕ್ತಿಯೊಳು ॥
ಹಕ್ಕು ಸಾಧಿಸುತ್ತಿತ್ತ ಪೀಠದೊ
ಳಕ್ಕರೆಯ ಪದ್ಧತಿಯ ಪಿಡಿದಿರ
ಲುಕ್ಕದಂತೆಯೆ ಪಾಲಿಸುತ ಸಾಗುವಿಕೆ ಪೂಜ್ಯರದು ॥ ೨೭ ॥

ಬಾಡಿಗೆಯ ಕೊಡದವರ ಕಾಟದೊ
ಳಾಡುವಿಕೆ ಕಾರ್ಯಾಲಯದ ಬಿಡ
ದೋಡುವಿಕೆ ಕಾನೂನ ಕಂಗಳದೆಡೆಗದಾಗಿಹುದ ॥
ನಾಡೆ ಕಂಡವಗಿದರ ಪಾತ್ರಂ
ತಾಡುವಿಕೆ ಗೋಚರವದೇನಿರೆ
ಜೋಡಿಸಿಹುದ ವಕೀಲರವರು ಶ್ರದ್ಧೆಯಿಂ ದುಡಿದ ॥ ೨೮ ॥

---

* ಜ. ವಿಶ್ವಾರಾಧ್ಯ ಬ್ಯಾಂಕ ಸ್ಥಾಪಿಸಿದವರು ಜ. ಶಿವಲಿಂಗಶಿವಾಚಾರ್ಯವರು ಕಾಶೀ ಜ್ಞಾನ ಗಂಗಾ ಪುಟ : ೩೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪದ್ಧತಿಯೆ – ನ್ಯಾಯಾಂಗಕದು ಕಟಿ
ಬದ್ಧವಾ ಠೇವಣಿಯ ಸಕ್ರಮ
ಬದ್ಧದಿಂ ಹಣ ಹಂತ ಹಂತದಿ ತುಂಬುವಾಬಗೆಯ ॥
ಶುದ್ಧ ಮುಚ್ಚಳಿಕೆ ಬರೆದುಕೊಡಲು
ಪದ್ಧತಿಯನಿದನೊಪ್ಪಿ ಪೀಠದು
ಹದ್ದಿನೊಳು ಪರಿಪಾಲಿಸಲು ತಿಳಿಸಿಹುದ ಗುರಿಯಂತೆ ॥ ೨೯ ॥

ಕಂತು ಕಂತೊಳಗದನೆ ತುಂಬು
ತ್ತಂತು ಬರುತಿರರೆಲ್ಲ ತೀರಿರ
ಲಂತು–ನ್ಯಾಯಾಲಯದ ಪೂರೈಸಿಹುದ ಪರಿಪತ್ರ ॥ *
ಹಂತ ಹತ್ತೊಂಭತ್ತನೂರಾ
ತಂತು ಎಪ್ಪತ್ತಿಸವಿ ತಿಳಿರಿದ
ನಿಂತು ದೊರಕಿಹುದಂತು ಇದಕಾಗಿವರ ಸಂಚಾರ ॥ ೩೦ ॥

ಹೊರಡುತ ಮಹಾರಾಷ್ಟ್ರದೊಳಗನು
ಭರಣಿ ಹಲಜಿಲ್ಲೆಯೊಳಗಿಹರೆಡೆ
ಗಿರುವ ಲಿಂಗಾಯತರ ಬಳಗೇಕತ್ರ ಮಾಡಿಸುತ ॥
ಹಿರಿಮೆ ಬಾರ್ಶಿ ಪರಾಂಡಕರ ಚರ
ಪರತರ ಶಿವಾಚಾರ್ಯ ಬಳಗದ
ಸರಣಿಯೊಳ ಬಿಡದೆಂಟು ತಿಂಗಳ ನಡೆದ ಸಂಚಾರ ॥ ೩೧ ॥

ಶ್ರೀ ವಿಚಾರ ವಿಭೂತಿ ಭಾತಿ ಸ
ದಾವಿಕಾಸ ವಿಲೋಕನದ ಹದ
ಭಾವದೊಳಗನುದಿನದಿ ಸಾಗುತಲಿರ್ದ ಪೂಜ್ಯರರು
ಆವ ಮತದವನಾಗಮಿಸಲದ
ಕಾವ ಶಂಕೆಯನಿಡದೆ ನುಡಿವಸ
ದಾವಕಾಲದೊಳಿರುವ ನಿರ್ಮಲ ನೀರಜದ ನೆದರು ॥ ೩೨ ॥

ನೋಡಲಿದು ಪಟ್ಟಾಧಿಕಾರದೊ
ಳಾಡುವಿಕೆಗಳೆ ಬೇರೆ – ಬೇರಿರು
ತಾಡುವಿಕೆಯೊಳಗೆಲ್ಲದನೆ ಮರೆಮರೆತು ಸಾಗುತಿಹ ॥
ಪಾಡವಾಗದ ಮಾವು ಫಲದ ನಿ
ಗೂಢ ರಸದಂತಾಗುತನುಗುಣ
ಗೂಡುವಂತವರಂತೆನದ – ಸನ್ನಿಧಿಯ ಸುವಿಚಾರ ॥ ೩೩ ॥

---

* ಕೋರ್ಟದಲ್ಲಿ ದಾವಾನಂ ೧೨/೧೯೩೨, ಬನಾರಸ, ಅಪೀಲ ನಂ ೫೮/೧೯೩೪ ಅಲಹಾಬಾದ ಹಾಯಕೋರ್ಟ್ ನಿರ್ಣಯ ೬–೨–೧೯೪೨ ಇಸ್ವಿ. ಶ್ರೀ ಜ.ಪಂಚಾಕ್ಷರ ಶಿವಾಚಾರ್ಯರು ಕಾನೂನ ಸಕ್ರಮದಲ್ಲಿ ನ್ಯಾಯಗೆದ್ದವರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀರನೆರೆದಿರಲಾಗಲಾ ಲತೆ
ಹಾರದಿಂ ಬೆಳೆವಂತೆ ಚಿದ್ಗುರಿ
ಚಾರುಗತಿ ಸದ್ಬೋಧನೆ ಜಗದ್ಗುರುಗಳಿಂದಾದ ||
ಸಾರ ಗರ್ಭಿತ ಫಲದು ಸಕಲೆಡೆ
ತಾರೆ ತತ್ವಮದಂತು ಸಪ್ರಭೆ
ಧಾರೆ ದೀಪ್ತಿಯ ವೀರಶೈವಾಚಾರದೊಳ ಮೋದ || ೩೪ ||

ಹೋದ ಹೋದೆಡೆ ಹೊಂಭರಹವಾ
ಮೋದವದೆ ಹೊಂಬೆಳಗು ಹರಡೆಡೆ
ಗಾದುದಾಮೋದ ಗೊನೆ ಗಿರಿ ಹೊಂಪುಳಿಯ ಹೊಕ್ಕರಣೆ ||
ಹಾದಿ ಹಾದಿಯೊಳವರದೇ ಸು
ಸ್ವಾದ ಸಂಬೋಧನೆಯದಾಗರ
ಮೋದಕದ ಮಧುರಂತೆ ನುಡಿ ವಿಕಸಿತದ ಒಗ್ಗರಣೆ || ೩೫ ||

ನೀತಿವಂತರ ಗೌರವಿಸುತಲ
ನೀತಿವಂತರಿಗರುಹಿಸುತದೆ ಪ್ರ
ಭಾತದಂತಾಗಿರಿಸುತವರಿಗೆ ಜೀವನದ ಪಾಠ ||
ಗೀತಗಂಗಾಧಾರೆ ತೋರಣ
ಗಾತನಿಗೆ ಕೊಡಮಾಡುತದೆ ಗತಿ
ಬೇತ ಪಾವನಪಲ್ಲವಿಯದಾಗಿರಿಸಿ ಹೂ ತೋಟ || ೩೬ ||

ಮೇಘ ಹನಿ ಮಾಲಾ ಸುಶೋಭಿತ
ವಾಗಿರಿಸುತಾವಾಗಮಿಸಿದೆಡೆ
ಸಾಗಿ ಕಾರುಣ್ಯಾಂಗ ಗಂಗಾವತರಣದ ಸಾಮ್ಯ ||
ಭಾಗವಹಿಸಿದ ರಂಗದೊಳ ಶಿವ
ಯೋಗವಾ ಲಿಂಗಾಂಗ ಸಮರಸ
ಜೋಗದಂತಾಗಿರಿಸುತಾ ಚಿರವಾಗುಳಿಯುವಂತೆ || ೩೭ ||

ದೀಪ ಹೊರ ಹಚ್ಚುತ್ತಲಿರಲೆಡೆ
ಗಾ ಪರಾತ್ಪರ ಇಷ್ಟ ತತ್ವದೊ
ಳಾ ಪದದಿರಿಸಿಹುದನೆ ಕಾಣುತ ತಮ್ಮೊಳಗೆ ತಾವೆ ||
ವಾಪಿಯೊಳಗುದಯಿಸಿದ ಕಳೆ
ಮಾಪನಾಚೆಯದಂತೆ ಕಾಣುತ
ತಾಪದೊಳಗಾದಾಗ ಮೃಗಮಳೆ ಮುತ್ತುಕಂಡಂತೆ || ೩೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲಾಸ್ಯ ಮಾಡುತ ಮಾನಸಾಗಸ
ಭಾಷ್ಯ ಬರೆಯುತಲಿದ್ದರೇನೀ
ದೃಶ್ಯ ಸಕಲರಿಗೆಂತು ಗೋಚರವೆನದ ಚಿದ್ರಸದಿ ॥
ಹಾಸ್ಯ ಹೂವರಳುತದರೊಳಿಹ ರ
ಹಸ್ಯ ಹೊನಲಾಲ್ಹಾದ ಪರಿಮನ
ವಸ್ಯ ಮಾಡುತಲಿತ್ತುಸಕಲರನಂದು ಸದ್ರಸದಿ ॥ ೩೯ ॥

ಆದರೇನಿದು ಪೂಜ್ಯರೊಳಗನು
ಮೋದ ಚಿಂತನ ಚಿಗುರುವಿಕೆ ಬಿಡ
ದಾದ ಭಾವನೆಯಿದುವೆ ಬಡಮಕ್ಕಳಿಗೆ ದೂರಾದ ॥
ಸಾದರದಿ ಕಲಿಯುವಿಕೆ ಸರಳೆನು
ಹಾದಿರದಕಾರಣವನರಿಯುತ
ಸಾಧು ಗುರಿ ಹುಡುಕುತ್ತ ಮರಳುತ ಪೀಠದೆಡೆಗಂದು ॥ ೪೦ ॥

ಇರುವ ಛಾತ್ರರ ಸಾಧಕರ ಮನ
ದಿರುವ ಸೋದ್ದೇಶಗಳನರಿಯುತ
ಲರಿಸುತವರಿಗೆ ಮುಂದಿನಾದಿಶೆ ಹಿಡಿಯಬೇಕಾದ ॥
ಸರಣಿಸೆಡಗರ ಭರಣಿ ಜನ ಹಿತ
ಹರಿತ ಹೊಲಬಿನ ಹೊಳೆ ಸಹಾ ಪಥ
ನಿರತ ನಿಮದಿರಲೆನುತಲಾ ಸ್ನಾತಕರ ಹರಸುತಲಿ ॥ ೪೧ ॥

ಕಳಿಸುವಿಕೆಯಾಗಿಹುದ ನೋಡಿರೆ
ತಿಳಿಮೆ ಸರಳೆನಬಹುದು ಹುದುಗಿದ
ಹೊಳಹಿನೊಳ ಹೂವಾಗುತಂದಿನದಿಂದುಸಹ ಮುಂದೆ ॥
ಹೊಳೆಯು ಹರಿಯುವ ಹೇತು ನಡೆ ಬಹು
ದಳೆಯದಂಥಹ ಭಾವದುತ್ಕಟ
ಬೆಳಕಿನೊಳಗಾದವರ ಪಂಕ್ತಿಯ ಕಂಡವಗೆ ಲಭ್ಯ ॥ ೪೨ ॥

ಕಾಶಿಪೀಠ ಜ್ಞಾನ ಗಂಗಾ
ಕೋಶ ಕಂಗಳದೊಳಗೆ ಮುದ್ರಾ
ಕಾಶ – ಸಂಪದ – ಸುಜ್ಞಾನಾದಂಥವರ ಶುಭಸೇತು ॥
ಸ್ವಾಸದೊಳಗಡಗಿಹ ಸಮಾಜ ವಿ
ಕಾಸದೆಡೆಗಿಹುದವರಿವರ ಸಂ
ಭಾಷಣೆಯ ಸಾಧನೆ – ಸುದರ್ಶನ ಸುಪ್ರಭಾತ ಋತು ॥ ೪೩ ॥

ಅಂತು ಬೆಳಗು ೧೧ ಕ್ಕಂ ಪದ ೪೩ ಕ್ಕ ಒಟ್ಟು ಪದ ೪೯೮ ಕ್ಕಂ ಶಿವಂ
೧೦-೨-೨೦೧೬ ಬುಧವಾರ ಶತತಾರಾ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು - ೧೨

ಪ್ರಸಾದಾಲಯ

ಸೂಚನೆ :

ಬಡತನದ ಬೇಗೆಯೊಳ ಬೆಂದುತ
ಬಡಕಲಾದೆಡೆ ಕಲಿಯುದ ಕೆಹಲ
ವೆಡೆಗೆ – ಸ್ಥಾಪಿಸಿದ ಪ್ರಸಾದ ನಿಲಯ ವಿವರವಲ್ಲಿ ॥

ವಾಚನ :

ಅರಿವೆ ವಿದ್ಯಾದೈವ ಗುರುವೆನು
ತರಿವ ಯುಕ್ತಿಗಳಿರಲೆನುತಲನು
ಚರಣ ಗೂಡುತ ಮುಂದೆ ಮುಂದಿದೆ ಬೆಳೆಸುವ ವಿಚಾರ ॥
ಅರಿಸುತರಳಿಸುತವರಿವರ ಮತಿ
ಭರಿಸುತಾ – ಪ್ರೋತ್ಸಾಹಕೊಡುತಾ
ತುರತೆಯೊಳ ಸನ್ನಿಧಿ ಮಹಾರಾಷ್ಟ್ರದೆಡೆ ಬರುತಾರ್ಥ ॥ ೧ ॥

ಬಡತನದಿ ಬೆಳೆಯುತ್ತ ಹಲವಿಧ
ಎಡರುತೊಡರೊಳಗುಳಿದು ಸಾಗಿಹು
ದಡಕಲದ ಪಾತ್ರಂತೆ ಬೆಳೆದಿಹುದಾತ್ಮದಿ ಮೆಲುಕಿಸಿ ॥
ಬಡವಬಲ್ಲಿದರೆನದೆ ಸಕಲೆಡೆ
ನಡೆದು ನಡೆಸುವ ನಿಲುಮೆಯೊಳಗನು
ಬಿಡದೆ ಸಾಧಿಸುವಾಶೆಯೊಳ ತಲುಪುತ್ತಲಾ ಪುಣೆಗೆ ॥ ೨ ॥

ಇಟ್ಟ ಸಿರಿಸಮ ನಕ್ಷೆ ಹಾಕುತ
ಮಟ್ಟ ವಿಶ್ವಾರಾಧ್ಯ ನೀನೇ
ಗಟ್ಟಿಗೊಳಿಸುವದೆನುತಲಲ್ಲಿಯ ವೀರಶೈವರನು ॥
ಥಟ್ಟನೇ ಕರೆ ಕರೆಸುತಲ್ಲಿಯ
ಮಟ್ಟ ಮೆಟ್ಟಲ ತೆರೆದಿರಿಸಿ ಗುಣ
ಮೆಟ್ಟ ಬೆಳೆಸುವ ಮೆಟ್ಟಲುಗಳೇನಿಹುದರವರೆದುರು ॥ ೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾವಧಾನದೊಳಿರಿಸಿ ಮುಂದಿಹು
ದಾವ ಮಾರ್ಗವದೆಂಥದಹುದು – ಸ
ದಾವಕಾಲದಿ ಮುಂದೊರೆವ ಪಥ ಚಿಂತನದೊಳಿರಿಸಿ ||
ಭಾವ ಬಾರ್ಸಿಪರಾಂಡಚರರನು
ಭಾವದೊಳಕರೆಕರೆಸಿ ಸುದೃಢ
ಜೀವದಿರಿಸುವ ಮಾರ್ಗವ ಶಿವಾಚಾರ್ಯರೆದುರಿಟ್ಟು || ೪ ||

ಚಿತ್ತದೊಳ ಬಿತ್ತುವಿಕೆಯೆಂಬುದು
ಹೊತ್ತು ಊರಿದ ಬೀಜ ಬರಡದ
ಚಿತ್ತದಂತಾಗುತ್ತ ಬೆಳೆಯುತ ಸಕಲ ಜೀವರಿಗೆ ||
ಬತ್ತಿ ಬೆಳಗುವ ರೀತಿ ಬಂಧುರ
ದತ್ತ ಬೆಳೆದಿರಲದರ ಮಧುರೊಳ
ಗತ್ತತೊರೆ ಧಾರಾಳಿಯಾಗಲಿಯೆನುವ ಬಯಕೆನುತ || ೫ ||

ಸಾಗಿರೆ ಮಹಾರಾಷ್ಟ್ರದೊಳ ಸಲಿ
ಸಾಗಿರುವ ಮಹವೀರಶೈವರಿ
ಗಾಗಿಯೆ ಮೊದಲನೆ ಅಧಿವೇಶನ ಸಿದ್ಧತಾದಾಗ ||
ಯೋಗ ಶುಭಸಾನಿಧ್ಯರಿವರಾ
ವಾಗ ಶೋಭಿಸು ತಾರ್ಥಗರ್ಭಿತ
ವಾಗಿರಿಸಿದಾಶೀರ್ವಚನಿದೊ ಇತಿಹಾಸವೆನಿಸಿತದು || ೬ ||

ಸಾಗಿರೆ ಮಹಾರಾಷ್ಟ್ರದಿಹ ಬಹು
ಭಾಗವಾಗಿಹರೆಲ್ಲರದೆ ನಿಜ
ಯೋಗ ಕ್ಷೇಮಾರ್ಥಿಕದ ಶೈಕ್ಷಣಿಕಾದಿ ದಿಶೆಯೊಳಗೆ ||
ಹೇಗೆ ಬೆಳೆಯುವ ಪರಿಯ ಪಥದೊಳ
ಗಾಗಿ ನಡೆದ ವಿಚಾರ ಸಂಕಿರ
ಣಾಗಿರುವ ಬಿ.ಡಿ. ಜತ್ತಿ – ಸರಿ ರತ್ನಪ್ಪ ಕುಂಬಾರ || ೭ ||

ಅಲ್ಲದೆ ಶಿವಾಚಾರ್ಯಗಣ ಬಿಡ
ದಲ್ಲಿ ವಿದುಷಿಯ ಬಳಗ ನೋಡಿರ
ಲಲ್ಲಿ ಗೋಷ್ಠಿಯೊಳಾದುದ ವಿಶೇಷೆನಿಸಿತಿದು ಬಿಡದೆ ||
ಸಲ್ಲಲಿತದಿ ಯಶಸ್ವಿಯಿದು – ಬಳಿ
ಕಲ್ಲಿ ಸನ್ನಿಧಿಯವರು ಕೇದಾ
ರಲ್ಲಿಹುದಪೀಠಾಧಿಕಾರ – ಸಮರ್ಥ ನಿರ್ವಹಿಸಿ || ೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮರಳುತ ಮಹಾರಾಷ್ಟ್ರದೊಳಗಿರು
ತಿರುವ ಇತಿಮಿತಿ ವೀರಶೈವರ
ಸರಣಿ ಸಂಘಟಿತಾಗಿರಿಸುದಕೆ ಸಮಿತಿ ನೇಮಿಸುತ ॥
ಭರಣಿ ಭಾವನೆ ಬಲದಿ ನಿರುಪಮ
ಧರಮವನು ಪಸರಿಸುವ ನೆವದೊಳ
ಗರಳಿಸುತ ಸಂಚಾರದೈವತ್ತೈದು ದಿನವರೆಗೆ ॥ ೯ ॥

ನಡೆದ ರೀತಿಯೊಳಿಹುದ ಪದ್ಧತಿ
ಬಿಡದೆ ನಡೆಸುತಲದನೆ ಜನಮನ
ಕುಡಿಸಿ ಧಾರ್ಮಿಕ ಸಭೆಯೊಳಾಶೀರ್ವಾದ ಸನ್ನಿಧಿಯ ॥
ನುಡಿಯೊಳಗದೇಕತೆಯ ಸೂಚನ
ಸೊಡರಿನೊಳಗಸ್ತಿತ್ವ ಶಕ್ತಿಯು
ಅಡರುವಂತೆ ವಿಚಾರ ವೈಭವ ವಿಕಸಿತಾರಂಭ ॥ ೧೦ ॥

ಪುಣೆ ಮಹನಗರದಿಂದ ಹೊರಡುತ
ಹಣಿಕೆಯಿದು ಸಾತಾರದಿಂ ಮುಂ
ದೆಣಿಕೆ ಕೊಲ್ಹಾಪೂರ – ಸಾಂಗಲಿ – ಸೊನ್ನಲಾಪೂರ ॥
ಕುಣಿಕೆಯೊಳ – ಲಾತೂರ – ಬೀಡ್ಪರ
ಭಣಿಯು ನಾಂದೇಡ – ಸಹ ವಾಸೀಂ
ಕುಣಿಕೆ – ಅಮರಾವತಿಯು – ನಾಗ್ಪೂರಾದಿ ಮುಂತಾದ ॥ ೧೧ ॥

ಒಪ್ಪು ನಡೆದಾಡಿಹುದ ಜಿಲ್ಹಾ
ಇಪ್ಪತ್ತೆರಡಿರಲಲ್ಲಿ ಬೋಧನೆ
ಹೆಪ್ಪಹಾಕುತ ಸತ್ಕ್ರಿಯಾಚಾರಗಳ ತೆರೆದಿಡುತ ॥
ಒಪ್ಪು ದೈನಂದಿನದೊಳಿರುತಿರು
ತೊಪ್ಪಬೇಕದು ವೀರಶೈವರು
ತುಪ್ಪದಂತಾದಾಗದರ ಬೆಲೆ ನೆಲೆಯ ಕಂಡವರು ॥ ೧೨ ॥

ಕದಲಿಫಲದಂತಾಗುದಕೆ ಜನ
ರಿದರೆಡೆಗೆ ತಾವಾಗಿ ಬರುವಾ
ಸದರವರ ಮನವೊಪ್ಪುವಂತಿರಲಿದುವೆ ಜೀವನದು ॥
ಕದಲದಂತಹ ಸತ್ವ ಸಂಹಿತೆ
ಸದರದಿಂದಳವಡಿಸಿ ಕೊಳಲೆಡೆ
ಅದಿರು ಸಂಶೋಧಿಸಿದ ಬಳಿಕಾದಂತೆ – ಭಾವ ಮಧು ॥ ೧೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತೆನುತ ಹಲವಿಧದೊಳನುಭವ
ಕಂತು ಕರುಳಾಂಗಳದೊಳಿರಿಸುತ
ಲಂತವರ ಕೌಟುಂಬಿಕ ಸಮಸ್ಯೆಗಳ ತಿಳಿಯುತ್ತ ॥
ಸಂತಸದಿ ಪರಿಹಾರ ಪರಿ ನುಡಿ
ಮೆಂತೆ ಭರಿಸುತ ಮಾರ್ಗದರ್ಶನ
ದಿಂತು ಸಾಗಿರಲಾ ಸಮಾಧಾನದೊಳಗೆಲ್ಲರರು ॥ ೧೪ ॥

ದರ್ಶನಾಶೀರ್ವಾದ ಪಡೆದ ಸ
ಹರ್ಷದೊಳಗಾತ್ಮೀಯ ಗರಿಮಾ
ವರ್ಷವಿಡಿ ಹೀಗೆ ತಮಗಿರಲೆನುತೆನುತ ಕಂದನಗೆ ॥
ಸ್ಪರ್ಶವಾದಾಗದರ ಸೌಖ್ಯತೆ
ಶೀರ್ಷದೊಳಗರವಿಂದ ಸಹಜಾ
ಕರ್ಷಣೆಯಗೊಂಡಿಹುದ ಹೂ ಹೊರನೋಟಕಸದಳವು ॥ ೧೫ ॥

ಕಂದ ಕಳೆ ಜನನಿಗದು ನೋಡಿರ
ಲಂದತೆಯ ಬೆಲೆ ಶೀಲ–ಕುರುಡನಿ
ಗೆಂದಹುದು ಸುಮರೇಣು ಮೇಷಕ್ಕೆಂತು –ಜೇನ್ ನೊಣಕೆ ॥
ಮಂದ ತೆರೆಯೊಳ ತಾವರೆಯದಾ
ನಂದ ಮಂದಸ್ಮಿತದೊಳೆನುವ ತೆರೆ
ಚಂದ ಚಿದ್ಗುರಿಗಳಿಗೆ ಸನ್ನಿಧಿ ಪಾದಮುದರೇಣು ॥ ೧೬ ॥

ತತ್ವ ತೀರ್ಥ ಸಮನ್ವಯಕಿದೊ ಮ
ಹತ್ವ ಕೊಡುತಷ್ಟಾವರಣದೇ
ಕತ್ವ ಸಾಧನದಿಶೆಯೊಳಡಗಿಹುದೆಲ್ಲ ತೆರೆದಿರಿಸಿ ॥
ಸತ್ವ ಸಂಸ್ಕೃತಿ ಸಾರಭೂತ ಸು
ಚಿತ್ವ ಸಾಂಪ್ರತ ಮನದೊಳಿರಿಸುತ
ತತ್ವಮಸಿ – ಲಿಂಗಾಂಗ ಸಮರಸದಿಹುದ ವಿಸ್ತರಿಸಿ ॥ ೧೭ ॥

ಚಿತ್ತ ಚಮಕಾಕಾರದಿರಿಸಿ ಮ
ಹತ್ತು ಚುಳುಕಾಚಾರ ಚೇತನ
ದತ್ತದಿರಿಸುತಲಿದುವೆ ಚಿದ್ದೀಪೆನುತಲನುಭವವ ॥
ಉತ್ತಮಾ ಗರಿಮೆಯದ ಗಾಂಭೀ
ರ್ಯತ್ತ ಬಲಿಸುವದತ್ತ ಚಿನ್ನಿಧಿ
ಗತ್ತದಿಂದಿರಲಿತ್ತವರ ಪದದಡಿಯೆ ಶಾಂತಶಿವ ॥ ೧೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಕುತರರು ತಮ್ಮೊಳಗೆ ತಾವೇ
ಭಕುಲಭಾವನೆಯೊಳಗೆ ಯೋಚಿಸು
ತಖಿಲ ಶಿವಪಥನರಿವೊಡೆ ಗುರುಪಥವೆ ಮೊದಲೆನುತಲಿ ॥
ಮುಕುರ ಮನಮಂದಿರದೊಳಡಗಿದ
ಸಕುಶಲತೆ ಬಗೆಗಾರ ಭಾಷ್ಯದ
ವಿಕಸನವಿರದ ಕೆಲವೆಡೆಗವರ ನೋವ ಕಾಣುತ್ತ ॥ ೧೯ ॥

ಸುಳಿವ ಭಕುತರಿಗಾದ ನೋವುಗ
ಳಳಕಿನೊಳಗಿರುವಿಕೆಯ ತೂಕದೊ
ಳಿಳಿದು ನೋಡಿರಲಿದುವೆ ಲಿಂಗದ ನೋವು ನೋವೆನುತೆ ॥
ಕಳಿವ ಹಾದಿಯ ಹುಡುಕುತಲಿ ಕರ
ವಳವ ಪಡುತಲಿ ತನ್ನೊಳಗೆ ಹಳ
ಹಳಿಯ ಗೂಡುತ ಮತ್ತೆ ಹಲವೆಡೆಗವರ ಗೋಳತನ ॥ ೨೦ ॥

ಕಂಡು ನಿಜದಾಂತರಿಕ ಬಡತನ
ಕೆಂಡದೊಳ ಮುಂದೊರೆಯಲಾಗದ
ತಂಡ ತಂಡದೊಳತ್ತ ಬಿಡದಿಹ ವೀರಶೈವರೊಳು ॥
ಕಂಡು ಮರಗುತಲದಕೆ ಹೊಸ ಹೂ
ಕುಂಡವೆನಿಪ ಪ್ರಸಾದ ನಿಲಯದ
ಹೊಂಡದೊಳಗಿರಿಸಿರೆ ಸುಧಾರಣೆ ಸೊಂಪಸಂಪಿಗೆಯು ॥ ೨೧ ॥

ಹಣತೆ ಹಚ್ಚುವಕೆಲಸ ಮಾಡಿರ
ಲುಣಿಸದಿದ್ದೀತೇನು ಪರಿಸರ
ಕಣದಿ ಮೆಲುಕು ಪ್ರಕಾಶಗೊಳಿಸುವಪಂಥವಹುದವರ ॥
ಎಣಿಕೆಯೊಳ ಬರಿಯಿರದೆ ಕಾಯೊಳ
ಹಣಿಕೆ ಮೊದಲನೆ ಕೆಲಸೆನುತ ತ
ಕ್ಷಣದ ಮುಂದಾಲೋಚನೆಯ ಮಾಡುತ್ತ ನಿಶ್ಚಯಿಸಿ ॥ ೨೨ ॥

ಸಾಗುತಲಿ ಪುಣೆಯೊಳಗೆ ಬಾಡಿಗೆ
ಭಾಗದೊಳ ಹಿಡಿಯುತ್ತಲಲ್ಲಿಸ
ರಾಗ ಬಡವಿದ್ಯಾರ್ಥಿಗಳಿಗೆ ಪ್ರಸಾದವೇರ್ಪಡಿಸಿ ॥
ಸಾಗಿ ಸಾಗುತ್ತಲಿರುತಿರೆ ಸಹ
ಜಾಗ ನ್ಯಾಯಾಲಯದಿ ವಾದದೊ
ಳಾಗ ಭವನ ಲಿಲಾವದಿಡಲಾವಾಗಲದ ಹಿಡಿದು ॥ ೨೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿದ್ಯಾರ್ಥಿ ನಿಲಯ ಸ್ಥಾಪನೆ - ೧೯೬೫ ಇಸ್ವಿ

ತುಂಬಿ ನಾಲ್ವತ್ತೊಂದು ಸಾವಿರ –
ಹಂಬಲದಿ ಹಣವೆಲ್ಲನಂತರ
ದಿಂಬುಗೊಳಿಸಲು ಬಿಡಿಸಿಬಾಡಿಗೆದಾರರನ್ನಾಗ ॥
ಅಂಬುಜ ವಿಕಾಸಂತೆ ಹೊರಗೊಳ
ತುಂಬಿಸುತ ರಂಗಾದಿಯೊಳಗಾ
ರಂಭಿಸಿ – ಶ್ರೀ ಶೈಲ ಸನ್ನಿಧಿ ಹಸ್ತದಿಂದಾಗ ॥ ೨೪ ॥

ಹೆಸರು – ವಿಶ್ವಾರಾಧ್ಯ ನಿಲಯಂ
ಬುಸಿರದೊಳ ಬೆಳಕಾಗುತಿದರೊಳ
ಸಸಿನ ಬಳಲಿಕೆ ಕಳೆವ ಪರಿಯಂತಾಗಿ ಬಡವರರು ॥
ಖುಷಿಯೊಳಾಧ್ಯಯನದೊಳ ತೊಡಗು
ತ್ತೆಸೆವ ವಿದ್ಯಾ ಪಡೆಯುತಿರಲದೆ
ಹಸಿರಿನೊಳ ಹೂವರಳಿದಂತೆನಿಸಿತ್ತುಸನ್ನಿಧಿಗೆ ॥ ೨೫ ॥

ಸರಿಸ ದೀಪದಿ ದೀಪ ಬೆಳಗುತ
ಹರುಷ ಹೂವಾಗಿರಿಸುತಾಂಗಳ
ಭರಿಸಿ ಬೆಳಗಿನ ವೇಳೆ ಪರಿಮಳ ಪಾತ್ರ ಪರೆ ತೋಟ ॥
ತೆರೆದಿರಿಸಿ ನೋಳ್ಪರರ ನಯನೊಳ
ನೆರಳದರದೇ ಮುದ್ರೆಯಾದುದ
ಸರಳ ಕಾಣುತ ಚನ್ನಿಧಿಯೊಳಾನಂದ ದಿಟಬೇಟ ॥ ೨೬ ॥

ಅರಳಿದೆಡೆಗೆ ಪತಂಗದಾತುರ
ಕರುಳ ಬಳ್ಳಿಯ ಕರೆಗೆ ಜನನಿಯ
ಸರಳ ನೋಟದು ನೀರಡಿಸಿದವನಾಟ ನದಿಯೆಡೆಗೆ ॥
ಭರಿತ ವೇದನೆ ಕಳೆವಲೋಸ್ಕರ
ದಿರವ ವೈದ್ಯನ ದಿಶೆಗೆ ರೋಗಿಯೊ
ಳಿರವ ತವಕತೆಯಂತೆ ಛಾತ್ರಾಗಮನವೀ ದಿಶೆಗೆ ॥ ೨೭ ॥

ಕಂದನಾಂಗಳದಾಟದೊಳ ಬಿಡ
ದಂದು ಭಾವನೆ ಗೂಡುತಾ ಸ್ವ
ಚ್ಛಂದ ಸೀಮೆಯೊಳಾಗಿರುವದೇ ಬಾಂಧವರು ಕಂಡು ॥
ಗಂಧಗೊಳುತಿರುವಂತೆ ಸಾಗರ –
ಸಿಂಧು ಬೆರೆವಾಕರಣ ಶಾಂತತೆ
ಹೊಂದುದನೆ ಕಾಣುತ್ತ ಹಲರೊಳಗಾದ ಮಧು ಚಂಡು ॥ ೨೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೋಡಿರೆ ಮಹಾರಾಷ್ಟ್ರದೊಳ ಕರು
ನಾಡ ನಾಡಿಯ ಬೇರನೂರಿಹು
ದಾಡುಕಡಿದಂತೆನದೆ ಶಾಶ್ವತದಿರುವಿಕೆಯ ವಿದ್ಯೆ ॥
ಕೋಡಿ ಕಾವೇರಿಯ ವಿಲಾಸತೆ
ಗೂಡಿಹುದ ಲಿಂಗಾಯತರಿಗಾ
ಷಾಢಗಾಳಿಯನಳಿದು ಶ್ರಾವಣ ಸುಧೆಯೊಳಾದಂತೆ ॥ ೨೯ ॥

ತಾವೆ ತಮ್ಮೊಳಗನುಭವಿಸುತ ಸ
ದಾವಕಾಲದೊಳಿರುವದೀ ಘಟ
ನಾವಳಿಯು ಚೌದಿಶೆಗೆ ಪಸರಿಸುತಾತ್ಮ ಸಾಕ್ಷಿಯಲಿ ॥
ಭಾವ – ವಿಶ್ವೇಶ್ವರ ಶಿವಾಚಾ
ರ್ಯಾವ ಲೋಕನದೊಳಗೆ ನೆರೆ ಹೊರೆ
ಭಾವಿಯೊಳಗಾತುರತೆಗೊಂಡಿಹುದಲ್ಲಗಳೆಯದದು ॥ ೩೦ ॥

ಚಂದ್ರಗ್ರಹಣದ ಬಳಿಕ ಬೆಳಕಾ
ಚಂದ್ರಿಕೆಯ ಚಲ್ಲಾಟದೊಳ ಚಂಪಕ –
ಚಂದ್ರಮಾನದ – ಪರಿಯೊಳನುಭವಿಸುತ್ತ ಮುತ್ತತ್ತ ॥
ಚಂಪು – ಚಕಬಂದಿಯೊಳ ಚದುರಿಹು
ದಿಂಪದೊಳಗಾದಾತನನುಭವ
ಸಾಂದ್ರತೆಯನಿದ ಬಲ್ಲರೆಂತದು – ಬಲ್ಲ ಸನ್ನಿಧಿಯು ॥ ೩೧ ॥

ರಜನಿಯೊಳ ನಗುತಿರುವ ಪರಿಮಳ
ಭಜನೆಗೂಡಿರಲದರ ಸುಖದೊಳ
ಗಜಬಿಜಿಯ ಸಂಸಾರದೊಳಗಿದರೊಳಗೆ ಹಲಕೆಲರು ॥
ದ್ವಿಜರು ಕಾಣುತ ವಿಸ್ಮಯದೊಳಿರೆ
ವಿಜಯಗೊಂಡಂತಿವರು ರಸ್ಮಿಯ
ರಜತದೊಳ ಸುವಿಲಾಸದಂತಿಹುದೆಲ್ಲ ತಿಳಿಯುತ್ತ ॥ ೩೨ ॥

ನೆರೆಯ ಸೀಮೆ ವಿದರ್ಭಭಾಗದೊ
ಳಿರುವ ಭಕ್ತರು ಭಾವ ಕದಳಿಯ
ದರಳಿದುವೆ ವರ ವೀರಶೈವಸ ಸೇವೆ ಸುಸಮಾಜ ॥
ಹಿರಿಮೆ ಸಂಸ್ಥೆಯ ಸೊಬಗಿದಾತುರ
ಚರಣ ಸನ್ನಿಧಿಯವರ ತಮ್ಮೆಡೆ
ಕರೆಸಿಕೊಳು ಬಗೆ ಯೋಚಿಸುತಲಿರಲಿತ್ತಲಾ ಬಳಿಕ ॥ ೩೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಶಿಗದು ಪಯಣಿಸುತಲಲ್ಲಿಯ
ಶೇಷ ಕಾರ್ಯಕ್ರಮದೊಳಿರುತಾ
ಭಾಸದೊಳಗಿಹುದದಕೆ ನಿಜ ಪರಿಹಾರ ಹುಡುಕುತ್ತ ॥
ಭೂಷಣದ ಭಕುತರಿಗೆ ಸಂತಸ
ಭಾಷೆಯೊಳಗಾತಿಥ್ಯ ಕಾರ್ಯಾ
ಕಾಶದೊಳ ತೊಡಗುವಿಕೆಯಲ್ಲವ ಕಂಡವನೆ ಬಲ್ಲ ॥ ೩೪ ॥

ಬಳಿಕ ಮಹರಾಷ್ಟ್ರದೆಡೆಗುರು ಮ
ರಳುತಲ್ಲಿಯ ಭಕ್ತರೊಳಗಿಹ
ಬೆಳವಣಿಗೆ – ನೈತಿಕದಿ – ಸಾಮಾಜಿಕದಿ – ಧಾರ್ಮಿಕದಿ ॥
ಸುಳುಹದೆಷ್ಟರ ಮಟ್ಟಿಗದು ಚಿಗು
ರೊಲವಗಾಣುತ ಮುಂದಿನಾಕರ
ತಿಳಿದ ತಿಳಿಲ ಪರೀಕ್ಷೆಯಾಗಿರುತಿತ್ತ ರೀತಿಯಲಿ ॥ ೩೫ ॥

ವೀರಶೈವರೊಳಗದೆ ಐಕ್ಯತೆ
ನೇರಗೊಳಿಸುವ ತವಕ ತೂಕಾ
ಕಾರದಿಂ ನೆರವೇರಿಸುತ ತಿಳಿಗೊಳಿಸುತಾಚರಣೆ ॥
ಸಾರ ಗರ್ಭಿತದಿಂದ ದೈನಿಕ
ಧಾರೆಯೊಳಗೀಸುವಿಕೆಯಾಗಿಹು
ದಾರು ಎಷ್ಟೆಷ್ಟರದ ಮಟ್ಟಗೆಯಾದುದೆ – ನಿರೀಕ್ಷೆ ॥ ೩೬ ॥

ಕಾಲಕದು ತಕ್ಕಂತೆ ಜೀವನ
ಮೇಳದೊಳಗದೆ ತನ್ನ ಧರ್ಮದ
ಕೀಲದೊಳಗಿರಲೆನುವದಾ ಸಂದೇಶದೆ ವಿಶೇಷ ॥
ಪಾಲನತೆಯೊಳಗಿರುವಿಕೆಯದನು
ಗಾಲ ಸೂತ್ರದ ಪಾತ್ರ ಚೈತ್ರದೊ
ಳೇಳುವಿಕೆಯಿರಬೇಕೆನುವದಾಗಿತ್ತು – ಗುರು ಘೋಷ ॥ ೩೭ ॥

ಅಂತು ಬೆಳಗು ೧೨ಕ್ಕಂ ಪದ ೩೭ಕ್ಕಂ ಒಟ್ಟು ಪದ ೫೩೫ಕ್ಕಂ ಶಿವಂ
ಶುಕ್ರವಾರ ೧೨-೨-೨೦೧೬ ರೇವತಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು - ೧೩

ಉತ್ಸವ

ಸೂಚನೆ :

ಮುನ್ನದಿಂ ಪಾಲಿಸುತಬಂದಿಹು
ದೆನ್ನಿರಾ – ಶಿವರಾತ್ರಿ – ಉತ್ಸವ
ಸನ್ನಿಧಿಯ ಅಪ್ಪಣೆಯದಂತಾಚರಣ ಸಲಿಸಾಗಿ ॥

ವಾಚನ :

ಎಂದಿನಂತೆಯೆ ಪೂಜ್ಯರ ಪಥ
ಸ್ಪಂದಿಸುತಲಿರುತಿಹುದ ತತಿ ಮಹ
ತೆಂದಿನಮತಿಹುದಾಳ ಮೇಳ ಸುರಾಳ ಕಳೆ ಕಥನ ॥
ಎಂದಿನಂತಿಹುದಿವರ ಗುರುಕುಲ
ಬಂಧುಗಳ ಯೋಗ ಬಗೆ ಸಾಂಪ್ರತ
ಕುಂದು ಬಾರದ ರೀತಿಯೊಳ ಪೂರೈಸುವಿಕೆ ಜತನ ॥ ೧ ॥

ರಾಜಿಸಿದ ಮಠದೊಳಿಹುದ ಮಹಾ –
ರಾಜರದೆ ತಮ್ಮಾಡಳಿತದೆ ಸ
ರೋಜದಂತಿಹುದಿದಕೆ ಹೇರಳ ಭೂಮಿದಾನದಲಿ ॥
ನೈಜದಿಂ ಕೊಡಮಾಡಿಹುದದೆ ವಿ
ರಾಜಿಸುವ ಪೀಠದೊಳ ದಾಖಲೆ
ಸಾಜ ಸಂಭ್ರಮಿಸುತಿವೆ ದಿಟದಿತಿಹಾಸಕಾಧಾರ ॥ ೨ ॥

ನರಮದೇಶ್ವರ – ದೊಂಡಿಯಾ ಪೀರ್ –
ಪರಮ – ಜಂಗಮವಾಡಿ – ಲಕ್ಷ್ಮಣ
ಪುರದು – ಸಾಕ್ಷಿವಿನಾಯಕಂ ಹನುಮಾನ್ ಘಾಟಕದಿ ॥
ಪರಿಧಿಯೊಳ ಖುಲ್ಲಾ ಜಮೀನದೊ
ಳಿರುವ ಹಲಪರಿಭೂಮಿ ಕಟ್ಟಡ
ಸರಣಿ ಶೋಭಿತ ಸಾವಿರಾರು ಮನೆಗಳೆಣಿಕೆಯಾದಿ ॥ ೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸರಿ ಬನಾರಸ ಜಿಲ್ಲೆಯೊಳಗಿರು
ತಿರುವ ಜಂಗಮಪುರದಿ – ಬಲುವಾ –
ಪರಿಯೆ – ಉದ್ದೂಪುರ – ಕಠರವಾ – ಮೀರಪುರದೊಳಗೆ ||
ತೆರದಿ – ಬೊಲ್ಪುರ – ಪಟ್ಟಲೇಶ್ವರ
ಸರಣಿಯೊಳಗಿಹ – ಚಿಕ್ಕಧಾ ಪುರ
ಸರದಿಯೊಳತೆರೆ ಸಾವಿರಾರೆಕರೆಗಳ ಸಾಗುವಳಿ || ೪ ||

ರೈತರಿಂದದೆ ಮಾಡಿಸುತಲಿರೆ
ಬೇತ ಊಳುವವನೊಡೆಯನೆಸುವ
ರೀತಿ ಕಾನೂನಿನೊಳಗೆಲ್ಲವು ದುಡಿಯುವರ ಹೆಸರ ||
ಮಾತು ಮಾತೊಳ ಮುದ್ರೆಗೊಳ್ಳುತ
ಲಾ ತರಾತುರಿಯಾದ ಕಾರಣ
ಭೀತಿ ಮತ್ತೊಂದಾವರಿಸುತ ವಿಪತ್ತು ಪೀಠಕದು || ೫ ||

ಸನ್ನಿಧಿಯು ಧೈರ್ಯದಲಿ ಸಾಗುತ
ಮುನ್ನಡೆಸುತಾ ಭಕ್ತರಿಂದು
ತ್ವನ್ನವದು ಕಾಣಿಕೆಯದಿಂದವಲಂಬಿಸುವದಿದುವೆ ||
ಮುನ್ನಡೆವ ಮಾತಾಯ್ತು ನೋಡು
ತ್ತನ್ನೆಡೆಗೆನಿತು ನೋಡಲಾಗದೆ
ಚಿನ್ನಿಧಿಯದೆದೆಗಾರಿಕೆಯ ಸಂಕೇತಯೆನಿಸಿತಿದು || ೬ ||

ಶ್ರೇಷ್ಠ ಮಹಿಮಾ ಪೀಠ ಖರ್ಚು
ಸ್ಪಷ್ಟ – ಗುರು – ಕಾಣಿಕೆಗಳಿಂದ ಯ
ಥೇಷ್ಟ ಪರಿಪಾಲಿಸುವ ಪದ್ಧತಿಯೆನುವ ಮಾತಾಯ್ತು||
ದೃಷ್ಟಿಯೊಳಗಿಟಕೊಂಡು ಹೊಸತು ವಿ
ಶಿಷ್ಟದಾಚರಣೆಡೆ ವಿಲೋಕನ
ಚೇಷ್ಟೆ ಆತುರ ಗೂಡಿತೆನಬೇಕಾಗ ನಿಜವಾಗ || ೭ ||

ನಿತ್ಯ ಯೋಚಿಸುತಿದರ ಬಗೆಯೊಳ
ಗತ್ಯವೆನಿಸುತಲಿದುವೆ ಜನತೆಗೆ
ಸುತ್ತ್ಯವೆನಿಸುವ ಮಾರ್ಗದೊಳ ಪರಿಹಾರ ಹುಡುಕುತ್ತ||
ಪಥ್ಯ ಪೂರಕವೆನುವಿಕೆಯಿದೇ
ಕೃತ್ಯ ಕಂಗಳದೊಳಗೆ ಕೊನರಿಸು
ಲತ್ಯಧಿಕಲಿದರೆಡೆಗೆ ಮತಿ – ಮನಸಿಟ್ಟು ಸಾಗುತಿರೆ || ೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಠದೆಡಬಲದ ಭೂಮಿ ವಾಸ್ತವ
ಚಟಪಟನೆ ನಕ್ಷೆಯನು ತಗೆಸುತ
ಜಟಿಲ ದಿನದೊಳ ಮಾರುಕಟ್ಟೆಯ ಸಿದ್ಧಪಡಿಸಿದರೆ ॥
ಮಠದ – ದಾಸೋಹಾದಿಗದು ಸೆಲೆ
ಪುಟಿದ ಪುಟಿಯಂತೆನಿಸುತಿದು – ಮನ
ಪಟಲದೊಳಪಡಿಯಚ್ಚುಗೊಳಿಸುತಲಿಂದು ಆರಂಭ ॥ ೯ ॥

ಧರಮ ಸತ್ಕೃತಿಬೇಕು ಆದರೆ
ಅರ್ಥವಿರದಿರೆ ಸಾಧ್ಯವಾಗದು
ಸರತಿಯಿದು ಸಫಲಾಗದಿದ್ದರೆ ಕಾರ್ಯವದಪೂರ್ಣ ॥
ಸರಿಯೆ ಸೋದ್ದೇಶದಲಿ ಸಾಗು
ತ್ತಿರಲಿದೇ ಕೊರತೆದ್ದು ಕಂಡಿರ
ಲರಿತರಿತು ಯೋಚಿಸುತಿರಲು ಸನ್ನಿಧಿಗೆ ದಿನದಂದು ॥ ೧೦ ॥

ನೀಡಿದಾ ಭಕುತರರ ಕೊಡುಗೆಯ
ರೂಢಿ ಬಲದೊಳ ಕಾರ್ಯನಡೆದರು
ನೋಡುವಂತಾಯಿತ್ತದಕೆ ವಿಶ್ವಾರಾಧ್ಯ ಕಾರುಣ್ಯ ॥
ನಾಡೆ ಪೂಜಾ ಕೋಲೆಯೊಳಗೆ ನಿ
ಗೂಢವೆನಿಪ ತಿಜೋರಿ ಕಂಡಿರೆ
ನೋಡಲದರೊಳ ದೊರೆತ ನಿಧಿಯಿಂ ಪೂರ್ಣವಾದಾಗ * ॥ ೧೧ ॥

ಆ ಸಮಯ ಬಾಂಗ್ಲಾ ಸ್ವತಂತ್ರತೆ
ಘೋಷಣೆಯ ಕಾರಣದಿ ಬರುತಾ
ವಾಸ ಗುರಿ ಉದ್ಯೋಗ ಮಾಡಲು ಪಗಡಿ ಬಾಡಿಗೆಯ ॥
ಕಾಸು ಕೊಡಲೊಪ್ಪಿಗೆಯ ಪರಿಯೊಳ
ವಾಸಿಸಲು ಆರ್ಥಿಕದ ಬಲದೊಳ
ಬೇಸ ಮಠದಾಸೋಹ ಪಥಕನುಕೂಲವಾಯಿತಿದು ॥ ೧೨ ॥

ಹೀಗೆ ಯಾತ್ರಿಕರ ಬರುವಿಕೆ ಹೆ
ಚ್ಚಾಗಿ ದಕ್ಷಿಣ ಭಾರತದ ಜನ
ಬಾಗಿ ಬರುತ ಜಯಂತಿ ವಿಶ್ವಾರಾಧ್ಯರುತ್ಸವಕೆ ॥
ಯೋಗ ವಹ ಶಿವರಾತ್ರಿಯೊಳಗನು
ವಾಗಿ ಬೆಳಗಿನ ವೇಳೆ ರೀತಿ ಸು
ರಾಗದಿಂ ಸಿಂಗರಿಸಿದ ರಥೋತ್ಸವನೆ ಕಂಡುಂಡು ॥ ೧೩ ॥

---

* ಕೊರತೆ ಕಂಡಾಗ ಬಂಗಾರ ಕಿರೀಟವನ್ನೆ ಮಾರಿ ಮಾರುಕಟ್ಟೆ ನಿರ್ಮಿಸಿ ನಂತರ ಕಿರೀಟ ಮಾಡಿಸಿದ್ದು ನಾನು ಕೇಳಿದ ಸಂಗತಿಯಿದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂತಸತೆಗೊಳ್ಳುವಿಕೆ ಕಾಶಿಯೊ
ಳಂತು ಸಾಂಪ್ರತ ಪದ್ಧತಿಯ ಬಿಡ
ದಿಂತು ತಪ್ಪದೆ ಸಾಗಿಹುದು ಅಂದಿಂದು ಸುರಸೇಂದು ॥
ಸಂತಸದ ತಮ್ಮಿಷ್ಟಲಿಂಗದೊ
ಳಿಂತು ಪೂಜೆಯ ಮಾಡಿಸುವ ಬಗೆ
ಗಂತು ಸಾಧಕರಿಗದು ತಿಳಿಸಿರಲಾಗ ವಟುಬಳಗ ॥ ೧೪ ॥

ಅಪ್ಪಣೆಯನಾಲಿಸುತ ಪದದೊಳ
ಗೊಪ್ಪಿಹುದ – ನಿರುಪಾಧಿ ಶರ್ಮಾ *
ಒಪ್ಪಿದಂತೆಯೆ ಸಾಂಬ ಶರ್ಮಾ – ಶಾಂತಲಿಂಗಾದಿ ॥
ಒಪ್ಪು ಕರದಿಷ್ಟವನು ಪಿಡಿದವ
ಸೊಪ್ಪು ತೊಂದೆಡೆ ಕೂಡ್ರಿಸುತ – ತೆರ
ನೊಪ್ಪದವರೆದುರಿತ್ತಲಿರಿಲೆಂದೆನುತ ಪೂಜೆಯೊಳ ॥ ೧೫ ॥

ತೊಡಗುತಿರಲಾವಾಗಲಾ ಧಾ
ರ್‍ವಾಡದವ ನಾಗಯ್ಯನೆಂಬವ
ನಾಡೆ ನಿಯಮವನೊಪ್ಪದಲೆ ಬಡಬಡಿಸುತಿಂತಾಗ ॥
ನೋಡಿರೆನ್ನೊಳಗಾತ್ಮಲಿಂಗವು
ನೋಡಿಯಿರಲೇಕಿದುವು ಹೊರ
ಹಾಡು ನಾನೊಪ್ಪೆನಿದನಾಲಿಸಿದಂಥ – ಚನ್ನಿಧಿಯು ॥ ೧೬ ॥

ಇಷ್ಟಲಿಂಗ ವಿಧಾನ ಪೂಜೆ ಯ
ಥೇಷ್ಟ – ಸಕ್ರಮ – ಸುಪ್ರಸಾದವ
ಸೃಷ್ಟ ಪೂರೈಸುತ್ತ ಬಳಿಕಾಗತ್ತ ಸನ್ನಿಧಿಯು ॥
ಸೃಷ್ಟ ನಾಗಯ್ಯನಿಗೆ ನಿಜಕರ
ದಿಷ್ಟಲಿಂಗಾಚಾರ ಬಗ್ಗೆ ವಿ
ಶಿಷ್ಟತೆಯನುಡಿ ತೆರೆದರಿಸುತಲಿ ತಿಳಲ ತಿಳಿಯಿಂತು ॥ ೧೭ ॥

ಗುರುಕುಲದ ಸಾಧಕರು ಸಿದ್ಧಾ
ಗಿರಿಸಿಹುದ ಶಿವರಾತ್ರಿ ಶುಭದಿನ
ಹರವ ಲೆಕ್ಕದೊಳಿಹ ಸಭಾಂಗಣದಿಂದು ಲಿಂಗ ಬಗೆ ॥
ಹಿರಿಮೆಯದ ಹೊಲಬಿಲ್ಲಿ ಹೂವನ
ದಿರವ ಹಸ ಶೋಭಿಸುವ ಸುಮದೆಸ
ಳಿರಿಸಿ ಹರಸುವರೆನಲು – ಆರಂಭಿಸಿದರಾ ವೇಳೆ ॥ ೧೮ ॥

* ಈ ಕೃತಿಯ ಬರೆದವರು – ಶ್ರೀ ನಿ.ಪ್ರ. ನಿರುಪಾಧಿ ಸ್ವಾಮಿಗಳು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಿನ್ನಿಧಿ ವಾಣಿ – ಲಿಂಗಾಚಾರ :

ಇಂದು ಮಹಶಿವರಾತ್ರಿಯೆಂಬುವ
ದಂದಿನಿಂ ಬಂದಿಹುದ ಪರತರ
ಚಂದ ಭಾವನೆಯಿಂದ ತಿಳಿವುದು ಶಿವ ಭಕುತರೆಲ್ಲ॥
ಮಂದಿರದೊಳಾ ಶೈವರಾರ್ಚನ
ನಂದದೀ ಕರದಿಷ್ಟ ಲಿಂಗಾ
ನಂದದಿಂದರ್ಚಿಸುವ ಲಿಂಗಾಯತರದೀ ಚರ್ಯೆ ॥ ೧೯ ॥

ಲಿಂಗವೆಂಬುದ ಸರ್ವಕಾರಣ
ಲಿಂಗ ಸಚ್ಚಿದ ಪೂರ್ಣ ಚೇತನ
ಲಿಂಗವೆಂಬುದು ಸರ್ವ ತತ್ವ ಪುರಾಣಕಾಧಾರ॥
ಲಿಂಗ ಆತ್ಮದಚುಳುಕು ಚಿದ್ಘನ
ಲಿಂಗವಿದು ನಮ್ಮೆಲ್ಲರ ಕುರುಹು
ಲಿಂಗ – ಅರಿಯಲು ಮೂಲ ಸಾಧನವೆಂಬುದರಿಯುವದು ॥ ೨೦ ॥

ಮರೆತವಗೆ ಭವ ಬಂಧನಾಗರ
ಅರಿತವಗೆ ಸಾನಂದದೋಗರ
ಅರಿಯುತಿದರೊಳ ಕಳೆಯ ಕಂಡವಗುಂಟು ಸಮರಸತೆ॥
ಕರುವ ಮರೆಯದ ಹಸುವ ಹೊನಲೊಳ
ಗಿರುವ ಪರಿ ಶಿಶು ತಾಯ ನೆನೆಯುವ
ಲಿರಲಿದುವೆ ನಿಜ ವೀರಶೈವರರಿರವದಾತ್ಮಕಥೆ ॥ ೨೧ ॥

ನಮ್ಮನಾವೇ ನೋಡಿಕೊಳ್ಳುವ
ದೊಮ್ಮನದ ಕರದಿಷ್ಟಲಿಂಗದಿ
ಸುಮ್ಮದಿಹ ಚಿತ್ಕಳೆಯದೊಳ ತನ್ನನ್ನೆ ನೆಲಿಸಿದರೆ॥
ಕಮ್ಮನೆಯ ಶಾಂತರಸ ಸಂಭ್ರಮ
ಸೊಮ್ಮ ಲಭ್ಯಹುದಪ್ಪ ಕೇಳಾ
ನೆಮ್ಮಿ ಶಾಖೆಯ ಹಿಡಿದು – ಶಶಿ – ಶಿಶುವಿಗರಿಸುವದಂತೆ ॥ ೨೨ ॥

ಲಿಂಗತೊರೆದವರತ್ತನೋಡರು
ತುಂಗ ಸತ್ಪುರುಷ ಗಣ – ಪರ ನಿರ
ತಾಂಗದೊಳ ಲಿಂಗಾನು ಸಂಧಾನ ಫಲವೆ ನಿರಾಳ॥
ಲಿಂಗ ಗುಣಗಳ ಮೇಲ್ಮೆಯಾವದು
ಸಂಗತಿಯ ತಿಳಿದಾತ ತೊರೆಯನು
ಇಂಗಿತಾರ್ಥವನಳವಡಿಸಿಕೊಂಡಾತ ಹಸಹಂಸ ॥ ೨೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೋಡು ಆರಾಧನೆಯ ನಿಚ್ಚಳ
ಮಾಡಿದೆಡೆಗಮೃತದ ಬೆಳಸದು
ನೋಡಲಾರದೆ ಬರಿ ವಿರೋಧಿಸಿದೆಡೆ ವಿಷದ ಹುಲುಸು ॥
ನಾಡೆ ಅಂಜಲೆಬೇಕು ಲಿಂಗಕೆ –
ಜೋಡಿ ಜಂಗಮಕೆನುವ ಹಿತನುಡಿ
ಗೂಡಿದವಗುಂಟಪ್ಪ ಸನ್ನಿಹಿತೊಪ್ಪದೆ ಸಲೀಸು ॥ ೨೪ ॥

ಲಿಂಗಧಾರಣೆಯಿಂದ ಮೀಸಲ
ಸಂಗಿ ನೀನಾಗಪ್ಪಲಿದರಿಂ
ರಂಗದೊಳಗಾದಂಥ ಪಾಪಗಳಳಿವು ತಿಳಿತಿಳಿದು ॥
ಲಿಂಗ ಧರಿಸಿಹುದಾಂಗ ಮಂಗಲ
ಸಂಗಿ ನೀನಾದಾಗದೊಳ ಮಂ
ತ್ರಾಂಗಿಯಾಗುವದಿಲ್ಲಿ – ಅಳವಡಿಸಿರಲು ಕಮಳಕಳೆ ॥ ೨೫ ॥

ಚಿತ್ರದೊಳಗಿದನಿರಿಸಿ ಸಾಗಿರ
ಲತ್ತದೆಂಥಹ ಬಂಧ ಭಾವನೆ
ಗತ್ತ ಗಮ್ಮತಗಾನ – ದೂರೆಂಬುದನು ನಿಶ್ಚಯಿಸು ॥
ಹುತ್ತ ಬಡಿದಡೆ ಹಾವ ಸಾಯದು
ನತ್ತ ಧರಿಸಿರೆ ನಾಕ ದೊರೆವುದೆ –
ಸುತ್ತ ಹಾಕುವದಳಿದು ಬಿತ್ತು ಚಿತ್ತವ ಲಿಂಗದೆಡೆ ॥ ೨೬ ॥

ಗಿಡದೊಳಗೆರಡು ಪಕ್ಷಿಗಳಿರವು
ಸೆಡಗರಿರದಿಹ ಪಕ್ಷಿ ಹೊರಗಿನ
ಬಡಬಡಿಸುತಿಹುದದರ ಚಲ್ಲಾಟಗಳ ನೋಡುವಿಕೆ ॥
ಮಿಡಿತ ನೀನೇನರಿಯೆ ಕಾರಣ
ಬಡಬಡಿಕೆಯಾಕಯ್ಯ ನಿನ್ನಡೆ
ಕಡಿದುದಾಗಿಹುದೆಲ್ಲವ ತಿಳಿಯೆ ತಿಳಿಯಿದನುವಾಗಿ ॥ ೨೭ ॥

ಲಿಂಗವಂ ಪೂಜಿಸುವದೇತಕೆ
ಜಂಗಮನು ಬರಲೆನುವ ಸೂತ್ರದ
ಇಂಗಿತವನರಿತವಗೆ ಬೇಸರೆನಿಸುವದೆಂತಯ್ಯ ॥
ಸಂಗತಿ ಸಮನ್ವಯದದೋಗರ
ರಂಗಿತಾರ್ಥವನರಿತವನೆ ಘನ
ಲಿಂಗವಂತೆಂಬುದನು ನಂಬಲಿದ ತಿಳಿ ನಿಜಸಯ್ಯಾ ॥ ೨೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೊಸು ನುಡಿ ಸಾಂಗತ್ಯವೀ ಬಹು
ಬೇಸರಾದರೆ ಕೇಳು ಕೇಳ
ಪ್ವಾಸರೆನಿಸಿಹುದೆನಿಪ ನಿನ್ನಾಚರಣ ಕರಕಿರಣ ||
ತೋಷದಾಕ್ಷತ ಮೂರ್ತದೊಳ ರಸ
ಹಾಸಿಕೊಂಡಾಲ್ಹಾದ ಭಾವಾ
ಕಾಶದೊಳಗಡಗಿಹುದ ಸಾಭರಣದನುಸರಣ ಘನ || ೨೯ ||

ನಿರುಪಮದಿ ನಿಶ್ಚಯಿಸಿದಂಥಹ
ಸುರಮ ಕನ್ಯೆಗೆ ಸೂತ್ರ ಬಂಧಿಸು
ತಿರುವ ನಿನ್ನಿರವೇನು ಇದರಾವಶ್ಯವೆಂದೆಯಲ ||
ಸುರಮ ನೋಡಲು ನಯನ ನಿನಗಿರು
ತಿರುವ ಪರಿಧಾರಣದು ಇಷ್ಟದ –
ಗರಿಮೆ ತಿಳಿದಿರಬೇಕಿದರೊಳಡಗಿರಲು ಲೇಸೆಲ್ಲ || ೩೦ ||

ಕೇಳುಕೇಳಪ್ಪಿದನು ಹಸುವಿಗೆ
ನೀಳವಾದುದ ವ್ರಣಕೆ – ಹಸುವಿನ
ಹಾಲ – ಹೆಪ್ಪೊಳಗಾದ – ಬೆಣ್ಣೆಯ – ತುಪ್ಪ – ಬೇಕಲ್ಲ ||
ಹಾಲ ಮೊಲೆಯೊಳಗಿಹುದದೆಂದರೆ
ಮೇಳದಾವ್ರಣ ಮಾಯಬಹುದೇ
ಹೇಳಿದಕೆ ನಾಗಯ್ಯ ನಿನ್ನುಡಿ ನುಡಿಸು ಮಿಡಿ ಮೆಲ್ಲ || ೩೧ ||

ಧರಮದಾವದೆಯಿರಲಿದಕೆ ನಡೆ
ದಿರುವ ಲಾಂಛನವಿಹುದ ಕಾಣು
ತ್ತಿರುತಿರೆ ವಿರೋದಿಸುವದೇಕೈ ಅಯ್ಯನೆನಿಸುತ್ತ ||
ಅರಿಸುವಿಕೆ ನಿನದೇನು ಭಕುತರಿ
ಗಿರಿಸುವಾ ನಡೆಯೇನು ತತ್ವಾ
ಚರಣ ನಿನ್ನೊಳಗಿರದೆ ಪಾಡುವದೇನುಸಿರ ಚಿತ್ತ || ೩೨ ||

ನೀನಿರುವ ಮಠಕಂತು – ಹೊಲಕೆ ಸ
ಮಾನ ಚೌದಿಶೆ ಲಿಂಗ ಮುದ್ರೆಯು
ಜಾಣತನದಿಂದಿರಿಸುವಾತನೆ – ಕುರುಹ ಬೇಡಾಯ್ತೆ
ಕಾಣು ರಾಷ್ಟ್ರಧ್ವಜವು ನಾಸ್ತಿಕ
ಕೋಣೆಯೊಳಗಿರುವವಗು ಲಾಂಛನ
ಮೌನವೊ ನಿರಾಕಾರವೆನುವವರೆಡೆಗದೇ ನೋಡು || ೩೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದಕೆ ಅವಮಾನವನು ಮಾಡಿರೆ
ಕೆದಕಿ ಕೆಣಕುವ ಕರ್ಕಶಾ ಕೃತಿ
ಪದ ಪದಕು ಉಗ್ರತೆಯ ಹತ್ಯಾಕಾಂಡ ಹೊನಲಪ್ಪ ||
ಸದರ ಕರೆಯಲು ನಿನಗೆ ಹೆಸರಿಡ
ಲಿದಕೆ ಬೇಡೆನ್ನುವಿಕೆಯಾಕದು
ಹದುಳದುಂಗುರ ಬೆರಳಿಗಿರುವಂತಿರಲಿದೇ ಚುಳುಕು || ೩೪ ||

ನಾನೆ ದೊಡ್ಡವನೆನುತಲಿರುವಿಕೆ
ಯೇನಿದುವು ಶೋಭಿಸದು ತೆರೆಯನು
ಮಾನವಿಲ್ಲದೆ ಮನ್ನಿಸೈ ಗುರು – ಲಿಂಗ – ಜಂಗಮವ ||
ಹಾನಿ ನಿನಗೇನಿಲ್ಲಿ ತೋರುವ
ಕೂನ ಬಳಿಕಹುದಪ್ಪ ನೀರವ
ಪಾನ ಪರಿಮಳ ತಾನೆ ತಂತಾನಂತೆ ತಿಳಿ ಶುಭವ || ೩೫ ||

ವೇಷ ಭೂಷಣ ಡೌಲದಿಂ ವಿ
ಭೂಷಣಿದೆ ಲಿಂಗಾಂಗ ಸಮರಸ
ಭಾಷೆಯೊಳ ಜಂಝೂಟವಿರದಿಹ ಸದ್ರಸತೆ ಖಾತೆ ||
ದೂಸೆನಿತು ಇರದಂಥ ದೀಪ್ತಿಸು
ಹಾಸ ಹಳಸದ ಹೂವ ಹೊನಲಾ
ಕಾಶ ಕಂಗಳದೊಳಗೆ ಮಂಗಳ ಮೌನ ಮಧು ಗೀತೆ || ೩೬ ||

ರುಚಿಯ ಕಾಣದುದನುಭವಿಸಲಾ
ಶುಚಿಯ ಬೆಲ್ಲದು ಬೇಡವೇನಪ
ಆಚಲದೆ ನಿರಾಕಾರವಸ್ತುವ ಪಡೆಯುದಕೆ ವಸ್ತು ||
ನಿಚಯನಡಗಿಸಿಕೊಂಡ ತತ್ ಪ
ರಿಚಯಿಸುವದಾಕಾರ ವಾಸ್ತವ
ವಿಚಲರಹಿತಾರಾಧಿಸುವ ಬಯಕೆಯಿರಲಿದೆ ಸಿಸ್ತು || ೩೭ ||

ವೇಳೆ ಕಾಣದರಿದನು ನೋಡಲು
ಗಾಲಿ ಗಡಿಯಾರವದು ಬೇಡವೆ
ಮೇಲೆನಿಪ ಸುಪ್ರೀತಿ ತೋರದು ವಸ್ತು ದೊರೆತಾಗ ||
ನಾಲೆಯನುಭವಕೀಲದೊಳಗನು
ಶೀಲತೆಗೆ – ಪ್ರಾಮುಖ್ಯವೆಂಬುವ
ಪಾಲನೆಗೆ ಚುಳುಕಾಗ್ರತೆಗೆ ಮಾನ್ಯತೆಯ ನಿನಗೀಗ || ೩೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಿಂದೆ ಧರಿಸಿಹರಾ ಮಹಾ ಗಣ
ಳಂದದುವೆ ಸಾಧಾರ ನೋಡಿರೆ
ಹೊಂದಿ ತಿಳಿ ಬಸವಾದಿ ಶರಣರು – ವೇಮ – ಮಲ್ಲಮ್ಮಾ ||
ನಂದದಿಂ ಧರಿಸಿಹುದ ಬಗೆಯಾ
ನಂದವರ ವಚನಾಳ ತತ್ವಾ
ನಂದಗೊಂಡಿಹುದರಿಮೆಯಿರಬೇಕಲ್ಲ ಸಕಲರಿಗೆ || ೩೯ ||

ಲಿಂಗಧಾರಣದಿಂದ ನಿರ್ಮಲ
ರಂಗಿ ನೀನಾಗುವಿಕೆಯೆಂಬುದ
ಸಂಗತಿಯನರಿಯದಯೆಯಿರುವಿಕೆ ಶೋಭೆಯೆಂತಿದುವು ||
ಮಂಗಲ ದ್ರವ್ಯದೊಳ ಮೀಯು
ತ್ತಾಂಗದೊಳ ಪರಿಮಳದ ಜೋಗುಳ
ಅಂಗವಿಸುತಾಡುವಿಕೆ ಪುಸಿಯನುದೆಂತು ಹೇಳಯ್ಯಾ || ೪೦ ||

ಯಾರು ಬೇಕಾದವರು ಇಷ್ಟವ
ನೇರ ಧರಿಸುವದೆಂಬುದಾಗಮ
ಪಾರಮೇಶ್ವರ ಘೋಷಣೆಹುದೆಂಬರಿವು ಬೇಕಲ್ಲ ||
ತೋರುವಾ ಶೃಂಗಾರ ಸೌರಭ
ಹಾರದಿಂನಾರಿಗದು ಕಂಠದಿ
ಮೇರು ಮಂಗಲಸೂತ್ರ ಸದ್ಗುಣ ಶೋಭೆ ತಿಳಿಪಲ್ಲ || ೪೧ ||

ಕಂಡುದ ಹಿಡಿಯಲೊಲ್ಲದಯೆ ಬರಿ
ಬೆಂಡನುಡಿಯಿಂದೇನು ಕಾಣದ
ಕೆಂಡ ಹಿಡಿದಿಹೆನೆಂಬುವಿಕೆ ಸರಿಯೆಂತು ಹೇಳಪ್ಪ ||
ಕಂಡುದನೆ ಕಾಣುತ್ತ ಗುರುಪದ
ಹಂಡೆಯೊಳ ಮಿಂದಾತ ಬೆಳಗವ
ಕಂಡು ಕೈವಲ್ಯಾತನೆಂಬುದನೊಪ್ಪಬೇಕಲ್ಲ || ೪೨ ||

ನಿಚ್ಚಳದ ಗುರುಪಾದ ಪದ್ಮವ
ನಚ್ಚಿ ಮೆಚ್ಚದರಿರವು ಯಾತಕೆ
ಕಿಚ್ಚಿನೊಳಗಿಕ್ಕುವದು ಕಾರಣ ಕೇಳು ನನ್ನಯ್ಯಾ ||
ಅಚ್ಚು ನಿನ್ನಂತಾಡಿದರೆ ಬಲು
ಮೆಚ್ಚು ನಿನಗಹುದಯ್ಯ ಬರಿ ಇದಿ
ರಿಚ್ಛೆಯಿದನುಡಿಸಿಡಿಸಿರಲು ಮೆಚ್ಚರರು ಯಾರೆಯಿರೆ || ೪೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತು ಧರಿಸಿದವ ತಿಳಿತೊಳೆ ನಿಜ
ವಾಂತು ಆತನೆ ಧನ್ಯ ಮಾನ್ಯ ಸ
ದಾಂತಃಕರಣದಿ ಶರಣರೊಳಗುಳಿಯುವಿಕೆ ಗುಪ್ತಸಿರಿ ॥
ಅಂತು ಗಾಣದೊಳೆಳ್ಳು ಹಾಕದ
ಸಂತತೆತ್ತಿನ ಸುತ್ತುಹಾಕಿದ
ಹಂತ ನಿನದೆನಿತಾಗಬಾರದುದೆನಲು ನಾಗಯ್ಯ ॥ ೪೪ ॥

ನಾಗಯ್ಯನ ನುಡಿಮಿಡಿ :

ತನು ಮನೇಂದ್ರಿ ವಿಕಾರದೊಳಗನು
ತೆಣಿಕೆ ಕೊಳ ಬಳಲಿದೆನು ಸತ್ಯ ಕ
ರುಣೆಯದಿಂ ಪಾಲಿಪುದು – ಅನುಪಮ ಸುಖದ ಸಾರಾಯ ॥
ಗಣಿತ ಗರಿ ಘನವಂತರಡಿಯೊಳ
ಗುಣಿಸುವಂತೆಯೆ ಮಾಡು ಸನ್ಮತಿ
ಕಣದೊಳಗೆ – ಹಂತಿಯೊಳಗಾಗುವ ಸಮತೆ ಮಾಡಯ್ಯ ॥ ೪೫ ॥

ಎನ್ನವಗುಣ ಕಸಗಳ ಕೀಳುತ
ಚನ್ನ ಪಾಲಿಸು ವಿಶ್ವ ಮೂರುತಿ
ಯೆನ್ನೊಳಗೆ ಮತಿಬಲಿಸಿ ಬಂಧುರವಾಗಿರಿಸು ನಿತ್ಯ ॥
ಖಿನ್ನಗೊಳ್ಳದ ಹಾಗೆ ಪಾಲಿಸು
ತಿನ್ನು ಮರು ಕೆಸರೊಳಗೆ ಬೀಳುವ
ಕುನ್ನಿಯಂತಾಗಿರಿಸದಯೆ ನಿಮ್ಮತ್ತಮನ ನಿಲಿಸು ॥ ೪೬ ॥

ಇರಿಸು ನಿಮ್ಮವರಡಿಯೆ ಸಂಗದೊ
ಳರಿಯುವಂತೆಯೆ ನಿಮಿಷವಾದರು
ಪರತರದ ಭಾವನೆಯ ಸವಿಯೊಳಗುಳಿದು ಹನಿ ಸವಿದು ॥
ಚರಣಕಮಲೊಳಗಾಗಿ ಬಾಳುವ
ಸರಣೆ ಸುತನಾಗಿರಿಸುತರಳಿಸು
ತಿರಿಸು ಮರಳದೆ ತಪ್ಪು ಮಾಡೆನುಯೆನ್ನ ಲಾವಾಗ ॥ ೪೭ ॥

ತಪ್ಪು ಒಪ್ಪುಗಳೆರಡು ಜನರೊಳು
ಗಪ್ಪಿಕೊಂಡಿಹುದಿದೆ ಸದಾತುರ
ಕಪ್ಪೆಯಂತಿಹುದಾನು ಮನಗಂಡೆ ಗುರುದೇವಯ್ಯ ॥
ಅಪ್ಪ ಹೊಡೆಯುವ ಗಾಡಿ ಹಿನ್ನೆಲೆ
ಗೊಪ್ಪಿ ಬರುತಿಹ ಪಶುವನವನಂ
ತೊಪ್ಪಿದಂತೆಯೆ ಪಾಲಿಸೈಯೆನಲಾಗ ಜಗದಯ್ಯ ॥ ೪೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಿನ್ನಿಧಿ ವಾಣಿ :

ನೀನು ತಪ್ಪಿದ ನು(ನ)ಡಿಗೆ ಸೂಳ್ನುಡಿ
ಸಾಣೆಸುತಲಿಡುದಾಯಿತ್ತಾದರು
ಕಾಣೆಗೊಂಡವರಿಗಿದುವೇ ಪಾಠೆನಿಸದೇನಯ್ಯಾ ॥
ಜಾಣರೊಳನೊಡಗೂಡುತಾಡುತ
ಮಾಣು ಹಿಂದಿನ ಹೊಲಬ – ಹೊಲಬಿಗ *
ನೀನೆಯಾಗುತ ಸಾಗೆನುವದಾಲಿಸುತರೆನಿಸುತಿದು ॥ ೪೯ ॥

ವಾಚನ :

ಕಂದನಾ ರಮ್ಯವನು ಜನಗಣ
ನಂದದಲಿ ನೋಡಿರಲದಕೆ ತಾ
ನಂದು ಮೆಣಸಿನಕಾಯಿ ಉಪ್ಪನು ಇಳಿದು ಒಲೆಯೊಳಗೆ ॥
ಮಂದದಿರಿಸುವ ನೆದರ ನಿಲವಾ
ನಂದಲನುದಿನ ಜನನಿಯಾತ್ಮಾ
ನಂದವೆನಿಸಿತು – ಯಾತ್ರಿಗಳಿಗಾವಾಗಲೊಳಗೊಳಗೆ ॥ ೫೦ ॥

ಸುಳಿಸುಳಿದು ಸಂತಸತೆ ಸರಸೊಳ
ಹೊಳೆಹೊಳೆದ ಮುಖ ಮುದ್ರೆಯೊಳಗನು
ತಳೆದಳೆದು ಸಾಗಿರಲು – ಸಂತಸಪುರದೆಡೆಗೆ ಪಯಣ ॥
ಉಳಿಯುತಂದು ವಿದರ್ಭನಾಡಿನ
ಬೆಳೆದ ಲಿಂಗಾಯತರು ಸನ್ನಿಧಿ
ಸುಳಿಯುತ ನಿಮಂತ್ರಣವನಿಡಲಿದಕೊಪ್ಪಿದಂತಾಗಿ ॥ ೫೧ ॥

ಪೀಠದೊಳಗಿಹ ಗುರುಕುಲದ ಪರಿ
ಪಾಠ ಲಕ್ಷಿಸಿ ಸಾಧಕರ ಒಳ
ನೋಟಲೆಣಿಕೆಯದಾರ್ಥಿಕದ ತಕ್ಕಂತೆ ಹಿತಮಿತದಿ ॥
ಸಾಟಿ ಸೌಕರ್ಯಗಳನಿಡುತ ವಿ
ರಾಟ ಭಕುತ – ವಿದರ್ಭರೆಡೆ ನಯ
ನಾಟದೊಳ ಬರೆಯುತ್ತ ಗಮನ ನಿಮಂತ್ರಿಣಿಟ್ಟಂತೆ ॥ ೫೨ ॥

* ೪–೩–೧೯೬೭ ರವಿವಾರ ಜಂಗಮನಾಡಿಮಠ ಜ್ಞಾನಮಂದಿರ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯೋಚಿಸುತ ಸುಂದರ ಸಮಾಜ ವಿ
ರಾಜಿಸಲಿದೆಂಬಂತೆ ಅಶನ – ವಸತಿಯ
ದಾಚರಣೆಯೊಳಗಿರಲೆನುತಲಿದರೊಳಗಿಹುದದೆಂಬ ||
ಈ ಚರಿತ್ರೆಯ ಜತೆ ವಿಕಾಸ ವಿ
ರೋಚಿತೊಳಗಾಗುವಿಕೆಯೆನುವಾ
ಸೂಚನಕಿದುವೆ ಮೂಲವೆನ್ನುತ – ಹೊರಟ ವಿದರ್ಭೆಡೆಗೆ || ೫೩ ||

ಈ ಮೊದಲೆ ಯೋಚಿಸುತ ಗಣ ಮನ
ಸೋಮು ಸಂತಸದೊಳಗೆ ಇಟ್ಟಿಹು
ದಾ ಮನೋರಥದಂತೆ ಮಂಗಳವೇಢೆಯೆಡೆ ನೋಟ ||
ರಾಮಣೀಯಕನಿಡುತ ತಾತ ವಿ
ರಾಮವಿಲ್ಲದೆ ಬರುತಲೀ ದಿಶೆ
ನೇಮ ನಿರ್ಮಲ ಶಾಂತ ಸತ್ಸುಖಿ ಚರಿತ – ಭಾವರಿತು || ೫೪ ||

ಅಂತು ಬೆಳಗು ೧೩ಕ್ಕಂ ಪದ ೫೪ಕ್ಕಂ ಒಟ್ಟು ೫೮೯ಕ್ಕಂ
ಶುಭಂ. ೧೬-೨-೨೦೧೬ ಮಂಗಳವಾರ ರೋಹಿಣಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು - ೧೪

ವಿದರ್ಭ - ವಿಕಾಸ

ಸೂಚನೆ :

ಭಕ್ತರ ನಿಮಂತ್ರಣದೊಳಿಹುದಾ
ಸಕ್ತಿಯಂತೆಯೆ ಪಯಣಿಸುತ ಸಫ
ಲೋಕ್ತಗೊಳಿಸಿಹುದೆಲ್ಲ ತಿಳಿಯುವದಲ್ಲಿ ನೆಲೆಯಲ್ಲಿ ॥

ವಾಚನ :

ರೈಲುಗಾಡಿಯದೋಟದಿರೆ ಬದಿ
ಸಾಲು ವನ್ಯಜ ಲಾಸ್ಯ ಭಾಷ್ಯ ವಿ
ಶಾಲದೆಡೆ ಜಗದಾರ್ಯ ನೋಟ ಕುಶಾಲ ನಯನಾಲೆ ॥
ಕಾಲ ಗತಿ ಪರಿವರ್ತನದ ಗತಿ
ಶೀಲದೊಳ ಪದಪಾಲನೊಳಗುರಿ
ಮೇಲಗೊಳಿಸುವ ಲೆಕ್ಕಹಾಕುತಿಹುದಿದ ಮನಮಾಲೆ ॥ ೧ ॥

ತಂದೆ ಮಕ್ಕಳಿಗಾಗಿ ಮಠ ಮನೆ
ಹೊಂದಿರಿಸುವಾತುರತೆ ಬಿಡದನು
ವಿಂದ ಯೋಚನೆಯಾತನೆಡೆ ಬಿಡದಾಳಿ ಪದಪಾಳಿ ॥
ಎಂದಿನಿಂದಲೊ ಬಂದಿಹುದದೆ ಪ
ಸಂದ ಪಲ್ಲವ ಹಣ್ಣೆಲೆಯದೊಳ
ಗಂದು ಬರುವಿಕೆಯಂತೆ ತೆರನಲ್ಲ ಗುರು ಮನಹಾಳಿ ॥ ೨ ॥

ಸಕಲ ಜೀವರ ಲೇಸ ಬಯಸುವ
ಮುಖದೊಳಗಡಗಿಸಿಹುದದಾ ಸುಮ
ಪಕಳೆ – ನಿಪ – ಗಂಗಾಧರಯ್ಯನು ನೀಲಕಂಠಯ್ಯ ॥
ಮುಕುರ ಮನದೊಳಗಿಹುದೆ ಪುಟಿ ಪುಟಿ
ದಖಿಲ ದಿಶೆ ಪ್ರತಿಬಿಂಬಿಸುತಲಿಹ
ಸಕುಶಲ ಜಗದ್ಗುರುವಿನೊಳಿಹುದನರಿತು ಸೇವೆಯೊಳು ॥ ೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾಗಿಯಾಗಿಹುದಾನು ಕಂಡಿಹು
ದಾಗ ಹಲವಿಧ ಚರ್ಯದೊಳಗಾ
ವಾಗ ಉಪಚಾರದೊಳು ಸಮಯವನರಿತು ನುಡಿನಿರತ ॥
ಯೋಗಗೊಳ್ಳುತ ಗುರು ಮನಾಂಕಿತ
ಜೋಗದಂತಿರುತಿರುತ ಸರಳ ಸ
ರಾಗದೊಳ ಪಾಲಿಸುತಲಿವರದೆ ಸೇವೆ ಗ್ರಹಿಸುತ್ತ ॥ ೪ ॥

ಅಂದು ತಲುಪುತ್ತಿರಲು ಭಾವಿಕ
ರಂದು ಉತ್ಸವದಿಂದೆ ಮನ್ನಿಸು
ತಂದು ಯೋಗಕ್ಷೇಮದಾ ಬಳಿಕಾ ಸಭಾಂಗಣದಿ ॥
ಹಿಂದೆ ಹೋದುದವರಿತು ತತ್ಕಾ ॥
ಲಿಂದಿನ ಪರಿಸ್ಥಿತಿಯ ತಿಳಿಯು
ತ್ತಂದು ಸಂಸ್ಕೃತಿಸಾರ ಗರ್ಭಿತ ಧಾರೆರೆಯುತಿಂತು ॥ ೫ ॥

ಸನ್ನಿಧಿಯ ಚನ್ನುಡಿ :

ಸಂಘಟನೆ ಹೊರತಾದ ಜೀವನ
ಭಂಗಬಿಡಗೆನಿಸುವದು ಮಹ ಕೆರೆ
ಯಾಂಗಳದಿ ಮತ್ಸ್ಯಾಳಿ – ವಟದೊಳಗಿರುವ ಗಿಳಿಗುಂಪು ॥
ಸಂಗ ಜೇನ್ನೊಣದಂಗೆ ಕಾರ್ಯಾ
ರಂಗ ಸಂಗ್ರಹ ಮಧುರದಂತಿಹು
ದಿಂಗಿತವನರಿತಾಗದೇಳಿಗೆ ಕೇದಿಗೆಯ ಕಂಪು ॥ ೬ ॥

ಕಳೆದ ದಿನ ಕಳೆದಾಯ್ತು ಇಂದಿಹು
ದಳೆಯುತಲಿ ಮುಂಬರುದೆಣಿಕೆ ಬಿಡ
ದುಳಿಯುವಂಥಹ ಕಾರ್ಯಕೈಕೊಳ್ಳುವಿಕೆ ಬೇಕಲ್ಲ ॥
ಮೊಳೆದುದೀ ದಿನ ಸಸಿಗೆ ಭಕ್ತಿಯ
ಮಳೆಯೆರೆಯಲಾವಾಗ ನಿಶ್ಚಿತ
ಫಲ ಸಮಾಜಕೆ ದೊರಕಿದಂತಾಗುವದು ತಿಳಿರಪ್ಪ ॥ ೭ ॥

ಅಂದು ಮಂಗಳವೇಳೆಗದು ತಾ
ಬಂದು ಮಹ ಭಂಡಾರಿ ಬಸವ
ಣ್ಣಂದು ಸಲ್ಲು ಶಿವಾನುಭವ ಚಿಂತನದಿಹುದ ಕಾವ್ಯ ॥
ಚಂದದಿಂದರಿಸುವಿಕೆ ನೆನಪಿನೊ
ಳಿಂದು ನೀವೆಲ್ಲರರು ಸತತಾ
ನಂದಯೋಚಿಸಿ ಕಾರ್ಯ ಕೈಕೊಳ್ಳುವಿಕೆಯಿದೆ ದಿವ್ಯ ॥ ೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರಬೆರಳದಿಂ ಭೋಜ್ಯ ಭೋಜನ
ದರಳೆಲೆಯದನುಗಂಧದೊಳ ಕೆಳ
ನೆರಳು ಶೀತಲಶಾಂತ ಸಂತತ ಸರಳದಾಂತರಿಕ ॥
ಕರುಳ ತಂಪೊಳಗಾದ ಪರಿಯೊಳ
ಹಿರಿಮೆ ಸಹೃದಯಾಂತಗೊಂಡಿರ
ಲರಳುವಿಕೆ ಸಹಜಾಂಗ ಕಾರ್ಯಕ್ಷೇತ್ರ – ಕೊನೆತನಕ ॥ ೯ ॥

ಎಳೆ ಸಹಸ್ರಿರೆ ಜೋಡನೆಯದೊಳ
ಉಲುಹಿರದೆ ಒಂದಾದ ಸೇರಿಕೆ
ಯೊಳಗದೇ ಪೀತಾಂಬರದ ಬೆಳೆ ಕಂಡುಕೊಂಡಂತೆ ॥
ಎಳೆಯ ಕಂದಗೆ ಒತ್ತುಗಾಡಿಯ
ದೊಲವದಿಂದಿರಿಸುತವರದೆ – ಭಾ
ವೆಳೆಗಳೊಂದಾದಂತೆ ನಿಮ್ಮೊಳಗುದಿಸಲಿದೆ ಸಾಕು ॥ ೧೦ ॥

ಅಕ್ಷರದ ಜೋಡಣೆಯದೊಳಗಿಹು
ದಕ್ಷಯದ ಪಾತ್ರಸವ ಅರ್ಥದೊ
ಳಾಕ್ಷರಶಃ ಚಕಿತಾರ್ಥ ಗೋಚರಿಪಂತೆ ಗುರಿಯಂತೆ ॥
ಸಕ್ಷಮದ ಸಾರ್ಥಕತೆಯು ಸಹ
ಸ್ರಾಕ್ಷ ಸಪ್ರಭೆ ತಾನೆ ಸಿದ್ಧಿಸು
ತಾಕ್ಷಿಯೊಳ ಗೋಚರಿಸುತಾತ್ಮೊಳ ಬೆಳಗುತದರಂತೆ ॥ ೧೧ ॥

ಚಲ್ಲು ಚಲ್ಲಿದ ರೀತಿ ತಿಂಗಳ
ಬಳ್ಳಿ ಬಾಡದ ಬೆಡಗು ಬಳ್ಳಿಯೊ
ಲಲ್ಲಿ ವಿರಮಿಸುವಂಥ ಪೀಳಿಗೆಗೆನಿಸುವ ಸಹಾಯ ॥
ನಿಲ್ಲದಲೆ ನಡೆವಂತೆ ಮನ ಮತಿ
ಯಲ್ಲಿರಲಿ ಸಮುದಾಯ ಸಂಸ್ಕೃತಿ
ಸೊಲ್ಲು ಸಂಪಿಗೆ ವೀರಶೈವಾಚಾರದ ಸುಖಾಯ ॥ ೧೨ ॥

ತಿಳಿದೆನೀ ಭಾಗದಿಹ ಮಕ್ಕಳ
ಸುಳುಹು ವಿದ್ಯೆ ವಿಹೀನತೆಯ ದಿನ
ದುಳಿಕಿನೊಳಗಾಗುತ್ತಲಿರುವಾ ಪಾತ್ರ ಪದಪಲ್ಲ ॥
ತಿಳಿಯುದಿದ ನಟ್ಟಿಹುದ ಮುಳ್ಳಿನ
ದಳಕು – ವೇದನೆಯದೊಳ ನರಳುವ
ನಿರವಿಗದು ಭೈಷಜ್ಯವಿದುವೆ ಸಹಾಯ ಸಿರಿಸೊಲ್ಲ ॥ ೧೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಮ್ಮ ಸುತ ಕಲಿಯದಿರೆ ಸಂತತ
ಸುಮ್ಮನೆಯೆ ಚಿಂತಿಸುತಲಿರೆ ಬಿಡ
ದೊಮ್ಮನಸಪರಿ ಬಡವ ಮಕ್ಕಳ ಬಗೆಗೆ ಯೋಚನೆಯ ॥
ನಿಮ್ಮ ಬಲದಂತಾಗಿ ನೋಡು
ತ್ತೆಮ್ಮವರ ಜತೆ ದೀನರರು ಸಹ
ಕಮ್ಮನೆಯ ಕಲಿಯುದಕೆ ಉತ್ತೇಜನಿಡಬೇಕಲ್ಲ ॥ ೧೪ ॥

ನೀರುಣಿಸಿದೆಡೆಯಿಂದ ದೊರೆಯುವ
ಮೇರೆ ಫಲರಸ ಲಭ್ಯನುವ – ಸಂ
ಸಾರದೊಳಗಿದ ತಿಳಿಮೆಯಿರಲಿದೆ ಸಿದ್ಧಿ ಸಾಫಲ್ಯ ॥
ಸಾರುತಿದೆ ಇತಿಹಾಸ ಅರಸರು
ದಾರದೊಳಗಂದಂದು ವಿದ್ಯಾ
ಧಾರೆ – ಭಕುತರೆ ಈಶ ತಿಳಿರೆಂದೆನುತ ಲಾದಿನದಿ ॥ ೧೫ ॥

ಭಕ್ತರೆಲ್ಲರು ಯೋಚಿಸುತ ಸಂ
ಯುಕ್ತದಾಶ್ರಯದೊಳಗೆ ನಿಜದಾ
ಸಕ್ತಿಯಿಂದುಚಿತ ಪ್ರಸಾದ ನಿಲಯವ ತಗೆವಬಗೆ ॥
ಸೂಕ್ತ ನಿರ್ಣಯಗೊಂಡ ಬಳಿಕಾ
ಸಕ್ತ ಕಾಣುತ ಸನ್ನಿಧಿಗಳಾ
ವ್ಯಕ್ತಪಡಿಸುತ ಸಮ್ಮತಿಯ ಸೂತ್ರಿಡುತಲಿಂತಾಗ ॥ ೧೬ ॥

ಕಾಶಿ ವಿಶ್ವೇಶ್ವರ ಸಾಂಸ್ಕೃತಿಕ ಭವನ
ಜಂಗಮವಾಡಿಮಠ ಶಾಖಾ ಮಂಗಳವೇಢಾ :

ಮನೆಯೊಳಗೆ ಇರುವಂಥವರ ಸಂ
ಖ್ಯೆಣಿಕೆಯಾಧಾರಂತೆ ಅಷ್ಟೇ
ಹಣವ ಪಾವತಿಸುತ್ತ ಕೂಡಿಸಿದಂಥ ಸಂಪದದಿ ॥ [೧]
ಹಣಿಕೆಯಂತೆ ಖರೀದಿಸುತ ಭೂ –
ಗಣಿತದಂತೆಯೆ ಸಂಸ್ಥೆ ರಚಿಸು
ತ್ತನಿತು – ಕಟ್ಟಡ ಮುಗಿಸುತಲ್ಲಿ ಪ್ರಸಾದನಿಲಯವನು ॥ ೧೭ ॥

---

೧. ಸ. ನ. ೪೫೭ ೪ ಎಕರೆ ೨೨ ಗುಂಠೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸನ್ನಿಧಿ ಸಮಕ್ಷಮದಿ ಸುರುವಾ
ಯೆನ್ನಿರಾದಿನದಿದರ ಲಾಭವ
ಚೆನ್ನ ಪಡೆಯುತ ಸಾಗುವಂತಾಯಿತ್ತಿದುವು ಬಡವರರು ॥
ಕಣ್ಣೆದುರು ಕುಮುದಿನಿಗಳರಳುವ
ದನ್ನೆ ಕಾಣುತ ಸಂತಸಾಮೃತ
ಚೆನ್ನಿಧಿಯು ಸಾಗಿದರು ಇದೆಸಮ ತಾಗುತನ್ನೆಡೆಗೆ ॥ ೧೮ ॥

ನಿತ್ಯಕತ್ತಲೆಯೊಳಗೆ ಬಳಲುತ –
ಕೃತ್ಯದೆಡೆ ಗತ್ತಿಡಿದು ನಡೆವರ
ನಿತ್ತಳೆದು ಸತ್ಯಾರ್ಥದೆಡೆಗಿರಿಸುತ್ತಲದರ ಫಲ ॥
ಸತ್ಯದೊಳ ಸದ್ಗುರಿಗಳರಳುತ
ಹೊತ್ತರಿತ ಹೂವರಳು ಪರಿ ಸಾ
ಹಿತ್ಯದೊಳಗಾದವರ ಕಾಣುತ ಹರ್ಷ ಜಗದಾರ್ಯ ॥ ೧೯ ॥

ತನುವಿದೊಂದಿದು ಘಂಟೆಯಾಗಿರ
ಲೆನಿತು ನುಡಿಯದು ಕರ್ತನಿರದಿರ
ಲನಿತು ಸಮತಾ ಭಕುತ ಹೃದಯೊಳ ಮಿಡಿತವಾಗಿರಿಸಿ ॥
ಅನುಪಮದ ಸೋದ್ದೇಶದೊಳಗಿರ
ಲೆನುವದಾಜ್ಞಾ ಸೂತ್ರದೊಳಗವ
ರನುವಿನಿಂದಲಿ ಕಾರ್ಯ ಪೂರೈಸಿಹುದ ಕಾಣುತ್ತ ॥ ೨೦ ॥

ಚೆನ್ನಿಧಿ ಸ್ವಗತ :

ಇಂತು ಈ ರೀತಿಯೊಳಲ್ಲಿ ಮಾಡಿರ
ಲಿಂತಿದಕೆ ಯೋಗ್ಯೆನಿಪ ವಟುಗಳ
ಹಂತ ಹಂತದಿ ನಿಯಮಿಸುವ ಬಗೆ ಯೋಚಿಸುತ ತಲುಪಿ ॥
ಕಾಂತಿ ಕಾಶಿಯೊಳಿರಲು ಬಳಿಕ ಸ
ದಾಂತ ಭಾವಿತ ಭಕುತರಾಗಮ
ನಂತು – ಶ್ರಾವಣದೊಳಗೆ ಮಂಗಳವೇಢೆಯಿಂದಾಗ ॥ ೨೧ ॥

ವಾಚನ :

ಬಂದವರ ಬರಮಾಡಿಕೊಳ್ಳುತ
ಲಂದಿವರದಾಗ ಮನದಾಶೆಯ
ಗಂಧದೊಳಗಡಗಿಹುದನೆಲ್ಲಾಲಿಸುತರಿವರಿಂಗೆ ॥
ಹೊಂದಿ ತಿಳಿಸುತಲಿಂತು ಗುರುಕುಲ
ದಿಂದಿರುವರವರೆಲ್ಲರೊಳಗನು
ವಿಂದ ತಿಳಿಯುತ್ತವರರಿರುವಿಕೆ ಬಳಿಕ ನಿಮ್ಮನಕೆ ॥ ೨೨ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಪ್ಪಿತಾದವರ್ಗೆಸರು ತಿಳಿಸಿರ
ಲೊಪ್ಪಿಸುವ ಕಾರ್ಯಾಂಗದಿಂ ನಿಮ
ಗೊಪ್ಪಿಸುವದೆನಲಾಗವರು ಇದ್ದಂಥ ವಟುಗಳೊಳು ||
ಒಪ್ಪುತೀನಿರುಪಾಧಿ ಯೊಳಸಹ
ಜೊಪ್ಪು – ಎನ್.ಸಿ.ಸಿ. ವೇಷ ಭಾಷೆಯೊ
ಳೊಪ್ಪಿ ಮಠಕದು ಬಂದಿಹುದ ಕಾಣುತ್ತಲೊಂದು ಪರಿ || ೨೩ ||

ಕಾಣುತಿಹುದೆಲ್ಲವನು ಮನಮಣಿ
ಸಾಣೆಸುತ ಸನ್ನಿಧಿಯ ಸಂಮುಖಿ
ಜಾಣರಿವರಿಡಲಾಗ ಚಿಂತಿಸದೆನುತ ಮರುದಿವಸ ||
ಭಾನು ಘನನೆನ್ನನ್ನು ಕರೆಸುತ
ಸಾನುಮಯದಿವರಿಚ್ಛೆ ತಿಳಿಸುತ
ನೀನೆ ಇದಕೊಪ್ಪಿದರೆ – ಮಂಗಳವೇಢೆ ಮಠಕೆ ನಿಜ || ೨೪ ||

ಒಮ್ಮತದಿ ಪಟ್ಟಾಧಿಕಾರವ
ಸಮ್ಮತಿಸಿದಾ ಭಕ್ತರೆದುರದಿ
ಕಮ್ಮನೆಯಕಲ್ಪದಲಿ ಮುಗಿಸುತ ಹಕ್ಕುಬಾಬುಗಳ ||
ಸುಮ್ಮನೊಪ್ಪಿಸಿ ಬಿಡುವೆನುತ ನಿ
ನ್ನೊಮ್ಮತವ ತಿಳಿಸೆನಲಿದಾಲಿಸಿ
ಸುಮ್ಮ ಸಾಷ್ಟಾಂಗೆರಗುತಾಘಳ ತಿಳಿಸುತಾನಿಂತು || ೨೫ ||

ನಿರುಪಾಧಿ ಶರ್ಮಾ :

ಬುದ್ಧಿ ಎನ್ನನು – ಬಡವ ಭಕ್ತರು
ಶುದ್ಧ ಮನದಿಂ ದುಡಿಯುತದರೊಳ
ಗಿದ್ದು ಸಂಗ್ರಹದೊಳಗಿರಿಸಿ ಮರೆಗುದ್ದಿ ಮಠಕಾಗಿ ||
ಶುದ್ಧ ವಿದ್ಯೆಯಕಲಿತು ಬಾಯೆನು
ತೆದ್ದು ಕಳಿಸಿರಲವರು – ತೊರೆದಾ
ನೆದ್ದು ಬೇರೆಡೆ ಮಠಕೆ ಹೋದರೆ ನೋಯಿಸಿದ ಪರಿಯು || ೨೬ ||

ನನ್ನ ನಡೆಯಾದಂತೆನುವೆ ಸಂ
ಪನ್ನಪದದೊಳ ಬೇಡುವೆನು ಕ್ಷಮಿ
ಸೆನ್ನುತಲಿ – ಮರಳಿಹುದನೆಲ್ಲವ ಪೂಜ್ಯರವರಿಂಗೆ || [1]
ನನ್ನುಡಿಗಳಾ ತಿಳಿಸುತಲಿ ಮುಂ
ದಿನ್ನು ನೋಡುತಲಿರುವೆನುತಲಿದ
ಚನ್ನುಡಿಯನಾಲಿಸುತ ಮರಳಿರಲೇನು ಚಿನ್ನಿಧಿಯು || ೨೭ ||

---

೧. ಗುರುಕುಲದಲ್ಲಿ ನನ್ನ ಹೆಸರು ನಿರುಪಾಧಿ ಶರ್ಮಾ ಅಂತಾ ದಾಖಲಿಸದಂತೆ ನನಗೆ ಕರೆಯಲಾಗುತ್ತಿತ್ತು, ಶ್ರಾವಣ ಮಾಸ ೧೯೬೧ ಇಸ್ವಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಗಿಸಿ – ಶ್ರಾವಣ – ವಿಜಯದಶಮಿಯ
ಮುಗುಳು ಮಾಸದ ಬಳಿಕ ಸಾಗಿದ
ರು ಗರಿಮೆಯ ಸಂಚಾರ ಮಹಾರಾಷ್ಟ್ರದೆಡೆಗೆಂದಿನೊಲು ॥
ನಿಗದ ಕಿಟ್ಟದಹಳ್ಳಿಯದ ಶಾ
ಸ್ತ್ರಿಗಳು ಗಂಗಾಧರಯನವರಾ
ಬಗೆಯ ಸೇವಾ ಸರದಿ – ನಾಗ್ಪುರ ವೀರಶೈವರರ ॥ ೨೮ ॥

ಸುರುಚಿಯಂತಾ – ಲೋಥಿ – ಘೋಢಾ –
ಸರಣಿ – ಮೇಝುರಿ – ಆಪ್ಟಿ – ಖೇಡಾ –
ಗಿರಡ – ಕೊಂಡಾಳಿ – ಕಮಲೇಶ್ವರ – ಭಿವಾಪೂರ ॥
ಸರಿಯೆ – ಭಂಡಾರಾ – ಭಿಮಾರ್ ಪಾಂ
ಢರಕವಡ – ಲೋಹೀ – ವತೂಳ ಸಂ –
ಸರ – ವರೋಡಾ – ಯವತಮಾಳಾದಿ – ಪಥ – ಸಾಗುತ್ತ ॥ ೨೯ ॥

ತಲುಪಿ ನಾಗ್ಪುರಕಂದು ಸನ್ನಿಧಿ
ಯೊಲುಮೆಯೊಳಗದುವೆ ಶಿವದೀಕ್ಷೆ ಸ
ಫಲದಿ ಮಾಡಿಸುತಲಿ – ಪರಂಡಕರ ಚರರಿಂದಾಗ ॥ [೩]
ಪುಳಕಗೊಂಡಿತ್ತವರ ಮನದೊಳ
ತಿಳಿದು ಲಿಂಗಾಯತ ವಿಚಾರಾಂ
ಗಳೊಳಗುಳಿಯುತ ಸಂಘಟಿತರಾದುದೆ ಹೊಸತೆನಿಸಿತು ॥ ೩೦ ॥

ಇದು ಯಶಸ್ವಿಯಗೊಂಡ ನೆನಪಿನೊ
ಳಿದೆ ಸಮಯ ನಾಗ್ಪುರದಿ ಯೋಚಿಸು
ತಿದೆ ಸಮಾಜದ ಹಿತಕೆ ಲಕ್ಕಡಗಂಜ ಓಣೆಯೊಳು ॥
ಸದರದಿಂ ವಿದ್ಯಾರ್ಥಿನಿಲಯವ
ನೆದರಿನೊಳಗಿಟಕೊಂಡು ರಚಿಸುವ
ದಿದಕೆನುವ ನಿರ್ಣಯವ ಕೈಕೊಳ್ಳುತ್ತಲಿದಕಾಗಿ ॥ ೩೧ ॥

ಚೆನ್ನಿಧಿಯು – ಬಂದಂಥ ಕಾಣಿಕೆ
ಯನ್ನೆ ಲಕ್ಷಾಂತರದ ಹದ ಹಣ
ವನ್ನೆ ನಿರ್ಮಾಣಕ್ಕೆ ಆಶೀರ್ವದಿಸಿದಾ ಫಲದಿ ॥
ಚನ್ನಸಿದ್ಧತೆಗೊಳುತಲಲ್ಲಿಯ
ಮುನ್ನನುಡಿದಂತಾಗಿ ಜನಹಿತ
ಹೊನ್ನುಡಿಗೆಯಾಗುದಕೆ ಪೂಜ್ಯರ ಕಲ್ಪ ಕಾರುಣ್ಯ ॥ ೩೨ ॥

೩. ದಿ॥ ೨೩–೧೨–೧೯೭೩ ರಿಂದ ೨೮–೧–೧೯೭೪ರವರೆಗೆ ನಡೆದದ್ದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಡಲದೊಳ ಶೋಭಿಸುತಲಿರುವಾ
ಹಡಗ ಹಲರಂ ಹೊತ್ತು ಪಾಲಿಸು
ತಡೆಯದೀ ಪರಿ ಸಿದ್ಧಿಸುತ ಲಾತೂರ ಮುಂತಾದ ॥
ಕಡೆಗೆ ಉಚಿತ ಪ್ರಸಾದ ನಿಲಯೊಳ
ನಡೆದ ಬಡವರ ಲೇಸ ಬಯಸುವ
ದೊಡಲದೊಳಗಡಗಿಹುದು ಕಾಣಲುಬಹುದು – ಆಂತರಿಕ ॥ ೩೩ ॥

ಗುರುವಿನೊಳ ಸೌಂದರ್ಯ ಸೊಬಗಿನ
ಸಿರಿಯೆ ತೇಜಃಪುಂಜ ಪುಷ್ಪಗ
ಳರಳುತಾಹ್ವಾನಿಸುತಲಾ – ಶಿವ ತತ್ವಭುಂಜಿಸಲು ॥
ಶರಣು ಬಂದಿಹ ಶಿಷ್ಯರಿಗೆ ಮಧು
ಕಿರಣ ಸತ್ಯಂ ಶಿವಮ ಸುಂದರ
ಕರುಳ ಕಂಗಳ ಮಾತ್ರ ಹೃದಯದ ಹುಲುಸವೆನ್ನಿ ಬಲು ॥ ೩೪ ॥

ಅಂತೂ ಬೆಳಗು ೧೪ಕ್ಕಂ ಪದ ೩೪ಕ್ಕಂ ಒಟ್ಟು ಪದ ೬೩೩ಕ್ಕಂ ಶುಭಂ

ತಾ. ೨೨-೨-೨೦೧೬ ಸೋಮವಾರ ಮಘಾ ಭಾರತ ಹುಣ್ಣಿವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು - ೧೫

ಪರಿಪಾಲನ

ಸೂಚನೆ :

ಸನ್ನಿಧಿ ಮಹಾರಾಷ್ಟ್ರದೊಳಗಿಹು
ದಿನ್ನಿತರ ಮತದೆಡೆ ಸಮಸ್ಯೆಗ
ಳನ್ನೆ ಪರಿಹರಿಸುತ – ಮಠಾಧಿಪತಿಗಳ ನಿಯಮಿಸಿದ ॥

ವಾಚನ :

ಬರಿದೆ ಉತ್ಸವ ಲಕ್ಷಿಡದೆ ಪರ
ತರೆನಿಪಾ ಲಿಂಗಾಯತರ ಪರ
ಹರವ ಬಯಸುವ ಜತೆಗೆ ಬಿಡದಿಹುದಲ್ಪ ಸಂಖ್ಯರೆಡೆ ॥
ತೆರೆ ಮನದೊಳವರಾ ಪರಿಸ್ಥಿತಿ
ಸಂಧಿಯೊಳಗಿಹುದರಿಯುತಲಿ ಸಂ
ಸ್ಮರಣದೊಳಗಿರುವಂತೆ ಜೀವನ ಪಥದಿರಿಸುವದೆಡೆ ॥ ೧ ॥

ಖುದ್ದು ತಾವೇ ಕರೆಸುತವರೊಳ
ಗಿದ್ದ ತಳಮಳ ತಿಳಿಯುತದಕನು
ಸಿದ್ಧ ಪಥ ಪರಿಹಾರದರ್ಶಕರಾಗುತಿಹುದೆಲ್ಲ ॥
ಖುದ್ದು ನಾನೇ ಕಂಡು – ಕೇಳುತ
ಲಿದ್ದುದೀ ನುಡಿಯೆನ್ನಿ ಹಿನ್ನೆಲೆ
ಗಿದ್ದು ನಡೆದುದನೆಲ್ಲವಾಕ್ಷಣ ನೆನಪಿಸುವ ಪಲ್ಲ ॥ ೨ ॥

ಚನ್ನಿಧಿಯ ನಿಜದೊಲುಮೆ ಸೆಲೆ ಸಂ
ಪನ್ನ ಸಕಲೆಡೆ ಕಂಡು ಬರುತಿಹು
ದಿನ್ನಿತರ ಸಂಸ್ಕೃತಿಯೊಳಗಿಹ ಬಯಕೆ ಬತ್ತಾಸ ॥
ಚನ್ನ ಫಲಿಸುತ್ತವರ ಪಲ್ಲವಿ
ಬೆಣ್ಣೆ ಭಾವನೆ ಸೇವನೆಯದೊಳ
ಗೆನ್ನುವಂತೆಯೆ ಪಡಿಪದಾರ್ಥಗಳೆಲ್ಲ ಕರಕೋಶ ॥ ೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಷ್ಟೆನದೆ ಈ ಭಾಗದೊಳಿಹ
ಸ್ಪಷ್ಟ ಮಠಕೆ ಮಠಾಧಿಯಿರದಯೆ
ನಷ್ಟಗೊಳ್ಳುತ್ತಿಹುದ ಕಾಣುತ ತಮ್ಮೊಳಗೆ ತಾವೆ ॥
ದೃಷ್ಟಿ ಈ ಕಡೆಯಿಡುತಲಿದಕೆ ವಿ
ಶಿಷ್ಟತೆಯ ಹುಡುಕುತ್ತುಪಾಯಗ
ಳಷ್ಟೆನದೆ ಕಾರ್ಯಾಂಗ ತರುತಿರುವಂತೆ – ನದಿನಾವೆ ॥ ೪ ॥

ಯೋಗ ಸಮತಾಗಿರುವ ಪರಿಪಥ
ವಾಗಿರಿಸಿಕೊಂಡಂಥ ಸನ್ನಿಧಿ
ಯಾಗ ಬಾರ್ಸಿಯ ತಮ್ಮ ಶಾಖೆ ದಹಿವಡಕರ ಮಠಕೆ ॥
ಸಾಗಿ ನೋಡಿರಲಿದಕದಾರಿರ
ದಾಗ ಯೋಚಿಸುತದನು ತಮ್ಮೊಳ
ಗಾಗಿರಿಸಿಕೊಂಡಿರುತ ಸೂತ್ರಾಕಾರದೊಳಗಿಲ್ಲಿ ॥ ೫ ॥

ಶಿಷ್ಯ ವರ್ಗ ಪರಂಪರೆಂಬುವ
ಭಾಷ್ಯದಂತೆಯೆ ಶೋಧಿಸುತದೆ ರ
ಹಸ್ಯದಿಂದವನಿರುವಿಕೆಯ ಲಕ್ಷಿಸಿ ಪರೀಕ್ಷಿಸುತ ॥
ಸಸ್ಯಭಾವಿತ ಪೂರ್ಣವಿನಯಾ
ರ್ಥಸ್ಯದೊಳ ಹೊರಗೊಳಗಿಹ ಸ್ವಾ
ರಸ್ಯಮಯ ತಾನೊಂದೆ ಶೋಭಿಸುತಿರೆ – ವಿಜಯಪುರ ॥ ೬ ॥

ಭಾಗಪುರ ಯಾಳ್ವಾರದೊಳಗೆ ಸ
ರಾಗ ಇಂದುಧರ ಗುರುಮಠದ ಪ
ರಾಗದಂತಿಹುದಿವಗದೇ ಪಟ್ಟಾಭಿಷೇಕವನು ॥
ಯೋಗಗೊಳಿಸುತಲಿವರೆ ಹೊಸತೆನಿ
ಪಾಗ ನೂತನ ನಾಮಕರಣ ವಿ
ರಾಗಿ ವರಗುರು ಸಿದ್ಧಸು ಶಿವಾಚಾರ್ಯನುತಲಿಂತು ॥ ೭ ॥

ಈ ದಿನ ಸಮಾರಂಭದೊಳಗನು
ಮೋದಿಸುವ ಸಭೆಯೊಳಗೆ ಚರಗುರು
ನಾದ ನಲ್ನುಡಿ ಮುಗಿದ ಬಳಿಕದು ಸನ್ನಿಧಿಯವಾಣಿ ॥
ಹಾದಿ ಹರ್ಷದೊಳಿಂತು ಗಣರಾ
ಮೋದದಂತೆ ಮಠಾಧಿಕಾರಿಗ
ಳಾದವರ ಕರ್ತವ್ಯ ಹೇಗಿರಲೆನುವ ಸದ್ವಾಣಿ ॥ ೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಿನ್ನಿಧಿ ವಾಣಿ : ೧೧-೨-೧೯೭೬ ಇಶ್ವಿ ಬಾರ್ಸಿ

ಇಂದು ನಿಮಗೆಲ್ಲರಿಗು ಸನ್ನಿಧಿ
ಸಿಂಧು ಸಂಮುಖದೊಳಗೆ ಸಫಲಾ
ನಂದಮಯ ಹಬ್ಬವಿದು ಹೂ ಪರಿಮಳದ ಭಾವನೆಯ ॥
ಗಂಧಮಯ ಭಕುತರರು ಸಹಜನು
ವಿಂದ ಚರಗುರುಗಳನು ಪಡೆದಿಹು
ದಿಂದಿದರ ಬೆಲೆಯಹುದ ಮೌಲ್ಯ ವಿಚಾರಸೇವನೆಯ ॥ ೯ ॥

ತಕ್ಕದಾಗಿಹುದಿದುವೆ ಚಿಂತನ
ಚೊಕ್ಕದೀ ವೇಳೆಯೊಳ ಪಯದೆಡೆ
ಗಿಕ್ಕುವಾ ಹನಿ ತನಿಯ ಸಹಕಾರಂತೆ ತಿಳಿರಿಂತೆ ॥
ಸಕ್ಕರಿಯ ಪಾಕಕ್ಕಿದುವೆ ಯಾ
ಲಕ್ಕಿಯಂತೆನುವಂತೆ ಪಕ್ಷಿಗೆ
ಪಕ್ಕ ಬಲಿತಂತೆನ್ನಿರೀನುಡಿ ಕೇಸರಿಯ ಸಂತೆ ॥ ೧೦ ॥

ನೋಡಲಿದುವೆ ಗ್ರಹಣಳಿದು ಬೆಳ
ಕಾಡಲಿದೆ – ಶುಕ್ರೋದಯದ ಥಳ
ಕಾಡುವಂತಿಹ ರೀತಿ ನಿಮಗೆನಿಸಿರಬಹುದು ನಿಜದಿ ॥
ಆಡುತಾಂಗಳದೊಳಗೆ ಮಕ್ಕಳ
ನಾಡಿ ನಿರ್ಮಲದಿರವ ಹೊಕ್ಕಳ
ಪಾಡಗಾಯಿಯ ಸಮತೆ ಸುಸ್ಥಿತಿಯಂತೆ ಸಕಲರಿಗೆ ॥ ೧೧ ॥

ಆದ ಸಂತಸವಿದುವೆ ಬರಡದ
ಹಾದಿ ಹದುಳಾಗಿರಲಿ ಸತ್ವದ
ಮೋದ ಮಲ್ಲಿಗೆ ಸ್ವಾಮಿಗಳ ಪದಪಲ್ಲವಿಸುತಿರಲಿ ॥
ಆದರದ ಅರವಿಂದ ಅನುನಯ
ಚೋದ ಚಿತ್ರಪ್ರಭೆಯಂತೆ ಚಿರತಮ
ವಾದ ಪ್ರತಿಭಾಂಕುರತೆ ಕೌಮುದಿಲತೆಗಳಾಗಿರಲಿ ॥ ೧೨ ॥

ಮನೆಯೊಳಗೆ ನಿಜದೊಡೆಯನಿರದಿರ
ಲನಿತು ಹೊಸ್ತಿಲದಡಿಯೆ ಹುಲ್ಲಿನ
ಹೆಣಿಕೆಯೊಳ ನೋಡಿದರೆ ವಿಜಯ ಪತಾಕೆರಜದಿಹುದ ॥
ಕುಣಿಕೆಯೆಂತೆನಬಹುದು – ಕಾರಣ
ಮನೆ – ಮಠದೊಳಗೊಡೆಯನಿರದಿರಲೆ
ಲೆನಿತು ಶೋಭಿಸದೆನುವದನುಭವ ನಿಮ್ಮೊಳಡಗಿರಲಿ ॥ ೧೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹುಟ್ಟು ತಿಳಿಯದು ಹುಗ್ಗಿ ಹದಮಧು
ಗುಟ್ಟನರಿಯನು ರೋಗಿ – ಯೋಗದ
ಮಟ್ಟ ತಿಳಿಯನು – ನೆಗಡಿಯಿರಲು ಸುವಾಸನೆಯ ಸುಗ್ಗಿ ॥
ಪಟ್ಟೆ ಟೆಂಗುಸುಜಲ ರಸಾಯನ
ಬಟ್ಟೆಬಲ ಅದಕೆಂತು ಗೋಚರ –
ಜಟ್ಟಿ ಪೇಚವ ತಿಳಿಯುವಂತೆಯೆ ಮಠದ ಬಗೆಗೆಲ್ಲ ॥ ೧೪ ॥

ಅರಿವನಿದ ಸದ್ಭಕ್ತ ಮಾತ್ರನು
ದರಿವ ಕಾರಣ ನಿಮ್ಮನಿರಿ ಸತ
ತಿರಲಿ – ಮಠ – ಗುರು – ಮೂರ್ತಿಯಡೆ – ಪಡಿಯಚ್ಚಿನಂತಿರಲಿ ॥
ಗುರುಗಳೊಳಗೇನೊಂದರೆಳೆಯೊಳ
ಬಿರುಕ ಕಂಡರೆ ತಿಳಿಸುವಂಥಾ
ತುರತೆ ನಿಮದಾಗಿರಲಿದೇ ಶೇಯಸ್ಸು ಉಭಯೆಡೆಗು ॥ ೧೫ ॥

ಮಕ್ಕಳ ಬಗೆ ಯಶಸ್ಸು ಬಯಸುವ
ದಕ್ಕರೆಯ ಲಯ – ಮಠದೆಡೆಯ ಭಾ
ವೃಕ್ಕುವಂತಿರಲಿದುವೆ ಬೆಳೆ ಬಾಂಧವ್ಯ ನಿಜನವ್ಯ ॥
ಕೊಕ್ಕರೆಯ ಮನ್ನಿಸರು ವಿಬುಧರು
ನಕ್ಕು ನಗಿಸುವ ಕಂದನೊಳಕಳೆ
ರೆಕ್ಕೆಯಂತಿರಲಯ್ಯ – ಗುರು – ಭಕ್ತರೊಳು ಸೆಲೆಸೇವ್ಯ ॥ ೧೬ ॥

ಬೆಳಗಿರುವದೇನೆಲ್ಲ ಪಯವೇ
ಅರಳುಗೊಂಡಿಹುದೆಲ್ಲ ಹಿತವೇ
ಅರಳಿಯಂತಿರೆ ಹೃದಯ – ಮೆದುಳದು ಸಹಿತ ವಿಹಿತಾಗಿ ॥
ಕರುಳ ಕಂಗಳಕೊನರು ಮಾವಿನ
ನೆರಳವಾಗಿರಲಾವ ಮಂಥನ
ಬೆರಳಿನೊಳಗಡಗಿರಲಿ ಸಾತ್ವಿಕ ಸೇವೆ ಮಣಿವಾಣಿ ॥ ೧೭ ॥

ಫಳಕೆರಡರೊಳಗಾಂಕುರಾಕರ
ಥಳಕು ತಳಕಿರಬೇಕು ಹೊರಗೊಳ
ಬೆಳಕು – ಹಣತೆಯು – ಬತ್ತಿ – ತೈಲದ – ಯೋಗದೊಳಗೆಂಬ ॥
ಉಲುಕುಭಯದೆಡೆಗಿರಲಿದೆ ತರಂ
ಗುಲುಹುದೇ ಧ್ರುವ ತಾರೆ ತದ್ರಸ
ಸೆಳಕು ಸಹಜ ಸಮಾನವೆನದಿನ್ನೇನು – ಪ್ರತಿಬಿಂಬ ॥ ೧೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೋಡಿ ಕಂದೀಲೊಳಗಿಹುದೆ ಹೊರ
ಗೋಡುವಿಕೆ ಬೆಳಕೆಂಬ ಬಿಂಬ ಸ
ದಾಡುವಂತಿರಬೇಕದೇ ಯಾರಿರಲಿ ಕೆಳ ಮೇಲೆ ॥
ಬಾಡದಂಥಹ ಭಾವಗಮ್ಯ ನಿ
ಗೂಢ ಫಲ ಸದ್ರುಚಿ ವಿಶಾಲಾ
ರೂಢಗೊಂಡಿರಲತ್ತಕತ್ತಲೆ ಕಾಣೆನು ತಳಮಳ ॥ ೧೯ ॥

ಏಕದೇವತೆ ನಿಷ್ಠೆಯೊಳಗಿರ
ಲಾ ಕರುಳೊಳಗೆ ಭಿನ್ನತೆಂಬುವ
ಕಾಕ ಕರ್ಕಶ ಬರದು ಕಾರಣ ಇಷ್ಟಲಿಂಗದೊಳ ॥
ತಾಕಲಾಟತೆ ರಹಿತಲೇನಿರ
ಲಾ ಕಮಲದಂತಿರಲು ದಂಪತಿ
ಪಾಕದಂತಿಹ ಬದುಕೆನಿಸಲಾ ಬರದು ಭಂಗ ಬೆಳೆ ॥ ೨೦ ॥

ಲಿಂಗ ಮೇಲಿನ ನಿಷ್ಠೆ ಬಲಿಸಿದ
ತುಂಗ ಗುರುಪದ ಪದ್ಮದೊಳಗುರೆ
ಭೃಂಗ ನೀವಾಗಿರುತಿರಲದಾರ ಪ್ರಹಾರ ಪದ ॥
ಸಂಗತೆನಿಪಂತೆ ಚರ ಮೂರ್ತಿಗ
ಳಾಂಗವಿಸಿಕೊಂಡಿರಲಿ ತೆರದು
ತ್ತುಂಗೆನಿಪ ಸುಶ್ರೇಯ ಸಂಪಿಗೆ ಸೊಂಪ ಕಂಪಮುದ ॥ ೨೧ ।

ಇಂತು – ಮಠ – ಭಕ್ತರೊಳಗಿರಬೇ
ಕೆಂತು ಸಂಕ್ಷಿಪ್ತದಲಿ ಇಡಲೇ
ನಿಂತು ಕೇಳಿ ಸ್ವಾಮಿಗಳ ಪದ ಪಂಕ್ತಿ ಪದ್ಮೆಸಳು ॥
ಹಂತ ಎಂತಿರಲೆನುವ ನೈಜದೊ
ಳೆಂತು ತದ್ಗುರಿ ಭೂರಿ ಭಾಸುರ
ದಂತಿರಲಿಬೇಕೆನುವ ಕೆಲಸೂತ್ರಿಂತು ತಿಳಿರಸಲು ॥ ೨೨ ॥

ನಿಮ್ಮ ಮಠಕೆ ಸ್ವಾಮಿಯಾಗಿರ
ಲೆಮ್ಮುಸಿರಿದೆ ಸಮಾಜ ಸೇವಕ –
ಕಮ್ಮನೆಯ ರಸ ಕಲ್ಪ ತದ್ಗುರಿ ತಲ್ಪ ಜಯ ಜಲ್ಪ ॥
ಹಮ್ಮಳಿದ ಹದುಳಾಂಶ ಹಸದ
ಸೊಮ್ಮು ಸಮ್ಮತದಿರುವಿಕೆಯ ತಾ
ನೆಮ್ಮಿಕೊಂಡಿಹುದಿದುವೆ ಶೋಭೆ ಮಠಾಧಿಕಾರಿಗದು ॥ ೨೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧರಮ ಉಳಿಸುವ ಮತ್ತೆ ಬೆಳೆಸುವ
ಹಿರಿಮೆನಿಪ ನಿಜದಾದ್ಯ ನಿರುಪಮ
ಸರಣಿಯೇ ಕರ್ತವ್ಯವಾಗಿರಬೇಕು ಕೊನೆತನಕ ॥
ಚರಿತೆ ಸೂಚಿಸುತಿಂತು ರಾಷ್ಟ್ರದೊ
ಳಿರುವ ತಪ್ಪುಗಳೆತ್ತಿತೋರಿಸು
ತರಿಸುವಾ ನಿಷ್ಠತೆ ನಿರಂತರದಿಡುವದಾಗಿರಲಿ ॥ ೨೪ ॥

ಬರಿದೆ ಐಷಾರಾಮ ಜೀವನ
ಚರಿತ ನಿಮದಾಗದದು ಹಿಂದನ
ಹರವ ಮೆಲುಕಿಸುತಿತ್ತ ಮತ್ತೆ ಸುಧಾರಿಸುವ ಗುರಿಯು ॥
ನಿರತ ನಿರ್ಮಲದಿರಲಿದೇ ಚರ
ವರಗೆ ಶೋಭಿತೆನಿಸುವದಯ್ಯಾ
ಪರಿಧಿ ಪರಹಿತ ಪಾತ್ರಪದ್ಧತಿ ಪಥ್ಯದಿರೆ ಸರಿಯು ॥ ೨೫ ॥

ಶ್ರೀ ಮಠಾಧಿಪತಿಗಳ ಜೀವನ
ದೀ ಮಹಾನತೆ ಗುರಿಯ ಗಮ್ಯ ನಿ
ರಾಮಯದಿ ಸಾಮಾಜಿಕ ಕ್ರಾಂತಿಯೊಳಗಾಗುತ್ತ॥
ಸೋಮಧರ ಭಕುತಾಳಿಗಳೆಡೆ ವಿ
ರಾಮವಿಲ್ಲದೆ ಗತಿಸುತವರಿರ
ವಾ ಮತಿಯದೀ ದಿಶೆಗೆ ತರುವಿಕೆಯಿದುವೆ ಕರ್ತವ್ಯ ॥ ೨೬ ॥

ಬಡವ ಬಲ್ಲಿದರೆನದೆ ಕರೆ ಬರ
ಲೆಡೆಗೆ ಸಾಗುವ ಸೌಮ್ಯದಾಗರ
ದೊಡಲೊಳಗೆ ತೇಲಿಸುತ ಪರಿಪಾಲಿಸುವ ಕಾರುಣ್ಯ ॥
ದೃಢತೆಯಿರೆ – ಪದವಿಟ್ಟೆಡೆಗೆ ನುಡಿ
ನಡೆಯು ನೀರಜ ನೀತಿ ಸಂಹಿತೆ
ಸೊಡರೊಳಗೆ ಬೆಳಗಿಸುವದಾಗಿರಲಿದೆ ಚರವರೇಣ್ಯ ॥ ೨೭ ॥

ದುಡಿದು ಸಲ್ಲಿಸಿದವರ ದಾನದೊ
ಳಡಕಲದ ಗಡಿಗೆಯೊಳಗಿರಿಸಿಹು
ದಡಿಗೆಯದ ಧಾನ್ಯಾದಿ ವಸ್ತುಗಳಿದ್ದಪರಿಯಾಗಿ ॥
ಬಿಡದ ನಿಮಗರ್ಪಿಸಿದ ಹಲವಿಧ
ಕೊಡುಗೆಯೊಳಗಿಹುದಲ್ಲಿ ಬೆವರಿನ
ಮಿಡಿತಗದು ಬೆಲೆಗೊಡುವದಾಗಿರಬೇಕು ತಿಳಿಯಾಗಿ ॥ ೨೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಠದ ಹೆಸರೊಳ ಬೆಳೆಯುದಲ್ಲದು
ಘಟದ ಬಲದೊಳ ಮಠವ ಬೆಳೆಸುವ
ಪುಟಗಳಾಗಿರಬೇಕೆನುವದನುಭವಿಯ ಮಣಿ ಮುದ್ರೆ ॥
ದಿಟದಿ ತನ್ನೊಳಗಿಟ್ಟುಕೊಳ್ಳುತ
ಜಟಿಲವೆನಿಪ ಸಮಸ್ಯದೊಳಗೂ
ನಟನೆ ರಹಿತಾಗಿರಲಿದೇ ಶೋಭಿತೆನಿಸುವದಿದುವೆ ॥ ೨೯ ॥

ಪರತರದವನುಭವಿಗಳೆಲ್ಲರು
ಸ್ಮರಿಸುವಂಥಹ ಕಾರ್ಯಕೌಶಲ
ದಿರುತ ಸಾಗಿದರಂದವರ ಕುರುಹುಗಳು ನಮಗಿಂದು ॥
ಬರಿದೆ ಮೂರ್ತಿಗಳಾಗಿರದೆ ಮಹ
ತರಿತು ಹೊಣೆಗಾರಿಕೆಯದೊಳ ಬಿಡ
ದಿರುತಲಾತ್ಮೋನ್ನತಿಯದೆಡೆಗಿಹುದಿದುವೆ ಚಿರಸಿಂಧು ॥ ೩೦ ॥

ಜನತೆಯೊಳ ನೈತಿಕತೆ ತಾತ್ವಿಕ
ಘನತೆ ವಿವರಣೆಗೊಳಿಸುತಿದರೊಳ
ಕುಣಿಕೆ ಕಂಗೊಳಿಸುತಿರಲಿ ಸಮಾಜೋನ್ನತಿಗೆ ಬೀಜ ॥
ಅನುದಿನದೊಳಿದರೆಡೆಗಿರಿಸಿ ಜೀ
ವನ ವಿಕಾಸತೆಗೊಳಿಸುವಂಥಹ
ಮನದೆಣಿಕೆ ಶಾಶ್ವತದ ದಿಶೆಗಿಡಲದುವೆ ನಿಜದೋಜ ॥ ೩೧ ॥

ಬೋಧಕರೆ ಬಹಳುಂಟು ನೋಡಿರೆ
ಬೋಧಿಸಿದ ಪರಿಯವರ ನಡೆಯಿರ
ದಾದರತೆ ಬಯಸುವರ ಹೆಚ್ಚಳ ಕಾಣಬಹುದಲ್ಲ ॥
ಶೋಧನೆಯದೊಳಗಾಗದಿಹ – ಮಹ
ಸಾಧಕರ – ಕಾಯಕದೆಡೆಯ ಹೊರ
ತಾದವರೆ ಬಹಳಷ್ಟು ನೋಡಾ ತಿಳಿದು ನುಡಿಪಲ್ಲ ॥ ೩೨ ॥

ಭಕ್ತರೆದುರೊಳ ಬರಿದೆ ಬರಿದೆ
ವ್ಯಕ್ತಿಯಂತೆನಿಸದಯೆ ಜನಹಿತ
ಶಕ್ತಿಯಾಗಿರಲಿದು ಮಠಾಧಿಪತಿಗದು ಶೋಭೆಯಿದು ॥
ಸೂಕ್ತ ಧಾರ್ಮಿಕ – ಪ್ರಜ್ಞೆಯಡೆಗಾ
ಸಕ್ತಿಗೊಳಿಸುತ ಸಾಂಸ್ಕೃತಿಕತೆ
ವ್ಯಕ್ತ ವಿವರಿಸುತಾರ್ಥದೆಡೆಯಿರಲಾರ್ಥ ಸಾರ್ಥಕಿದು ॥ ೩೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೊಂದವರ ಮನ ಮತಿಗೆ ಸಾಂತ್ವನ
ಸಿಂಧುವಾಗಿರಿಸಲಿದರಿಂಮಿಗೆ
ಬಂಧು ಮತ್ತೇನಿಹುದು ಸ್ಪಟಿಕಸಲಾಕೆಯಂತಾಗಿ ॥
ಹೊಂದಿ ಹೊಳೆದಿರಲಿದುವೆ ಹೂ ಸರ
ತಂದಿರಿಸಿದಂತೆನಿಪದೇನಿದು
ನಂದ ಸರಳತೆ ಶಾಂತ ಸಂತಸದಿರವದೊಳ – ಸಾಗಿ ॥ ೩೪ ॥

ಬರಿದೆ ದೊಡ್ಡಸ್ತಿಕೆಯ ಬಯಸಿರ
ಲರಿಯಬೇಕ್ಕೆ ಸ್ವಾಮಿಗಳಿಗಿದು
ಸರಿಯೆನಿಸದೆನಿತೆನಿತು ಕಂಡೆಡೆ ನೋಡಿ – ನಿಮ್ಮೊಳಗೆ ॥
ಇರದುದನೆ ಕಂಡೆನಗೆ ಸಂತಸ
ಭರತಿಯಾಗರದಂತಿಹುದೆ ಮುಂ
ದೊರೆಯುತಿರಲಿದೆ ಪದಕೆ ಶೋಭೆನಿಸುವದು ತಿಳಿಬೆಳಗೆ ॥ ೩೫ ॥

ಸಾಗಿ ಜನತಾ ಗುರುಗಳಾಗುತ
ರಾಗಲಿದೆ ಕಲ್ಯಾಣ ಕಲ್ಪನೆ
ಯಾಗದೊಳ ಪದ ಪದಕೆ ಕಂಗೊಳಿಸುತಿರಲಿದೆ ಪಟ್ಟ ॥
ರೋಗ ರುಜಿನದೊಳಾಗುತಾರ್ಥತೆ
ಯಾಗದೊಳ ಬಳಲುವರದಿಶೆಗನು
ವಾಗುತಾಗಮಿಸುತಿವರದೆ ಹಿತದಿರಲಿದೇ ಗುಟ್ಟ ॥ ೩೬ ॥

ತನ್ನ ಬಣ್ಣಿಸದೆನಿತುಪಾಧಿಯೊ
ಳನ್ಯರೆಡೆಗೆ ಅಸಹ್ಯಪಡದಯೆ
ಖಿನ್ನಗೂಡದೆ ಸೇವೆ ಗೂಡುವದೆನುವ ಗಣರಾಜ್ಞೆ॥
ತನ್ನ ತನ್ನವರೆನುತ ಕಳಕಳಿ
ಕನ್ನಡಿಯದೌದಾರ್ಯ ಕದಳಿಯ
ಬಣ್ಣದಂತಾಗಿರಿಸಲಿದೆ ಗುರುವರನೊಳೀ ಪ್ರಜ್ಞೆ ॥ ೩೭ ॥

ಇರಲಿದೇ ಕತೃತ್ವ ಶಕ್ತಿಗ
ಳಿರಲಿ ಜೊತೆಗಾ ದೂರದರ್ಶಿ
ತ್ವೆರಕ ಕರುಳಿನ ಮಾನವೀಯನುಕಂಪ ಸುಮಸೊಂಪ ॥
ಪರತರಾಂಗ ಹೃದಯವಂತಿಕೆ
ಕುರಿತ ಹಿಂದಣ ಹಂಸಿಗಳೆಣಿಕೆ
ಹರಿಯದಂತಹುದೆಂಬುದರಿವೊಳಗಲ್ಲಿ ಶಶಿ ತಂಪ ॥ ೩೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇನ್ನು ತಿಳಿಸುವೆ ಮುಖ್ಯ ಮಾತಿಹು
ದಿನ್ನು ಮೆಲುಕಿಸು ಚನ್ನ ಹಿಂದಣ
ಹಣ್ಣುಹಣ್ಣಾದವರದೇ ಸುಜ್ಞಾನ ಸದ್ಧರ್ಮ ॥
ಮುನ್ನಡೆಸುವಾತುರ ಸದಾಂಜನ
ಬೆಣ್ಣೆಯಂತಿರಲಿದುವೆ ರಂಜನ
ವೆನ್ನುತಾಂತರ್ಭೂತದಿರಲಿದೆ ಸತ್ವ ಸತ್ಕರ್ಮ ॥ ೩೯ ॥

ಸುಗಮವೆನಿಸಿರಬೇಕು ಜನರಿಗೆ
ನಿಗದಿಡಿದು ಸುಖಕರ ಸದಾ ಪರಿ
ಬಗೆಯ ಭಾವಿಸುತದನೆಯೀ ಪ್ರಜ್ಞಾನ ಸಮ್ಮಾನ ॥
ದಿಗಿಲಳಿಸುತಿರುವಂಥ ನಲ್ನುಡಿ
ಅಗಿಯುತಿರಲಾನಂದದೊಳಗದೆ
ಮುಗಿಯದಂಥಹ ಮುಗಿಲ ಮಲ್ಲಿಗೆಯೆನಿಸಲದೆ ಮಾನ ॥ ೪೦ ॥

ಅರಿತರಿತು ಕಾಯಕದೊಳಾಗು
ತ್ತರಿತು ಕಾರ್ಯಕ್ಷಮತೆಯೊಳ ನುಡಿ
ಭರಿಸುತಾಚಾರ ಸುವಿಚಾರಗಳ ಸಮುದಾಯಕ್ಕೆ ॥
ಸರಳರಿಸುತ ಪರಂಪರೆಯ ಪಥ
ದಿರಿಸಿ ಪಾಲಿಸುವಾಶೆ ನಿನಗಿಹು
ದರಿತು – ಕಾಣುತ ಸಂತಸೆನೆ – ಗುರುಸಿದ್ಧರಾವಾಣಿ ॥ ೪೧ ॥

ಗುರುಸಿದವಾಣಿ :

ಸನ್ನಿಧಾನಕೆ ನಮಿಸಿ ನಮಿಸು
ತ್ತಿನ್ನು ಸಾಗುವೆ ಅನಿಸಿಕೆಯ ಸಂ
ಪನ್ನ ಸದ್ಗುರಿ ಬೋಧ ಭಂಡಾರವನೆ ಮನನಿಸುತ ॥
ಚನ್ನಿಗರು ಒಪ್ಪಂತೆ ಸಾಗು
ತ್ತೆನ್ನ ಸೇವೆ ಸಮಾಜಕದು ಬಿಡ
ದೆನ್ನ ವಚನ ವಿಹಾರವೆನೆ ಭಕುತರಿಗೆ ಸಂತಸದು ॥ ೪೨ ॥

ರಾಜನಿಲ್ಲದ ರಾಜ್ಯದೆಡೆಗೆ ವಿ
ರಾಜಿಸಿದ ಭೂಪತಿಯ ಮೇಲ್ಮೆ – ಸ
ರೋಜವೆನಿಸಿರೆ ಸನ್ನಿಧಾನ ಸಭಾಂಗಣದ ಸೊಬಗು ॥
ರಾಜಿಸಿದ ಗುರುಸಿದ್ಧರಿಗೆ ಸುವಿ
ರಾಜಿಸಿದ ಸನ್ನಿಧಿಗೆ ನಮಿಸುತ
ಸೋಜಿಗದ ಸೌಂದರ್ಯ ವರ್ಣಿಸುತಾತ್ಮಗತ – ಮೆರಗು ॥ ೪೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇತ್ತ ಚರಗುರುಸಿದ್ಧವರ್ಯ ಸು
ಚಿತ್ತ ಭಕ್ತರ ಜತೆಗೆ ಸಮಸುಮ
ಬತ್ತದಿಹ ಬಾಂಧವ್ಯ ಬೆಸುಗೆಯುನನೆಯ ಕೆನೆಯೊಳಗೆ ॥
ತತ್ವಲೆಯ ಪರಿಮಳದ ಪಾತ್ರದೊ
ಳತ್ಯನೈತಿಕ ಮೌಲ್ಯ ಮೊಳೆಸುತ
ಹೊತ್ತಗಳೆಯುತಲಿದ್ದರಾ ವಾತ್ಸಲ್ಯ ತೆರೆಯೊಳಗೆ ॥ ೪೪ ॥

ಬಡವ ಬಲ್ಲಿದರೆನ್ನದಲೆ ಮನ
ಮಡಿಲದೊಳಗೆ ಸಮಾನ ನದಿ ಹದ
ದಡದಿ ಸಮತಾಳಂತೆ ಸಂತಸ ಶಾಂತನನು ದಿನದಿ ॥
ಗುಡುಗು ಘರ್ಜನೆ ರಹಿತ ಬೇಸಿಗೆ
ನಡಗೆಯೊಳ ತುಂತುರ ಸದಾಕ್ಷತೆ
ಸಡಗರದ ಸಂಸ್ಕೃತಿಯೆ ಶೋಭಿಸುತಿರ್ದನಾ ಘನದಿ ॥ ೪೫ ॥

ಹಂತ ಹಂತದಿ ರಜನಿಗಂಧ ಸ
ದಾಂತ ಸಮುದಿತ ಪಂಥ ಪಲ್ಲಸು
ಶಾಂತ ಸಂತದ ಸಂತ ಸುಮತ ಸುಧಾಂತರಂಗದೊಳು ॥
ಸಂತಸದ ಸೂಳ್ನುಡಿಯ ಸುಖ ಸ
ಚ್ಚಿಂತನದೊಳಾಕರದೊಳಮಿತ
ಕ್ಷಾಂತಿರವ ಕಾಣುತ್ತ ಮಂದಸ್ಮಿತದಿ ಸನ್ನಿಧಿಯು ॥ ೪೬ ॥

ಅಂತು ಬೆಳಗು ೧೫ಕ್ಕಂ ಪದ ೪೬ಕ್ಕಂ ಒಟ್ಟುಪದ ೬೬೯ಕ್ಕಂ ಶಿವಂ
೨೫ - ೨ - ೨೦೧೬ ಗುರುವಾರ ಉತ್ತರಾ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು - ೧೬

ಮಂಟಪೋತ್ಸವ

ಸೂಚನೆ :

ಪಳ್ಳಿಯಿದು ಮರೆಗುದ್ದಿ – ಸನಿಹದೊ
ಳಲ್ಲಿರುವ ಮಂಟೂರದೊಳ ಸಹಿ
ತಲ್ಲಿನಡೆದುದ – ಮಂಟಪೋತ್ಸವ ವಿದಿತ ವಿವರೋಜೆ ॥

ವಾಚನ :

ಬೇಸರಿಲ್ಲದ ಪಯಣದೊಳಗಿರು
ತಾಸಿಸುತ ಕಲ್ಯಾಣ ಜನರ ಸ
ದಾಶೆಯಂತಾದಿಶೆಗೆ ದಣಿವಾಗಿಹುದನೇ ಮರೆತು ॥
ಘೋಷಣುತ್ಸವದೆಡೆಗೆ ಬರುತ ವಿ
ಭೂಷಣೆನಿಸುತಲಿಲ್ಲಿ ಬೋಧಾ
ಕಾಶದೊಳ ಸಾಗುತ್ತ ಬಾಗಲಕೋಟೆಗದು ಬಂದ ॥ ೧ ॥

ಸುದ್ದಿ ಓದುತಲಂದು ಜನಜತೆ
ಗೆದ್ದು ತಲುಪುತ – ದರ್ಶನದ ಬಳಿ
ಕೆದ್ದು ಮರೆಗುದ್ದಿಗದು ದಯಮಾಡಿಸುವದೆನ್ನುಡಿಯ ॥
ಶಬ್ದ ಕೇಳುತ ಹಿನ್ನಲೆಯ ನುಡಿ
ಗದ್ದೆ ತಳಿಯುತ – ನಗುತಲೊಪ್ಪುತ
ಲಿದ್ದು ತಾಗಮನಮಿತಿ ತಿಳಿಸುವದೆನಲು – ಮರಳುತ್ತ ॥ ೨ ॥

ಪುರದಿ ಭಕುತರ ಕರೆಸುತೆಲ್ಲವ
ನರಿಸಿ ಬಿಡಲಾವಾಗ ಮುಂದಾ
ಚರಣ ಉತ್ಸವ ಮಂಟಪವ ಹನ್ನೊಂದು ಮಾಡುವಿಕೆ ॥
ಹರುಷದಿಂದಿರಿಸಿಹುದ ಸನ್ನಿಧಿ
ಚರಣದೊಳಗಿಡಲಾಗ – ನ್ಯಾಯಾ
ಕರಣ ತಿಳಿಯುತ ಹಾಗೆಯೇ ಬರವೆಮ್ಮದೆನಲಾಗ ॥ ೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಲಿಸುತಲಾನೆಂದೆ ಸಮ್ಮತಿ
ಯೋಲೆ ಭಕುತರದಿಹುದೆನುತ ಮಿತಿ
ಮಾಲೆ – ಪುಣ್ಯಾರಾಧನೆಯ ತೇದಿಯನರಿಸಿ ಫಲಪುಷ್ಪ ||
ಶೀಲಪದಕಾರ್ಪಿಸಲು – ಒಪ್ಪಿರೆ
ಮೇಲು ಸಂತಸದೊಳಗೆ ಪುಣೆಯಿಂ
ದಾ ಲಲಿತದೊಳ ಮರಳಿ ಭಕ್ತರ ಕರೆಸುತರಿಸುತ್ತ || ೪ ||

ಸಲ್ಲಲಿತ ಸಿದ್ಧತೆಯದೊಳ ಬಿಡ
ದಿಲ್ಲಿ ಪತ್ರಿಕೆ ಪ್ರಕಟಿಸುತಲಿದ
ನೆಲ್ಲ ಕಂಡು ವಿರೋಧಿಗಳು ಪೂಜ್ಯರಿಗೆ ಬರೆಯುತ್ತ||
ಇಲ್ಲಿಗದು ಬರಬಾರದೆನ್ನುವ
ದಲ್ಲದಯೆ – ನ್ಯಾಯಾಲಯದಿ ನಡೆ
ದೆಲ್ಲವಂ ತಿಳಿಸಿಹುದರಿತು ಸಂದೇಶರವರಾಗ || ೫ ||

ಕಳಿಸುತಿಲ್ಲಿಯ ಕಾರ್ಯ ಪಥವಂ
ತಿಳಿಸುತಾ ಮುಂಜಾಗ್ರತೆಯ ತಿಳಿ
ದೆಳೆಯದಾ ಪಥ ಪರಿಚಯಿಸಿದಂತಾಗುತೇನೆಲ್ಲ||
ಸುಳಿದು ಸಿದ್ಧತೆ ಮಾಡಿದಂತಾ
ಗಳೆಯುತೆಲ್ಲೆಡೆ – ಪೂಜ್ಯರಿಗೆ ಮಿತಿ
ತಿಳಿಸಿದಂತಾಗಮಿಸುತೆಲ್ಲಟ್ಟಿಪುರ ಮಠಕಂದು || ೬ ||

ತಲುಪಿ – ಮರುದಿನದಂದು ಗೌರವ
ದೊಲವದೊಳ ತಲುಪುತ್ತ ಮಠದಿಂ –
ಸುಲಲಿತದಿ ಮರೆಗುದ್ದಿಯೊಳ – ನಡೆದು ಮಠ ತಲುಪುತ್ತ||
ನಿಲುಮೆಯೊಳ ನಡೆದಂಥ ಉತ್ಸವ
ಮೆಲುಕು ಹಾಕುತಲಿಂತು ಸುದಿನದೊ
ಳೊಲವದಾಶೀರ್ವಚನ ಮೊದಲಿದು ಭಿನ್ನವತ್ತಳೆಯು || ೭ ||

ಸಮರ್ಪಣೆ :

ನಾನು ಬರೆದಿಹ ಷಟ್ಪದಿಯ ಸ
ಮ್ಮಾನ ಸಂಪಿಗೆ ಭಿನ್ನವತ್ತಳೆ
ಸಾನುಮಯದಿಂದೋದಿದಾ ಬಳಿಕಾಗ ಗದ್ಯಗರಿ ||
ಮಾನವಹ ಸನ್ನಿಧಿಯ ಚರಣಡಿ
ಕಾಣು ಭಕ್ತರ ಭಾವನೆದುರೇ
ಜಾಣ ಅಡವಿ ಮಠದ ಚರಂತೆಯ್ಯೋದಿದಾ ಬಳಿಕ || ೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಿನ್ನಿಧಿ ವಾಣಿ : ದಿ. ೯-೧-೧೯೭೫

ಏನಿದೇನಿದು ಬಯಸಲಾರದು
ದೇನಿದುವು ಭಾವೈಕ ಬೆಳಗಿನೊ
ಳೇನಿದೆನ್ನೊಳಗಿತ್ತ ಬರುವಾ ಕಾರಣಾರಿವರೆ ||
ತಾನೆ ನಿರುಪಾಧೀಶನಿರವನು
ಮಾನ ರಹಿತಾತ್ಮೀಯಕರೆಗನು
ಭಾನು ನಿಮ್ಮೆಲ್ಲರರ ಭಕ್ತಿಯ ಭಾವ ಸವಿಧಾರೆ || ೯ ||

ನೋಡಿ ಅಷ್ಟಾವರಣದೊಳ ಮಿತಿ
ಜೋಡಿ ಸದ್ಗುರು – ಲಿಂಗ – ಜಂಗಮ
ನಾಡಿ ಗಮ್ಯತೆ ಲಕ್ಷಿಪಗೆ ಸಂತಸದ ಸೊಬಗವಿದು ||
ಕೋಡಿ ಭಾವೈಕ್ಯತೆಯದ್ಯೋತಕ
ಪಾಡಿದಂತಾಗಿಹುದಿದುತ್ಸವ
ಮೂಡಿಸಿದೆ ನಿರುಪಮದ ನಿರ್ಮಲದಾಚರಣ ಸನದು || ೧೦ ||

ತೋರು ತಿಳಿಯುವದೆರಡು ನಯನ ಸ
ದಾರವೀ ಭ್ರೂ ಮಧ್ಯ ಮೆರಗಾ
ಮೋರ ತೋರದ ತೆರೆಯೊಳಡಗಿದ ಸಂಭ್ರಮಾಭರಣ ||
ತೀರದಂಥಹ ಬೆಳಗು ಬೆಳಗಾ
ಪಾರ ಪಂಥ ಪ್ರಸಾದ ಮೋದಾ
ಕಾರ ಮಲ್ಲಿಗೆ ನುಡಿಯೊಳಾಗದ ಮಹತೆ ಸಹಿ ಕಿರಣ || ೧೧ ||

ಇಲ್ಲಿ ಸುಖಿಸುತಲಿರುವರೀರ್ವರೊ
ಳಿಲ್ಲಿ ವಿರಮಿಸುತಿಹುದ ಪರಿ ತಾ
ವಿಲ್ಲಿಯೂಯಿರಬಹುದಿದಾದರು ಸಲ್ಲುವಂತಾಗಿ ||
ಬೆಲ್ಲ ಭಾವಿತರಾಗುತೊಳ ಹೊರ
ಗೆಲ್ಲ ಬೆಳಗುವ ಬೆಣ್ಣೆಯಂತಿರ
ಲಲ್ಲಿರುವದೆಂಥದು ನಿಶೀತ ವಿಲಾಸವಿರದಾಗಿ || ೧೨ ||

ಭಕ್ತ ಬಾಳೆಯ ಕರುಳದಂತಾ
ಯುಕ್ತನಾಗಿರಲಲ್ಲಿ ಸದ್ರಸ
ಭಕ್ತಿ ಭಂಡಾರೋಕ್ತ ಹೊರಗೊಳಗೊಂದೆ ಹೂವ ಹೊದೆ ||
ಶುಕ್ತಿಯೊಳ ರಜತಾದ್ರಿ ಭ್ರಾಂತಿ ವಿ
ಮುಕ್ತವಾದಂತಾದಲೆಡೆಗಾ
ಸಕ್ತಿಯೆಂಥದು – ಶಕ್ತನಿರೆ ನೋಡಲ್ಲಿ ಮರಗಮೆದೆ || ೧೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸರಳೆನದುದೀ ಸ್ಥಿತಿ ಪಶುವಿನಂ
ತುರುಳುತಿರುವಾ ಮನುಜರಿಗೆ ಗುರು
ಚರಣ ಚಾರಿತ್ರ್ಯಾರ್ಥಸಿಗದದು ಚರಕರುಣದಿಂದ ॥
ಪರತರೆನಿಪ ಪ್ರಸಾದ ಕಾಯವ
ಕರುಣಿಸಲಿದೇ ಮುಂದೆ ಮೆಟ್ಟಿಲ
ದಿರವಕಾಧಾರೆನಿಸುವದಿದರೆಡೆಗಿರಲಿದೆ ಗಂಧ ॥ ೧೪ ॥

ಬೇಕು ಬೇಕಪ್ಪಿಲ್ಲಿ ತೆರೆಮನ
ತೂಕದೊಳಗಾಚಾರದಿಂ ಪರಿ
ಪಾಕಗೊಂಡಿಹುದೊಳಗೆ ಸುಂದರ ಸೊಬಗದಿರೆ ಕರಣ ॥
ತಾಕಲಾಟತೆ ರಹಿತ ಬಿಡದನು
ವಾಕದೊಳಗದೆಯೆದ್ದು ತೋರು
ತ್ತೇಕ ಮುಖ ಸಾಧನದೊಳಾತನಿರವದೊಳದೆ ಕಿರಣ ॥ ೧೫ ॥

ಇಲ್ಲಿ ಶೀಲತೆ ಸರಳ ಸೂತ್ರದೊ
ಳಿಲ್ಲಿರುವ ಸಂಬಂಧದೆಳೆ ಬಿಡ
ದಿಲ್ಲಿ ಕಂಡಿಹುದೆಲ್ಲ ಮಧುಮನ ಸಫಲಶೀಲಾರ್ಥ ॥
ಚಲ್ಲವರಿದಿಹ ಚಂದ್ರಿಕೆಯ ಚಲು
ವೆಲ್ಲ ಶೀತಲದಿರವ ಭಾವನೆ
ಯಲ್ಲಿ ಶಿವಗಣರೆಲ್ಲ ಕೂಡಿಹುದರಿಸುತಿಹುದಾರ್ಥ ॥ ೧೬ ॥

ಸುಲಭ ಸಿಗದೀ ಶೋಭೆ ಸಕಲೆಡೆ
ನಿಲವ ನೈದಿಲೆ ನೇರ ನಿರುಪಮ
ದೊಲವ ದಳಕಳೆ – ಯಾಕೆಯೆನೆ – ಮನ ವಿಷಯ ಹಸುರೆಂಬ ॥
ಛಲದೊಳಗೆ ಬಳಲುತ್ತಲಿರುವಿಕೆ
ಬಲುಮೆ ಕಾಣುತ್ತಿಹುದ ಲಕ್ಷಿಸು
ತಲೆಯ ಸೊಳ್ನುಡಿ ಸಾರಿ ಬಿಟ್ಟಿಹುದನ್ನೆ ಕಾಂಬುವದು ॥ ೧೭ ॥

ಶುದ್ಧ ಭಾವನೆ ತತ್ವ ಸೇವನೆ
ಹೊದ್ದುಕೊಂಡವನಿಂದ ಧಾರ್ಮಿಕ
ಬದ್ಧದೆಡೆಗಾತಂಕ ಮಾಡನು ತಿಳಿಯಬೇಕಿದನು ॥
ಕ್ರುದ್ಧತೆಯ ನುಡಿ ಕಿಡಿಯ ಸಿಡಿಸದ
ಮುದ್ದೆ ಮೆಲ್ನುಡಿಯೊಳಗೆ ಸೇವಾ
ಬದ್ಧ ತಾನಾಗುವಿಕೆ ಕಾಣಲುಬಹುದು ಶುಭ ಶೀಲ ॥ ೧೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗರಿಮೆ ಸರ್ವಾಚಾರ ಸಂಪದ
ಚರಣದೆಡೆಗಾಗಿಹುದೆ ಭಕ್ತಿಯು
ಬೆರಗಿನೊಳಗಿರಲೆಂಥ ವಂಚನೆ ಮಠಕೆ ವಿದ್ರೋಹ ॥
ಗುರಿಯ ಗೂಡದೆ ಪದ ವಿಧೇಯದೊ
ಳಿರುವಿಕೆಯದಾದರ್ಶ ದರ್ಪಣ
ದಿರವದಾಗಿರಲೆಡೆಗೆ ದೂರದು ವಂಚನೆಯ ದಾಹ ॥ ೧೯ ॥

ಜಂಗಮನ ಪದ ನಂಬಿಗೆಯೊಳ ಸ
ದಾಂಗ ಭಾವಿತನಾಗಿ ಸಾಗುವ
ದಿಂಗಿತಿರಲೆಡೆಗಾ ಸಮಸ್ಯೆಗಳೆನಿತು ಬರದಲ್ಲಿ ॥
ಅಂಗದೊಳಗಿಟಕೊಂಡು ಪರಿನುಡಿ
ರಂಗದೊಳು ಮತ್ತೊಂದು ತೆರೆದಿಡು
ತಾಂಗಳದಿ ಸಾಗುವಿಕೆಯದು ಸದ್ಭಕ್ತಿಯೆನುದಲ್ಲ ॥ ೨೦ ॥

ಎಲ್ಲಿಹುದು ಸಂತೋಷ ಭಾವನೆ
ಯಲ್ಲಿರದು ಕಲುಷಿತದ ಯೋಚನೆ
ಪಲ್ಲವಿಸುತಿಹುದಾತ್ಮದೊಳ ಸಾತ್ವಿಕದ ಗುಣ ಗಮ್ಯ ॥
ನಿಲ್ಲದ ತರಂಗಸಮ ಸೇವಿಸು
ತಿಲ್ಲಿ ಜಂಗಮ ಪದದೊಳಾತನ
ಬಲ್ಲತನದಾಚಾರ ಮೇರು ವಿಹಾರಪದ ಸೌಮ್ಯ ॥ ೨೧ ॥

ಮಾನಸದಿ ಒಂದಿಸುತಲಿರುತನು
ಮಾನ ರಹಿತಾದಂಥ ಮೆಲುಕಾ
ದಾನದೊಳ – ಗುರು – ಲಿಂಗ – ಜಂಗಮ – ವಾಣಿ ವರವೇಣಿ ॥
ಮಾನವಹ ಕಿಂಕರ ಸದಾಗುಣಿ
ಭಾನು ತಾನಾದಂಥವನ ಗುರಿ
ಸಾನುನಯದಿಂದಿರುವ ಮಠದೆಡೆ ಮಧುರ ಸುಶ್ರೇಣಿ ॥ ೨೨ ॥

ಭಕ್ತಿಯೆಲ್ಲೆಡೆ ಕಥನ ಕುಮುದಾ
ಸಕ್ತಿಯಂತಿಹುದಡೆಗದೆಂಥಹು
ದುಕ್ತಿ ಧರ್ಮವಿರೋಧತೆಯದಾಂತರಿಕವಾ ಗೂಢ ॥
ತ್ಯಕ್ತವಾಗಿರಲೆಡೆಗದೇ ಸ
ದ್ಭಕ್ತಿ – ಬೃತ್ಯಾಚಾರಯಿಹುದೆಂ
ಬೋಕ್ತಿಯೊಳಗಿಹುದದುವೆ ಈಶಾವಾಶ್ಯಮಿದುಯೆಂಬ ॥ ೨೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ವಿಚಾರಾಗರದೆಡೆಗೆ ಸಹಿ
ಭಾವದೊಳ ಸಂದೇಶದೊಳ ಪದ
ಸೇವಿಸುತಲಿರಲಾಗ ಬೀಜದೊಳಿರುವ ಮೊಳಕೆ ಪರಿ ||
ಭಾವಿಕಾಗಿಹುದೆಡೆಗೆ ಚಿಗುರು ಸ
ದಾವದನು ಕಂಡಾಗಹುದದೆ ವಿ
ಭಾವ ವೈಭವ ಸವಿಯ ಸಂಭ್ರಮವಿದೆ ಸದಾತ್ಮಗತ || ೨೪ ||

ನೋಡಿ ಭಕ್ತಗೆ ಮಠದ ಮಾಧುರಿ
ಗೂಢದೊಳಗಿರುವಿಕೆಯಿದೆಂಬುದ
ಗಾಢದೊಳಗಿರುವವಗೆ ಸಕಲೆಡೆ ಬೆಳಕೆ ಬೆಳಕೆಂಬ ||
ಬೇಡಿ ಪಡೆಯದುದಿಹುದ ನಿರತಿರ
ಲೇಡಿಯಂತಹ ಗಮನ ದೂರೆಂ
ಬಾಡುವಿಕೆ ಗಣ ಶರಣ ಸೂಕ್ತಿಯ ಸಾರ ಭರಿತಾಗಿ || ೨೫ ||

ಜಂಗಮನ ಪೂಜಿಸುವ ಭಾವನೆ
ಸಂಗತಾಗಿರಬೇಕು ಪಯ ಕೆನೆ
ಸಂಗಮಾಂತರ್ಗತ ಮಲಪ್ರಭೆ ಬೆರೆತ ಬೆಡಗ ಸೊಗ ||
ಇಂಗಿತರಿಯದಹಮದೊಳಾಗುತ
ರಂಗದೊಳಗಾಡಿರೆ ಕಲಂಕ – ಸು
ರಂಗ ಹಾಕಿದ ರೀತಿ ಭಾವಿಸಬೇಕು ಸೂಕ್ಷ್ಮದಲಿ || ೨೬ ||

ಲಿಂಗಪೂಜಿಸುವಾತ ತತ್ಸಮ
ಜಂಗಮಗೆ ಅಂಜದಲೆ ಸಾಗಿರೆ
ಭಂಗವೆನದಿನ್ನೇನು ಜೀವನ ಸವಿಯೊಳಗೆ ಕಹಿಯು ||
ರಂಗದೊಳಗೆ ವಿಭೂತಿಯಾತನ
ಹೊಂಗನಸನರಿಯದಿಹುದಾ ಕಡೆ
ಕಂಗಳೆಂತದು ಬಯಸುತಿಹ ಸದ್ಭಕ್ತಿಯಾಸಕ್ತಿ || ೨೭ ||

ಇದು ನಿರಂತರದಿರಲಿ ನಿರುಪಮ
ದಿದು ವಿಕಾಸತೆಗೊಳಲಿ ಸಂತತೊ
ಳಿದು ಹಸಾದತೆಗೊಳುತ ಕಂಡವರ ಮನ ಹೂವಾಗಿ ||
ಮುದ ಮನೋರಮವಾಗುತರಳಿರ
ಲಿದೆ ಸದಾ ಶುಭವೆನಿಸದೇನಿಹು
ದಿದರೆಡೆಗೆ ತೂಕಡಿಕೆಯೆಂಥದು ತಿಳಿದು ಬೆಳಗಲಿದು || ೨೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂತ ಶರಣರು ಪೂಜ್ಯಪ್ರಮಥರು
ಸಂತತಾಗಮನೆಡೆಗೆ ಶುಭಸಿರಿ
ಸಂತಸತೆಯಿಹುದೆಂಬುದರಿಯುತ ಗೌರವಿಸುತವರ ||
ಶಾಂತಿ ಕಂಗಳದರಳು ಕಿರಣೊಳ
ಗಾಂತರಿಕ ಪರಿಶುದ್ಧಗೊಳಿಸುತ
ಲಿಂತು ಸಾಗಿಹುದೆಡೆಗೆ ಉತ್ತೇಜನವ ನಿಮದಿರಲಿ || ೨೯ ||

ಇದರ ಫಲವೇನೆನ್ನದಿರಿ ಜಡತೆಯ
ಪದರ ಕಳಚುತ ಹೊಸತು ಚೇತನ
ಸದರ ಸುಖದೊಳಗಾಗುವಿಕೆಯೇ ಮಾನವೀಯತೆಯ ||
ಮಧುರದೊಳಗಾದವನೊಳಿದುವೇ
ಸದಯ ಮೌಲ್ಯಾಧಾರ ಶೀಲತೆ
ಬದುಕಿದೆಲ್ಲರಿದಾಯ್ದು ಕೊಳುವಂತಿರಲಿದೇ –ಸಮಯ || ೩೦ ||

ಇಂತೆನುತಲೀ ದಿನದ ನುಡಿಮಿಡಿ
ಕಾಂತಿ ನಿರುಪಾಧೀಶ ಜಂಗಮ
ಗಂತು ವರಗುರುಗಳ ಬಲಾಢ್ಯ ಕೃಪೆಯಿಹುದೆಂಬುದರಿ ||
ಸಂತಸದ ಈ ದಿನದ ಪೂಜಾ
ಶಾಂತಿ ಕಂಗಳ ಪುಣ್ಯ ನಿಮ್ಮತ
ಕಿಂತು ಧಾರೆರೆಯುತ್ತಲಂಬಲಿಯಣುವೆನೆನುತ ಕೊನೆ || ೩೧ ||

ಸಂತಸಾಯಿತು ಭಕ್ತರೆಲ್ಲರೊ
ಳಾಂತರಿಕದಾತಿಥ್ಯ ಭಾವನೆ
ಶಾಂತಿ ಕಮನೀಯತೆಯ ಕಂಡುಂಡವಗೆ ತೀರದದ ||
ಸಂತತೋತ್ಸಾಹ ಹರೆ ಶುಭಪದ
ಅಂತಃಕರಣದೊಳಗರಳುತಿರೆ ನಿ
ತಾಂತ ಚಿದ್ಗುರು ಕರುಣೆ ಕರದಾಮಲಕಿ ಫಲವೆನಲು || ೩೨ ||

ಶರಣು ಸಮರ್ಪಣೆ :

ಹಣದ ಕೊರತಿರಲಂದು ಬಳಲು
ತ್ತೆಣಿಕೆ ಚೀನಾಯುದ್ಧ ಫಳದಿಶೆ
ಹಣಿಕೆ ಸೈನಿಕನಾಗುವಾಲೋಚನೆಯನನದಿರಲು ||
ತಣಖೆಗೊಡುತ ತಿಳಿದು ಕರೆಸುತ
ಕುಣಿಕೆ ಬದಲಾಯಿಸಿದ ಫಲವೀ
ದಿನದಿ ಚೆನ್ನಿಧಿಯಾಗಮನ ಸತ್ಯಾರ್ಥ ಶಬ್ದವಿದು || ೩೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿರತ ಮಠಕೆ ನಿಯೋಜಿತೆನ್ನನು
ಕರುಣದಿಂ ಪಾಲಿಸುತ ವಿದ್ಯಾ
ಭರಣದೆಡೆ ಸಹಕಾರ ನೀಡುತ ಧೈರ್ಯದಿಂದಿರಿಸಿ ॥
ಸುರುಚಿಯಿಂ ಕಂಡಂಥ ಪೂಜ್ಯರ
ಚರಣದಡಿ ಭಕುತರರು ಸಂತಸ
ಭರಿತರಾಗಲಿಯೆನುತ ಬಿನ್ನವಿಸಿಕೊಂಡುದೀ ಯೋಗ ॥ ೩೪ ॥

ಪಾಲಿಸುತ ಕಾಣುತ್ತಲನುದಿನ
ತೌಲನಿಕ ತೆರೆಯೊಳಗಿರಿಸುತನು
ಕೂಲದಿರಿಸಿದ ಚರಣದಿಂ – ಋಣಮುಕ್ತನಾಗುದಕೆ ॥
ಕಾಲ ಮೇಲೋತ್ಸವದ ಸತ್ಸುಖ
ಶೀಲದೊಳಗಾಗಿಹುದವೀ ತಾಂ
ಬೂಲ ಮಿಡಿಗಡಲ ದೊಳಗಡಗಿಹುದಾತ್ಮದೀ ಉಲುಕೆ ॥ ೩೫ ॥

ಮಂಟಪೋತ್ಸವ : ೭-೧-೧೯೭೭

ಮುಂದೆ ಮರುದಿನ ಮಂಟಪೋತ್ಸವ
ದಂದಿಹುದ ಹನ್ನೊಂದು – ಶೋಭಿಸು
ತಂದಿದಕೆ ಬಂದಂಥ ಪೂಜ್ಯರು – ಇಂಚಗೇರಿ ಸಹ ॥
ನಂದ ಲೋಕಾಪುರ ಕಲಾದಗಿ
ಹೊಂದಿ ಬನ್ನೂರ್ ಚಿಮ್ಮಲಿಗೆ ಚರ
ಬಂದ ಪರಿ ಬೆಳ್ಳಂಕಿಯೆಂಬತನಾಳ ಡೋಣೂರ ॥ ೩೬ ॥

ಮತ್ತೆಮಹ ಜಮಖಂಡಿ ಚರವರ
ಚಿತ್ತದಂತೆಯೆ ಆಗಮಿಸಿರುವ
ರಿತ್ತಪದ ಪೂಜೆಯದು ಬಳಿಕ ಮಹಾಪ್ರಸಾದವದು ॥
ಸತ್ವ ಸಾಂಗಲಿ – ವೇಢೆಯಿಂ ಗಣ
ರಿತ್ತದಿಂ ಬಂದಿಹುದ ಸಕಲರು
ಹೊತ್ತರಿತು ದರ್ಶನವ ಪಡೆದುದ ಕಂಡವನೆ ಬಲ್ಲ ॥ ೩೭ ॥

ಘೋಷಣಾಗಿತ್ತಿದುವೆ ಹೂ ಸಂ
ತೋಷ ಚೌದಿಶೆ ಗಂಧ ಹರಡಿದ
ಭಾಷೆ ಹಲರಾಶೆಯೊಳ ಹಲವಿಧದೊಲವನೆಲೆ ನಲುಗೆ ॥
ಹಾಸಿಕೊಂಡಿತು ಹೊಸತು ಹೊಸತಾ
ಕಾಶ ಹರ್ಷದ ಮಿಂಚುತೊಳ ಹೊರ
ಸೂಸಿ ಸೂಸುತಲಿದ್ದಿ ತಾ ಮರುದಿನದಿ ಸೊನ್ನದೊಳು ॥ ೩೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉತ್ಸವ : ೧೦-೧-೧೯೭೯

ಧನಿಯರು ನಿಮಂತ್ರಣವನಿಟ್ಟಂ
ತೆಣಿಕೆಯೊಳ ವೈಭವದಿ ನಡೆಯು
ತ್ತೆಣಿಕೆಯಂತೆಯೆ ಮುಗಿದು ಸನ್ನಿಧಿಯಿಂದ ಸದ್ಬೋಧ ॥
ಅನಿತು ಹಳೆವಾಢೆಯೊಳ ನಡೆದಿಹು
ದನಘನನುಭವ ವಾಣಿ ಸವಿಯಲು
ಜನತೆಯದು ಸಂಸ್ಥಾನ ಹಳ್ಳಿಗಳಿಂದ ಬಂದವರು ॥ ೩೯ ॥

ಶಿಕ್ಷಕರು ಛಾತ್ರರರು ಬಾಲರು
ರಕ್ಷಕರು ಪಾಲನತೆ ನಾಡಿನ
ದೀಕ್ಷೆಪಣತೊಟ್ಟವರು ವಿಬುಧರು ಮುಗ್ಧರಾ ಸ್ನಿಗ್ಧ ॥
ಲಕ್ಷ ಶಿಸ್ತುಸಿಪಾಯಿಗಳು ಘಾ
ಲಾಕ್ಷ ಚಿಂತನಲೋಲರಾ ಷಟ್
ಶಾಸ್ತ್ರದಭಿರುಚಿಯುಳ್ಳವರು ಸಹಿತಾಗಿ ಶೋಭಿಸಿರೆ – ॥ ೪೦ ॥

ಸನ್ನಿಧಿವಾಣಿ : ೧೦-೧-೧೯೭೯ ಸೊನ್ನ (ಬಾಗಲಕೋಟ)

ಧರಮ ಸಂಸ್ಕೃತಿ ಹಲ ವಿಭಾಗ ದೊ
ಳಿರುವಿಕೆಯವಿಶ್ವದೊಳ ಕಾಣು
ತ್ತಿರುವದೆಲ್ಲ ನಿರೀಕ್ಷಿಸಿರೆ ಬದಲಾಗುತ್ತಾಹೀಗೆ ॥
ಸುರಿಗೆ ಸುತ್ತಿದ ರೀತಿ ಸುಲಲಿತ
ಸುರುಳಿಗೊಂಡಿಹುದನ್ನು ನೋಡಿರೆ
ಸುರುಚಿರದಿ ಸತ್ವಾಂಶ ಪೂರ್ಣಸುಸಂಸ್ಕೃತಿಯ ಸೋಗೆ ॥ ೪೧ ॥

ಭಾರತದ ಹಲ ದಿಶೆಯ ಭೂಮಿಯೊ
ಳಾರತಿಯ ಹಿಡಿದಂತೆ ಶೋಭಿತ
ವೋರಗರಿಯಂತಾಗುತಳೆಯದ ರೀತಿಯೆನಲೇನು ॥
ದಾರದೊಳಗಡಗಿಹುದ ಮಣಿಗಣ ಗಂ
ಭೀರದಂತಿರುವಿಕೆಯನತ್ತ
ತ್ತೇರುತಿರುವಂತಿಹುದ ಮುಂಧೋರಣೆಯನೇ ಕಾಣು ॥ ೪೨ ॥

ನೋಡಲವರಾಚಾರ ನುಡಿಯೆಡೆ
ಗಾಡಿದವನಿಗೆ ಗೋಚರರದು ಗಿಡ
ಗೂಡಿನೊಳಗಡಗಿರುವ ಮರಿಯಂತಾಗಿ ಸಲಿಸಾಗಿ ॥
ತೀಡುವಿಕೆ ದಶಕರ್ಮಪದ್ಧತಿ
ನಾಡಿಯೊಳಗಿತಿಮಿತಿಯರವರೊಳ
ಜೋಡಿಸುತಲಿರುವಿಕೆಯ ಹಲವಿಧ ಧರ್ಮದೊಳ ಕಾಣು ॥ ೪೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮದುವೆ ಶಬ್ದಹುದೊಂದೆ ಭಾವಿಸು
ತದರ ಪರಿಪಾಠಾದಿಗಳ ಗುರಿ
ನೆದರದೊಳ ಕೆಲವೊಂದೆಯೆಂಬುದ ಕಂಡವನೆ ಬಲ್ಲ ||
ಮಧುರ ಭಾವನೆ ಭರಣೆಯೊಳಗಿಹ
ದದರೊಳಗದೆಂಥಹುದು ಭಿನ್ನತೆ
ಪದರಗಳುಯೆಂತುಂಟು ನೋಡಿರೆ ನಿದ್ದೆ ಸಕಲರಿಗು || ೪೪ ||

ಹಸಿವೆ ನೀರಡಿಕೆಗಳು ಬಯಕೆಯ
ಬಿಸಿಯೊಳೆಂಥಹ ಭಿನ್ನ ಭಾವ ಹೊ
ರಸಲದೊಳ ಹೊರಗಿದರದೇ ಸುಗ್ಗಿಯದು ನುಗ್ಗಿದೆಡೆ ||
ಉಸಿರು ಹಾಕುವರೆಡೆ ಮನದೆರೆದು
ಕುಶಲಯೋಚಿಸಿದಾಗವರ ವಿಷ
ದುಸಿರ ಹಿನ್ನೆಲೆ ತಿಳಿದು ಸಹಕರಿಸಲಿದೆ ಮೆಟ್ಟಲದು || ೪೫ ||

ಅತ್ತ ನೇಪಾಳೆಡೆಗೆ – ಜೀವನ
ಚಿತ್ತ – ಭೂತಾನ್ ದಿಶೆ ಹಿಮಾಚಲ
ದಿತ್ತ ದೈನಂದಿನದ ಪರಿವಿಡಿ ಪಾಠಪದ್ಧತಿಯು ||
ಚಿತ್ರದೊಳಗವರವರದೇ ಸಿರಿ
ಯತ್ತ ಭಾರತ ಭೂಮಿಯೊಳ ಬಹು
ಗತ್ತ ಕಂಡತ್ತಿತ್ತುಪಾಧಿಯೊಳಹುದು ಭೇದತ್ತ || ೪೬ ||

ಆದರೇನಿದು ಬದುಕಬೇಕೆನು
ತಾದರಣೆಯನನುಪಮದಿರಲೆನು
ತೇದುಸಿರ ಹಾಕುವಿಕೆ ತರವಲ್ಲೆನಿತು ಯೋಚಿಸಿರೆ ||
ಸಾಧುಯಿರೆ ಸಂನ್ಯಾಸಿಯಿರಲ
ತ್ತಾದರೆನಿಪ ಸುಸಂಸ್ಕೃತಿಯದನು
ಮೋದಲಿರರಲ್ಲಿರದು ಸಂಕುಚಿತೇಳು ಬೀಳುವಿಕೆ || ೪೭ ||

ಸತಿಯ ಶೀಲ ವಿಚಾರಗೂಡಿದ
ಲತಿಶಯದ ಸುಪ್ರೀತಿ ಪತಿಯ ಪ
ರತರೆನುತಿಹ ಸ್ಥಿತಿಯ ತಿಳಿವುದೆ ಸಾತ್ವಿಕಾಭರಣ ||
ಪತಿಯ ಶೀಲಾಚಾರವೆಂಬುದ
ಲತಿಶಯದ ಸುಪ್ರೀತಿ ಸತಿಪರ
ಋತದಿರುವ ಪರಿ ತನ್ನ ಸಂಸ್ಕೃತಿಯೊಪ್ಪುತಾವರಣ || ೪೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಂದ ತೊಟ್ಟಿಲ ಗುಬ್ಬಿ ಚಟ್ಟಾ
ನಂದ ರೂಪಕ ನೆಟ್ಟ ಕಟ್ಟಿಹು
ದಂದದೆಡೆ ನೋಡುತ್ತ ನಲಿಯುವ ನಂದನಂತಾಗಿ ॥
ಹೊಂದುತಾ ಸ್ವಧರಮದೊಳ ಸಂ
ಬಂಧದೇಕತೆ ನಾಡಿ ತತ್ವಾ
ನಂದದೊಳ ಮೀಯುತ್ತಲೀ ಸೊಬಗೆದುರು ಮತ್ತೇನು ॥ ೪೯ ॥

ಕಂಡು ಕುಣಿಯುವ ಮೊದಲು ನೆರೆಹೊರೆ
ಕುಂಡದೊಳಗರಳಿಹುದ ಲತೆಯೊಳ
ಚಂಡು ಕಾಣುತ ಹಿಗ್ಗದದಕಾದಾರ ಸಂಸ್ಕೃತಿಯ ॥
ಹೊಂಡದೊಳಗಡಗಿರುವದಾ ಮನ
ಗಂಡು ಸಲೆ ತಲ್ಲೀನವಾಗಿರೆ
ಕೆಂಡವೆಲ್ಲವು ಕದಳಿಗೊನೆಯಂತಾಗುತೆನಿಸದದೆ ॥ ೫೦ ॥

ನೋಡಿರೆ ಮತಾಂತರಕೆ ಹಣ ತೂ
ರ್‍ಯಾಡಿ ಬದಲಾಯಿಸುತ ನಡೆದುದ
ನೋಡಿ ಕೂಡ್ರುವದಲ್ಲ ತನ್ನ ವಿಚಾರ ವೈಖರಿಯ ॥
ಮೂಡಣೋದಯ ತನ್ನದಿಹ ಮತಿ
ಜೋಡಿಗೊಳಿಸಿರಿ ಮಾತೆ ತವರಿನ
ನಾಡಿ ಮರೆಯದ ಪರಿಯೆ ಸಾಧಕ ಬಾಧಕದ ಚರಿಯ ॥ ೫೧ ॥

ಹಾಗೆ ಬದಲಾಗಲ್ಕೆ ಹಿಂದಿನ
ದಾಗಿಹುದರವರೊಳಗೆ ಕೊರತೆಯ
ಬೇಗೆ ಲಕ್ಷಿಸುತದಕೆ ತಣಿತೊರೆ ತುಂತುರಾದಾಗ ॥
ಬೇಗ ಸಫಲತೆ ಸಿಗದಿಹದೆ – ಸಹ
ಜಾಗಿ ಸಹಭಾಗಿತ್ವವಹಿಸಿರ
ಲಾಗದರ ಬಲಗೋಚರವು – ನೀರುಂಡ ರಸಗಬ್ಬು ॥ ೫೨ ॥

ಜಡ್ಡುಗಟ್ಟಿಹುದೀ ಸಮಾಜದಿ
ಕಡ್ಡದಂತಾದವರ ಗುರುತಿಸು
ತೊಡ್ಡಿನೊಳ ಬಿತ್ತಿಹುದ ಭತ್ತದ ಸಮತೆ ಮತಿಬಲಿಸಿ ॥
ಮಡ್ಡಿಯೊಳ ಬೆಳೆದಂದ ಅಂಗರ
ಗಡ್ಡಿ ಬಲದಂತಾದ ಹಿತನುಡಿ
ಚಡ್ಡಿ ಹಾಕಿಸಿ ದುಡಿಮೆ ಬಲ್ಮೆಯ ಬಲಿಸಲವರೊಳಗೆ ॥ ೫೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನ್ಯರೆಡೆ ಕೈಯೊಡ್ಡಿ ಬೇಡುವ
ಸಣ್ಣತನ ಮರೆ ಮರೆತು – ಸ್ವಂತಿಕೆ
ತನ್ನತಾ ಒಡಮೂಡುತವರೊಳಗುಳಿದು ಬಾಳುವಿಕೆ ॥
ಮುನ್ನಡೆಯುತಾತ್ಮಶುಚಿಯೊಳ ಸಂ
ಪನ್ನರಾಗುವದನ್ನೆ ರಮ್ಯತೆ
ಕಣ್ಣೆದುರು ಕಂಗೊಳಿಸಬಹುದಾವಾಗ ನಲಿನಲಿಕೆ ॥ ೫೪ ॥

ಕೇವಲಿದು ಪುರುಷರೊಳಗಿರದೆ ಸ
ದಾವಕಾಲದಿ ನಾರಿ ಬಳಿಗೊಳ
ದಾವ ಶಂಕೆಗಳಿಡದೆ ಸದ್ಧರ್ಮದೊಳಗಿರಲೆಂಬ ॥
ಭಾವಪೂರಿತ ಕೊಡುಗೆ ನಮದಿರ
ಲಾ ವಿಕಾರತೆಯೆತ್ತಮಾನವ
ಜೀವಕುಲ ಲೇಸನ್ನೆ ಬಯಿಸಿದರಂದು ಶಾಂತರರು ॥ ೫೫ ॥

ಇಂತು ಸಾಮಾಜಿಕದ ಹಿತ ಹೊನ
ಲಿಂತು ಸಾಗಿರಲಾಗ ಜೀವನ
ಕಂತು ಕಂಗೊಳಿಸುವದೆನುತ ಸನ್ನಿಧಿಯು ಸದ್ಬೋಧ ॥
ಸಂತಸದಿ ಮುಗಿಸುತ್ತಮಧುರ ನಿ
ತಾಂತ ಭಕ್ತಿಯ ವಾಡೆಯೊಳಗೆ ಪ್ರ
ಶಾಂತ ಮಜ್ಜನ – ಲಿಂಗಪೂಜೆಗೆ ಕುಳಿತೆದುರು ಕಂಡ – ॥ ೫೬ ॥

ಸನ್ನಿಧಿವಾಣಿ :

ಏನಿದುವು ಅಥಣೇಶರಾ ತೇ
ಜೇನಿದುವು ಶೋಭಿಸುತಲಿದೆ ರಸ
ಭಾನು ಪರಿ ಸದ್ಭಾವ ಚಿತ್ರವದೆನುವದಾಲಿಸುತ ॥
ಏನು ಭಾವ ವಿಶೇಷ ನಿಮ್ಮೆಣಿ
ಕೇನೆನಲು ನನಗೆಂದರಾ ದಿನ
ತಾನೆ ದಹಿವಡಕರ – ಶಿವಾಚಾರ್ಯೆದುರು ನಿಜದಂದು ॥ ೫೭ ॥

ಆಗ ಪಲ್ಲಕ್ಕಿ ಹತ್ತುವಾ ಶುಭ
ಯೋಗವದು ನುಡಿದಂತೆ ಶೋಭಿತ
ನಾಗಿಹುದ ನೆನಪಾಗುತದೆನುವದಾಲಿಸಿದ ಧನಿಯು ॥
ಭಾಗ ಗಂಗಾಧರರಯ ಸಹಿತಿರು
ವಾಗ ಮಹಸೇವಕೆನಿಪಾ ನಿರ
ತಾಗಿರುವ ನಿಲ್ಕಂಠಯನವರಿದಾಲಿಸುತ ಚನ್ನುಡಿಯ ॥ ೫೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೆಲುಕಿಸುತ ಶಿವಯೋಗಿಗಳ ಬಲ
ದೊಲವ ನುಡಿಯೊಳಗಡಗಿಹುದ ನಿಜ
ನಿಲುಮೆ ನೈಜ ಭವಿಷ್ಯವಾಣಿಯ ಮನನಿಸುತರೆಲ್ಲ॥
ಲಲಿತದಿಂ ಪ್ರಸಾದ ಗ್ರಹಿಸಿದ
ಬಳಿಕ ಹೊರಡಲು ಸಿದ್ದವಾಗಿರೆ
ಚಲುವ ಭಾವಿಕ ಚಂದ್ರಶೇಖರ ದಂಪತಿಗಳೊಲವ ॥ ೫೯ ॥

ಭಕ್ತಿ ಸ್ವೀಕರಿಸುತ್ತ – ಕೋಟೆಗೆ
ಯುಕ್ತ ಹೊರಟಿರಲಾನು ಸಹಿತಂ
ಸೂಕ್ತ ಭಾವಿತನಾಗಿ ತಲುಪುತ ರೈಲು ಹೊರಡು ಘಳ ॥
ವಾಕ್ಯ ನನಗಿಡುತಾಗ ನೆಲೆ ಕರು
ಳೋಕ್ತಿ – ಮಂಗಳವೇಡೆ ಮಠವಾ
ಸಕ್ತಿ ನಿನ್ನಯದಾರಿ ನೋಡುತಿದೆನುತ – ಮಠವಾದ ॥ ೬೦ ॥

ಬೇಸರಾಗಿರೆ ಹೊರಟು ಬಾರಪ
ಕಾಶಿಗದುಯೆನ್ನುತ್ತ ಕರುಣ ವಿ
ಶೇಷಮಯ ನನ್ನೆಡೆಗೆ ನಯನಿಡುತಿರಲು ರೈಲುಗತಿ ॥
ಭಾಷೆ ಸೀಟಿಯ ಹೊಡೆಯುತಿರಲಾ
ಕಾಶದೆಡೆ ಹೊಗೆ ಬಿಡುತ ಸಾಗಿಹ
ಸೂಸುತನವೇನಿರಲಿ ಪೂಜ್ಯರ ಭಾವ ರಸಜೀವ ॥ ೬೧ ॥

ಸ್ವಾರ್ಥ ದಿಶೆಗೇನಿರದೆ ಪರಮ ಪ
ರಾರ್ಥ ಪಥದೊಳ ಸುಳುಹ ಸೆಲೆ ಪರ
ಮಾರ್ಥ ಪಥಿಕರೆನಿಸುತ ಸಾಗೆನುತಾತ್ಮರಭಿರುಚಿಯ ॥
ಅರ್ಥಪೂರ್ಣತೆಯೊಳ ನಿರೂಪಣೆ
ಸಾರ್ಥಕತೆಯೆನಿಪಂತೆ ದಿನಚರಿ
ತಾರ್ಥಗೊಳಿಸುತ ಗದಗದಿಂ ತಲುಪುತ್ತ ಕಾಶಿಗದು ॥ ೬೨ ॥

ಸುಮ್ಮ ಸುಖದೊಳಗಿರುತಲಿರುತಿರ
ಲೊಮ್ಮನದ ಲಿಂಗಾಯತ ಹಿತ
ಚಿಮ್ಮುವಾಶೆಯದೊಳಗಿರುತಲಿರಲೇನು ಶೈಕ್ಷಣಿಕ ॥
ಹುಮ್ಮಸದಿ ಯೋಚಿಸುತ ಕಾಶಿಯೊ
ಳೊಮ್ಮತದ – ಮತ ಪೀಠ ನೆಲಿಸುವ
ತಮ್ಮ ಧೋರಣೆಯಂತೆ ಬೀಜವನೂರುತಿಂತಾಗ ॥ ೬೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಪೂರ್ಣಾನಂದ ವಿಶ್ವ ವಿದ್ಯಾಲಯದಲ್ಲಿ
ಶಕ್ತಿ ವಿಶಿಷ್ಟಾದ್ವೈತ ವೇದಾಂತ ಪೀಠ ಸ್ಥಾಪನೆ - ೧೯೮೩ ಇಸ್ವಿಯಲ್ಲಿ :

ಹಿಂದೆ – ಯೋಚಿಸಿದಂತೆ ಭಕುತರು
ಸ್ಪಂದಿಸಿದ ಪರಿ ಲಕ್ಷ ಹಣ ಬಿಡ
ದಂದು ಸಂಗ್ರಹಿಸುತ್ತಲದೆ ವಿದ್ಯಾಲಯದಿಡಲಾಗ ॥
ಚಂದದಿದರೊಳಗಧ್ಯಯನದಿಂ
ಹೊಂದಿ ಪದವಿಯ ಪಡೆದ ವಿಭುಧರು
ಗಂಧದೊಳಗಾದಂತೆ ಮುಂದೊರೆದಿಹುದು ನೋಡಿಂದು ॥ ೬೪ ॥

ಎಂದಿನಂತೆ ನಿರೀಕ್ಷಿಸುತ ಮಠ
ಕೆಂದಿನಂತಾಗಿಸುತಲಿರವಾ
ನಂದ ಭಕ್ತರ ಯೋಗ ಕ್ಷೇಮುವ ಕೇಳುತವರಿಂಗೆ ॥
ನಂದದಿಂ ಪಥ ತಿಳಿಸುತಿರುತಾ
ಗಂದು ಬಡವರಗುರುಗಳಾಗುತ
ಲೆಂದಿನಂತಿರುತಿರುವ ಗುರುಕುಲ ಛಾತ್ರರೆಡೆ ನೋಟ ॥ ೬೫ ॥

ಯೋಗಗೊಳಿಸುತಲಿರುತ ಹಲಮುಖ
ವಾಗುತಧ್ಯಯನೊಳಿರುವವರ ವಿ
ಭಾಗದೆಡೆ ಕಾಳಜಿಯ ಸಹಿತಾಗಿಡುವದಾದಿನದಿ ॥
ತಾಗುತಾರ್ಥಿಕ ಕೊರತೆಯೊಳಗನು
ವಾಗಿ ಕೇಳುತಲಿರುತ ಪ್ರಗತಿಯೊ
ಳಾಗಿ ಸಾಗುವದೆಲ್ಲವಂ ಕಾಣುತ್ತ– ದಕ್ಷಿಣೆಡೆ ॥ ೬೬ ॥

ಬರುತ ಪುಣೆ ಮುಂತಾದುದೆಡೆ ಸಾ
ಗಿರುವ ಬಡವಿದ್ಯಾರ್ಥಿ ನಿಲಯದ
ಗರಿಮೆ ಸಹಿತಾ ಪ್ರಸಾದ ಕಾಳಜಿ ಮಾಡುತಾಡುತ್ತ॥
ಸರಣಿ ಸಂಚಾರೊಳಗೆ ಬಂದಿಹು
ದರಳು ಕಾಣಿಕೆಯಲ್ಲ ಸಲ್ಲಿಸು
ತಿರುತ ಲೆಂದಿನದಾ ನಿಮಂತ್ರಣ ಬಂದೆಡೆಗೆ ಸಾಗಿ ॥ ೬೭ ॥

ಹಿಡಿದು ಟಾಂಗಾ ಗಾಡಿ ಭಕುತರ –
ಬೆಡಗು ಕಾರೊಳಗೊಮ್ಮೆ ಮತ್ತಾ
ಗುಡುಗುಡಿಸುವಾ ರೈಲುಗಾಡಿಯ ಹಿಡಿದ ಗಮನಾರ್ಥ ॥
ಬಡವ ದುಡಿದಿಹ ಬೆವರ ಹನಿಯೊಳ
ಗಡಗಿಹುದ ಭಾವಕ್ಕೆ ಬೆಲೆಗೊಡು
ತೊಡಲದೊಳಗವರ ಹಿತ ಬಯಸುತ ಬೇಸರವ ಪಡದೆ ॥ ೬೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಗಿಸಾಗುತಲಿದ್ದ ಚಿನ್ನಿಧಿ
ಯಾಗಿ ನೀಗಿಸುತವರ ಬಯಕೆಯ
ಜೋಗ ದರ್ಶನ ನೀಡುತದರೊಳ ಬಿಡದೆ ಸೂಳ್ನುಡಿಯ ॥
ಯೋಗದಿರೆ ಮಂಟೂರ ಭಕುತರು
ಸಾಗಿ ಹೂಲಿಗೆ – ಪದ ನಿಮಂತ್ರಣ
ಬಾಗುತಿಡುತಿರಲೆನ್ನೆಡೆಗೆ ನೋಡುತಲೆಂದ ಜಗದಾರ್ಯ ॥ ೬೯ ॥

ಏನು ನಿರುಪಾಧೀಶ ಭಕುತರ
ದೇನು ಭಾವನೆ ತವಕ ತೆರೆಯೊಳ
ಮೌನ ನಾವೊಳಗಡಗಿಹುದ ಸವಿಯೇನೆನಲು – ನುಡಿದೆ ॥
ಜಾಣರೆಲ್ಲರು ದರುಶನವ ಪದ
ಸಾನುಮಯರಾಗಿಹುದನರಿಸಲು
ಜ್ಞಾನಪೀಠಾಧ್ಯಾಕ್ಷನಾಲಿಸುತಿರಿಸಿದಾ ಮಿತಿಗೆ ॥ ೭೦ ॥

ಮಂಟೂರ ಮಂಟಪೋತ್ಸವ (ಜಿಲ್ಹೆ - ಬಾಗಲಕೋಟ)
ತಾ-೪-೨-೧೯೮೫

ಒಪ್ಪುತಲಿ ದಯಮಾಡಿಸಿದ ದಿಶೆ
ಗಪ್ಪಟದ ಮಂಟೂರ ಪುರಕದು
ಒಪ್ಪುತಲಿ ಉತ್ಸವದಿ ಬಳಿಕವರಿಂದ ಸದ್ಬೋಧೆ ॥
ಒಪ್ಪುತೊಪ್ಪಾದಂಥ ಬೆಣ್ಣೆಯೊ
ಳಿಪ್ಪ ಬಲ್ಯರಸಾಯನದ ಸೆಲೆ
ಸುಪ್ತಿಯೊಳಗಿದ್ದವರ ಜಾಗ್ರತದಿರಿಸಿತೆನಬೇಕು ॥ ೭೧ ॥

ಹತ್ತಿರದ ಶಿಶುವಿಂಗೆ ಮಾತೆಯು
ಹೊತ್ತರಿಯುತನುವಿಂದ ಕರಮಧು
ತುತ್ತಿಣಿಸಿದಂತಾಯ್ತವಾದಿನ ಕೇಳಿದವ ಧನ್ಯ ॥
ಮುತ್ತುನುಡಿಯಾ ನಂತರದಿ ನಿಜ
ದಿತ್ತಸಂಜೆ ಪುರಾಣಮಂಗಲ
ಚಿತ್ತಮುಗಿದಿರೆ ಮರುದಿವಸಲೈದ್ಯೆದು ಮಂಟಪದ ॥ ೭೨ ॥

ಸರಣಿ ಸಿದ್ಧತೆಯೆಡೆಗೆ ಗುರುಚರ
ಹಿರಿಮೆಯಿಂ ಶೋಭಿಸುತಿರೆ ಜಗ
ದ್ಗುರುಗಳಾ ಮೊದ ಮೊದಲು ನೈತಿಕ ಧಾರ್ಮಿಕತೆ ನಡೆಯ ॥
ಹಿರಿಮೆ ಹೊಂದುವ ಮಾರ್ಗ ಮಾಧುರಿ
ನಿರತದೊಳ ಶೋಭಿಸುವ ಸತ್ವದ
ದಿರುವ ಬಗೆ ತೆರೆದಿಡುತಲಾಗಂದು ಪದಸಿಂಧುಮಯ ॥ ೭೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಿನ್ನಿಧಿ ವಾಣಿ :

ಇಲ್ಲಿ ಬಂದಸುಯೋಗ ನಿಮ್ಮೊಳ
ಮಲ್ಲಿಗೆಯ ಸದುಭಕುತಿ ಪರಿಮಳ
ನಿಲ್ಲದಯೆ ತಾಗುತ್ತಲೀ ಕಡೆ ಸೆಳೆದುದೇ ವಿಹಿತ ||
ಉಲ್ಲಸಿತ ಸದ್ಭಾವ ಸಹಿಚರ
ಚೆಲ್ಲಿಹುದ ಕಾಣುತ್ತಸಂತಸ
ಸೊಲ್ಲುಸಂಪಿಗೆ ಸೊಬಗು ಸಂಪದ ಸಹಜಿದೋ ಸಹಿತ || ೭೪ ||

ಜೀವನಿದು ಜೋಕಾಲಿಯೇರಿಳಿ
ತಾವ ನೆವದೊಳ ತಡೆವರಾರಿದ
ಸಾವಧಾನದೊಳರಿತು ಸಾಗುವದೊಂದೆ ಭೇಷಜವು ||
ಹಾವ ಗತಿಮತಿ ಹೊರತದಾತುರ
ಜೀವನಾಗಿರಬೇಕು ನಡೆಯು ಸ
ದಾವ ಕಾಲದಿ ಶಾಂತರಪ್ಪಿಹುದೊಪ್ಪಿರಲು ಶುಭವು || ೭೫ ||

ಹೇಗೊ ಸಾಗಿರಲತ್ತಬಿಡದಿಹು
ದಾಗಿ ಮೆಣಸಿನಕಾಟದೊಳ ಸಲಿ
ಸಾಗಿ ಸಂಕಟಪಡುವ ಕಿಡಿದಂಥಾನುಗತಿಯತ್ತ ||
ತಾಗಿ ನೋಡುವ ತವಕ ಸನ್ಮತಿ
ಯೋಗ ತನಗಿರದಾಗ ಜೀವನ
ದಾಗ ಕೊನೆತನಕಿದುವೆ ಅನ್ನದದಾರಿಗಾತಂಕ || ೭೬ ||

ನೋಡುತೆಡಹಿದ ಕಲ್ಲನೆತ್ತುತ
ಲೋಡುವಿಕೆ ಶುಭವೆಂತು ಈ ದಿಶೆ
ಗೂಡುದಕೆ ಹೋಗೆಂದುದಾಲಿಸಿ ಸುಮ್ಮನಾಗದದು ||
ತೀಡಿ ತಿದ್ದಿಹುದೆಡೆಯ ತಂತಾ
ನಾಡುತೊಳಗೊಳ ತಿದ್ದಿಕೊಳುತೋ
ಡಾಡದಿರಲದೆ ತುಂಬ ಕನಸಿನ ಗಂಟು ಒಡೆದಕೊಡ || ೭೭ ||

ಮೆರಗು ಮತ್ತೆಂತೆನಿತು ಸಾಗುವ
ಸರಳುಪಾಯೇನೆನಲು – ಸುಜ್ಞರ
ಚರಣದೊಳ ಘನವಾಣಿಯನುಭವಿಸುವಿಕೆ ಸರಸಿಯೊಳ ||
ಸರಸದಿಂದಾಡುತಿರೆ ಹಂಸದ
ಹರುಷ ಹದ ಹೂವಾಗುತಿರಲೊಳ
ತರಣಿ ಕಿರಣದೆ ಸಹಜ ಪ್ರತಿಬಿಂಬಿಸದಿಹದೆ ಹೇಳಾ || ೭೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಿಂಬವಾಧಾರೆಲ್ಲಕಹುದಿಹು
ದೆಂಬುದರಿವಾದೆಡೆಗೆ ತೀರದ
ಹಂಬಲಾಚರಣರಳುತದರೊಳಮೀಯುತಿರಲದುವೆ ॥
ಹಿಂಬದಿಯ ಹುಳುಚೆಲ್ಲ ಬದಲು
ತ್ರಿಂಬುಗೊಳ್ಳುತಲಲ್ಲಿರುವ ಚಿ
ತ್ಕುಂಭದಡಗಿದ ಬಯಲ ಬಯಲೇ ಬಚ್ಚಬರಿದಮಿಗೆ ॥ ೭೯ ॥

ನಡೆದು ನಡೆಸುತ ಚಿಂತನೊಳಗದೆ
ನುಡಿದು ನುಡಿಸುತ ಸಂತಸೊಳಗದೆ
ಮುಡಿದು ಮುಡಿಸಿದ ಮಂಥನೊಳಸುಧೆ ಸಚ್ಚಿದಾನಂದ ॥
ಕಡೆದು ಕಡೆಸುತ ಕಂಗಳಾಲಯ
ಬಿಡದೆ ಬೆಳಗುತ ಭೃಕುಟಿ ಭವನೊಳ
ಮಿಡಿತಗೊಳುವವರೊಡಲ ನಿರುಪಾಧೀಶನಾನಂದ ॥ ೮೦ ॥

ನುಡಿಗಳಾಚರಣಾಗಬೇಕಿದು
ನುಡಿಯದಯೆ ನದಿ ಪವನ ಗತಿಯಂ
ತೊಡಲಗಡಲ ಪಯೋಧರದ ಧಾರಾಂಗ ಕಾಣುತ್ತ ॥
ನುಡಿಯದಯೆ ನಡೆಯೊಳಗೆ ತಂದವ
ನೊಡಲ ತೋರದ ತೀರ್ಥ ತತ್ಪಥ
ತಡಸಲದೆ – ಚಿರವಿಹುದನಾಹತ ಹಂತೆ ಹೂವಂತೆ ॥ ೮೧ ॥

ನುಡಿದು ಭಕ್ತರೆನಿಸಿಕೊಳುವಿಕೆ ಸುಲಭ
ನಡೆದು ಗೆಲ್ಲುವದಷ್ಟೆ ಕಷ್ಟದು
ಬಿಡದೆ ಸಾಧಿಸಿ ಭಕ್ತನೆನಿಸುವ ಪಥವು ಜಟಿಲಹುದು ॥
ದೃಢದಿ ಸಾಗಿರಲತ್ತ ಸಫಲತೆ
ಪಡೆಯುವಾತುರಯಿರಲೆಡೆಗದುವೆ
ಕಡಲ ತೆರೆ ತಟದೆಡೆಗೆ ಸಹಜಾದಂತೆ ಶಿವಯೋಗ ॥ ೮೨ ॥

ಹೀಗೆ ನಡೆದವರುಂಟು ಜಂಗಮ
ಯೋಗಿ ಪದಕಾರ್ಪಿಸುತ ಪಾವನ
ರಾಗಿಹುದ ಇತಿಹಾಸ ಲಿಪಿ ಸಂತೋಷದಾಡುತಿವೆ ॥
ಹಾಗೆಯೆಂದಿನ ಪವನ ಪರಿಮಳ
ರಾಗಯೆಡಬಿಡದಂದಿನಿಂದ ಸ
ರಾಗ ಗೊಂಡಿರುವಂತೆ ಇಂದಿಗು ರಂಗ ಸಾರುತಿವೆ ॥ ೮೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಧುಸಂತ ಪ್ರಶಾಂತ ಪಂಥ ವಿ
ನೋದದೊಳ ಜೀವನ ವಿಕಾಸ ಪ್ರ
ಸಾದತೆಯನರಿಸುತ್ತ ಜನಮನ ಪಾವನದೊಳಿರಿಸಿ ||
ಮೋದದಿಹ ಭಕುತರೊಳ ಮತ್ತೆ ಪ್ರ
ಮೋದ ಭರಿಸುತಲಿವರ ಹರ್ಷದ
ಹಾದಿ ಹೂವೊಳಗಿರಿಸುತವರದೆ ಕಲ್ಪಕಾರುಣ್ಯ || ೮೪ ||

ತಿಳಿಯಬೇಕಿದಕೆಲ್ಲ ಮೂಲದೆ
ತಿಳಿದುದೆಲೆಯೊಳ ನಡೆದು ನಡೆಸಿಹು
ದೊಲವದೊಳಗಾದವರೆ ಸತ್ಪಥಶಾಂತ ಶರಣರರು ||
ಎಲೆಮರೆಯ ಪರಿಪಕ್ವ ಫಲಗೊಂ
ಚಲೊಳ ಕಳೆಗೊಂಡಂತೆ ಇಷ್ಟದೊ
ತೊಲವದಾತ್ಮಾನಂದಲೀನತೆ ಸಂತತಾ ಚರರು || ೮೫ ||

ನೋಡಲವರೆಡೆ ತಿಳಿಯಬೇಕವ
ರಾಡು ಗುರಿಯೊಳಗಾರದೇ ಮನ
ರಾಡಿಗೊಳಿಸುತ ಗಾಯಗೊಳಿಸದ ನೋಟ ಪದಪಾಠ ||
ಆಡು ದಿಶೆಯೊಳಗಾರೆ ನೊಂದಡೆ
ನಾಡೆ ತನಗದೆಯೆಂದು ತಿಳಿ ರಸ
ನಾಡಿ ಸಮದರ್ಶಿಗಳ ಸಹಜಿರವರಿತು ಒಡನಾಡಿ || ೮೬ ||

ಕಾರಣೆನೆ ಮುಖಲಿಂಗಿಗಳ ಮಹ
ಮೋರೆಯೊಳಗಡಗಿಹುದು ಪರ ಉಪ
ಕಾರ ಕಂಗಳ ಮಂಗಳಾತ್ಮೊಳ ಮಿಡಿತನಾಹತದೆ ||
ತೋರದಂತಾ ಸ್ಪಂದಿಸುತಲನು
ಭೂರಿ ಭಾವಾಕಾಶ ನಿರುಪಮ
ಮೋರ ಗರಿಗೆದರಿಹುದ ಪಾತ್ರಾಧಾರವಾಂತರಿಕ || ೮೭ ||

ನಂಬಿ ನಡೆಯಲುಬೇಕು ಸನ್ನಡೆ
ತುಂಬಲಿದ ಪರಿ ಸಾಕು ಮುನ್ನಡೆ
ಹಂಬಲದೊಳಿರಬೇಕು ಒಮ್ಮನ – ಇಮ್ಮನುಚಿತಲ್ಲ ||
ಹಿಂಬದಿಯೊಳಿರವೊಂದು ಪರಿ ನುಡಿ
ಬಿಂಬಿಸುತ ಹೊರಗೊಂದು ಹಾಡಿರೆ
ಶಂಭುವಿಗೆ ಸರಿಬರದಿದೆಂಬುದನರಿತಿರಲಿ – ಕೊನೆಗೆ || ೮೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂತಸದ ಮಂಟೂರ ಭಕುತರು
ಶಾಂತದಿಂ ಬರಮಾಡಿಕೊಂಡಿಹು
ದಾಂತರಿಕದಾತುರತೆ ಕಂಡಿತು ಫಲಸುವಾಸನೆಯು ||
ಹಂತದರಳುವ ರೀತಿ ಕೊನೆಗೀ
ಗಂತು ಮಂಟಪ ಪೂಜೆ ಪದ್ಧತಿ
ತಂತುರಿಪ್ಪತ್ತೈದು ಪಂಚೀಕರಣದಂತಿದುವು || ೮೯ ||

ತಿಳಿದು ನೋಡಿರೆ ಪಂಚಭೂತದ
ಸುಳುಹು ತನುವಿದ ನಿಂತು ತಿಳಿವುದು
ಹೊಳೆಯುತಿದರೊಳಗಾತ್ಮ ಚೇತನ ತುಂಬಿಕೊಂಡ ಪರಿ ||
ಬೆಳಗುವಾ ಸಮತಿವರ ಪೂಜೆಯೆ
ತಿಳಿಯಬೇಕು ವಿಲಕ್ಷಣ ತತ್ವದೊ
ಳುಳಿಯಲಿದೆ ಸಾರ್ಥಕ್ಯನುತ ಬೋಧಾಂಗ ಮುಗಿಸುವಿಕೆ || ೯೦ ||

ವಾಚನ :

ಇಂತು ತಾಕಿಕ ಜೀವನದಿ ಬಿಡ
ದಾಂತರಿಕ ತತ್ವಾರ್ಥ ಜತೆ ಸು
ತ್ರಾಂತರೆಳೆ ಲೋಕಾರ್ಥವನುಭವದಾರ್ಥ ಪೂರ್ಣತೆಯ ||
ತುಂತುರೆಳೆಯೊಳಗೆ ಮುಕ್ತಾ
ಕಾಂತಿ ಆಲೀಕಲ್ಲುಗಳೆ ಸುರಿ
ದಂತೆನಿಸಿತೆಲ್ಲರಿಗೆ ಸಾತ್ವಿಕ ಶರಣರಿಗೆ ಸಹಿತ || ೯೧ ||

ಶಬ್ದ ಕಲ್ಪದಿ ಮೂಡಿ ಬಂದ ನಿ
ಶಬ್ದದೊಳಗಡಗಿಹುದ ಗೋಸುಧೆ
ದುಗ್ಧದಂತಿಹ ಚನ್ನಿಧಿಯ ಕಥನಾಳದಿಹ ಶಕ್ತಿ ||
ಸ್ನಿಗ್ಧ ಸೊಂಪ ಶಿವಾನುಭವವೇ
ಸ್ತಬ್ಧವೆನದಾ ದನಿಯೊಳಡಗಿಹು
ದಾಬ್ದಿಯಿಂ ಹೊರಟಂಥದಾದ್ಭುತದಾತುಮಾಸಕ್ತಿ || ೯೨ ||

ಅಚ್ಚಗನ್ನಡ ಭಾಷೆ ಭೂಷಿತ
ಗುಚ್ಛದಿ ವಿರಾಜಿಸಿದ ಸುಮ ಋಷಿ
ಪಚ್ಚರತ್ನದ ಹೊಳಹು ಪಸರಿಸಿದಂಥ ತಂಬೆಳಕು ||
ಗಚ್ಚು ಗಾರೆರೆದಂತೆ ಅದುಭುತ
ಮೆಚ್ಚುವಂತಾಕರ್ಷ ಮುಖದಿಂ
ದಚ್ಚು ಪದ ಪಡಿಯಚ್ಚು ಸಮತಾಲಿಸಿದ ಸುರಸುಲುಕು || ೯೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೇಳಿದವಗಿದು ಭಾವನಾ ನನೆ
ಸಾಲು ಸಿರಿ ಸೌಹಾರ್ದ ಪರಿಮಳ
ಮಾಲೆ – ಜನಮತಿಗಿರಿಸಿದಂತಾಗಿತ್ತುಸಹಜತೆಯ ॥
ಪಾಲದೊಳಗದೆ ಸಕ್ಕರೆಯ ಕಡ
ಗೋಲ ಇಟ್ಟಂಥಾದವನುಭವ
ಕೀಲದೊಳಗಾಗುತ್ತರೆಲ್ಲ ಪ್ರಸಾದ ಸುಖವಲಯ ॥ ೯೪ ॥

ಚಿನ್ನಿಧಿಯ ವಾಗರ್ಥ ವಿವರಣೆ
ಯೆನ್ನ ಮಾನಸ ಮತಿಗೆ ನಿಲುಕದ
ಬೆಣ್ಣೆ ಬಯಲೊಳಗಡಗುತರಳಿದ ಬೆಳಕ ಥಳಕೆನಲೆ ॥
ಹಣ್ಣ ತಣ್ಣನೆ ಮೇಳದಾ ಶುಚಿ
ಯನ್ನೆ ತೋರಿಸಲೆಂತು ಪ್ರವಿಮಲ
ಕಣ್ಣೆನೊಳ ಚಿದ್ಬಿಂದು ಸತ್ಪ್ರಭೆ ಕಲ್ಪರಸ ಕಪಿಲೆ ॥ ೯೫ ॥

ನುಡಿದುದೆಲ್ಲವು ಕನ್ನಡಿಯದೊಳ
ಮುಡಿದು ಪ್ರತಿಬಿಂಬಿಸಿದ ಮುನ್ನುಡಿ
ಮಡಿಲದೊಳಗಡಗಿಹುದ ಚನ್ನುಡಿ ಚಾರು ಚವಿ ಚವರಿ ॥
ಸೆಡಗರಾಚೆಯ ಸೊಬಗ ಬೆನ್ನುಡಿ
ಗಡಲದಿಹ ಗಾಂಭೀರ್ಯವಾ ಮಡಿ
ಮಡಿಲು ತುಂಬಿದ ಮರಗ ಮಂಥನ ಮಡಿಕೆ ಹಿಡಿತ ತಡಿ ॥ ೯೬ ॥

ಹೊಂಗನಸದೊಳ ಸಾಂಸ್ಕೃತಿಕ ಬಹು
ರಂಗದೊಳಗಡಗಿರುವ ಬದುಕಿನ
ಹಂಗದಿಹ ಬಹು ಪಾತ್ರ ಚಿತ್ರಣ ತಾರೆ ಚಾರಿತ್ರ್ಯ ॥
ಅಂಗವಿಸಿಕೊಂಡಿರುವ ಚೈತ್ರ ಜ
ನಾಂಗದೊಳ ಶೋಭಾಯಮಾನ ಚಿ
ದಾಂಗದಡಗಿರಲೆಂಬುವಾಶೀರ್ವಚನ ನಿರ್ವಚನ ॥ ೯೭ ॥

ಹೆಜ್ಜೆ ಹೆಜ್ಜೆಗೆ ಕೇಳಿಬರುವಿಕೆ
ಮಜ್ಜಿಗೆಯೊಳಗೆ ತೇಲುವಾ ಗ್ರಹ
ಗೆಜ್ಜೆಯಂತಿಹ ಬೆಣ್ಣೆ ತೊರೆ ತಾತ್ವಿಕದ ಸಮ ಮೌಲ್ಯ ॥
ಗಜ್ಜರಿಯ ರಸದಂತೆ ರಸಹಸ
ಸಜ್ಜೆ ಸೀತನಿಗಾಳ ತಿನಿಸಿದ
ನಜ್ಜ ಪೂರ್ವಾಗ್ರಹ ಪೀಡಿತರಂತೆನದ ಬಲ್ಯ ॥ ೯೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಿತ್ತಚಳೆ ಸಹಜಾರ್ಥ ಸಾರ್ಥಕ
ಬಿತ್ತಿದೆಡೆಗದರಂತೆನಿಪ ಬೆಳೆ
ಗತ್ತದೊಳಗೇನಿಹುದು ತೀರದುದೊಳ್ಳೆ ತೊರೆಯ ಹೊಳೆ ||
ಉತ್ತಮಾಗಿಹುದೆಲ್ಲೆ ಇರುತಿರ
ಲತ್ತದನೆ ಗ್ರಹಿಸುವ ಸುಭಾಷಿತ
ಮುತ್ತುಮಣಿಯೆಡೆ ನೋಡಿದಾತಗೆ ಕಾವ್ಯಕಿರಣ ಕೆಳೆ || ೯೯ ||

ಹಮ್ಮನುಡಿರಾಶಿಯೊಳು ಜೊಳ್ಳದು –
ದೊಮ್ಮನದ ಮಡಿ ಶರಣ ಮತಿಯಹು
ದುಮ್ಮಳಿದಿಹ ನಡೆಯದಾ ಉಯ್ಯಾಲೆ ಮಧುಮಾಲೆ ||
ಸಮ್ಮತದಿ ಕಾಣುತ್ತಲಿರಲವ
ಗುಮ್ಮಹದ ಉರುವಣೆಯ ಉಲಿಯೆಲೆ
ಕಮ್ಮನೆಯ ಕಂಗಳದಿ ಕೊಡುತಿಹುದುಲುಕೆ ಸಲ್ಲೀಲೆ || ೧೦೦ ||

ಭಾಷೆ ಪರಿಣತಿ ಹಣತೆ ಹೂವೊಳ
ಗಾಶೆಯೆನಿತೇನಿರದ ತಾಳ್ಮೆಸ
ದಾಶೆ ಪರಹಿತ ತೀರ್ಥ ತಿರುಳರಿಸಿಹುದ ಕಂಡಾಗ ||
ಘೋಷಿಸಿದ ಪದ ಪದಕೆ ಜನಹಿತ
ಕೋಶದೊಳಗೇನಿರಲು ಬೇಕೆನು
ಶೀಸೆಯೊಳ – ವಚನಾರ್ಥಸುಧೆ ಭರಿಸುತ್ತ ಸಚ್ಚಿತ್ತ || ೧೦೧ ||

ಲೋಕ ಜೀವನದೊಳಗೆ ಸಾತ್ವಿಕ
ದೇಕತೆಯ ಪಥಪಿಡಿಯುತದರೊಳ
ಮೂಕನಾಸ್ವಾದಿಸಿಹುದನುಗತಿ ಸತತ ತಾನಿರ್ದು ||
ಶೋಕ ಮೋಹಾಚೆಯದ ಮೌಕ್ತಿಕ
ಪಾಕವಾ ಪರಮಾರ್ಥ ಮೂಲಕ
ತಾಕಲಾಟತೆ ರಹಿತನಾ ವ್ಯಕ್ತಿತ್ವದೊಳಗಾಗಿ || ೧೦೨ ||

ಸಾಗಿರೆನ್ನುವದಾತ್ಮೊಲವ ಸಲಿ
ಸಾಗಿ ತೆರೆದಿಡುವಂಥ ಕುಶಲದೊ
ಳಾಗಿಹುದ ಸಪ್ರತಿಭೆ ಗುರುಚರ ಬಳಗ ಭಕ್ತಾಳಿ ||
ಬೀಗುತಿಹುದನು ಕಂಡು ಸಂತಸ
ಭಾಗಿಯಾ ಜನಸಾಗರದು ಬಿಡ
ದಾಗಿ ಸಂತಸದಿರಲು ಸೂಳ್ನುಡಿ ಸೊಂಪ ಮುಕ್ತಾಯ || ೧೦೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡಿದಾ ಬಳಿಕಂತು ಮಂಟಪ
ಮೋಡಿಯೊಳ ಪದಪೂಜೆ ನಂತರ
ಕೂಡಿದಾ ಗಣ ತಿಮ್ಮಸಾನಿ ಮನೆತನದ ಕುಶಲಮತಿ ॥
ನಾಡೆ ಚಳವಳಿ ಗಾಂಧಿ ಪಥಮತಿ
ಗೂಡಿದ ಶ್ರೀಮತಿಯು ಗುರುಪಥ
ನಾಡಿಮತಿ ಸೀತಮ್ಮಳಾ ದಾಸೋಹ ಶುಚಿಪಾಕ ॥ ೧೦೪ ॥

ಉಂಡು ಸಂತೃಪ್ತಿಯೊಳ ಜನಗಣ
ಕಂಡು ಸಂತಸಪಡುತ ಚರಮನ
ಚಂಡು ಹೂವಿನ ಸಮತೆ ವಿಕಸಿತವತ್ತ– ಚನ್ನಿಧಿಯು ॥
ತಂಡ ತಂಡದಿ ಬರುವ ಭಕುತರ
ಬಂಡಿ ಯಾತ್ರೆ ಮಹೋತ್ಸವಾ ಗಜ
ಸೊಂಡೆ ಸಿರಿಗತಿಸುವಿಕೆ ಕಾಣುತಲಿತ್ತವರ – ಪೂಜೆ ॥ ೧೦೫ ॥

ತಿಮ್ಮಸಾನಿಯ ಮಾತೆ ನಿಲಯೊಳ
ಹುಮ್ಮಸದಿ ಮೋಹನನ ಸೇವೆಯೊ
ಳೊಮ್ಮನದಿ ಪದ ಸಿದ್ಧಪಡಿಸಿರಲಾ ಪ್ರಸಾದವನು ॥
ಕಮ್ಮನೆಯ ಸೀತಮ್ಮ ಮಾತೆಯ
ಳೊಮ್ಮನದಿ ಸಾಷ್ಟಾಂಗದೊಳ ಬಿಡ
ದೆಮ್ಮವರು ಸಂತೃಪ್ತಿ– ಸುಮ ವಿಶ್ರಾಂತಿಯೊಳಗಿರಲು ॥ ೧೦೬ ॥

ಬಮ್ಮಕುವರಿಯಾಗಮನ :

ಬಂದಳಾ ಹದಿನಾರು ವಯದೊಳ
ಗಂದು ಶುಭ್ರದ ಬಟ್ಟೆ ಭೂಷಿತ
ಳಂದು ಸನ್ನಿಧಿ ಹೇಳಲಾರಂಭಿಸಿಹುದಾಲಿಸುತ ॥
ಅಂದೆ ನಾನವಳಿಂಗೆ ಆ ಫಳ
ದಂದು ನಿನ್ನುಡಿಯಿರಲದೇನೇ
ಹೊಂದಿರುವ ನನಶಂಕೆಗುತ್ತರ ಬರಲೆನುತರಾಗ ॥ ೧೦೭ ॥

ನಿರುಪಾಧೀಶವಾಣಿ :

ನಿಮ್ಮ ಧಾರ್ಮಿಕ ಪುಸ್ತಕಾವುದು
ನಿಮ್ಮವರು ತೆರೆದಿಟ್ಟ ಚಿತ್ರದಿ
ಕಮ್ಮನೆಯ ಹಲ ಧರ್ಮ ಸಂಸ್ಥಾಪಕರ ಮುಖರೇಖೆ ॥
ನೆಮ್ಮಿ ಮೂಡಿಸಲೇನವರ ನುಡಿ
ನಿಮ್ಮೊಳಾಚರಣಗಳದೆಂತಹು
ದೊಮ್ಮನದಿ ತಿಳಿಸುವಿಕೆಯಾಗಲಿ ಮುದ್ರೆ, ಓಂ ಶಾಂತಿ ॥ ೧೦೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾರತೀಯ ಸುಸಂಸ್ಕೃತಿಯ ಮಹ
ಮೇರು ಧಾರ್ಮಿಕ ಗ್ರಂಥದಲ್ಲಿಯ
ಚಾರು ಮಂತ್ರವಿದೆನ್ನುವಿಕೆ ಪ್ರತ್ಯಕ್ಷ ಮತ್ತೇನು ॥
ಸಾರತರದ ವಿಭೂತಿ ಮಣಿಸರ
ಧಾರಣೇಕಿಲ್ಲಮ್ಮವೆನುವದೆ
ತೋರುತೆನ್ನೊಳ ಶಂಕೆಗುತ್ತರ ಸಿಗಬಹುದೆ – ಹೇಳಿ ॥ ೧೦೯ ॥

ಹಚ್ಚಿದಾ ಪಟದೊಳಗೆ ಸ್ಥಾವರ
ಸ್ವಚ್ಛ ಈಶ್ವರಲಿಂಗ ಮುದ್ರಿತ
ನಿಚ್ಚಳದೊಳಿರುವಂತೆ ನಿಮ್ಮೊಳಗೇಕೆ ಇಲ್ಲಮ್ಮ ॥
ಅಚ್ಚ ಶುದ್ಧ ವಿಭೂತಿ ಲಿಂಗಕೆ
ಮೆಚ್ಚುವಂತಿಹುದದುವೆ ಫಣೆಯೊಳ
ಬಿಚ್ಚಿದಾ ನನೆಯೆಸಳು ಬೆಳಕೇಕಿಲ್ಲ ತಿಳಿಸಮ್ಮ ॥ ೧೧೦ ॥

ಕಾರಣಿಕ ಪುರುಷೋತ್ತಮರ ವಿ
ಸ್ತಾರ್ತ ಸೂತ್ರಾಚರಣದೊಳಗದೆ
ನೇರ ತಂದಿಹುದೆತ್ತ – ಬರಿಯಾಕರ್ಷಣೆನಲೇನು ॥
ಕಾರಣಿಕರವರೆಲ್ಲರನುಭವ
ಧಾರೆ ಪರಿಪಕ್ವತೆಯ ಪ್ರತಿಭಾ
ಹಾರವಿರದುದ ಕಾರಣವ ತೆರೆದಿರಿಸಿರೆನಲಾಗ ॥ ೧೧೧ ॥

ಜ್ಞಾನನಿಧಿ ಮಹತೆದುರು ನಿನ್ನುಡಿ
ಮೇಣದಾವಶ್ಯಕತೆನಿತೆನದ
ಭಾವ ನಿನಗಿರೆ ಲೇಸೆನುವದನಿಸಿಕೆಗಳೇನಿರಲಿ ॥
ಕಾಣುತೆನ್ನುಡಿಗಳಿವು ತಪ್ಪೆನು
ದೇನಿರಲಿ ಕೆಲವಾಂಶ ತಿಳಿವ ನಿ
ದಾನದಾಶೆಯೊಳಾನು ತೆರೆದಿಟ್ಟೆನಲು ಬಳಿಕಾಗ ॥ ೧೧೨ ॥

ಕುವರಿವಾಣಿ :

ಚೆನ್ನುಡಿಯನಿಡುತಿಂತು ನೀವಾ
ಚನ್ನ ನಮ್ಮಾಶ್ರಮಕೆ ಬಂದಿರ
ಲುನ್ನತನುಭಾವಿಗಳು ಉತ್ತರಕೊಡುವರೆನುತೆದ್ದು ॥
ಚೆನ್ನಿಧಿಗೆ ಶರಣೆನದೆ ಸಾಗಿಹು
ದನ್ನೆ ನೋಡುತಲಿದ್ದರಾ ಫಳ
ಚೆನ್ನಿಧಿಯ ಬಳಿ ಕುಳಿತವರು ವಿಸ್ಮಯದಿ ನಿಜವಾಗ ॥ ೧೧೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾತನಾಡುತಲಿವರು – ಕುವರಿಯ
ಮಾತು ಮಾತೇನಿರಲಿ ನಿಮ್ಮೆದು
ರೋತು ಹೇಳಲು ಬಂದುದೇ ವ್ಯವಹಾರ ಶೂನ್ಯತ್ವ ॥
ರೀತಿ ತಾನರಿಸುತಿದೆ ಬಿಡದನು
ಗೀತವಳಗಿಳಿ ಪಾಠದಂತೆ ಸ
ಮೇತವೆನಿಸಿರಲಾಗ ಗಡಿನಾಡಿಗರು ಬರುತಾಗ ॥ ೧೧೪ ॥

ಇಡುತ ಸನ್ನಿಧಿ ಪದಕೆ – ಊರಿಗೆ –
ಬೆಡಗಿನುತ್ಸವದಿಂದ ಮನ್ನಿಸು
ತೊಡಲ ಬಯಕೆಯ ತೆರೆದಿಡುತಲವರೆಲ್ಲರಾದಿನದಿ ॥
ನುಡಿಯೊಳಡಗಿಹುದಿಚ್ಚೆ ತೂಗುತ
ಗಡನೆ ನುಡಿ ತೆರೆದಿಡುತ – ಮಾವಿನ
ಗಿಡದೊಳಾದುದ ಪಾಡಗಾಯಿಯುದುರಿದ ಪರಿ ಗಾತ್ರ ॥ ೧೧೫ ॥

ಸನ್ನಿಧಿವಾಣಿ :

ಬೇಡಪಲ್ಲಕ್ಕಿ ಉತ್ಸವದು ನಾ
ನೋಡುದಕೆ ನಿಮ್ಮೆಡೆಗೆ ಬರುವೆನು –
ಬಾಡದಂಥಹ ಭಕುತಿ ಕಡಲೊಳು ತೇಲಿ ತೇಲುತ್ತ ॥
ಕಾಡದಲೆ ನಿಮ್ಮನ್ನು ನಿಮ್ಮೊಳ
ಮೂಡಿಹುದದಾತ್ಮೋಲೆಗದು ಮನ
ಜೋಡಿಸುತಲಾಗಮನ ನಮದೆನಲಾಗ – ಸೀತಮ್ಮ ॥ ೧೧೬ ॥

ಏನು ಯೆಪ್ಪಾ ಹೊಸತು ಊರಿಗೆ
ಮಾನ ಪಲ್ಲಕ್ಕಿಯುತ್ಸವದ ಸ
ಮ್ಮಾನವಿರೆ ಬರವೆನುವಿಕೆಯ ಕೇಳಿದ್ದೆ ನನ್ನಪ್ಪ ॥
ಸಾನುಮಯ ಹೊಸಪುರಕೆ ಭಾವ ಸ
ದಾನು ಕಾಲಕೆ ನೀವೆ ಬರುವಿಕೆ
ಗೇನೆನಲಿ ಸಂತಸತೆ ಸಂಪಿಗೆಯಂತೆನಿಸಿತೆನಲು ॥ ೧೧೭ ॥

ಚಿನ್ನಿಧಿ ವಾಣಿ :

ಹೌದು ತಾಯೇ ನಿಮ್ಮದನಿಸಿಕೆ
ನಾದ ನಿಜವಾಗಿರಲಿ ತಿಳಿರಿದ
ಹೌದು ಪಾಕಿಸ್ತಾನದೊಳಗುತ್ಸವದು ಯಾರಿಂದ ॥
ಆದರದ ಕರೆಯೆಡೆಗೆ – ಹೈದ್ರಾ
ಬಾದ ಪೇಟೆಯ ಮಧ್ಯ ಸಾಗುತ
ಹೋದುದಕಿಹುದದಾವ ನುಡಿ ಭಕುತರರ ಸಹೃದಯ ॥ ೧೧೮ ॥

ಚಿನ್ನಿಧಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಲ್ಲಕಿಯ ಮೇಲೇನು ಹೇಳಲಿ
ನಿಲ್ಲದಿದುವೆ ನಿರಂತರೋತ್ಸವ
ದಲ್ಲಿರುವ ಸೌಂದರತೆ ಸಮತಿನ್ನೆತ್ತ ಮಹತಾಯಿ ॥
ಪುಲ್ಲಸಿತ ಸದ್ಭಕ್ತಿಯೊಳ ಚಿರ
ಸಲ್ಲಿಹುದೆ ನಿಜಅಂದಣೋತ್ಸವ
ಸಲ್ಲಲಿತವೆಂದಾಗ – ಆನಂದಾಯ್ತುತಾಯಿಗದು ॥ ೧೧೯ ॥

ವಾಚನ :

ಹೀಗೆ ಲೇಸೆನುವಾ ವಿಚಾರದೊಳ
ಗಾಗಿರುತ ದಿನಗಳೆದು ಮರುದಿನ
ಸಾಗುವಾ ಬಗೆ ಸಿದ್ಧತೆಯಗೊಳಿಸುತ್ತ ಗಂಗಯ್ಯ ॥
ಆಗ ಯಾಂತ್ರಿಕಕಾರ ದಾರಿ ಸು
ರಾಗದಿಂ ನೋಡುತ್ತಲಿರುತಿರು
ವಾಗ ಸನ್ನಿಧಿಗೆಂದ ವಾಹನ ಸ್ವಂತ ಬೇಕೆನಲು ॥ ೧೨೦ ॥

ಚಿನ್ನಿಧಿ ವಾಣಿ :

ಕಾರಗಾಡಿ ಖರೀದಿಸುವ ಸುವಿ
ಚಾರ ಹಲರೊಳಗಿಹುದ ಬಲ್ಲೆನು
ಚಾರು ಭಕುತರ ಕೊಡುಗೆಗದು ಬೆಲೆಗೊಡುವ ಮತಿಬೇಕು ॥
ನೇರ ಐಷಾರಾಮ ದಿಶೆಯೊಳ
ಹಾರಿ ಹಾರಾಡುವಿಕೆ ರಹಿತುಪ
ಹಾರವಿರಬೇಕಪ್ಪ ಬಡವಗೆ ಭಾರವಾಗದದು ॥ ೧೨೧ ॥

ಇರವು ಬಡವಗೆ ಭಾರವಾಗದ
ಹರವದಾಗಿರೆ ಹೃದಯ ಹೊನಲೊಳ
ಹಿರಿಮೆ ಹರ್ಷದ ಹೂವು ಬಾಡದೆ ಹಾಡಲದೆ ವರ್ಷಾ ॥
ಹರಿಯದಂಥಹ ಹದುಳದೊಳಗವ
ರಿರಿಸಲದೆ ಕಾಣುತ್ತ ಸಂತಸ
ಸಿರಿಯ ಸಮ ಮತ್ತೇನು ಗಂಗಾಧರ ಸದಾ ವರ್ಷ ॥ ೧೨೨ ॥

ಗುರಿಯು ನಮ್ಮೊಳಗಿರಲದೇ ಪರ
ತರದ ಕಳೆ ಕಲ್ಯಾಣ ಜನಹಿತ
ಸರಣಿ ಸಂಪದ ಮಧು ಸದಾನುಗತಿಯಿರೆ ಲೇಸಪ್ಪ ॥
ಹರಿಸಿ ಬೆವರಿನ ಹನಿಯ ಕಾಣಿಕೆ
ಯಿರಿಸಲದಕೂ ಗೌರವತೆ ಧಾ
ರೆರೆವು ಸರಳಿರೆ ಲೇಸು ಸ್ಥಾನಕೆ ಗೌರವದು ಗಣಕೆ ॥ ೧೨೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತೆನುದನಾಲಿಸುತ ಸೇವೆಯೊ
ಳಾಂತರಿಕ ರಸಭಾವ ಪೂರಿತ
ಕಾಂತಿಯೊಳ ಗಂಗಾಧರನು ನಮಿಸುತ್ತಲಿರುತಿರಲು ||
ಸಂತಸದ ಮಂಟೂರ ಭಕುತರು
ಶಾಂತ ಸುಖದೊಳ ಬೀಳ್ಕೊಡಲು ಗಣ
ರಂತು ಬರಲವರೆಲ್ಲರಿಗೆ ಆಶೀರ್ವದಿಸುತಂದು || ೧೨೪ ||

ಹೊರಟು ಬಾಗಲಕೋಟೆಯೆಡೆ ಬರ
ಬರುತವರ ಜತೆಗಾನು ಬಂದಿರು
ತಿರುತ ಉಗಿಬಂಡಿಡಿದು ಗದಗಕೆ ಹೊರಡುವಾಸಮಯ ||
ಅರಿತು ನನ್ನದೆ ಮಠದವಾದದು
ಮರು ವಿಚಾರಣೆ ನಡೆದಿಹುದಾಲಿಸು
ತರಿಸುತೆನಗದು –ವಾದ ಬೇಸರೆನಿಸಿರೆ ಕಾಶಿಗದು || ೧೨೫ ||

ಬಂದು ಬಿಡುಯೆನುವಾಗ ನನ್ನೆಡೆ
ಸ್ಪಂದಿಸಿದ ಕಾರುಣ್ಯ ಕಂಗಳೊ
ಳಂದು ಕೊನರಿದ ಕರೆಯ ಲಕ್ಷಿಸುತಿರಲು ಉಗಿಬಂಡಿ ||
ಮಂದದಿಂ ಸಾಗುತ್ತಲಾ ಕಡೆ
ಹೊಂದಿಸಿಹುದೆನ್ನೆಡೆಗೆ ನೋಟರ
ವಿಂದದೊಳಗಡಗಿಹುದನಾನೇನೆಂತು ವರ್ಣಿಸಲಿ || ೧೨೬ ||

ಚಿನ್ನಿಧಿಯ ಗಮನತ್ತ ಮಾನಸ
ಕಣ್ಣು ಕವನವ ಕೊನರಿಸುತಲಾ
ತನ್ನ ತಾನದರೊಳಗೆ ಲೀನತೆ ಗೂಡುತಾಡುತ್ತ ||
ಬೆನ್ನುಡಿಗಳೇನಿಡದೆ ಮರಳುತ
ನನ್ನಡೆಯನೇನಾ ವಿಮರ್ಶಿಸು
ತೆನ್ನುಡಿಯ ತೂಗುತ್ತ ಮರಳಿದೆ ಮಠಕೆ ತುಂಬೊಲವ || ೧೨೭ ||

ತೊಟ್ಟಿಲೊಳ ಶಿಶುವ ಮಲಗಿಸುತಲಿ
ಮುಟ್ಟ ಮಾತೆಯನೋಟ ಕಾಯಕ
ದಿಟ್ಟಿಯೆಡೆ ಹೋದಂಥ ದಿಶೆಯೆಡೆನಂದನಿರಿಯಂತೆ ||
ಮೆಟ್ಟ ಮೆಲುಕಾಯ್ವಾಗ್ತ ಮಾನಸ
ದಿಟ್ಟ ಉಲುಹಿನ ತೋಟ ಹಿನ್ನೆಲೆ
ತೊಟ್ಟಿಹುದನನ್ನೆಡೆಯ ಹಿತಬಯಸಿಹುದ ಬೆಳೆಯಂತೆ || ೧೨೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎನಗಿದುವೆ ನಿಜಕಡೆಯ ನೋಟಾ
ಯೆನ್ನನಗಿದುವೆ ನುಡಿ ನಿಲುಮೆ ಭಾವನೆ
ಕನಸಗೂಡಿದಪರಿಯೆ ತೀರದ ಸುಪ್ರಸಾದತೆಯ ॥
ಅನುದಿನದಿ ಮೆಲುಕಿಸುತ ಕೊಡ್ರುವ
ಗಣಿತವಾದಂತೆನಿಸಿ ನಿತ್ಯದೊ
ಲನುಪಥದೊಳವರಿರವ ತಿಳಿಯುತಲಿರವಿದೇ ನೆಲೆಯು ॥ ೧೨೯ ॥

ಅಂತೂ ಬೆಳಗು ೧೬ ಕ್ಕಂ ಪದ ೧೨೯ ಕ್ಕಂ ಒಟ್ಟು ಪದ ೭೯೮ ಕ್ಕಂ ಶಿವಂ.
ಶಿವರಾತ್ರಿ ಸೋಮವಾರ ೮-೩-೨೦೧೬ ಧನಿಷ್ಠಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು - ೧೭

ಭಾವದುಡಿಗೆ

ಸೂಚನೆ :

ಭಾವದುಡಿಗೆಯನರಿಯುತಾ ದಿಶೆ
ಗಾವದೇ ನೆವ ಮುಂದಿಡದೆ ಶಿವ
ಭಾವ ಸವಿಯೊಳ ಕರುಣಿಸಿದ ಸನ್ನಿಧಿಯ ಕೌಶಲತೆ ||

ವಾಚನ : ೧

ನಿತ್ಯ ಅರುಣೋದಯದ ದಿನಚರಿ
ತಥ್ಯದೊಳಗಿರುವಂತೆ ಗತಿ ಸಾ
ಹಿತ್ಯ ಪ್ರಕೃತಿಯ ಪಂಥದಾಲ್ಹಾದಂತೆ ಚನ್ನಿಧಿಯ ||
ಸ್ತುತ್ಯವೆನಿಪಾಚಾರ ತತ್ವಾ
ತಿಥ್ಯ ಸೊಬಗೊಳಲೀನವಾಗು
ತತ್ಯಧಿಕವಾದುದೆ ಸಮಾಜ ಸದಾಹಿತ ಸುಭಾಷೆ || ೧ ||

ಸೋಜಿಗೆನಿಸಿತ್ತಿವರ ಸರಳತೆ
ರಾಜಿಸಿಹುದನೆ ಕಂಡು ಹಲಕೆಲ
ನೈಜ ತಮ್ಮನೆ ತಿದ್ದಿಕೊಂಡಿಹುದಲ್ಲಗಳೆಯದದು ||
ಶ್ರೀ ಜಗದ್ಗುರುಗಳೆನಿಸುತಲಿ ವಿ
ರಾಜಿಸುತ ಗುಡಿಸಲೆಡೆಗೆ ನಿರಿಸ
ರೋಜ ಚಿತ್ತಪಥದಿರಲೆಡೆಗೆ ಹಸು ಕರುವಿನೆಡೆಗಂತೆ || ೨ ||

ಹೀಗೆ ಲೇಸೆನುವಾ ವಿಚಾರಿಗ
ರಾಗಿರುತ ಸಂಚಾರದೊಳ ಬಿಡ
ದಾಗಿ ಕರೆದೆಡೆ ವಿಶ್ರಮಿಸುತಾಶೀರ್ವದಿಸುತಾಂಗ ||
ಬೇಗೆಯೊಳ ಬೆಂದವರ ಬದುಕಿಗೆ
ಜೋಗ ಸಾಂತ್ವನ ಶಾಂತರಸದೊಳ
ಗಾಗಿರಿಸುತಾ ಋತಸರಾಗ ಪರಾಗ – ಪದ್ಮಾಂಗ || ೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಟ್ಟು ಹಾಕದೆ ಪಲ್ಲಕಿಯ – ನಡ
ಕಟ್ಟು ಹಾಕಿದ ರೀತಿಯೆನ್ನದ
ಮಟ್ಟರಿತು ಮೋದಾಂಗದಿ ಮಹಾರಾಷ್ಟ್ರದೊಳಗೆಲ್ಲ॥
ದಿಟ್ಟಿ ಹಾಕಿಹುದೆಡೆಗ ಧಾರ್ಮಿಕ
ಮೆಟ್ಟಲದೊಳಗಿರಿಸುತ ಪಾಲನ –
ಗಟ್ಟಿಗೊಳಿಸುತಲಿರವ ಮುನ್ನಾರಿಲ್ಲಿ ಯಾರಿಂದ ॥ ೪ ॥

ಕೂಲಿಕಾರೆಡೆ ಸರಿಯೆ ಮೇಲ್ಮನೆ
ಲೋಲನಾಗಿರಲೇನವನದೆ ವಿ
ಶಾಲತೆಯ ಮನ ಸಂಸ್ಕೃತಿಯನರಿತತ್ತ ರಸಕಾಂತ ॥
ಶೀಲ ಸೆಲೆಧಾರಾಂಗ ಮತಿಪಥ
ಪಾಲಿಸುತರಿಹರಾರು ಕಾಣೆ ಸ
ಕಾಲರಿತು ಸತ್ಪುಣ್ಯದೊಳಗಿರಿಸುತ್ತ ಚಿರಪಂಥ ॥ ೫ ॥

ತಗಡು ತುಂಬದೆ ತೇಪೆ – ತಟ್ಟೆಯ
ಬಿಗಿದಬೆಡಗಿರಲತ್ತದರಕಡೆ
ಗಗಿದು ನೋಡದೆ ಸಾಗಿ ಪೂಜಾ ಸು ಪ್ರಸಾದವನು ॥
ಮುಗಿಸುತಲ್ಲಿಡಲದನೆ ಕಾಣಿಕೆ
ನಗುತಗ್ರಹಿಸುತಲೊಪ್ಪುವಂತೆಯೆ
ನಗದು ಹೆಚ್ಚಿಗೆ ಕಂಡರದ ಮರಳಿಸುತ ಸುಪ್ರಜ್ಞ ॥ ೬ ॥

ಹೀಗಿರುವರಿವರಿರವರಿತ ಬಡ
ಭಾಗಿಗಳು ನಿರಭಯ ನಿಮಂತ್ರಣ
ರಾಗಿಯಾದುದೆ ಲೋಭಿಗಾಶ್ಚರ್ಯವಿದು ನಿಜಸನದು ॥
ತೂಗುತುಯ್ಯಾಲೆಯ ಪಯೋಧರ
ಬೀಗುವಿಕೆ ನಿಶ್ಚಬ್ಧದಂತಾ
ದ್ದಾಗು ಹೋಗಿನ ರೀತಿ ಸಕಲೆಡೆಗಾದುದೇ ಖ್ಯಾತಿ ॥ ೭ ॥

ಈ ಮಹಾರಾಷ್ಟ್ರದೊಳಗಿರುತಿಹು
ದಾ ಮನುಜರರು ಯೋಚಿಸುತಿಹುದ
ದಾ ಮಹಾಸದ್ಭಕ್ತ ನಾಶಿಕ ಜಿಲ್ಹೆಯವನೋರ್ವ ॥
ನೇಮದಿಂದಿರುತಿರುತಲವನೊಳ
ರಾಮಣೀಯಕವಿರತಿ ಮೂಡುತ
ಸೀಮಿತೆನದುದದಾಸ್ತಿ ನೀರಾವರಿಯ – ಕನಕಾದಿ ॥ ೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಡವರಿಗೆ ಹಂಚುತ್ತ ಸತಿಜತೆ
ನಡೆದನಾ ಖಂಡಾಳ ಘಾಟದೊ
ಳಿಡೆಯಪುರ ತಳೆಗಾಂವದೊಳಗೆ ಕುಟೀರ ರಚಿಸುತ್ತ ॥ [೧]
ಪಡೆದ ವಸ್ತುವಿನಿಂದ ಸಿದ್ಧತೆ
ಸೊಡರಿನೊಳಗಿರುತಲ್ಲಿವರಪರಿ
ನಡೆಯು ವಾನಪ್ರಸ್ತವಾಶ್ರಮದಂತಿವರ ಚಿತ್ತ ॥ ೯ ॥

ಸತಿಯಜತೆಗದು ಬೆರಣಿ ಕೂಡಿಸು
ತತಿಶಯದೊಳೊಣಗಿಸುತ ಪುರದೊಳ
ಗತಿಸುತದ ಮಾರಾಟ ಕಾಯಕಗೂಡುತದರೊಳಗೆ ॥
ಖುತದಿ ಜೀವನ ಸಾಗಿಸುತಲಿರು
ತತಿಯೊಳಿರೆ ಯೋಚಿಸುತ ಮನದೊಳ
ದಿತಿ ಮನೋಹರ ಚಿನ್ನಿಧಿಗದು ನಿಮಂತ್ರಿಣಿಟ್ಟಂತೆ ॥ ೧೦ ॥

ಪರಮ ಪೂಜ್ಯರು ತಿಳಿಸಿದಾಮಿತಿ
ಬರುತವರದಾಶ್ರಮಕೆ ಸೇವಕ
ಸರಿಯೆ ಸಂತಸದೊಳಗೆ ಆ ದಿನ ನೀಲಕಂಠಯ್ಯ ॥
ಚರಣ ಲಕ್ಷಿತನಿಲ್ಲಿ ಕಾಣುತ
ಗುರುಗಳಿಗೆ ಪ್ರತ್ಯೇಕವಾಸಕೆ
ಹಿರಿಮೆನಿಪ ಸಿದ್ಧತೆಯಗೊಳಿಸಿಹುದೆಲ್ಲ ಕಾಣುತ್ತ ॥ ೧೧ ॥

ಹರುಷದೊಳ ಪೂಜಾಪ್ರಸಾದವ
ನೆರಳು ಭಾವಿತನಾಗಿ ಸಿದ್ಧತೆ
ಯಿರಿಸಿದಂತೆಯೆ ಸನ್ನಿಧಿಯು ಮುಗಿಸುತ್ತ ರೀತಿಯಲಿ ॥
ಚರಣಲಕ್ಷಿತಲಿವರು ಭಕ್ತಿಯ
ಭರತಿಯೊಳಗಡಗಿಹುದ ಗುರುಪದ
ದಿರುವದುತ್ಕಟ ತವಕಗಾಣುತ ಸಂಜೆ ಸೊಬಗಿನಲಿ ॥ ೧೨ ॥

ಅಪ್ಪಗುರುವರನಾಗಮನವಾ
ಗೊಪ್ಪಿಹುದ ತಿಳಿಯುತ್ತ ನೆರೆಹೊರೆ
ಒಪ್ಪಿದಂತವರೆಲ್ಲ ದರ್ಶನ ಪಡೆವದಾಶೆಯಲಿ ॥
ಅಪ್ಪನೆಡೆ ಬಂಧಿರುವ ಸಮಯದೊ
ಳೊಪ್ಪಿಹುದರಿವರಿಂಗೆ ಹಿತನುಡಿ
ಯೊಪ್ಪುವಂತೆಯೆ ಚಿನ್ನಿಧಿಯ ಸದ್ಬೋಧವಾರಂಭ ॥ ೧೩ ॥

---

೧. ಎನ್.ಸಿ. ಕೆಂಡದಮಠ ಮು. ಸಿಡೆನೂರ (ಬ್ಯಾಡಗಿ) ಪತ್ರ ಮಾಹಿತಿ ೨೦–೨–೨೦೧೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೊಸತು ಪುರಕದು ಬರುವದಾದರೆ
ಕುಶಲ ಪಲ್ಲಕ್ಕಿ ಉತ್ಸವೆನುವಾ
ಘಸಲಗಾಳನುಸರಿಸುತಾಗಮಿಸಿಹುದ ಪೂಜ್ಯರರು ॥
ಹಸಿದಶಿಶುಯೆಡೆ ಬರುವಮಾತೆಯ
ಉಸಿರದಂತಾತುರದಭಿರುಚಿಯ
ಭಸಿತರೆಡೆನಯನಿಡುವ – ಕಂದನೆಡೆಗಿಡುವಾತುರದಿ ॥ ೧೪ ॥

ಚಿನ್ನಿಧಿ ವಾಣಿ :

ಸಂತಸಾಯಿತು ನಿಮ್ಮಕಾಣುತ
ಸಂತತುಳಿಯಿತು ಮುಂದೆ ಮುಂದಿನ
ಸಂತತಿಗೆ ಪರಿಪಾಠಗಲಿಸುವ ಸಹಜ ನಿಮ್ಮಿರವು ॥
ಸಂತೆಯೊಳಗಾದಂಥ ವೈರಾ
ಗೆಂತೆನೆದ ನಿಜದಿರವನರಿಯುತ
ಲಿಂತು ಬರವಾಯ್ತೆನ್ನ ಸುವಿಚಾರಾಂಗವೀ ಭಾಗ್ಯ ॥ ೧೫ ॥

ನೋಡಿ ನೋಡುತಲೆನ್ನೊಳಗೆ ನುಡಿ
ಜೋಡನಾತುರ ಸುಮ್ಮನಯೆ ಘಳ
ದೂಡುವಿಕೆಗಾಗದಯೆ ಧಾರೆರೆವೆ ಶಿಶುಯೆಡೆ ಮಾತೆ ॥
ನೋಡುತಾನಂದದೊಳ ಜೋಗುಳ
ಜೋಡಿಸುವ ಪರಿಯಿಂದಹುದವೀ
ಬಾಡದಿಹುದಾತ್ಮಾವಲೋಕನದಿಶೆಯ ಮಣಿಯಿಂತು ॥ ೧೬ ॥

ಸುಮ್ಮಗಳೆಯದು ಹೊತ್ತುಮುತ್ತವ
ಹಮ್ಮುದೊಳಗದು ದಿನದ ಮಣಿಯೊಳ
ತಮ್ಮತಮ್ಮನುಗೂಡಿ ಹರಟೆಯೊಳಾಗುತಾರಿರಲಿ ॥
ಇಮ್ಮನವನಳಿಯುತ್ತವೇಳೆಯೊ
ಳೊಮ್ಮನದಿ ಶಿವರಾತ್ರಿ ಮಾಡುತ
ಕಮ್ಮನೆಯ ಕಂಗಳಡಗಿಸಿ ಕರದಿಷ್ಟಕಳೆಗಂಡು ॥ ೧೭ ॥

ಕಾಂತಿಯೊಳ ಮನನಿಲಿಸಿದಂಥಹ
ಶಾಂತಿಯೊಳಗಾಗುತ್ತಲನುದಿನ
ದಿಂತು ವೇಳೆಯದೊಳಗಿದೇ ಶಿವ ಚಿತ್ತದೊಳಗಾಗಿ ॥
ಸಂತತಿರಲೆನುವಂಥ ಮಹತೆ ನಿ
ತಾಂತದಿರುವಂಥವರ ಸೂಳ್ನುಡಿ
ಅಂತರಾಳದೊಳಿಳಿದುಸಾಗುವದಿದುವೆ ಸೊಗಸಾಗಿ ॥ ೧೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಷ್ಟುನಡೆದರೆ ಸಾಕೆನದು ನಿಜ
ದಿಷ್ಟ ಸೂತ್ರೊಳಗುಳಿದು ಪಾಠ ಯ
ಥೈಷ್ಟದೊಳಗಾಗುತ್ತಲಿರೆ ನಾವೆಯೊಳ ಚುಕ್ಕಾಣಿ॥
ಸ್ಪಷ್ಟಲಕ್ಷಿತ ನಕ್ಷೆತಲುಪುವ
ನಿಷ್ಠೆಯೊಳಗಾದವರ ಜೀವನ
ದೃಷ್ಟಿ ನಮ್ಮಿರವದೊಳಗದೆ ಮೊಳಕೊಡೆಯಲಾ ಶ್ರೇಣಿ ॥ ೧೯ ॥

ಏನಿದೇನೀ ತ್ಯಾಗ ಭೋಗದೊ
ಳೇನಿದೇನಿದೊ ಸದೃಸಿಕತೆಯೊ
ಳೇನಿದೇನು ಸಮರ್ಪಣೆಯ ಸದ್ಭಾವದನು ಜೀವ ॥
ಏನಿದೇನಿದೆಮಗಿದು ಹಿಂದಣ
ಜಾಣರಿಂದಾದಂಥುದಾಚರ
ಣೇನಿದುವೆ ನಯನೆದುರು ವಾನಪ್ರಸ್ಥದಾ ನೆನಹು ॥ ೨೦ ॥

ಅಂದವರದಾಚರಣೆ ಗೂಡಿಹು
ದಂದತೆ ಮಹಾಭಾರತದ ಚರಿ
ತಂದದರ ಕೊನೆಗಿದರದೇ ಸೂಚನವ ನೀಡುತಿದೆ ॥
ನಂದ ಮೈತ್ರಾ ಯಾಜ್ಞವಲ್ಕ್ಯರು
ಹೊಂದಿಹುದಲಾಧ್ಯಾತ್ಮ ತತ್ವಾ
ನಂದ ನಿಮ್ಮೊಳಕಂಡೆ ಸಂತಸವೆಮಗೆ ಗಂಧಮಿಗೆ ॥ ೨೧ ॥

ಒಂದು ಪರಿನೋಡಿದರೆ ನಿಮ್ಮೊಳ
ಗಂದವರದಾಚರಣ ಮೆಲುಕಿಸ
ಲಂದಿದರ ಬಗೆ ವೀರಶೈವಾಚಾರದೊಳಗಿರದ ॥
ಸಿಂಧು ಸರಣಿಯೊಳಿಂದು ಸೂತ್ರದೆ
ಹೊಂದಿಕೊಂಡಿರಲೇನು ಮಾನಸ
ಗಂಧಲಿಂಗಾಚಾರ ಸಂತಸ ಗಟ್ಟಿಗೊಂಡಿಹುದ ॥ ೨೨ ॥

ತನ್ನ ಧರ್ಮದೊಳಿದ್ದುತರಳುವ
ದೆನ್ನಿರಿದಕೇ ಬದುಕು ಬದನಿಕೆ
ಯೆನ್ನುವಂತೆ ವಿಶೇಷತೆಯ ಸದ್ಧರ್ಮ ಸೊಬಗಿದುವೆ ।
ಮುನ್ನಿನವರೊಳಗಿರುವ ನಿಲವೊಳ
ಚನ್ನಡೆಯದೊಳಿರುತಿರುತುರೆ ಬದಿ
ಚನ್ನಿಗರಸಹಿತಿದರೆಡೆಗೆ ಸಳೆಯುವಿಕೆ ಮಹಮರ್ಮ ॥ ೨೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಲಿಯುವಂತಿರಬೇಕು ನಿರ್ಮಲ
ದಳವಡಿಸಿಕೊಂಡಿರುವ ತಥ್ಯದೊ
ಳಿಳಿಯುತದರದೆ ರಮ್ಯದೊಳಗಾಗುತ್ತ ಸೌಮ್ಯಾದಿ ॥
ಲಲಿತ ಸಾತ್ವಿಕ ಗುಣದೊಳಾಗು
ತ್ತಳಿಯುತಳಿಯದ ಕಾಯಕದಿ ತಾ
ನುಳಿಯುತುಳಿಸುವದಾಗಿರಲದೆ ಸಮಾಜ ಹಿತಹಾದಿ ॥ ೨೪ ॥

ಸಾರ ಸಂಸ್ಕೃತಿ ಶರಣ ಸತ್ಕೃತಿ
ಮೇರು ಜೀವನವಾಸದಾಸ್ಮೃತಿ
ಭೂರಿಯಳವಡಿಸುತ್ತಲಿರವೇ ತಿಳಿವುದಾ ಸ್ಮೃತಿಯ ॥
ಸೇರಿ ಸುಖದಿಹೆನೆಂದರು ನಿರಾ
ಭಾರಿಯಾಗಿಹುದಷ್ಟೇ ಸರಳಂ
ದಾರು ಹೇಳಿಹರಪ್ಪ ಬಿಟ್ಟಿಹೆನೆಂಬ್ಬೆಣಿಕೆ ಕಠಿಣ ॥ ೨೫ ॥

ಬಿಚ್ಚಿ ಬಿಚ್ಚಿಹೆನೆಂಬೆಣಿಕೆ ನುಡಿ
ಗಟ್ಟಿಗೊಳಿಸುವದೆಷ್ಟು ಸರಿಯೋ
ಕಟ್ಟೆಯಂತಹ ಮೌನ ಮಾನಸಗೊಳ್ಳಲಿದೆ ಪ್ರೇಯ ॥
ಬಿಟ್ಟು ಹೋಗದದೇನು ಮನಮತಿ
ಗಟ್ಟಿಗೊಂಡಿರಲೆಂಥ ಮಾತಿದು
ಪಟ್ಟಿಯೊಳಗಡಗಿಹುದ ಗಿಟಕದ ದಿಟ್ಟಿಸುಶ್ರೇಯ ॥ ೨೬ ॥

ಹಿಂದೆ ರಾಜ್ಯಾದಿಗಳ ತೊರೆಯು
ತ್ತಂದು ಹೋದಾ ಪತಿಯ ಕಡೆ ತಾ
ನಂದು ಯೌಗಿಕ ಶಕ್ತಿಯೊಳ ಮರುರೂಪ ಧರಿಸುತ್ತ ॥
ಹಿಂದಿನದೆ ಹೆಣೆ ಹೆಣೆದುಕೊಂಡಿಹು
ದಂದ ಬಿಟ್ಟೆನುತೊಲವ ಗುರಿ ನುಡಿ
ಅಂದತೆಯ ಬಿಡಿಸಿಹುದ ಶಾಸ್ತ್ರ ವಿಚಾರದೆ ತರಂಗ ॥ ೨೭ ॥

ಒಂದು ಪರಿನೋಡಿದರೆ ದಿಟ ಹೊರ
ಬಂದವರು ದಾಂಪತ್ಯದೊಳಗಿರು
ತಂದು ದನಕನಕಾದಿ ತೊರೆಯುತ ತಲುಪಿಕಲ್ಯಾಣ ॥
ಸಿಂಧು ಸಂಪದ ಶರಣ ಮಂಟಪ
ದಂದವರ ತೌಲನಿಕ ತತ್ವಥ
ದಂದತೆಯ ನೋಡಿರಲವರದೇ ಹೆಜ್ಜೆ ಹೊಸಜ್ಜೆ ॥ ೨೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೋಳಿಗೆಯ ಮಾರಯ್ಯ ಆಯ್ದಕ್ಕಿ
ಕಾಳದೊಳಗಾತಯ್ಯ ಚರಣ ಚಿ
ದಾಳಗೊಂಡಿಹ ತತ್ವನಿಷ್ಠಾಪಾರ ನಡೆನೋಟ ||
ನೀಳಗೊಂಡಿಹುದೆಡೆಯವರ ಸತಿ
ಶೀಲತೆಯ ಚಾರಿತ್ರ್ಯ ಚಂಪಾ
ಮೇಳಸೌರಭದಂತೆನಿಸುವದಿವರದೆ ಜೀವಾಳ || ೨೯ ||

ಅವರ ಕಾಯಕ ಹಾಗೆ ಹೂವಿನ
ಹವನ ಹರ್ಷದ ಸೋಗೆ ತತ್ವನ
ತವಕತೆಯದಾಗಿಹುದದೇ ಇತಿಹಾಸ ಸಾಕ್ಷಿಯಿರೆ ||
ಸ್ತವನದೊಳಗೀ ನಿಮ್ಮ ಭಾವನ
ಗವನ ದುಡಿಮೆಯು ಕುಳ್ಳವನುದಿನ
ಸವಿಧಿಯೊಳ ಸಂಗ್ರಹಿಸುತೀ ಘನ ಸುಮನ ಸಮತಾರೆ || ೩೦ ||

ಹೊಸತಿದುವೆ ನೋಡಲ್ಕೆ ನೆರೆಹೊರೆ
ಹಸನವೀ ಕರಚರಣದಾ ತೊರೆ
ಉಸಿರದಾರಿಗು ಪೀಡೆಯಾಗದುದಾರ್ಥದೆ ಸ ಸಾರೆ ||
ಕುಸುಮ ಗಿಡದಿಂ ತಾನೆ ಉದುರಿರ
ಲೊಸೆದು ಗ್ರಹಿಸುವ ಬಾಲೆ ಭಾವನೆ
ಬಸಿರ ನಿರ್ಮಲನಾಲೆ ಸೇವನೆ ಕಮಲ ಕಾಸಾರೆ || ೩೧ ||

ಸಲ್ಲುತರಳಿದ ಮೌಕ್ತಿಕದ ಸಮ
ತಿಲ್ಲಿವರ ಜೋಡನೆಯ ಭಾವನೆ
ಬಲ್ಲತನವಿದು ಹಣತೆಯೊಳ ಜೋಡಾದುದೆಳೆಯಿಲ್ಲಿ ||
ಅಲ್ಲಿಹುದ ಹಲಪರಿಯ ಕಾಯಕ
ದಿಲ್ಲಿವರ ದೈನಂದಿನದ ಚರ
ಣಿಲ್ಲಿ ಕಿಂತುರೆ ಪರ್ವದೀರ್ವರ ದುಡಿಮೆಯೊಡಲಲ್ಲಿ || ೩೨ ||

ಹರುಷ ಹೊಂಬಿಸಿಲೋರೆಯೆನ್ನದು
ದರಳೆ ಶುಭ್ರತೆ ಸಾರೆ ಭರಿತಾ
ಕರುಷಣದ ಸರಸಿರುಹ ಮಂದಮುದಾರವಿಂದ ಮರೆ ||
ಚರಣದೊಳ ಪ್ರತಿಬಿಂಬಿಸಿಹುದೆಳೆ
ಕಿರಣ ತರಣಿಯ ತೊಳೆಗಳಂತಿಹು
ದರಳು ತಡಗಿಹ ಥಳಕಿವರೊಳಾಮ್ರ ಫಲ ಮಧುರಪರೆ || ೩೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಲ್ಲಿನೆನಪಾಗುತಿದೆ ಜಂಗಮ
ಸಲ್ಲಲಿತ ಅರ್ಥಣೇಶರಾರ್ಚನ
ಪಲ್ಲವದು ಗಿಡದಿಂದುರಿಹುದಳ ಬಿಲ್ವದುಪಯೋಗ ॥
ನಿಲ್ಲದಲೆ ಮೇಳವಿಸಿಕೊಳ್ಳುತ
ಪಲ್ಲವೆಳೆ ರಸಭಾವ ಧೋರಣೆ
ಯೆಲ್ಲೆಡೆಗೆ ಈ ಲೀಲೆ ಜಟಿಲದು – ಮನನಿಸುವಮಾತು ॥ ೩೪ ॥

ಯಾರಿಗೆನಿತೂ ಬೇಸರೆನಿಸದ
ದಾರಿಗೂ ಕೆಡುಕೆನಿಸದಂಥಹ
ದಾರಿ ಹುಡುಕಿದ ದಂಪತೀರ್ವರರ ಜಾಣ್ಮೆ ಬಹುಮೇಲ್ಮೆ ॥
ದಾರಿ ತಿಳಿದವ ನಡೆದು – ವಾಹನ
ನೇರ ಸಹಕಾರದಲಿ – ಗಮನ ಸ
ದಾರ ಎಂದದು ತಲುಪುತಾ ಪುರದೆಡೆಗೆ ಸಹಜವದು ॥ ೩೫ ॥

ಹಾಗೆಯಿವರೊಳಗಿಲ್ಲ ಸತಿಪತಿ
ಭಾಗರಹಿತಾ ಒಮ್ಮತಾತ್ಮ ಪ
ರಾಗದಿಂದೊಡಗೂಡಿದಂಥಹುದೆನುವದೀ ಪಾಠ ॥
ಭಾಗದವರಿಗಿದೆಲ್ಲ ತಿಳಿವಂ
ತಾಗುವಂತಿಹುದೆನ್ನಿರೀ ವೃತ
ರಾಗ ಕಾಯಕನಿಷ್ಠೆ ಸೂತ್ರ ಸುಬದ್ಧನಿಪ ನೋಟ ॥ ೩೬ ॥

ಆವ ಕಾಯಕ ಮಾಡಲೇನವ
ದಾವ ದೇಶದೊಳಿರಲಿ ಆಲಸ
ದಾವದೇನವ ಹೇಳದಯೆ ನಿಜನಿಷ್ಠೆಯೊಳಗಾಗಿ ॥
ಭಾವ ಪೂರಿತ ತೊಡಗಲವಗಾ
ವಾವ ತೊಡಕದು ಬಂದರದರೆಡೆ
ಭಾವ ಬಲಿಸದೆ ತೊಡುಗುತನವಿದೆ ಜೀವನಕೆ ಯೋಗ್ಯ ॥ ೩೭ ॥

ನೋಡಲಿದು ಕಡ್ಡಾಯ ತಿಳಿಯು
ತ್ತಾಡುವಿಕೆಯೊಳ ಲಿಂಗ ಪೂಜಾ
ನಾಡೆ ಅಡಗಿಹುದೆಂಬುದರಿಯಿರಿ – ತಾರತಮ್ಯತೆಯ ॥
ಹಾಡಯೆನಿತಿರದಾ ಸಮಾನತೆ
ಗಾಡಿಯೊಳಗಿರಲೆನುವ ತಾತ್ವಿಕ
ನಾಡಿಯೊಳಗಾದವಗೆ ವಿಷಮತೆ ದೂರ ತಿಳಿ – ಮಾನ್ಯ ॥ ೩೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸತ್ಯ ಶುದ್ಧತೆ ದುಡಿಮೆಯಿರಲಿದು
ನಿತ್ಯ ತನ್ಮಯವಾ ನಿರಂತರ
ಪಥ್ಯಪಥದೊಳಡಗಿಹುದ ದಾಸೋಹ ಮನಮುಟ್ಟಿ ||
ಭೃತ್ಯ ಭಾವಾಸಕ್ತನಾಗುತ
ಗತ್ಯವೆಂಬುದನರಿತಲೆಡೆಗಹು
ದತ್ಯಧಿಕಮಾನಂದ ಗಂಧ ಸುನಂದ ಸಂಬಂಧ || ೩೯ ||

ದುಡಿತದೊಳಗಾರ್ಪಿತಿರಲಿದುವೇ
ಮೃಡನೊಲುಮೆ ಸಾರ್ಥಕತೆ ಸುಂದರ
ಪಡೆಯದಿಹದೆಂತಯ್ಯ ನಿಸ್ಪೃಹವಿರಲೆಡೆಗೆ ಶಿವಂ ||
ನಡೆಯಿದುವೆ ತಾನಾವ ಮತದಿರ
ಲಡುಗೆಗದು ಬೇಕಲ್ಲ ಧಾನ್ಯವ
ತೊಡಗಿಸಲಿದೇ ಜೀವಕಾಧಾರೆಂದರಾ ಗಣರು || ೪೦ ||

ಬಟ್ಟೆಯೊಳ ಬಿದ್ದಿರುವ ಮಿಸುನಿಯ
ಮುಟ್ಟುತೆತ್ತದ ಬುದ್ದಿ ಬರುವಿಕೆ
ಬಟ್ಟೆ ಗೆಟ್ಟವರಿಂದಸಾಧ್ಯದು ನಿರ್ಮಲಗೆ ವೇಧ್ಯ ||
ನೆಟ್ಟ ಗುಡ್ಡನ್ನೆಲ್ಲ ಚಿನ್ನದ
ಘಟ್ಟಿಯೆಡೆ ಭೂಪತಿಯ ನೋಟದು
ಗುಟ್ಟರಿತನವನೆದುರದೆಲ್ಲವು ಹೆಂಟೆ ಹೂವೆನ್ನಿ || ೪೧ ||

ಸಕಲರಿಗೆ ಸಮಬಾಳು ತತ್ವಲ
ಸಕಲರಿಗೆ ಸಮಪಾಲು ಇಲ್ಲಿಹು
ದಖಿಲರಿಗೆ ತಿಳಿಯದದು ಕಾರಣವಲ್ಲಿಹುದು ಅಹಮು ||
ಸಕುಶಲೆನಿಪಾ ಸರ್ವಕಾಲಿಕ
ಮುಕುರದಂತಿಹುದೆಡೆಗದಾದವ
ಬಕುಲದಂತೆನಿಸುವಿಕೆಯಾಗಲಿ ಸಕಲರಿಗೆ ಸುರಮ || ೪೨ ||

ನೋಡಲೆಡೆಗದು ಹೆಣ್ಣು ಗಂಡೆಂ
ಬಾಡುವಿಕೆ ಭೇದಾಂಗ ತುರಿಕೆಯ
ಜೇಡು ನೋಡವರತ್ತ ಲಿಂಗಾಯತರೊಳಗದಿಲ್ಲ ||
ಬಾಡದಂಥ ಸಮಾನತೆಯ ನುಡಿ
ನಾಡಿಗತವಿರುವಂತೆ ಸಹಮತಿ
ಕೂಡುತಾಡುವ ಹಕ್ಕು ನೋಡುತಲಿಲ್ಲಿ ಸಂತೋಷ || ೪೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೆಣ್ಣು ಪುರುಷನ ಒಡವೆಯೆನ್ನುವ
ಮುನ್ನುಡಿಗಳವರಲ್ಲಿಹುದ ಸಂ
ಪನ್ನತೆಯ ಸಮಯೋಗ ಕಾಣುವ ಹೆಮ್ಮೆ ನೋಡಿಲ್ಲಿ॥
ತಣ್ಣಗಿಹ ಮನಸಾಳ ಗುಡಿಸಲ
ಕಣ್ಣೊಳಗದೇ ಸುಪ್ರಶಾಂತತೆ
ಸನ್ನಿಹಿತ ಕಾಣುತ್ತ ಶಿವನಿಗು ತೋಷ ಹಂಸರಿಗೆ ॥ ೪೪ ॥

ನಾಡೆ ತಿಳಿದೆನು ಪರರೆಡೆಗೆ ನಿರಿ
ಯೋಡಿಸುತಲೀದಿಶೆಗೆ ಬಂದಿಹ
ಮೋಡಿಯಾಯ್ತೆನ್ನೆನ್ನೆ ಅರಿವಿನ ಪಥದೊಳಾಗುತ್ತ॥
ಜೋಡಿ ನಯನಗಳಂತೆಯೇ ನೀ
ವಾಡುವಿಕೆ ಕಾಣುತ್ತ ಸಂತಸ
ಕೋಡಿಯೊಳಗಾದೆನುತ ಶುಭ ಹಾರೈಸಿ ಮುಗಿಸಲ್ಕೆ ॥ ೪೫ ॥

ವಾಚನ :

ಆಲಿಸುತರಿವರಾದರಾ ಬಿಡ
ದಾಲಿಸುತ ಸದ್ಭಕ್ತ ದಂಪತಿ
ಬಾಲೆ ಸಹೃದಯಾಂತರಿಕ ಸಂತಸತೆ ಪಡಲಿತ್ತ॥
ಮೇಲೆ ನುಡಿಯಾಲಿಸಲು ಬಂದವ
ರೋಲೆಯಾತುರದೊಳಗೆ ಶೋಭಾ
ಶಾಲೆಯೆನಿಸಿತವಗೆ ಮರಾಠಿಯೊಳಿಹುದವೀ ಬೋಧೆ ॥ ೪೬ ॥

ಚಿನ್ನಿಧಿಯ ನುಡಿಗುಚ್ಚವದೆ ಸಂ
ಪನ್ನ ಕತ್ತಲೆಯೊಳಗೆ ದೀವಟಿ
ಗೆನ್ನುವಂತಹ ಬೋಧ ಕರುಳಿನ ಕೋಶವೆನಿಸಿಹುದು॥
ಚನ್ನದಿಂದಾಲಿಸಿದ ಸುಖದೊಳ
ಗೆನ್ನಿರೆಲ್ಲರರಿರವ ಸವಿಯೊಳ
ಗುನ್ನತನುಭವ ಉಂಡು ಜೀವನ ದೂರದರ್ಶಿತ್ವ ॥ ೪೭ ॥

ಹೊಂಬೆಳಗ ಸೂಚನೆಯ ಸಂಕೇ
ತೆಂಬ ಪರಿಸುಮಜಾಳಿ ನಗುನಗು
ತಿಂಬುತಿಂಬಾದಂತೆ ಮಂದಸ್ಮಿತದ ಮಗುವಂತೆ॥
ಹಂಬಲದ ಹೊನಲೊಳಗೆ ಕರಿ ಬಿಳಿ
ಯಂಬುಜಾ ಖುಷಿಯಂತೆ ಬಾಲೆಯು
ತಂಬಿಗೆಯೊಳಗೆ ತನ್ನ ಬಿಂಬವ ಕಂಡುತಣಿದಂತೆ ॥ ೪೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಳಗೊಳಗೆ ರಸಗನಸು ಕಾಣುತ
ಲೊಳಗೊಳ ಹೊಸ ನನಸದೊಳಾಗುತ
ಲೊಳ ಹೊರಗದೇ ಸಪ್ರತಿ ಮನೋಕೋಶದಿಂಬಾಗಿ ॥
ಹೊಳೆಯುತವರೊಳಹೊರಗದೇ ದಳ
ಪುಳಕಿಸುತಲಿರುವಿಕೆಯ ಸನ್ನಿಧಿ
ತಿಳಿಮೆಗದು ಬಂದಂತೆಯಿನ್ನಾರಿಗದು ನಾ ಹೇಳೆ ॥ ೪೯ ॥

ಎಲ್ಲೆಡೆ ಸಮಸ್ಯೆಗಳದಾಗರ
ನಿಲ್ಲದಂತಾಗಿರಿಸುವಂಥಹ
ದಲ್ಲಿ ಇಲ್ಲೆನದಂತೆ ಸಕಲೆಡೆಗದರದೇ ಕೊರೆತ ॥
ಪಲ್ಲವಿಯೊಳಡಗಿಹುದ ಸಾರ್ಥಕ
ಪಲ್ಲವಿಸುವಂಥಹುದೇ ಬದುಕಿನ
ಬೆಲ್ಲ ಸಮ ಸಂದೇಶವಾಗಿತ್ತೆಲ್ಲರಿಗೆ ಆಗ ॥ ೫೦ ॥

ಕೋಶ ಕಸವಿಸಿ ಕಳೆದ ಖುಷಿಯಾ
ಕಾಶದಂತರಿಸಿರುವದೀ ಅವ
ಕಾಶ ಪಡೆದಂಥವರೆ ತಮ್ಮನೇ ತಾವೇ ಧನ್ಯೆನುತೆ ॥
ಭಾಷೆ ಭಸಿತನುಗಂಧವಿದೆ ಸಂ
ತೋಷದಾ ಸಂಬಂಧಗೊಳಿಸಿದ
ಈಶನಿಗೆ ಶರಣೆನುತ ಸಾಗಿರಲವರಿವರು ಮನೆಗೆ ॥ ೫೧ ॥

ಹೀಗೆ ಬೋಧಾಲಿಸಿದ ದಂಪತಿ
ಯೋಗದೊಳಕಳೆಯುತ್ತ ಗುರುಪದ
ಭಾಗಿಯಾಗುತ ಮುಂದೆರಡು ದಿನಗಳೆದ ಬಳಿಕಿತ್ತ॥
ಸಾಗಿದರೆ ಸದ್ಭಕ್ತಿ ಗ್ರಹಿಸುತ
ಹಾಗೆ ಕಾಶಿಯಡೆಗದು ಭಾವನು
ವಾಗಿ ನೆನೆಯುತಲಿವರ ಭಕ್ತಿಯೊಳಿರವಭಾಗ್ಯವನು ॥ ೫೨ ॥

ದುಡಿವ ಭಾವನೆಸವಿಯ ಸುಮ್ಮುದ
ನಡೆವ ಗುರುಕುಲ ಬಗ್ಗೆ ನೋಡುತ
ಬಿಡದೆ ಬರುವಾ ಭಕ್ತರಿಗೆ ದಾಸೋಹ ಬಿಡದಿತ್ತ॥
ಇಡುತ ಯೋಗಕ್ಷೇಮದಿರುತಿರೆ
ನಡೆದ ಪೀಠದ ರೀತಿ ಪದ್ಧತಿ
ಯೊಡಲದಿಹಬಗೆ ಆಗು ಹೋಗಿಹುದೆಲ್ಲವನುದಿನದಿ ॥ ೫೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಲವ ಚರ್ಚಿಸುತಿತ್ತಲಿರೆ ಭಾ
ವೊಲದಿ ಮಂಗಳವೇಢೆ ಭಕ್ತನು
ಸಲಿಸುತಿಹುದಿಪ್ಪತ್ತುಸಾವಿರ ಹಣವ ಪ್ರತಿಮಾಸ ॥
ತಿಳಿದು ತಿಳಿಸುತ್ತವಗೆ ನಾವೇ
ಸುಳಿಯುತಲ್ಲಿಗೆ ಬಂದು ದಾನವ
ನೊಲುಮೆಯಿಂಗ್ರಹಿಸುವದೆನುತ ತಲುಪುತ್ತವೇಢೆಗದು ॥ ೫೪ ॥

ಮಂಗಳವೇಢೆಯಲ್ಲಿ ಚಿನ್ನಿಧಿ :

ಮುಗಿಸಿ ದೈನಂದಿನದ ಸತ್ಕ್ರಿಯೆ
ನಿಗದಿಡಿದು ಬಳಿಕಾಗ ಭಕ್ತನ
ಬಗೆಯ ಹಿನ್ನಲೆ ತಿಳಿದು ಭೂಮಿಯ ಮಾರಿದಾ ಹಣವ ॥
ಸುಗಮ ಕಾಶಿಗೆ ಕಳಿಸುವಿಕೆ ನಿರಿ
ಸೊಗಸದೀತನ ತವಕರಿತು ಮಿಗೆ
ಮಗುವಿಗದು ಮಾತೆಯಳು ತಿಳಿಸುವ ರೀತಿ ಸನ್ನಿಧಿಯು ॥ ೫೫ ॥

ಹೇಳತೊಡಗಿದ ಕರುಣ ಕಂಗಳ
ಕೇಳತೊಡಗುತ ಚರಣದಾಂಗಳ
ಮೇಳಗೊಂಡಿಹುದಿವನ ಭಾವನೆಯ ಬೆಳದಿಂಗಳದಿ ॥
ನೀಳದಡಗಿದ ದಾನ ಶೀತಲ
ದಾಳ ಸದ್ಭಕ್ತಿಯದ ಸುಪ್ತಸ
ಕಾಲ ದಾಗರ ಘೋರದಾರ್ಭಟತವಕ ತಿಂಗಳದಿ ॥ ೫೬ ॥

ಸನ್ನಿಧಿ ವಾಣಿ :

ಏನು ಏನಿದು ನಿನ್ನ ಭಕ್ತಿಯಿ
ದೇನು ಹೊಸತೆನವೆನಗೆ ಯುಕ್ತಿಯಿ
ದೇನು ವಿಸ್ಮಿತಗಣಕೆ ಜನರಿಗೆ ನಿನ್ನದೀ ತ್ಯಾಗ ॥
ಕಾಣೆ ರಹಿತಾತ್ಮಾರ್ಪಣೆಯ ಹೊರ
ಕಾಣೆ ತನ್ಮಯ ರೀತಿ ಈ ದಿನ
ದಾನು ಕೇಳಿದ ನೀತಿ ನಿಯಮನದೆಡೆಯ ನುಡಿಭಾಗ ॥ ೫೭ ॥

ದಾನ ಪದ್ಧತಿ ಸಕಲ ಧರ್ಮದೊ
ಳಾನು ಗತಿಮತಿಯಂತೆಯಿರಲದ
ಕೇನು ಶಂಕೆಗಳೆತ್ತನೋಡಿರಲಿದಕೆ ಇತಿಮಿತಿಯು ॥
ಮಾನನೀಯದ ಮನೆಯ ಪೂರ್ವಜ
ರಾ ನಿಯಮಿತದಿ ದುಡಿದುದಿಟ್ಟ ಸ
ದಾನು ಕಾಲದಿ ಮುಂದೊರೆಸುವಾ ಹಕ್ಕು ಸತಿಗೆಸಹ ॥ ೫೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಕ್ಕಳಿಗೆ ವಿಹಿತಾಗಿಹುದ ತಿಳಿ
ದಕ್ಕರೆಯ ಬಲದೆದುರು ನಿನ್ನೊಳ
ಗುಕ್ಕುವಿಕೆಯೇ ತ್ಯಾಗಕದು ತಡೆಯೆಂಬುದರಿಯುವದು ॥
ತಕ್ಕ ತಕ್ಕಂತಾಗಿ ನೀನೇ
ನಕ್ಕು ನಗುತಲಿ ಗಳಿಸಿದಂಥಹು
ದುಕ್ಕು ಹಾಲಿನ ರೀತಿ ಕೊಡುಗೆಯ ಮುನ್ನ ಯೋಚಿಸಪ ॥ ೫೯ ॥

ಒಡ್ಡು ತುಂಬಿರಲದಕೆ ಕೋಡಿಯ
ನೊಡ್ಡದೊಳಬಿಡಲದರದಿಂ ಮಿತಿ
ಗಿಡ್ಡ ಜಿಗಿ ಜಿಗಿಯುತ್ತ ಮುಂದೊರೆದಂತೆ – ಸಂಗ್ರಹದಿ ॥
ಚಡ್ಡಿ ಹಾಕುತ ಕುಸ್ತಿ ಹಿಡಿದವ
ಸಡ್ಡುಗಳ ಕೊಡಮಾಡುವಿಕೆಯಿದು
ಹೆಡ್ಡ ಹುರಿಯೆನದೇನು ಮನೆತನ ಮರೆತ ಮಾಟವಿದು ॥ ೬೦ ॥

ಹೊಂದಿಕೊಂಡಿರಲೇನು ತಿಳಿವುದು
ಸಂದು ಸಕ್ರಮ ದುಡಿಮೆಯೊಳಗದು
ಹೊಂದಿಹುದ ಚೌತಾಳ ಕೂರಿಗೆಗಿರುವದನ್ನೇ ತಿಳಿ ॥
ಒಂದು ಭೂಪಗೆ – ಮನೆಗೆ – ಮಕ್ಕಳ
ಮುಂದವರ ಬಾಳುವೆಗೆಯಿಡುವಿಕೆ
ಯೆಂದವರ ನುಡಿಯೊಪ್ಪು ಧರ್ಮಕೆ ನಾಲ್ಕನೆಯ ತಾಳ ॥ ೬೧ ॥

ಇಲ್ಲಿ ಮನ್ನಿಜಗುಣರ ಸಂದೇ
ಸಿಲ್ಲಿ ಸೆಲೆ ಮುಂದಿಡುವೆ ಪದ್ಧತಿ
ಪಲ್ಲ–ಜಾಣನು ಲೌಕಿಕವ ಪರಮಾರ್ಥವೆರಡನ್ನು ॥
ನಿಲ್ಲದಲೆನಡೆಸುವಿಕೆಯೆಂಬುವ
ಸೊಲ್ಲದೊಳಗನುಬಂಧ ಚಂದನ
ವಿಲ್ಲಿ ಜೀವನದೊಳಗೆ ಕಾಣುವ ಪಾತ್ರ ಕೇಳಪ್ಪ ॥ ೬೨ ॥

ತರುಣಿಯ ಮೊಲೆಯನೊಂದನುಣುತೆಡ
ಕರದೊಳುಳಿದ ಕುಜಾಗ್ರವಂ ಪಿಡಿ
ದಿರುವ ಪರಿ ನರಜನ್ಮದೊಳು ಭೋಗಾನುಭವದೊಳಗೆ ॥
ಪರತರದಗತಿ ಸಾಧನದಿ ಬಿಡ
ದಿರುವಿಕೆಯದಿರಲತ್ತ– ಮೆಟ್ಟಲ
ದರಿವು ತನಗಿರಲಾವ ಜಂಜಡವಪ್ಪ ಕೇಳಪ್ಪ ॥ ೬೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಂದೆ ಗಳಿಸಿಹುದಾಸ್ತಿಯೊಳ ಸತಿ
ನಂದ ಮಕ್ಕಳ ಹಕ್ಕುಯಿರುತಿಹು
ದೆಂದವರ ಕಾನೂನ ಕಂಗಳ ಕನ್ನಡಿಯ ನೋಡು ||
ಮುಂದುವರಿಯಲುಬೇಕು ಭಾವಿಕ
ಮಂದಿರೆಡೆಗಿರುವಾಗ ನಿರ್ಮಲ
ದಂದತೆಯದೊಳಗಂತೆ ಹೊರಗಿರಲಾವ ಹುಡಿಹಾಡು || ೬೪ ||

ಬಾಳೆಯೆನ್ನಲಿದೇನು ತಿಳಿರಿದ
ಬಾಳೆ ಬನದಿಹ ಶಾಂತ ಶೀತಲ
ಕೀಲದೊಳಗಡಗಿಹುದ ಸದ್ರುಚಿ ಫಲದ ಪರಿಭಾವ ||
ನಾಲೆಯೊಳಗಾಗುತ್ತಲೆಡಬಲ
ತಾಲಗೂಡುತಲಾತ್ಮವಿಕಸಿತ
ಮೇಲುಗೊಳಿಸುವದಿದುವೆ ತೊಳೆತಿಳಲಿದುವೆ ರಸಜೀವ || ೬೫ ||

ಮದುವೆಯೊಳ ಸತಿ ಕರವ ಸಮ್ಮುದ
ವದನೆ ಹಿಡಿಯುತ ಧರ್ಮ–ಅರ್ಥದೊ
ಳಿದುವೆ – ಕಾಮದಿ– ತೊರೆದು ಸಾಗೆನುವಂಥ ನಿನ್ನನುಡಿ ||
ಇದುವೆ ಲಿಂಗಾಚಾರದೊಳಗಿರು
ತದರ ಜತೆ ಮೋಕ್ಷದೊಳಗಗಲದ
ಮಧುರ ಸಾಗುವೆನೆಂಬುವಿಕೆ ಪತಿಯೊಳಿರಲಿದೆ ಯೋಗ್ಯ || ೬೬ ||

ಯಾಕೆಯೆನೆ ಸತಿಯಳಿಗಿಹುದಿದೇ
ದೀಕ್ಷೆ ಲಿಂಗಾಚಾರವಹುದು ಸ
ಮಕ್ಷಮದಿ ತಿಳಿಯಿದನು ಶೂದ್ರೆನಿತಲ್ಲಳೀ ಮಾತೆ ||
ನಕ್ಷೆ ಧಾರ್ಮಿಕ ಕಾರ್ಯದೊಳ ಪತಿ
ಲಕ್ಷ್ಯದೊಳಸತಿ – ರಾಮಯಜ್ಞದಿ
ಪಕ್ಷಮಾಡದೆ ಚಿನ್ನ ಸೀತೆಯ ಮೂರ್ತಿ ಬದಿಗಿರಿಸಿ || ೬೭ ||

ಕಾರ್ಯಗೂಡಿದಯಜ್ಞ ಕರ್ಮದೊ
ಳಾರ್ಯನಡೆಗೊಪ್ಪಂತೆ ಋತ್ವಿಜ
ವರ್ಯರಾ ನುಡಿಯಂತೆ ನಡೆದುದಕೇಳಿ ತೂಗುತ್ತ||
ಭಾರ್ಯೆ ಭಾವನೆ ಸವಿಯ ಮತಿ ಸೌಂ
ದರ್ಯ ತೌಲನಿಕಾರ್ಥದೆಳೆ ಸೌ
ಕರ್ಯ ಸಂಪದ ಸೊಬಗ ಸಾಗುವ ಯೋಗವಿದೆ – ಬದುಕು || ೬೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೇಳಿ ನಿನಗೂ ಯಜ್ಞಕುಂಡದಿ
ವೇಳೆ ಕಳೆಯಂತಲ್ಲ ನವ್ಮೊಳ
ಗೀಳು ಆಪರಿಯಿಲ್ಲಮೆನಿತಿಲ್ಲೆಂಬುದೆಲ್ಲ ವರಿ ॥
ಹಾಳು ಮಾತುಗಳೇಕೆ ದೀಪ್ತೆಳ
ಮೇಳದೊಳವಮನ ಗೆದ್ದ ಗೆದ್ದಿಹ
ಬಾಳು ಸೀತೆನೆಕಾಳು ಕಂಗಳೆವೆಯೊಳಕಳೆಮೇಳು ॥ ೭೯ ॥

ರೈತ ರಾಶಿಯ ಮಾಡಲೇನು ಸ
ಮೇತ ಧ್ಯಾನವ ತಾನೆ ಉಂಬ ಸ
ದಾತ ರಕ್ಷಿಸುತಲಿ ಸಮಾಜಕೆ ದೇಶಕೋಶಕ್ಕೆ ॥
ಮಾತು ಮನನಿಸುತಿದನೆ ಹಸು ಮರು
ರೀತಿ ಮೆಲುಕಿಸುತಿದರ ಬಲದಿ ವಿ
ಭೂತಿ ಸಂಪದಕೊಡುಗೆಯೆಂಬುದನರಿತು ತೆನೆಮೆಕ್ಕೆ ॥ ೭೦ ॥

ನೀನು ಕಳಿಸುವ ಹತ್ತುಸಾವಿರ
ಕೇನೆನಲಿ ಭಾವದೊಳೆ ಬಳಲುವಿ
ಕೇನು ಬಳಸಿರಲದಕಿರದುದಾಯಾಸವೆಂತಹುದು ॥
ಕಾಣದಂಥಹ ಚಿಂತೆ ಸತಿಯೊಳ
ಗಾಣದೆತ್ತಿನ ಸುತ್ತು ಸುತ್ತೆನು
ದೇನು ಹೇಳುವದಪ್ಪ ದೊಳಗೊಳದಣೆಯುವಿಕಿವಳದು ॥ ೭೧ ॥

ಕಂಡು ಕಾಣದ ಹಾಗೆಯಿರುವಿಕೆ
ಚಂಡು ಹೂವಿನ ಭಾವ ಭಾವನೆ
ಗಂಡಗಲಿಗಹುದೆಂತು ಶೋಭಿಸುದಪ್ಪ ನಡೆಕಪ್ಪ ॥
ಕುಂಡದೆಡೆ ಹನಿ ಹರಿಸಲದೆ ಪುಟ
ಚಂಡಿನಂತಾದಂಥ ಹೂ ಫಲ
ಗೊಂಡೆಯಂತರಿ ಸತಿ ಮನವರಳಿಸಿರೆ ಭಾವಾಪ್ತ ॥ ೭೨ ॥

ನಿಮ್ಮ ಸಂಬಂಧವದು ಚಿರತಮ
ದೊಮ್ಮನದವನುಬಂಧ ಮುಗ್ಗದ
ಹಮ್ಮಳಿದ ಪರಿ ಚಂದದೇಕತ್ವ ಪರಮಾನಂದ ॥
ಹುಮ್ಮನಸದೊಳ ನಿತ್ಯ ನಿರುಪಮ
ಸಮ್ಮತಾ ಸ್ವಚ್ಛಂದದಿರಲಿದೆ
ನೆಮ್ಮದಿಯ ಸೊಗಸಿಂಧು ಸತ್ಸುಖ ಬಂಧುರಾನಂದ ॥ ೭೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಕ್ಕು ನಗಿಸಿರೆ ಭಾವ ಪಾತ್ರೆಯೊ
ಳುಕ್ಕುತಿಹುದಾನಂದ ಕುಳ್ಳಿಯೊ
ಳುಕ್ಕುವಾ ಪಯದೆಡೆಗೆ ಸಾಂತ್ವನ ಹನಿಯ ಹೂ ಬಿಡಲು ||
ಬಿಕ್ಕುವಿಗೆ ಹೊರತಾಗುತಾಗು
ತ್ತಕ್ಕರೆಯ ರಸಕುಂಭ ಕುಮುದಿನಿ
ಮಕ್ಕಳದೆನಗು ಚಂದದಂತಿವಳೊಳದೆ ನಿರಿಗಡಲು || ೭೪ ||

ನೋಡಿದನು ಚಪ್ಪಾಳೆಯೊಳಗ ಬೆರ
ಳಾಡುವಿಕೆ ಸಮತಾಳ ಮೇಳನು
ಗೂಡಿವಿಕೆಯೊಳಗಾಲಿಸಲು ಕೇಳೊಂದೆ ನಾದೊಂದೆ ||
ಕೋಡಿಹಿಡಿದಿಡದಂಥ ಮೋದ ಸ
ದಾಡುತಿಹುದಾತ್ಮೊಲವ ಚಲುವಿನ
ಜೋಡಿಯೊಳನಿಶ್ಯಬ್ದವನುಮೋದತೆಯ ಪಾತ್ರೊಂದೆ || ೭೫ ||

ಗಾನರಾಗಾವದಿರೆ ಜತೆ ಸ
ಮ್ಮಾನ ತಬಲಾ ಸರಿಗ ಪೆಟ್ಟಿಗೆ
ಯಾನದೊಳ ದನಿಭಂಗವಾಗದ ರಾಗಭಾಂಡಾರ ||
ಮೌನದಿಂದಾಲಿಸುವರವರನು
ಮಾನ ರಹಿತಾನಂದ್ಮಯೂರ ಸ
ದಾನು ರಾಗ ನಿದಾನ ರಸ ಸುಯಿಧಾನ ರಸ ತೇರ || ೭೬ ||

ಐದು ಇಂದ್ರಿಯದೊಳಗದೊಂದುರೆ
ಹಾದಿ ತಪ್ಪಿರಲಲ್ಲಿ ನಡೆಯದು
ಮೋದ ಮಾಧುರಿ ಸರಳ ಸಹಜತೆ ಭಾಸುರತೆ ಚರಿತೆ ||
ಭೇದ ನಿಮ್ಮೊಳಗಾಗಲಾ ನಿ
ರ್ವೇದ ನಿಲಯೊಳ ಘಟಿಸಬಾರದ
ಹಾದಿ ಸಂಸ್ಕೃತಿಯಿರಲಿ ಯೀರ್ವರೊಳಿರೆ ನಿಷ್ಕರ್ಷೆ || ೭೭ ||

ನೀರು ಭಾಷ್ಮೀ ಭವನವಿರಲಾ
ಕಾರದೊಳಸಾಗರದಿ ಜಲಸಾ
ಚಾರ ತನ್ನೊಳ ಶ್ರೇಷ್ಮ ಇಟಗೊಂಡಂತೆ ದಾನಾದಿ ||
ನೇರ ತಿಳಿ ವನವಾಸದೊಳಗಾ
ಪಾತ್ರೆಯೊಳಗುಳಿದಂಥಹುದಗಳು
ನೇರವರರೆಲ್ಲರರ ಢರಿಕೆಗೆ ಕಾರಣೆಂಬುದರೀ || ೭೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೋಡು ಹಸು ಹಾಲು ಕೊಡುತಿರಲದೆ
ಮೋಡಿ ಕೆಚ್ಚಲದೊಳಗಡಗಿಹುದ
ನಾಡಿನೊಳ ಶೇಷ ಉಳಿದಿಹುದದೇ ಮತ್ತೆ ಧಾರಾಂಗ ||
ಕಾಡಿನೊಳ ನನೆಯಿಂದು ತಂದಿರೆ
ನೋಡಿ ಮರುದಿನಲಲ್ಲೆ ನಿಲ್ಲದ
ಮೂಡಿರುವ ಗೊನೆಯಂತೆ ಜೀವನ ಸೂತ್ರವಿರಬೇಕು || ೭೯ ||

ಹೀಗೆ ತನ್ನನೆ ತನ್ನ ತಾ ಸಹ
ಜಾಗಿ ನೋಡುತ್ತಾಡುವಿಕೆಯಾ
ಭಾಗ ಕನ್ನಡಿಯೊಳಗೆ ಮುಖ ತಿದ್ದುತ್ತಲುರೆ ಬಾಲೆ ||
ಬೀಗುವಂತಿರಲದುವೆ ಸಂಸ್ಕೃತಿ
ಯಾಗದೊಳ ಸತಿಜತೆ ವಿಚಾರ ಸ
ರಾಗದಿರಲಿದಕಾರದ್ಯೆ ಚಕ್ಕಾಟ ಕಡಿತೋಟ || ೮೦ ||

ಮತ್ತೆ ತಿಳಿರಿದ ಕೊಟ್ಟೆ ಕೊಟ್ಟೆನು
ತೋತ್ತಮತೆ ನುಡಿ ನಿನ್ನದಿರಲಾ
ಗತ್ತುಯೇನಿರೆ ದೀಕ್ಷೆಯೊಳ ತ್ರಿವಿಧಾರ್ಪಿತಿರಲಾಗ ||
ಮತ್ತೆ ಮರುನುಡಿಯೇನಿದೆಂಬುವ
ದುತ್ತಮಾಮಹಮನೆಯೊಳಾಗಿಹು
ದುತ್ತರಕೆ ನಿನದಾವದೆತ್ತರ ತಿಳಿಯೋ ಬಸವುಸಿರ || ೮೧ ||

ಭಾಷೆ ಕೇಳಿರಬಹುದಿದೋ ಧನ
ದಾಶೆ ಸರಿಯಲ್ಲೆನುತಲಿದೆ ಹುಸಿ
ಹಾಸ ಹೊಯ್ಯುವರೆಡೆಗಿದರದೇ ಸಂಗ್ರಹಾತುರತೆ ||
ಹಾಸು ಹೊಕ್ಕಾಗಿಹುದ ನೋಡಿರೆ
ಭೇಸವರಿಗಾವಶ್ಯವೆಂಬ ಸ
ದಾಶೆಯಿರಲಿದಕೇನೆನುವಿ ಹೇಳಪ್ಪ ಮನಸಾಕ್ಷಿ || ೮೨ ||

ಕೇಳಿ ತಿಳಿಕೆಲವೊಂದು ಓದಿ ಸ
ಕಾಲದೊಳಗರಿಸಿಹುದ ಪುಟದಿಹ
ಪಾಲದೊಳಗಿಹಮಧುರ ತೂಗುತ ತೂಗಿ ತತ್ವಾಂಶ ||
ನಾಳೆ ಈಸುವ ಭಾಗ್ಯ ನಿನಗಿರ
ಲೇಳುದಕೆ ಸಹಕಾರ ಸಹಜನು
ಕೂಲ ಮಿತ್ರನಿಸುತ್ತಲಿದುವೇ ತಿಳಿಯಲದೇ ಹಂಸ || ೮೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧರಮ ಬಿಟ್ಟವರುಂಟು ಲೋಕದೊ
ಳರಥ ತೊರೆದವರೆತ್ತಹರು ಕರ
ದಿರದೆ ಸಾಗದು ವಿಶ್ವದಾಟ ವಿಲಾಸ ಚಲ್ಲಾಟ ॥
ಧರಮ ಅರ್ಥಾದಿ ಲವಲವಿಕೆಯೊ
ಳರಿವು ಪರೆ ಮೋಕ್ಷರ್ಥವಾಗಿರ
ದುರಿತವೇನವನೆದುರುದೆಲ್ಲ ಪರಾಗ ಹೂ ತೋಟ ॥ ೮೪ ॥

ಕೇಳು ಮಿಸುನಿಯ ತತ್ತಿಕೊಡುತಿಹು
ದಾಳರಿಯದೆ ದುರಾಶೆಯೊಳ ಜೀ
ವಾಳ ತಗೆದಂತೆನುಯಿಸೋಪನ ನೀತಿ ಕಥೆಸೂತ್ರ ॥
ನೀಳ ಸುಮರೇಣು ಗ್ರಹಿಸುವಾ
ಮೇಳವದರದು ಹೂವ ಕುಕ್ಕುವ
ಕೋಳಿ ಗುಣವದಕಿಲ್ಲ – ಸೃಷ್ಟಿಯ – ದೃಷ್ಟಿ ದೀಪ್ತಿರಲಿ ॥ ೮೫ ॥

ಇಲ್ಲಿದೋ ಸರ್ವಜ್ಞ ವಚನದೊಳ ಮಿಡಿ
ಮೊಲ್ಲೆಸಳ – ಸೊಡರೆಣ್ಣೆ ತೀರಿರ
ಲಲ್ಲಿಯೇ ಕೊಡನೆತ್ತಿಸುರಿವರೆ ಕೊಡದು ಕೊಡದಿರದು ॥ [೧]
ಸಲ್ಲಲಿತ ಸುಪ್ರಜ್ಞೆ ಡಂಗುರ
ದಲ್ಲಿ ಧರಮವ ಬಿಡದೆನುವ ನುಡಿ
ಜಲ್ಲೆ ಬುದ್ಧಿಗೆ ತಾಗಿದೆಡೆಗಹುದೆಂತು ಹುಡಿ ಹೊಂಪು ॥ ೮೬ ॥

ನೀರು ಸೇದುವ ಹಗ್ಗ ಹರಿದೆಡೆ
ಸೇರಿಸುವ ಕಟಿಬಂಧ ಮಾಳ್ಪುದೆ
ಚಾರುತನವಿದು ಹರಿದು ನೀರೊಳಗಿಳಿಯಲೇನಾಗ ॥
ಏರುಪೇರಿಹುದೆನದ ಕಾರ್ಯದೊ
ಳಾರೆ ತೊಡಗಿರಲದರ ರಕ್ಷಣೆ
ಹಾರ ಸೋಗೆಯ ನೀರ ಸೊಬಗೆಂಬಂತೆ ತಿಳಿಭಕ್ತ ॥ ೮೭ ॥

ದುಡಿಮೆ ಜತೆ ಬದುಕಿಹುದು ಕುಸುಮೊಳ
ಹುಡಿಯಡೆಗಿದ ಪರಿಯನಿಗೂಢತೆ
ಕೊಡೆಯೊಳಾಂತರ್ಗತ ಪುರುಷ ಫಲದಿಹುದ ಸದ್ರುಚಿರ ॥
ಕಡಲೆಯೊಳಗಿರುವಂಥ ಅಂಕುರ
ದುಡಿಲದೊಳಗಾದೇಟ ಸಹಿತೆಲೆ
ಸೆಡಗರದಿಹುದ ಗಂಧದಂತಿಹುದಿಹುದಲೀ ಬದುಕು ॥ ೮೮ ॥

---

೧. ಸೊಡರೆಣ್ಣೆ ತೀರಿದರೆ ಕೊಡನೆತ್ತಿ ಸುರಿವರೆ
ಕೊಡಬೇಡ ಕೊಡದೆಯಿರಬೇಡ ಧರ್ಮವ
ಬಿಡಲು ಬೇಡೆಂದ ಸರ್ವಜ್ಞ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಿಳಿದ ತೊಳಲಿದೆ ನಿತ್ಯದಾಸರ
ಬಲುಮೆಯಾಗಿಹುದೆಂಬದರಿಯು
ತ್ತೊಲ್ಲವ ಸಂಸಾರದೊಳಗಿರಲು ಸಸಾರ ಸಸಿಹಾರ ॥
ಲಲಿತದಿಂ ಬೆಳೆವಂತೆ ಹೊರಗೊಳ
ಕಳೆಯೆ ಮೈದೋರುತ್ತಲಿರುವಾ
ಚರಣ ತನದಾದಾಗವದೆ ತಿಳಿ ಸಂತತುಪಹಾರ ॥ ೮೯ ॥

ಮೇಳಗೊಳದ ಮಯೂರವೆಂತೋ
ನಾಲೆಯಿಸದ ಭಾಷೆಯೆಂತೋ
ಕಾಳಕಮರಿರಲೆತ್ತ ಜೀವನಗತ್ತಹೊತ್ತಿಸಿದ – ॥
ಬೇಳೆಯಾಗಲುಬಾರದದು ರಸ
ಬಾಳೆಯಂತಿರಲಾರ ಹುಡಿ ಹೊಡೆ
ಬೇಲಿಯೊಳಿರದು ಶುಕ – ಓತೀಕಾಟವೆನೆ – ಭಕ್ತ ॥ ೯೦ ॥

ಭಕ್ತನ ವಾಣಿ :

ಎನ್ನಡೆಯ ತೆರೆದಿರಿಸುತಿದರೊಳ
ಭಿನ್ನತೆಯನಡೆ ಹುಡುದಿ ಹೊರಗಿ
ಟ್ಟೆನ್ನ ನಯನವ ತೆರೆಸುತದಕಾಂಜನವ ಲೇಪಿಸಿದೆ ॥
ಕನ್ನಡಿಯ ಹಿಂಬದಿ ರಸಾಯನ
ವನ್ನೆ ಮನ ಮತಿಯಿದಕೆ ಲೇಪಿಸು
ತೆನ್ನ ಬಿಂಬವ ತೋರಿಸಿದೆ ಸದ್ಗುರುವೆ ಶರಣಾರ್ಥಿ ॥ ೯೧ ॥

ಎನ್ನ ತಪ್ಪುಗಳೆಷ್ಟೊ ಕಾಣೆನು
ನಿಮ್ಮ ಸೈರಣೆಗಿಲ್ಲ ಮಾಪನೆ
ಯೆನ್ನೊಳಿಹುದಾ ಏಕಮುಖ ಧೋರಣೆಯ ಹಣ ತೆಗದು ॥
ಚನ್ನ ಚಿದ್ಗುರಿ ಛವಿ ಸದಾಮಯ
ಹಣ್ಣುಹೂಯೆಸಳೆನಿಪ ಹಿತ ಸೊಡ
ರೆಣ್ಣೆ ಧಾರೆರೆಯುತ್ತ ಸತ್ಪ್ರಭೆಗೊಳಿಸಿ ಬಿಟ್ಟಿರಲ ॥ ೯೨ ॥

ಒಂದೆ ಬತ್ತಿಯ ಹೊಸೆಯುತದರೊಳ
ನಂದೆನುವ ಗುರಿ ತೈಲ ಹನಿಸುತ
ಲಂದಮಯವಾಗಿರಿಸಿ ಬಿಡುವಾಶೆಯೊಳಗೆಡೆಯುತಿರೆ ॥
ಸಂದಿಯೊಳ ಬಿದ್ದಿರಲು ಕರುಣಾ
ಸಿಂದು ತಾವೇ ಸನ್ಮತಿಯ ಚಿ
ದ್ಬಿಂದು ಧಾರೆರೆಯುತ್ತ ಬತ್ತಿ ಮತ್ತೊಂದುಯೆಳೆಯಿರಿಸಿ ॥ ೯೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸರಳಗೊಳಿಸುತಲೊಳ ಹೊರಗು ಬೆಳೆ
ಬೆಳಗ ಬೆಳದಿಂಗಳದ ಮಂಗಳ
ಕಳೆಯ ಕಮರದ ಶುಭ್ರ ರಂಗೋಲಿಯ ಕಲಾಗೊಳಿಸಿ ॥
ತಳಕು ಹರಿಯದ ಮುನ್ನ ಮಾನಸ
ದುಳುಕ ಪರಿಹರಿಸುತ್ತಲಾಂಬರ
ಬೆಳಕ ಬೆಳಗಿಸಿ ಚಿತ್ತ ಗುರುವೇ ಕಲ್ಪತರು ಸರಿಯೇ ॥ ೯೪ ॥

ಹಿಂದವರಿಗಾವರಿಸಿದಂಥದ
ಕಂದವರೆ ಬರುತತ್ತ ಭಕುತರಿ
ಗಂದು ಬಂದ ಸಮಸ್ಯೆಗಳ ಕಳೆದಂಥ ಕಾವ್ಯಾಂಗ ॥
ಸಿಂಧು ಸಂಸ್ಕೃತಿಯಾ ಕಥಾಮೃತ
ಮಂದಿರೊಳಗರಳಿಹುದ ಕೇಳಿರ
ಲಿಂದು ನೀವೆ ಸಮಕ್ಷಮದಿ ದರ್ಶನವ ಕೊಟ್ಟಿರಲ ॥ ೯೫ ॥

ಇಂತೆನುತ ಪದ ಪದ್ಮೆಸಳ ವಿ
ಶ್ರಾಂತಿ ಸಂಪದ ಸುಖ ಸದಾತುರ
ಕಾಂತಿ ಕಂಗಳದೊಳಗದೇ ಸಾಷ್ಟಾಂಗ ಹಾಕುತಲಿ ॥
ಅಂತಃಕರಣದೊಳೆನ್ನದೀ ಪರಿ
ತುಂತುರಾಶ್ರಯದಿಂದ ಪಾಲಿಸು
ತಿಂತು ಸದ್ಗುರು ನೀವೆಯನಲಾವಾಗ ಚಿನ್ನಿಧಿಯು ॥ ೯೬ ॥

ಹಿಂದೆ ಕಳಿಸಿಹುದೆಲ್ಲವಂ ಬಿಡ
ದಂದು ತಿಳಿಸುತಲಿಷ್ಟೆ ಕಾಣಿಕೆ
ಯಿಂದು ನಮಗಿರಲೆನುತಲಿನ್ನುಳಿದ ಹಣ ಸತಿಸುತರ ॥
ಹೊಂದಿಸಿದ ಹೆಸರೊಳಗದೇ ಬ್ಯಾಂ –
ಕೊಂದರೊಳಗಿರಿಸುತ್ತ ಸದ್ಗುರು
ಮುಂದೊರೆದ ಹರಸುತ್ತ ಮಂಗಳವೇಡೆ ಬದಿ ಪುರಕೆ ॥ ೯೭ ॥

ನಕ್ಷೆಯೊಳ ಸಾಗುತ್ತಲತ್ತ ಸ
ಮೀಕ್ಷೆ ಮಾಡುತ ಲಿಂಗವಂತರ
ಸೂಕ್ಷ್ಮದಾಚರಣೆಡೆಯ ನೋಡುತ ಸುತ್ತಲಿರುವವರ ॥
ಪಕ್ಷ ಮಾಡದುದಿವರ ಪಾಠ ಸ
ಮಕ್ಷಮದಿ ಕಂಡುಂಡು ಪ್ರಗತಿಯೊ
ಳಕ್ಷಯದ ಬೆಳವಣಿಗೆ ಕಂಡಿರಲಿತ್ತದೀ ಘಟನೆ ॥ ೯೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಂದಕರೆದೆಡೆ ಜನನಿ ನಯನರ
ವಿಂದ ತವಕದ ತರಣಿಯೆಡೆ ಸುಮ
ಸಂಧಿಗೂಡುವ ಪರಿ ಜಗದ್ಗುರುಗಳ ವಿಚಾರಾಂಗ ॥
ಮುಂದೆ ಮಲ್ಲಿಗೆ ಕಾಣುತದರೆಡೆ
ಮಂದ ಮಂದಸ್ಮಿತದ ರೇಣವ
ಹೊಂದಲಾ ರಸ ಜೇನ ಸಮತಿವರಾಂತರಿಕ ತುಂಗ ॥ ೯೯ ॥

ಇದುವೆ ಕೃಷಿಯೆನಿಸಿತ್ತು ಸತ್ಸುಖ
ದಿದುವೆ ಸಂಧಿಸಿದಂಥ ಸಸಿನೊಳ
ಗಿದುವೆ ಹಸ ಖುಷಿ ರಸ ಮದಾಂಬರ ಮುಖದೊಳೇಕಂತೆ ॥
ಸದನದೊಳ ಕಳೆ ಕೇತಕಿ ಪರಿಮ
ಳದುಲುಹದೊಳದೆ ಖುಷಿ ಚಿದಾಂಬರ
ದಿದೆ ನಿರಂತರ ಸಾಗಿಹುದ ಛವಿಯೇ ನಿಶಬ್ದಂತೆ ॥ ೧೦೦ ॥

ಮಾತರಳಿ ಮುತ್ತಾಗಿ ಭಾವಕೆ
ನೀತಿಗಲಿಸುವ ಹಂಬಲದ ಹೂ
ಜ್ಯೋತಿರವ ಬೆಂಬಲಿಸಿ ಬಂಧುರಬಾಗಿದಂತಾಗಿ ॥
ಪ್ರೀತಿಯೊಳ ನುಡಿ ರೆಕ್ಕೆ ಚೊಕ್ಕ ಸ
ಮೇತ ಮಾಡುತ ಚಾಚಿ ಚಾಚುತ
ಭೀತಿಯೆಲ್ಲ ವಿಭೂತಿಯಾದಂತಾಗಿ ಮನದ ಮಗಿ ॥ ೧೦೧ ॥

ಹಸಿದ ಸಸಿ ಹಸಿವುಂಡು ಹರುಷದ
ಕುಶಲತೆಯ ನಗುವಂತೆ ಹಸಿರೊಳ
ಮುಸುಕಳಿದ ವಧುವಂತೆ ಮಾಧುರಿ ಮೋರ ಮೆಲುಕಂತೆ ॥
ಫಸಲು ಪಕ್ವತೆ ಪಂಥದೊಳ ಪದ
ದೆಸೆವ ಕಳೆಯೊಳ ತೋರ್ಪ ತೆರೆಯಂ
ತಸಲಿನೊಳಗಾನಂದ ಪಡುತಿಹುದವರ ಚಲುವಂತೆ ॥ ೧೦೨ ॥

ಸುತ್ತ ಮಂಗಳವೇಡೆಯೊಳ ಸ
ದ್ವೃಕ್ಷಗರುಹಿದ ನಿಲವದಾ ಹಿತ
ಮೊತ್ತದೊಳ ಸಂಸಾರ ಬಲವರ್ಧಿಸಿದ ಚರಿತಾರ್ಥ ॥
ಮುತ್ತು ಮಲ್ಲಿಗೆ ಬಳ್ಳಿ ಬೆಳಗಿನ
ಹೊತ್ತದೊಳಗರಳಿಸಿದ ನನೆ ಕೆನೆ
ಕತ್ತಲೊಳಗೂ ಪಸಿರಿಸಿದ – ನೈಜಾರ್ಥ – ನಿರತಾರ್ಥ ॥ ೧೦೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಂದುತಿಹ ಸಂಸಾರ ಬೇಗೆಯ
ನಂದು ಶೀತಲಗೊಳಿಸಿದಾ ಸಾ
ನಂದದೊಳ ಪುಣೆಗಂದು ಬರುತಲ್ಲಿಯ ಗುರು ಕುಲದಿ ॥
ಹೊಂದಿ ನಡೆದಿಹುದೆಲ್ಲ ಲಕ್ಷಿಸು
ತಂದು – ಕಾಶಿಗೆ ಹೊರಟು ಪೀಠಾ
ನಂದದಿರಲೇನಾಯ್ತು ಶುಭದ ಸಮಾಜ ಬಗೆ ಬುಗ್ಗೆ ॥ ೧೦೪ ॥

ಯೋಚಿಸುತಲಾಯಾ ವಿಭಾಗದೊ
ಳಾಚರಿಸುವಾ ಪದ್ಧತಿಯ ಸಮ
ಯೋಚಿಸೆನುವಂತಾಗುತಿರಿಸುತಲತ್ತ ಬಿಡದಿತ್ತ ॥
ಸಾಚರಣ ಸಂಸ್ಕೃತಿಯ ಮರೆಯದ
ಭಾ ಚರಿತರಿರಲೆಂಬ ದೋರಣೆ
ಬಾಚಿಕಾಯಕದವನ ಜಾಗ್ರತೆಯಂತಿವರ ಲಗ್ಗೆ ॥ ೧೦೫ ॥

ವಿಜಯದಶಮಿಯ ಪತ್ರ ಬರೆಯುತ
ಸುಜನ ಭಕ್ತರಿಗಂದು ಕಳಿಸು
ತ್ತ ಜನರೆಲ್ಲರ ನಿತ್ಯಯೋಗ ಕ್ಷೇಮ ಬಯಸುತಲಿ ॥
ಸುಜನರಿಂ ಬಂದಿಹುದ ದೇಣಿಗೆ
ಯ ಜನಹಿತಕದೆ ಬಳಸುವಾತುರ
ಮಜಲು ಕಂಡವಬಲ್ಲ ಕಾಣುತಲಾನು ಆ ದಿನದಿ ॥ ೧೦೬ ॥

ಬಂದ ಭಕ್ತರ ಪತ್ರಕದು ನುಡಿ
ಗಂಧ ಸಿಂಪಡಿಸುತ್ತ ಕಳಿಸಿರ
ಲಂದವರು ಕಾಯ್ದಿರಿಸಿ ಕಷ್ಟದೊಳದನೆ ಓದುತ್ತ ॥
ಮುಂದುವರೆದವರುಂಟು ತಿಳಿರಾ
ಗಂದ ಬೆಂಗ್ಳೂರದ ನಿವಾಸಿಗ
ಳೆಂದೆನಿಪನು ವಿಜಯಕುಮಾರ ಕಳಿಸಿದ ಕೊಡುಗೆ ಬಗೆ ॥ ೧೦೭ ॥

ಲೆಕ್ಕ ಮಾಡುತಲವಗೆ ನೀನೀ
ರೊಕ್ಕ ಕಳಿಸುದೆ ಬೇಡ ಬಹು ಹಣ
ನಕ್ಕು ನಗುತಿದೆ ಸಾಕು ನಾವೇ ಬೆಂಗಳೂರಿಂಗೆ ॥
ತಕ್ಕ ಮಿತಿ ತಿಳಿಸುತ್ತ ಬರುತಾ
ಗಕ್ಕರೆಯ ದೇಣಿಗೆಯ ಕೊಡಲದ
ಮಿಕ್ಕ ಹಣ – ಸ್ವೀಕರಿಸುವಾ ಬಗೆ ತಿಳಿಸಲವರಿವರ ॥ ೧೦೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಾರಿಕಾಯುತಲಿದ್ದ ತವಕನು
ಸಾರ ಸನ್ನಿಧಿ ತಲುಪಿ ತಾತನ
ಸೇರದಿರುವಿಕೆ ಹಳೆ ತರಗು ಪೇಟೆಯೊಳಗಿರುತವನ ॥
ಮೇರು ಗುರು ರೇಣುಕೆಜೆನಿಸಿ ವಿ
ಸ್ತಾರ ಕಾಯಕದಿಹುದರಿತು ಸುವಿ
ಚಾರವಗೆ ತಿಳಿಸುತ್ತಗಂಗಾಧರ ತಿಳಿಸಿದಂತೆ ॥ ೧೦೯ ॥

ಹೊರಡುದಕೆ ಸಿದ್ದಾಗುತಾ ದಿಶೆ
ಹರುಷ ಹೂ ಹರವುತ್ತಸಂತಸ
ತೆರೆಯೊಳಗೆ ತೇಲುತ್ತತಲುಪಿರಲಿವನದಾಚಾರ ॥
ಸರಣಿ ಲಿಂಗಾಯತದ ಪದ್ಧತಿ
ಯಿರವನೆಲ್ಲವ ಕಂಡು ಕಾಣುತ
ಲಿರಲು – ವಿಜಯಕುಮಾರ ಅತ್ಯಾನಂದದಿಂದವನ ॥ ೧೧೦ ॥

ಶೀತಲದ ಹನಿ ನಯನದಿಂದ ಸ
ದಾತುರದುದುರುತಲಿರೆ ಮಣಿ ಸರ
ಗೀತದೊಳಗಡಗಿರುವದುತ್ಕಟ ಕಾಣುತಿವರೆಲ್ಲ॥
ಖ್ಯಾತ ಪೂಜ್ಯರು ಬಡವನೀತನ
ಪ್ರೀತಿ ಪಲ್ಲವ ಪಾತ್ರ ಸೂತ್ರ ಸ
ಮೇತ ಗುಣಿಸುತಲಿರಲು ನಮಿಸುತಲೆಂದ ನಾವಾಗ ॥ ೧೧೧ ॥

ವಿಜಯ ವಾಣಿ :

ಬಿಸಿಲ ಬೇಗೆಯದೊಳಗೆ ಬಳಲುವ
ಸಸಿಗೆ ಸಿಂಚನ ತುಂತುರಾಕರ
ಖುಷಿ ಭರಿಸಿದಂತಾಯ್ತು ಸದ್ಗುರು ಸಿಂಧು ನೀವಾಗಿ ॥
ಹಸಿಯುತೊಡಲೊಳ ಬನದಿ ದಾರಿಯ
ಹಸುಳೆ ಬಯಸುತ್ತಿರುವದರಿಯುತ
ಹಸಿತದೊಳ ಹಾಯಾಗಿರಿಸಿದಂತಾಯ್ತು ಬರವವಿದು ॥ ೧೧೨ ॥

ಬಿಡದಳುತ ಸೆಟಗೊಂಡ ಮಗುವಿಗೆ
ಮಿಡಿಗಡಲ ಸಂತಸದ ಜೋಗುಳ
ಎಡೆಬಿಡದೆ ಹಾಡುತ್ತಸಂತೈಸುತಿರಲಾನಂದ ॥
ಪಡುವ – ಮಮತೆಯಲಲ್ಲೆಯೊಳ ಬಿಡ
ದಡಗಿದಾ ಸದ್ರಸದ ಧಾರಾ
ಬಿಡದೆ ಪಸರಿಸಿದಂತೆ – ಪರಿಮಳ ತಟ್ಟಿದಂತೆನಲೆ ॥ ೧೧೩ ॥

CC0. In Public Domain: Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಿದ್ಧರಾಮನ ಕಡೆಗೆ ವಿಭುವರ
ನೆದ್ದು ತಾಬಂದಂತೆ ಕೇಶವ
ಶುದ್ಧ ವಿದುರ ಕುಟೀರದೊಳ ಪದವಿಟ್ಟ ಪದುಳಾಯ್ತು ॥
ಮುದ್ದು ಮಕ್ಕಳಿಗಂತು ವಿದ್ಯಾ
ಮುದ್ದೆ ಬಡಿಸಲು ಬಂದ ಶಿಕ್ಷಕ
ಸಿದ್ದಗೊಂಡಂತೆನಿಸುತೀ ಫಳವೆನಗೆ ಘನದೇವ ॥ ೧೧೪ ॥

ಚಲುವ ಬಸವನ ಮಹಮನೆಗೆ ನಿಜ
ದೊಲವದಿಂ ಬಂದಂಥ ಮಹಚರ
ಚಲುವದಂತಾಗಮನದಂತೆನಲೇನು ಸದ್ಗುರುವೆ ॥
ಎಲೆಮರೆಯಗೂಡಿನೊಳ ಮರಿಗದು
ಸಲಹುತಾ ಗುಟಿಯಿಡುವ ಪರಿಯೊಳ
ನಿಲವಿಡಿದು ಬಡವನೆಡೆಗಾಗಮನ ನಯನಾಂಬರಿದು ॥ ೧೧೫ ॥

ಗಣಿತದೊಳ ಕುಳಿತಂಥ ಛಾತ್ರನೊ
ಳೆಣಿಕೆಯೊಳಗಾಗದಯೆ ಚಿಂತನ
ಕಣದೊಳಾದಾಗವಗೆ ತಕ್ಷಣ ಉತ್ತರೊಲಿದಂತೆ ॥
ಹಣೆ ಸದಾಶೆಯ ಶಬರಿಯೆಡೆಗಾ
ಹಣಿಕೆ ಹಾಕಿದ ಸಮತೆ ಸಂದ
ಭರ್ಣಿಸುತೆನಗಿಹುದೆನ್ನಲೇ ಗುರುವರ್ಯ ಸೊಬಗಂತೆ ॥ ೧೧೬ ॥

ಕತ್ತಲೆಡೆಗದು ಹಣತೆ ಹಚ್ಚುದ
ಕತ್ತ ಬುದ್ಧನು ಇತ್ತ ಶರಣರ
ಚಿತ್ತೊಲವದಾದಂತೆ – ರೇಡಿಯಮು –ದೊರೆತಂತಾಯ್ತು॥
ಹೊತ್ತರಳಲಾವಾಗ ಹೂವಿನ
ಭಿತ್ತಿ ಮನಹರವಾದ ಸುಂದರ
ಸತ್ತೆಯೊಳಗಾದಂತೆ ಪದ ಕಾಣುವಿಕೆಯೆನದೆನಲೆ ॥ ೧೧೭ ॥

ಅಂದು ಮುಕ್ತಾಯಕ್ಕ ರೋದನ
ಹೊಂದಿರುವ ಭಾವಾಗ್ನಿಗದು ತನಿ
ಗಂಧವಂ ಧಾರೆರೆಯುದಕೆ ಬಂದಂತೆ ತಿಳಿರಿಂತೆ ॥
ನಂದ ವಿದ್ಯಾಗುಣನಿವಾಸನೆ
ಯಿಂದು ನನ್ನೆಡೆ ಬರವಭಲೆ ಚಿ
ದ್ಬಿಂದು ಚಿಗುರಿಸಲೆಂದೆ ನೀವೇ ಬಂದುದೆನಬಹುದೆ ॥ ೧೧೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಡವಿಯಲ್ಲಿಯ ಹಸುವು ಮನೆಯೊಳ
ಗಡಗಿರುವ ಕರುವಿಂಗೆ ರಸ ಮೊಲೆ
ಗುಡಿಸುದಕೆ ಬಂದಂತೆ ಬೆಡಗಿದು ಮರವೆ ಕಳೆಯುದಕೆ ॥
ಕುಡಿಗಡಲ ನಯನಿರಿಸಿ ಸಲಹುವ
ಸೊಡರು ನಿನದಿಹುದರಿಯೆ ಜನಮನ
ದೊಡೆಯ ನೀನೇ ಬಲ್ಲೆ ನಾ ಬಿಡದಿಲ್ಲೆ ತನುಜಲ್ಲೆ ॥ ೧೧೯ ॥

ಎಂದೊ ಬಯಸುತಲಿದ್ದೆ ಒಳಗೊಳ
ಗೆಂದಿನಿಂ ಹೊಂದಿಹುದ ವೇಳೆಯೊ
ಳೆಂದಿನಂತಿರೆ ನೀವೆ ಗಂಗಾಧರನ ಕಳಿಸುತ್ತ॥
ನಂದದೀತನು ತಿಳಿದು ತಿಳಿಸಿರ
ಲಂದ ರೀತ್ಯಾಗಮಿಸಿದಾ ಚಿರ
ಬಂಧು ನೀವೆನದೇನು ನುಡಿಯಿನ್ನೇನು ಶುಭ ಸಿಂಧು ॥ ೧೨೦ ॥

ಬಡಪಶುವು ಕೆಸರಲ್ಲಿ ಬೀಳುತ
ಚಡಪಡಿಸುವಂತಾತಲೀತನ
ಕಡೆಗೆ ದುರ್ದೆಸೆ ತಿಳಿದು ಹಂಬಲ ಹೂವ ಹೊನಲಿಡಿದು ॥
ಗಡಬಡಿಸಿ ನೀವಾಗಿ ತಂದಿಹು
ದೊಡಲ ನಾನೆಂತೆನಲಿ ನುಡಿಯದ
ನುಡಿಯ ನಡೆಯೊಳ ಗಡನೆ ಸಂದಿಹುದಿದುವೆ ನನ ಪುಣ್ಯ ॥ ೧೨೧ ॥

ಗುರುವೆ ಪರತರಸಿರಿಯೆ ಸಂಪದ
ಸರಸಿ ಗಾಂಭೀಯಾರ್ಥದಿಂ ಪದ
ಪರವೆ ವಿದ್ಯಾ ಸೌಂದರನೆ ಸಂಪಿಗೆ ಸೊಂಪ ಸೊಬಗ ಕೆನೆ ॥
ಗುರುವೆ ಕಲ್ಪಿಸುವಂಥ ಕಲ್ಪನೆ
ಯಿರವೆಡೆಗೆ ತಿಳಿ ತಿಳಿದು ಪರಿಭವ
ಹುರಿಯುದಕೆ ಬಂದಾತ ಗಣ ಚಿರಬಂಧು ಭಾಸುರನೆ ॥ ೧೨೨ ॥

ನಮ್ಮ ನಮ್ಮವನೀತನೆನ್ನುತ
ಕಮ್ಮನೆಯ ಕಲ್ಯಾಣ ಕಲ್ಪಿಸು
ತೆಮ್ಮ ಹಿತದೊಳನಾಥನೆನ್ನುತ ಬಂದ ಭಗವಂತ ॥
ಇಮ್ಮನದೊಳಿರಲಿವನ ಸಾಧನೆ
ಸಮ್ಮ ಸುಧೆಗೊಳಿಸುದಕೆ ಹುರಿಹರೆ
ಹಮ್ಮವೆಲ್ಲವ ನಲ್ಮೆಯಾಗಿರಿಸಲ್ಕೆ ಬಂದೆಯಲ ॥ ೧೨೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರಜುನೆಡೆಗೆ ಕಿರಾತವೇಷದೊ
ಳಿರುತ ಪಾಲಿಸಿದಂತೆ ಲಾಲಿಸು
ತಿರುವದೇ ನಿನ ರೂಡಿಯಾಗಿರಲೆನ್ನದವಗುಣವ ॥
ಹರಿಣಿ ಹೂಸರದಂತೆ ಅಸದಳ
ಸುರುಳಿಯಂತಿಹುದರಿತರಿತು ಪರ
ತರದ ಸಹಜಾತುರದಿ ಬಂದೆನುತಾಗ – ಪದಪೂಜೆ ॥ ೧೨೪ ॥

ಶರಣೆನುತ ಸಾಷ್ಟಾಂಗ ಹಾಕುತ
ಲರಳು ನಯನೆಸಳಿಂದ ಮಣಿ ಕಣ
ಚರಣ ಪೋಣಿಸುತಿರಲು ಕಾಣುತ್ತರಿತಲವಕಾಶ ॥
ಗುರುವುಕರದಿಂದೆತ್ತುತಾ ಮನ
ಕರಿಸತೊಡಗಿದ ನಿಂತು ನಿರುಪಮ
ನಿರಿಯ ನವನೆಡೆಗಿರಿಸಿ ಹಿತನುಡಿ ಸರವನಿಡುತಿಂತು ॥ ೧೨೫ ॥

ಸಿದ್ಧರಾಮಗೆ ಚನ್ನಬಸವನು
ಶುದ್ಧ ತಾರ್ಕಿಕದರ್ಕ ಚೈತ್ರತೆ
ಬದ್ಧದನುಭವ ಮಂಟಪದಿ ವಿಭು ಶಂಕೆಗನುವಂತೆ ॥
ಮುದ್ದು ಮಗು ಮಲಗುತ್ತ ಹಸಿಯುತ
ಲೆದ್ದ ಘಳ ಪಯಗುಡಿಸುವಂತೆ ವಿ
ಶುದ್ಧ ವೈಚಾರಿಕತೆಯಾಂಕಣ ಇಡುತರಿಸಿದಂತೆ ॥ ೧೨೬ ॥

ಮಾತೆ ಮಗುವಿಗೆ ಮನೆಯ ಸಂಸ್ಕೃತಿ
ಸೇತು ಸಂಸ್ಕಾರವನು ಸಕ್ರಮ
ರೀತಿಯೊಳಗಲಿಸುತ್ತ ವಯಸಿನ ಕನಸು ಬಲಿತಂತೆ ॥
ಜ್ಯೋತಿ ಗುರುಕುಲದೊಳ ಸುಧಾಮಗೆ
ಭಾತಿ ಶಾಮಗೆ – ರಾಜಸುತರಿಗೆ
ಆತುಮದ ಹಲ ನೀತಿಗಲಿಸುವ ಪಾತ್ರ ಪದುಮಂತೆ ॥ ೧೨೭ ॥

ಅಂಕಿ ಮಗ್ಗಿಯ ಬಿಡದೆ ಪಥ ಶಾ
ಲಾಂಕಣದಿ ಕಲಿಸುತ್ತದೆ ನಿರಾ
ತಂಕದಾಕರದಂತು ಸಮತಾ ಪಾತ್ರ ಪುಟಿಯಂತೆ ॥
ಕಂಕುಳೊಳ ಕಂದನೆಡೆ ನಲ್ನುಡಿ
ಪಂಕಜದನಿಲವಂತೆ – ರೈತನು
ಕಂಕಿಯನು ಬದಿಗಿರಿಸಿ ರಾಶಿಯ ತುಂಬುತಿರುವಂತೆ ॥ ೧೨೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚನ್ನಿಧಿವಾಣಿ :

ನಾನೆ ಹುಡುಕಿಸಿದಂತೆ ಬಂದೆನು
ನಾನೆ ನಿನ್ನೊಳಗಿರುವ ಗುರುಪಥ
ಭಾವದೆಡಗಿಹುದಾತುರತೆ ಸದ್ಭಕ್ತಿಗಾಣುದಕೆ ||
ತಾನೆ ಕಾಣುವ ಶರಣರೆಡೆಗನು
ಮಾನ ರಹಿತ ಸಹಾಯದಭಿರುಚಿ
ಕೂನ ಕಂಗಳ ತುಂಬಿಕೊಳ್ಳಲು ಬಂದೆ ಬಂದೆನಪ || ೧೨೯ ||

ಶರಣರಿಗೆ ಶರಣೆಂದೆನುವದನು
ಸರಣದೀ ಪರಿಪಾಠಗಲಿಸುವ
ಸರಣಿ ಮತಿಸೀಕರಣಿ ಕಾಣುತ ಬರವದಾಯ್ತಪ್ಪ ||
ಅರಳಲಾಂತರಿಕ ಪರಿಮಳ ವಿ
ಸ್ತರಣವಾದಂತಾಯ್ತೆನಗೆ ಮನ
ದಿರುವ ಮೌಕ್ತಿಕ ಮೆರಗು ಮಾತೊಳ ಹೆಪ್ಪು – ತುಪ್ಪಾಯ್ತು || ೧೩೦ ||

ಬಂದುದನೆ ಕೈಕೊಳುವಿಕೆಯದನು
ಬಂಧದೊಳ ವಂಚನೆಯ ರಹಿತಾ
ನಂದನೇಮದು ತಪ್ಪದಿಹುದೊಪ್ಪಿತ್ತುನಿನ್ನಿರಿಯೆ ||
ಹೊಂದಿರುವ ಫಲದೊಡೆಯರಿಗೆ ಬಿಡ
ದಿಂದು ಅರ್ಪಿಸಿದಂಥ ಬೆಲೆಯಾ
ನಂದೆನಗೆ ಮತ್ತೇನು ವಿಜಯಕುಮಾರ ಹೇಳಪ್ಪ || ೧೩೧ ||

ಅರಪಿಸುವ ನಿನಭಾವದಾಚರ
ಣರಿಮೆಯೊಳ ಜಂಗಮನ ಪದರತಿ
ಭರತಿಯಾಗಿಹುದನ್ನೆ ಕಂಡೆನು ಕಮ್ಮನೆಯ ಸಮ್ಮ ||
ಸರಳ ಸತ್ಯ ವಿಶುದ್ಧ ಸದ್ದಿರ
ದೆರಕ ಹೊಯ್ದಂತಿರವ ನಿಜಗುಣ
ನಿರತ ಸಾರ್ಥಕ ಕಂಡೆ ಸತ್ಫಲದೆಡೆಯ ಕರೆ ಕಮ್ಮ || ೧೩೨ ||

ನೀಡಿ ನೀಡಿದೆನೆನುವಿಕೆಯ ಮನ
ಕಾಡದಲೆ ಕಂಪನ್ನೆ ಕೊನರಿಸು
ತಾಡುವಿಕೆಯೆಡೆ ಹರನು ಬೇಡಿದ್ದನ್ನೆ ಕೊಡುವನೆನು ||
ಮೂಡಣೋದಯ ಮಧುರ ಭಾವನೆ
ಗೂಡಿದಾ ಮಹದನುಭವಿಯ ನುಡಿ
ಕೋಡಿ ಮನೆ ಕಾಣುತ್ತ ನಿನ್ನಕುಟೀರದೊಳ ವಿಜಯ || ೧೩೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸತ್ಯ ಮಾರ್ಗದು ಚನ್ನ ನಿನ್ನೊಳ
ನಿತ್ಯ ನಂಬುಗೆಯೆಂಬ ತಂಬಿಗೆ
ತಥ್ಯ ತುಂಬಿಹುದಾಂಗಳದೊಳಗೆ ಹೊಂಬಿಸಲ ಹರಿಣಿ ॥
ಹೊತ್ತರಿತು ಪ್ರತಿಬಿಂಬಿಸಿಹುದಾ
ಕೃತ್ಯನಿರಮಲದೆಡೆಗೆ ಶಿವಸಾ
ಹಿತ್ಯ ಕೊಡಮಾಡುದಕೆ ಕಾರುಣ್ಯಾರ್ಥವೀ ಸರಣಿ ॥ ೧೩೪ ॥

ದಿಟ ನುಡಿಯುತಲದರದೇ ಮನ
ಪುಟದೊಳಗೆ ಮೂಡಿಸುತ ಮೂಡಣ
ನಟನೆಯಂತಿಹುದೆಡೆ ಯಶಸ್ಸಿನ ಸೂತ್ರ ಶಿವಪಥವೆ ॥
ಅಟಲ ನಿನ್ನೊಳ ಚನ್ನ ಚಿದ್ರಸ
ಪುಟಿ ಪುಟಿದ ಪುಷ್ಪಾಂಜಲಿಯದೊಳ
ಜಟಿಲ ವಿರಹಿತ ಕಂಡೆ ಕುಣಿದೆನು ವಿಜಯಕುವರಾರ್ಥ ॥ ೧೩೫ ॥

ಲಿಂಗ ಭಾವವೆ ಅಂತರಂಗ ಸ
ದಾಂಗ ತುಂಬಿಸಿಕೊಂಡ ಕಾರ್ಯ ಪ್ರ
ಸಂಗದೊಳ ಸುಯಿಧಾನಿಯಾಗಿಹುದನ್ನೆ ಪದ ಪದಕೆ ॥
ಸಂಗತಿಯ ಪ್ರತಿರೂಪ ಮಾಪನೆ
ಅಂಗದೊಳ ಪುಳಕಿತ ಸುಲಕ್ಷಣ
ದಿಂಗಿತವ ಕಾಣುತ್ತ ತಣಿದೆನು ಸದ್ದೆಶೆ ಕುಮಾರ ॥ ೧೩೬ ॥

ಉದ್ದಟಿರಲೆಡೆ ಕಾರ್ಯ ಕಂಗಳ
ಸಿದ್ದಿಸದು ಸಾಧಿಸದು ಸತ್ಫಲ
ಮುದ್ದಿಸದು ಮುದದೆಡೆಗೆನಿತೆನಿತು ನೋಡದದು ನಾಡೆ ॥
ಇದ್ದುದನೆಯಿದ್ದಂತೆ ನುಡಿದೆಡೆ
ಗೆದ್ದು ವಿಶ್ವಾರಾಧ್ಯ ಬರುವ ವಿ
ಶುದ್ಧತೆಯ ನೋಡಿರಲಿದೆನ್ನುವೆ ಭತ್ತದಾಗದ್ದೆ ॥ ೧೩೭ ॥

ಬಂದವರೊಡನೆ ವಿನಯ ಮಮತೆ ನಿ
ಬಂಧ ನಿರ್ಮಲ ನೇರ ಭಾವಾ
ನಂದ ಬೆಳಸಿಯ ಸುರುಚಿ ಸದ್ರಸಭಾವ ಸಂಬಂಧ ॥
ಹಂದರದ ಹೂವಾದ ಕಡೆಗನು
ಬಂದ ಶರಣರ ಚಿತ್ತದನು ಸಂ
ಬಂಧ ಹೊರತೇನಪ್ಪನದನೇ ಕಂಡೆ ವಿಜಯಪ್ಪ ॥ ೧೩೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರುಚರಣ ಸುಪ್ರೇಮ ಅಂಜನ
ಕರುಳ ಕಂಗಳಕಿದನೆ ಲೇಪಿಸು
ತರಳು ಭಾವಿತ ನಿನ್ನ ಪತ್ರದಿ ಕಂಡೆ ಕಾಣುತ್ತ ||
ಸರಿಯೆ ಗಂಗಾಧರನ ಕಳಿಸು
ತ್ತಿರುವಿಕೆಯದುಲ್ಲಾಸ ತಿಳಿಯು
ತ್ತಿರಲೆಡೆಗೆನಾ ನಾನೆ ಬಂದೆನು ಭಾವ ತಡೆಯದಲೆ || ೧೩೯ ||

ಕಂದನಾಡುವ ಕಡೆಗೆ ಜನನಿ ಸು
ನಂದ ಹೂವಿನ ನಯನ ಪಟದೊಳ
ಚಂದ ಕಲ್ಪನೆ ಕವನ ಬರೆಯುತ್ತವಳ ಬರವಂತೆ ||
ಚಂದ ಚಂದನ ಭಾವನೆಯ ನುಡಿ
ಬಿಂದು ಭರಿತಾ ಚಿತ್ರ ಪತ್ರಗ
ಳಂದು ಬಂದಿಹುದನ್ನೆ ನೆನಪಿಸುತಿಂದು ಪದವಂತೆ || ೧೪೦ ||

ಹಮ್ಮ ಬಿಮ್ಮೆನಿತಿರದ ಹೂ ಕಡೆ
ಹುಮ್ಮನದದಿಂ ಬರುವಿಕೆಯು ನಿರ
ತೊಮ್ಮನದ ನಿರಿ ಕನ್ಯೆಯಳ ಕಲ್ಪನೆಯೊಳಗೆ ಸಂಕಲ್ಪ ||
ಕಮ್ಮನೆಯದಿರವಂತೆಯಾ ಪರಿ
ನಮ್ಮನಾಕರ್ಷಿಸಿತು ನಿನ್ನೆಡೆ
ಗೊಮ್ಮನದಿ ಬರುದಾಯ್ತು ಕತ್ತುರಿಯಂತೆ ಗಂಧ ತೊರೆ || ೧೪೧ ||

ಕಂಡೆನಾ ಪ್ರಾಮಾಣಿಕತೆ ಮನ
ಗಂಡೆ ದುಡಿಮೆಯದೊಳಗೆನವನೀ
ತುಂಡೆ ಸಮ ಬರಹಾಳ ಪಚಿಸುತ್ತಿಂದುದಾತುರದಿ ||
ಗೊಂಡೆಯಂತಿಹ ಫಲವದುವೆ ಏ
ರಂಡದಡಗಿದ ಶೀತ ಸಮ ಶಿರ
ಕುಂಡದೊಳವಿನಯಾಮೃತವ ಮನಗಂಡೆ ಭರಿತ ವಿಧಿ || ೧೪೨ ||

ನನ್ನೆಣಿಕೆ ನಿನ್ನ ಬದುಕೊಳಗೇ
ನೆನ್ನದಿಹ ಸತ್ಕಾಯದಾಮೃತ
ವನ್ನೆ ಭುಂಜಿಸುತೋತ್ತಮತೆ ಸದ್ಗುರು ಚಿದಾಮೋಹಿ ||
ಕನ್ನಡಿಯದೇನಂತೆ ನೋಡುವ
ಚನ್ನಿಗನಯಿರವಂತೆಯೇ ಪ್ರತಿ
ಮುನ್ನುಡಿಯನಿಡುವಂತಿರಲಿ ಜೀವನ ಸದಾ ನೇಹಿ || ೧೪೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೋಡಲೀ ಜೀವನದಿ ಬೆಂಕಿಯೊ
ಳಾಡುವಿಕೆ ಗಮ್ಮತ್ತುಗರಿಮೆಯ
ಜೋಡಿಯೊಳಗಿರಲದರದುಪಯೋಗದಿ ವಿಚಾರಂತೆ ॥
ಆಡುತಿಹ ಸಂಸ್ಕೃತಿಯ ನಿಬಿಡೊಳ
ನೋಡುತದರೊಳ ಕಲಿವ ಪಾಠಗ
ಳೇಡಿಯಂತಾಗಿಹುದ ತೊರೆದುದೆ ಬದುಕು ಬುಧರಂತೆ ॥ ೧೪೪ ॥

ಓದಲದೆ ಮಹಕಾವ್ಯದೊಳ ಬಿಡ
ದಾದುದೀ ಬೆಂಕಿಯದ ಲೀಲಾ
ಮೋದ ಗೂಡಿರಲೇನು ಶುಭ ಜ್ಞಾನಾಗ್ನಿ ನಿನ್ನೊಳಗೆ ॥
ಹಾದಿಗೂಡಿರಲದರ ಬಲದೊಳ
ಗಾದುದೇ ಸಂಸಾರ ಸಂಸ್ಕೃತಿ
ಸಾಧುಮಯವೆನಿಸುತ್ತಲಿರುವಿಕೆ ನಿನ್ನದಾಗಿರಲಿ ॥ ೧೪೫ ॥

ಬದುಕುದಕೆ ಬೇಕಪ್ಪ ಮಣ್ಣಿದೆ
ಸದರ ಬೆಳೆಯಲು ಬಳ್ಳಿ ಬಾಳುದ
ಕಿದರದೇ ಬಹುಮೇಲ್ಮೆಯೆಂಬಂತಿರವ ಲಕ್ಷಿಸುತ ॥
ಹದ ಸದಾತುರ ನಿತ್ಯ ಜೀವನ
ಕಿದುವೆ ನಿನಗಾಧಾರವಾಗಿರ
ಲದರ ಬೆಲೆ ತಿಳಿದಂತೆ ತಿಳಿ ಸಂಸಾರ ಸಾಹಿತ್ಯ ॥ ೧೪೬ ॥

ಇತಿ ಮಹಾಭೂತದೊಳಗಿಹುದ
ಮಿತ ವಿಶಿಷ್ಟತೆ ವಿವಿಧ ಗುಣ ಘನ
ತತಿಯನುಸರಿಸಿ ಕಾಣುವ ಪರಿಯೆ ನಮ್ಮ ಕಾಯದೊಳು ॥
ಸತತಿದರದೇ ಸೂಕ್ಷ್ಮದೊಳಗಣ
ಗತಿ ನಿರಂತರಲಿದರ ಬೆಲೆಯನು
ಚಿತದೊಳಾಗದ ಪರಿಯೊಳಗಿರಲಿ ದಿನದುಡಿಮೆ ಚಿಲುಮೆ ॥ ೧೪೭ ॥

ಎಲ್ಲರೊಳಗಿದರಂಟು ಗಂಟಿನ
ಗುಲ್ಲ ಗಮ್ಮತ ನಂಟು ದಂಟಿನೊ
ಳುಳ್ಳ ಗಣಿಕೆಗಳೆಂಟು ಅಡಗಿರಬೇಕು ಕುಂಟದದ ॥
ಸಲ್ಲಲಿತ ಸಕ್ರಮ ತಿಳಿಬಿಡ
ದುಳ್ಳ ಲಿಂಗಸಕೀಲ ಸಂಪದ
ಸೊಳ್ಳೆ ಭಟರಿಗಿಲ್ಲಿದರ ಪ್ರಜ್ಞಾನವೆಂಬುದರಿ ॥ ೧೪೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸತ್ತ ಬದುಕದು ಸರಿಯೆ ಜೀವನ
ಗತ್ತಿನೊಳ ಹಲವಿಧದಿ ಮನ ಬೇ
ಸತ್ತು ಸತ್ತವರುಂಟು ಸತ್ತರು ಸಾಯದಂಥವರು ॥
ಸತ್ಪುರುಷರಿರವತ್ತ ಭಾವನೆ
ಭಿತ್ತಿಯೊಳಗವರಾಳ ಚಿಂತನೆ
ಬತ್ತಿ ಬೆಳಗಿಸುತಿರಲಿದುವೆ ಚಿರ ಕೌಶಲ್ಯಕಮನೀಯ ॥ ೧೪೯ ॥

ಬಳ್ಳಿಯೂ ಬದುಕುವದು ಪಾಕದ
ಕುಳ್ಳಿಗುಂಟಪ್ಪವಧಿ ಸುಮನಸ
ದುಳ್ಳವರ ನಡೆ ಸದರ ಸಾಕಾರೆತ್ತ ನೋಡತ್ತ ॥
ಬೆಳ್ಳಿ ಹಂಸದ ಹದ ವಿಹಾರತೆ
ಯಲ್ಲಿರುವದನುಮೋದತೆಯ ಹೊಲ
ಬೆಲ್ಲಹುದೊ ನಿಜವಲ್ಲ ಬದುಕಿನ ಬೆಲೆಯ ಸೂಕ್ಷ್ಮತ್ತ ॥ ೧೫೦ ॥

ಜೀವನಿದು ಹೋರಾಟ ಹಲ ಕೆಲ
ಜೀವಿಗಳ ತೊಳಲಾಟದಿರೆ ಪರಿ
ಭಾವಿಸುತಲುಪಕಾರಮಾಡದ ಮಂಥರೆಯ ಮಾಟ ॥
ದೇವ ಭಾವಿತನಾಗಿರುವ ಕಡೆ
ಗಾವ ನಷ್ಟತೆ – ತಾಳ್ಮೆಯಿರುತಿರ
ಲಾವದೇ ಸಮಸ್ಯೆದೊಳ ಸಾರಥಿ ಗುರುಗಳಿರುತಿರಲು ॥ ೧೫೧ ॥

ಸಾಗುವಿಕೆಯೊಳ ಸೌಖ್ಯಹದುಳದೊ
ಳಾಗುತಾ ಸಂಕಲ್ಪ ಸಫಲ ಸ
ರಾಗ ಸಿದ್ಧಿಸಿದಂತೆ ಹಿಂದಿನದೆಲ್ಲ ಹಿಂದುಳಿಸಿ ॥
ತಾಗಿ ಹೋಗಿಹುದೆಡೆಗೆ ನೋಡಿರ
ಲೀಗವಿಕಸಿತವಾ ವಿಹಾರನು
ಗಾಗ ಸಾಗಿಹುದಿದುವೆ ಕಾಯಕ ಅನ್ಯರಿಗೆ ತಿಳಿಸು ॥ ೧೫೨ ॥

ಅನ್ಯರಂ ತಿದ್ದುವಿಕೆ ಮೊದಲೇ
ತನ್ನತಾ ತಿದ್ದಿಕೊಳುತಿರಲಿದೆ
ರನ್ನ ದುಂಗುರ ಕರದಿ ಶೋಭಿತವಂತೆ ಚಲುವಂತೆ ॥
ಕಣ್ಣೊಳಡಗಿಹುದುನ್ನತಾಗ್ನಿಯೊ
ಳನ್ಯ ವಸ್ತುವ ಕಂಡು ನಿರ್ಲೇ
ಪನ್ನುವಂತಿರಬೇಕಿದುವೆ ಜೀವಾಳ ಬದುಕಿಗದು ॥ ೧೫೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸರಿಗಮಪಧನಿಯೊಳಗೆ ಅಡಗಿಹ
ಸುರಸರಾಗಗಳಂತೆ ನಿನ್ನೊಳ
ಗಿರುವ ಜೀವನಪಥ ಯಶಸ್ವಿಯೊಳಿಹುದಲೆಂಬೆನಿದ ||
ಬೆರಳಗಳರಳಿರೆ ತಬಲಾಂಗದೊ
ಳಿರುವ ಸಕ್ರಮ ತಾಳದಂತಿಹು
ದರಳು ನಿನದೆನುತಾಗ ಕರುಣಿಸಲಾಗ ಫಲಪುಷ್ಪ || ೧೫೪ ||

ವಿಜಯಕುಮಾರ ವಾಣಿ :

ಗುರುವೆ ನನಗೀ ನುಡಿದಿರುವ ಪರಿ
ಯಿರವ ನನ್ನೊಳಗಿದೆಯೊಯೆಂಬುದ
ನರಿಯೆ ಕಿಂತುರೆ ನಿಮ್ಮ ಶರಣರ ಪಾದದೊಡುಗೆಯನು ||
ಸರಳಿರಿಸಿ ಪಾಲಿಪುದಿದಾತ್ಮದ
ಕರೆಯಿಹುದ ಬಯಕೆಯೆನೆ ಜನನಿಯ
ಳಿರುಸುವಂತಿರಿಸಯ್ಯ ಪುಟದೊಳಗಿಟ್ಟ ಮಿಸುನಿಸಮ || ೧೫೫ ||

ಇರಿಸು ಜೀವನುಸಿರಿರುವವರೆಗೆ
ಭರಿಸುತೆನ್ನೊಳ ಸಂಗ ಶರಣರ
ಸುರಸ ಸೂಳ್ನುಡಿ ಸತ್ಸದಾಭರಣಾಳ ಸಮತೆಯಲಿ ||
ಭರಿಸು ನಿರ್ಮಲದಿರವ ತವಪದ
ದಿರಿಸು ಕೊನೆತನ ಭಾವ ಬಂಧುರ
ಬೆರೆಸು ವಿಬುಧರ ಪದದಿ ದೈನಂದಿನದ ಸೌಭಾಗ್ಯ || ೧೫೬ ||

ನಿಮ್ಮವರ ಪೂಜಿಸುವದಭಿರುಚಿ
ನಿಮ್ಮನೇ ನೆನೆನೆನೆವದಭಿ ಖುತ
ನಿಮ್ಮನೇ ಪರಿಭಾವಿಸುವ ಸಂಪನ್ನತೆಯ ರೂಢಿ ||
ಒಮ್ಮನದೊಳಾಗಿರಲಿ ಸಂಸ್ಕೃತಿ
ಗುಮ್ಮದೊಳಗಂಜದಯೆ ಸಾಗುವ
ಸೊಮ್ಮ ಸಿರಿವಂತಿಕೆಯ ಚಿರದಿರಿಸಯ್ಯ ಜಗದಯ್ಯ || ೧೫೭ ||

ನಿಷ್ಕಕಾಯಕದೊಳಗೆ ದೊರೆತಿರ
ಲಷ್ಟರೊಳ ಸಂತೃಪ್ತಿ ಪಡುವ ವಿ
ಶಿಷ್ಟತೆಯ ವೈಚಾರಿಕತೆ ಸಂಪದಿರಲಿದೆಸಯ್ಯ ||
ದೃಷ್ಟಿಯೊಳಗಾಗುವ ಸುನಂದ
ಸ್ಪಷ್ಟ ಕರುಣಿಸಿದೆಡೆಯೊಳಾ ಸೈ
ಕಷ್ಟದೊಳಗು ಕನಿಷ್ಕತೆಯದೆಡೆಗಾಗಲಾರೆನು ನಾ || ೧೫೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಾವೆ ಕರುಣಿಸಿದಂಥ ದ್ರವ್ಯವ
ದೇವ ನಿಮಗಲ್ಲದಯೆ ಮತ್ತಿ
ನ್ನಾವದಿಶೆಗಾ ಮಾಡಲಾರೆನು ನಿಮ್ಮಸೊಮ್ಮಿಂಗೆ ॥
ಶ್ರೀವಿವೇಕದಿ ಧರ್ಮದುಡಿಮೆ ಸ
ದಾವಕಾಲದಿ ತೊಡಗಿಸುವೆನನು
ಭಾವಿಗಳ ನುಡಿದಂತೆನಲು ಜಗದಾರ್ಯನಿಂತೆಂದ ॥ ೧೫೯ ॥

ಚನ್ನಿಧಿ ವಾಣಿ :

ನಿನ್ನಯೋಗ್ಯತೆ ಮೀರಿ – ಕಳಿಸಿಹು
ದೆನ್ನ ಪೀಠದಿ ಪೂರವಾಗಿರ
ಲಿನ್ನು ಕಳಿಸಲು ಬೇಡ ಭಕ್ತಿಯ ಭಾವವಿರೆ ಸಾಕು ॥
ನಿನ್ನಸಿರಿಸಂಪನ್ನ ಸತ್ಪಥ
ಚನ್ನ ಮುಂದೊರೆಯಲೆನುತಾ ಪದ
ಮುನ್ನ ಗಂಗಾಧರನ ಜತೆ ಸಾಗಿರಲು ನಿಜದಿತ್ತ ॥ ೧೬೦ ॥

ವಾಚನ :

ಮನೆಗೆ ಬರುತಿರುವಾತ ಗುರುವರ
ನನುವಿನಿಂ ಪದಪಾಠ ಹೇಳುತ
ಲನಿತು ಹೊರಟಿಹದಿಶೆಗೆ ಛಾತ್ರರು ನೋಡುತಿರುವಂತೆ ॥
ವಿನಯದೀತನ ನಯನ ಲಯದೊಳ
ಕೆನೆಯ ಕಲ್ಪನೆ ಕುಣಿಯ ತೊಡಗಿಹು
ದೆಣಿಕೆ ಬಲ್ಲವರಾರು ಚನ್ನಿಧಿ ಹೊರತು – ನಿಜವಂತೆ ॥ ೧೬೧ ॥

ಇತ್ತಸನ್ನಿಧಿ ಬೆಂಗಳೂರೊಳ
ಬತ್ತದ ನಿಮಂತ್ರಣೆಡಲೆಡೆ ಸಾ
ಗುತ್ತಲಾ ದೈನಂದಿನ ಪರೀಕ್ಷಿಸುತ ಶಿವಸೂತ್ರ ॥
ಚಿತ್ತದಿಂ ತೆರೆದಿಡುತಲಾ ಸ
ಚಿತ್ತದಿದನೇ ಗ್ರಹಿಸುತಿದೆ ನಡೆ
ಹೊತ್ತರಿತುಸಾಚರಣೆ ಪಿಡಿರೆನುತಾತ್ಮ ಸಾಕ್ಷಿಯಲಿ ॥ ೧೬೨ ॥

ಅಂತು ಬೆಳಗು ೧೭ಕ್ಕಂ ಪದ ೧೬೨ಕ್ಕಂ ಒಟ್ಟು ಪದ ೯೬೦ಕ್ಕಂ ಶಿವಂ
೧೫-೩-೨೦೧೬ ಮಂಗಳವಾರ ರೋಹಿಣಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳಗು - ೧೮

ಬಯಲಿಲ್ಲದ ಬಯಲು

ಸೂಚನೆ :

ಭಕ್ತರಿಚ್ಛೆಯದಂತೆ ದರುಶನ
ಮುಕ್ತದಿಂ ದಯಪಾಲಿಸುತ – ಪರ
ಮೋಕ್ತಮಹನಿಜೈಕ್ಯವಾದುದ ವಿವರ ವೈಶಿಷ್ಟ್ಯ ॥

ವಾಚನ :

ಹರ್ಷದಿಂ ಸಂಚಾರದೊಳಪರ
ಹರ್ಷ ವರ್ಷಾಸುರಿದ ಸರಣಿ ಸ
ಹರ್ಷದೊಳ ಮುಗಿಸುತ್ತ ಪೀಠಕೆ ಮರಳುತಿಲ್ಲಿಯದ ॥
ವರ್ಷವಿಡಿ ನಡೆವಂಥ ಕೃತಿ ಸಾ
ಹರ್ಷದಿಂದಳೆಯುತ್ತ ಪಯಣದು
ವರ್ಷದಾಮಂತ್ರಣದಿಶೆಗೆ ಕಟಿಬದ್ಧ ಹಾಕದಲೆ ॥ ೧ ॥

ಒಪ್ಪದೆ ತುಲಾಭಾರ ಬೆಡಗವ
ನಪ್ಪದಿಹ ಸನ್ನಿಧಿಯ ಸದ್ಭಾ
ವೊಪ್ಪುತರಿತಿಹ ಬಡವ ಹಳ್ಳಿಗರಿಚ್ಛೆಯಂತೆ ಗುರು ॥
ಅಪ್ಪಟನುಭವ ವೈಭವೋತ್ಸವ
ಹೆಪ್ಪದೆಡೆಗಾಸಿಸದೆ ಪುರದೆಡೆ
ಗೊಪ್ಪಿಹುದನಾ ಕಂಡುಕೊಂಡಂಥಿಹುದ ನಡೆಯೆನ್ನಿ ॥ ೨ ॥

ನೋಡಿರೆ ಮಹಾರಾಷ್ಟ್ರದೊಳ ಸಹಿ
ತಾಡುತದೆ ಲಿಂಗಾಯತರೊಳಿಹ
ನಾಡಿಗದೆ ಬಲ ಭರಿಸಿದವರಿವರೆನ್ನಿರಿನ್ನಾರು ॥
ಬಾಡುವಂಥಹ ಬಡವ ಗುಡಿಸಲ
ನಾಡಿ ತಾನಾಗುತ್ತಲಾ ಕೃಪೆ
ಮಾಡಿಹುದ ಕುರುಹುಗಳು ಕಾಣುತ್ತಿಂದು ಸಹಮೇರು ॥ ೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆವರ ಸುರಿಸಿಹುದವರ ದೇಣಿಗೆ
ಸವೆಸಬೇಕು ಸಮಾಜಕಾಗಿಯೆ
ತವಕದೈಷಾರಾಮದೆಡೆ ಸರಿ ಅಲ್ಲೆನುತ ಮನದಿ ||
ಪವನದಡಗಿದ ಬಲುಮೆಯುದ ಪರಿ
ಯಿವರ ನಿಲವಾರರಿವರಿದ ಪರಿ
ಭವದಿ ಬಳಲುತ ಬಂದು ಪಾವನಗೊಂಡವಗೆ ತಿಳಿಮೆ || ೪ ||

ಸಲ್ಲಿಸಿದ ಕಾಣಿಕೆಯು ಯೋಗ್ಯತೆ
ಯಲ್ಲಿದಿಶೆಯಿಂ ಬರಲದನು ನಿಜ
ದಲ್ಲಿ ತಕ್ಕಷ್ಟನ್ನೆ ಸ್ವೀಕರಿಸುವಿಕೆಯಾರಲ್ಲಿ ||
ನಿಲ್ಲದೀ ಮಹ ಘನತೆ ಗುಣ ತೆರೆ
ಯಲ್ಲಿ ನಿಜ ನೋಡಲ್ಲಿ ತೇಲು
ತ್ತಲ್ಲಿ ಶೋಭಿಪ ಕಮಲ ಸಾದೃಶವಂತು ನೋಳ್ಪಂಗೆ || ೫ ||

ಬರಿದೆ ಶಿಷ್ಯರೊಳಿರುವ ಹಣದೆಡೆ
ಗಿರದೆ ಭಾವೊಳಗಡಗಿರುವ ಸುರು
ಚಿರದ ಚಿತ್ತವ ಸೆಳೆದು ಪರಿಪಾಲಿಸುತಿರಲಿದೆ ಫಲ ||
ಸರಳ ದೊರಕಿತ್ತವರಿಗಾ ಮರು
ಮರಳುತವರಾ ಜನನಿ ಮೊಲೆಯಾ
ತುರತೆಯನೆ ಕಳಕೊಂಡ ಪರಿಯಾಗಿಹುದರಿವು ಜಟಿಲ || ೬ ||

ಚಿನ್ಮಯನು ನೈಜಾಂತರಂಗ ದೊ
ಳಿನ್ನಿತರಬಲಹೀನರಾ ಮತಿ
ಮುನ್ನಡೆಸುತ ವಿಕಾಸಗೊಳಿಸುವ ಬಂಕೆ ಬಿಚ್ಚದೆಯೆ ||
ಚನ್ನ ತನ್ನೊಳ ತಾನೆ ಯೋಚಿಸು
ತನ್ನನುವ ಗುರಿಪಾಠ ಹಿಂದಣ
ದುನ್ನತಾ ಸ್ಥಾಪಿಸಿದದಂಥ ಪ್ರಸಾದ ನಿಲಯ ಬಗೆ || ೭ ||

ಎಚ್ಚರೊಳ ಬಿಡದಲ್ಲಿ ನಡೆಸುವ
ದುಚ್ಚಮಟ್ಟ ನಿಜಾತುರದಿ ನಡೆ
ಗಟ್ಟಿಗೊಂಡಿಹುದರಿತು ಮುಂದಿನ ಮಾರ್ಗ ತಿಳಿಸುತ್ತ ||
ನಿಚ್ಚಳ ಮಹಾರಾಷ್ಟ್ರದಲ್ಲಿ ಸ
ರ್ವೋಚ್ಚದಿಶೆಯಿಹುದರಿತು ಸಂತಸ
ಪಚ್ಚದಂತಿರಲಾ ನಿಮಂತ್ರಣ ಬಂದಿತಾವಾಗ || ೮ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೂಲಿಯೊಳ ಮಹಕಾಶಿ – ಶಾಖಾ
ಮೇಲು ಮಠದಿಹ – ಪೂಜ್ಯರಾ ಸ ವಿ
ಶಾಲ ಸನ್ಮತಿ ಶಿವಭಕುತರಾ – ಗುರಿಸದಾಶಯದಿ ॥
ಕಾಲರಿಸಿದಂತಾಗುತೀ ದಿಶೆ
ಪಾಲಿಸಲು ದಯಮಾಡಿಸುತಲನು
ಮಾಲೆ ಉದ್ಘಾಟನೆಯ ಮಾಡುತಲಾ ಶಿಲಾ ಮಠವ ॥ ೯ ॥

ವೈಭವದಿನಡೆದಂದಿನಾದಿನ
ವಾ ಭಕುತರಿಗೆ ಕರುಣಿಸುತ ಸ
ಲ್ಲಾಭನಿಪ ಸದ್ಭೋಧ ಸಾಂಪ್ರತ ಮತಿಗೆ ಸವನ ಹನಿ ॥
ಶ್ರೀ ಭಜನೆ ಮಾಡುತ್ತ ಬಂದವ
ರಾ – ಭಸಿತರೆಲ್ಲರ ಸದರ್ಶನ
ಲಾಭದಾಶೆಯೊಳಿವರನಾ ಲಕ್ಷಿಸುತ ಪದ್ಮ ಪನಿ ॥ ೧೦ ॥

ಭವ್ಯದ ಸಭಾಂಗಣದಿ ಶೋಭಿತ
ಸೇವ್ಯದಾಕಾಂಕ್ಷೆಯಲಿ ಜನಮನ
ನವ್ಯ ನಿರಿ ವಿಹಿತಾದವರಿಗಾ ಚಿದ್ರಸದ ಬೋಜ್ಯ ॥
ಕಾವ್ಯದೊಳಗಡಗಿರುವ ರಸ ಸಂ
ಭಾವ್ಯ ಭಾವಾಗಸದ ಸತ್ಸವಿ
ಗವ್ಯ ಕೊಡಮಾಡುತ್ತಲಾ ದಿನ ಹಾರ ಸಾಮ್ರಾಜ್ಯ ॥ ೧೧ ॥

ಚಿತ್ತದೊಳಗಡಗಿಹುದ ಗೌಪ್ಯತೆ
ಪಾತ್ರ ಸಹಜಾಸಕ್ತ ಕಾವ್ಯ ವಿ
ಚಿತ್ರ ಚರಿತಾಶ್ಚರ್ಯ ಚವಿ ಗಾಂಭೀರ್ಯನುಡಿಚರ್ಯ ॥
ಮಾತ್ರ ಮೇಳ ರಸಾಯನಾತ್ಮೊಳ
ಗಾತ್ರ ಗಣಿತೆತ್ತಣದ ತಳಕ ಸು
ಸೂತ್ರ ಸದ್ಭೋಧನೆಯ ಚೈತ್ರತೆ ಅಂಶ ಸೌಂದರ್ಯ ॥ ೧೨ ॥

ಚಿನ್ನಿಧಿ ವಾಣಿ : ೭-೮-೧೯೮೯ ಹೂಲಿ ಹಿರೇಮಠ

ಮುದ ಶಿಲಾಮಂಟಪ ಕಲಾಮಯ
ದುದರದೊಳ ತುಂಬಿರುವ ಬೆಳಕಿನ
ಸದರದೊಳಗಾಗುತ್ತ ನಡೆದಿಹುದೀ ಸಭಾಸುಮನ ॥
ಅಧರವೆರಡರ ಯೋಗವಿರೆ ಸರ
ಳುದರಕದು ಸಾಫಲ್ಯ ಸಮತೆನಿ
ತಿದುವೆ ತಿಳಿಯಿರಿ ತಣ್ಣ ತಿಳಿ ಸು ಹೃದಯದೊಳ ಸುಘನ ॥ ೧೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೋಡಲೀ ತನು – ಪಂಚಭೌತಿಕ –
ಗೂಡುತಾಡುತ್ತಿರುವ – ಪರಿಮಳ
ವೋಡಿಯೊಳಗೂ ಸಮ್ಮುದ್ರರಕಾಧಾರಯಿಲ್ಲೆನದು ॥
ಆಡುತೀ ಮಠದೊಳಗೆ ಮೂರ್ತ ಸ
ದಾಡುವಿಕೆಯಿರೆ ಶೋಭೆ ಸತ್ಪಥ –
ತೀಡಿ ತಿದ್ದುದಕಾಗಿಹ ಸಮಾಜದ ಸುಸೇವೆಗಿದು ॥ ೧೪ ॥

ಹೇಗೆ ನಡೆಸುವರೆಂಬುದನು ಸಲಿ
ಸಾಗಿ ನೋಡುವನೊಬ್ಬ ನಮ್ಮೊಳ
ಗಾಗಿರುತಲೇನೆನದೆ ಲಕ್ಷಿಸುತೆಲ್ಲ ತಾ ಸಾಕ್ಷಿ ॥
ಭಾಗಿಸುತಲೆಲ್ಲವನರಿಯುತ ಸ
ರಾಗಗೊಂಡಿಹುದೆಲ್ಲ ಕಾರ್ಯ ವಿ
ಭಾಗದಿಹ ಸೂಕ್ಷ್ಮಾಂಶ ತೋಳೆ ಮೇಳಾಂಗ ನೈಜಾಕ್ಷಿ ॥ ೧೫ ॥

ಪದ ಪರಂಪರೆ ಪಾತ್ರ ಪಲ್ಲವಿ
ಮುದರೊಳರಳುವ ಸೂತ್ರ ಸಮ ರವಿ
ಕದ ತೆರೆದುದೆಡೆ ಕಿರಣ ಕಂಕಣ ಹರಡುವಂತೆ ಕೆನೆ ॥
ಹದ ಸದಾತುರ ಭಕ್ತಿ ಭಾವನೆ
ಮಧುರದೊಳು ಮಧು ಕುಂಭ ಶೋಧನೆ
ಸದರಗೊಂಡಿರಲಾಗ ಗುರು – ಭಕುತರೊಳಗಾಗ – ತೆನೆ ॥ ೧೬ ॥

ಭಕ್ತರಿರಲೆಡೆ ಮಠದ ಮಹ ಸಂ
ಯುಕ್ತವಾಗಿಹುದಯ್ಯ – ಗುರುನುಡಿ
ಶಕ್ತಿಯೊಳಗಾದಾಗ ವಿಕಸಿತಲುಭಯ ಪುಷ್ಪಹುಡಿ ॥
ಉಕ್ತ ಬೀಜದೊಳುದಿಸಿದಾ ಸಹ
ಜೋಕ್ತ ಮೊಳಕೆಯನರಿತು ಸೇವಿಸ
ಲುಕ್ತ ಗೋಚರಗಮ್ಯ – ಫಳಕೆರಡೆಡೆಗದೆಂತು ಮಿಡಿ ॥ ೧೭ ॥

ಕೇಳಿರಿದ ವಸ್ತುವನೆ ನೋಡುವ
ಮೇಳದೆಡೆ ನಯನೆರಡಳೊಂದೆಡೆ
ತಾಳ ಗೂಡಿರುವಂತೆ ಗುರು – ಭಕ್ತರೊಳಗಿದೆ ತಥ್ಯ ॥
ಕಾಲಗತಿ ತಕ್ಕಂತೆ ಆಪ
ತ್ಕಾಲದೊಳಗೂ ಯೋಚಿಸುತಲನು
ಶೀಲದೊಳಗಿರಬೇಕು ಓತಪ್ರೋತದಿರೆ ಪಥ್ಯ ॥ ೧೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಕ್ತಿನಿಮ್ಮೊಳಗಿದ್ದರೇನಾ
ಸಕ್ತಿ ನಿಮ್ಮೆಡೆಗಿಡದಿರಲು ಚಾ
ಟೂಕ್ತಿ ಬರದಿರದೇನು ತೂಗುತ ಸಾಗುವಿಕೆ ಮುಂದು ॥
ಭಕ್ತಿಯಿರಬೇಕೆಂದರೂ ಸ
ದ್ಭಕ್ತಿಗದು ಬೆಲೆಯಯ್ಯ ಪರತರ
ಮುಕ್ತಿ ಮೌಕ್ತಿಕದಂತೆ ಕೊನೆ ತಾನಾಗಲಿದೆ ಸಿಂಧು ॥ ೧೯ ॥

ಒಳ್ಳೆ ಜೀವನ ಸಾಗಲದರೊಳ
ಗೊಳ್ಳೆ ಸೋದ್ದೇಶಗಳು ನೋಡಿರೆ
ಬಳ್ಳಿ ಮರವಾಶ್ರಯದಿ ಬೆಳೆಯುವ ಪರಿಯೆ ಸಮಕಂದ ॥
ಉಳ್ಳ ಮಾತೆಯ ಲಲ್ಲೆಯೊಳ ಬಿಡ
ದುಳ್ಳ ವಿಕಸಿತದಂತೆ ಮಾನವ
ಬೆಲ್ಲದಂತಹ ಭಕ್ತಿಯೊಳಗಿರಲದುವೆ ಶ್ರೀಗಂಧ ॥ ೨೦ ॥

ತಿಳಿದು ತಿನಲದೆ ತೃಪಿಯದು ತಿಳಿ
ತಿಳಿಯದೆಯೆ ಉಣಲಾರಲದುವೇ
ತಿಳಿಯುತಿದ ಸದ್ಭಕ್ತಿ ತಿಳಿಯದ ರೀತಿಯಿರಲೇನು ॥
ಬೆಳೆದು ಭಾವನೆಯೊಳಗೆ ಅಡಗದ
ಬೆಳಕು ಬೆಳಗುತಲಿರಲಿದಾತನ
ಬಳಲುವಿಕೆ ಹೊರತಾದ ಸಂತಸ ಸೂರೆಗೊಳ್ಳುವದು ॥ ೨೧ ॥

ಜಾತಿ ಮತ – ವಯ – ಲಿಂಗ – ಭೇದ – ವಿ
ಜಾತಿಯೆಂಬುವದಿರದೆ ಮಾಡುವ
ರೀತಿ ಸುದೃಡ ಸುಮತಿ ಭಂಡಾರೊಳಗೆ ಸಾಗಿರಲು ॥
ಜಾತಿಯದು ಸರ್ವೆಡೆಗೆ ತಂತಾ
ನೋತು ಪಸರಿಸುವಂತೆ ಪರಿಮಳ
ಗೀತ ಭೇದೆನಿತಿರದೆ ತಗಲುವದಂತೆ ಫಲವಹುದು ॥ ೨೨ ॥

ಶಿವ ರಸಾಯನ ನಾಮ ಪಾನದೊ
ಳವಿರತದಿ ತಲ್ಲೀನವಾಗಿರ
ಲವನಿಯೊಳಗವರೆಲ್ಲ ಪಾವನಗೊಳ್ಳದಿಹರೇನು ॥
ಕವನಗಳನಾತುರರದಿ ತಾನೋ
ದುವಗೆ ಚಿತ್ತದ ಚಾರು ಲಭಿಸುವ
ಸವಿಯು ಸಹಜಿರುವಂತೆ ಸತ್ಫಲ ದೊರೆಯದಿಹದೇನು ॥ ೨೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಕ್ತಿಯುಳ್ಳವ ಶಿವಗೆ ಸುಪ್ರಿಯ
ಸೂಕ್ತ ನೆನಿಸುವನಯ್ಯ ಸಹಜ
ವ್ಯಕ್ತದಾಮೃತ ಉಂಡವನುಭವ ನರಿಯ ಮತಿಮೂಢ ॥
ವ್ಯಕ್ತ ಹಲಶಾಸ್ತ್ರಾಂಗ ಪರಿಣತ
ಯುಕ್ತನಾಗಿರಲಲ್ಲಿ ಸರಿ ಸ
ದ್ಭಕ್ತಿಯಿರದಿರೆ ಬೆಳಕಿರದ ಕಡೆಯಲ್ಲಿ ಇದ್ದಂತೆ ॥ ೨೪ ॥

ದೀಪ ಹಿಡಿದವಗುಂಟೆ ಕತ್ತಲೆ
ಮಾಪನೆಯದಂಜಿಕೆಯು ತಿಳಿರಿದ
ತಾಪಸಿಗೆ ಪರಿಭವದ ದಿಶೆಯೆಂತಿಹುದು ನೋಡಯ್ಯಾ ॥
ಶ್ರೀ ಪರಾತ್ಪರ ಶಿವನ ನೆನೆಯುವ
ಭೂಪನಿಗದೆಂತಹುದುದಾ ಭವ
ತಾಪದಾ ಸಂತಾಪವೆಲ್ಲವು ಸಾಪ ಸೊಬಗಯ್ಯ ॥ ೨೫ ॥

ಮುಂದೆ ನೀನೇನಾಗಬಹುದನು
ವಿಂದ ಯೋಚಿಸುದೇಕೆ ಚಿರಪದ
ಗಂಧರೊಳಗಾದವಗೆ ಗರಿಮಾನಂದದೊಳಗಾವ ॥
ಮುಂದಿನಾಲೋಚನೆಗಳಹುದಾ
ಗಂದು ಪರಮಾನಂದ ಸುಖಿಯೊಳ
ಗೊಂದಿರದು ಲೋಕಾಂತ ಗತಿ ದುರ್ಗಂಧ ಸಂಬಂಧ ॥ ೨೬ ॥

ಏಕೆ ತೊಳಲುವದೇಕೆ ಹಲವಿದ
ತೂಕಳಿದು ಹಲ ಪಥವನಳಿಯುತ
ಸಾಕಿದೆ ಪರಾಭಕ್ತಿ ಭಾವಾಸಕ್ತದಿರೆ ಸೂಕ್ತ ॥
ಕಾಕ ಮಾನಸಗೆಂತು ಲಬ್ಯದು
ದೇಕ ಮುಖ ರುದ್ರಾಕ್ಷಿಯಂತೆ ತ
ದೇಕ ಚಿರಪದ ಲಕ್ಷಿತಗೆ ಸಂತೃಪ್ತಿ ಸೊಬಗ ಮಿಗೆ ॥ ೨೭ ॥

ಕುಡಿದು ಬರಲವನೆಡೆಗದಾರದು
ಗೊಡವೆಯೆನ್ನಲುಬಹುದು ಸದ್ರಸ
ಗುಡಿದವನೆಡೆಗದೆಂಥ ತಂಟೆಗಳೆನ್ನಬಹುದಯ್ಯ ॥
ಕಡಲ ಭೋರ್ಗರೆದತ್ತಲದರೊಳ
ಕೆಡುಕ ನುಡಿದ ಕಠೋರತೆಯ ಹುಡಿ
ಹೆಡಿಗೆಯಂತಿರಲೇನು ಶರಣಾಗತಗದೇ ವ್ಯಾಪ್ತಿ ॥ ೨೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೇಗೆ ಭಾವಿಸಲೆಡೆಗದೇ ನಿಜ
ವಾಗಿಹುದದೇ ಭಾವ ಸಿದ್ದಿಗ
ಳಾಗುವಿಕೆಯಾಗಮುದ ಸಂದೇಶೋಕ್ತಿ ಚಿಂತನದಿ ||
ಸಾಗಲದೆ ಸಂಪ್ರಾಪ್ತೆನುವದನು
ವಾಗಿ ಮನನಿಸಲದುವೆ ಗೋಚರ
ವಾಗುತದರೊಳ ಲೀನವಾದಾತಾತ ರಸಭೋಗಿ || ೨೯ ||

ರುಚಿಯ ನೋಡಿರಬಹುದು ಹಲವಿಧ
ರಚನೆಗೂಡಿರಬಹುದು ಹಲ ನಿಧಿ
ನಿಚಯ ಹೊಂದಿರಬಹುದು ಯೋಚಿಸು ತತ್ತುಬಿಡದಿತ್ತ||
ಅಚಲ ನಿರುಪಾಧೀಶ ನಿರವೊಳ
ಗುಚಿತದಿಂದಾಗಮಿಸುತಲ್ಲಿಯ
ಸುಚಿರದೊಳಗಾದವಗೆ ಸಮರಸ ಕೋಶ ಚಿರದಾಪ್ತ || ೩೦ ||

ಸೇರಿಕೊಂಡಿಹುದತ್ತ ಫಲದೊಳ
ಭೂರಿ ಸದ್ರುಚಿಯೆಂಬುದರಿ ರುಚಿ
ಹಾರದೊಳು ಫಲ ಸೇರಿಕೊಂಡಿದೆಯನದುದೀ ಪರಿಯ ||
ಸೇರಿ ಸೇರುತ ಹದ – ಪದದೋಳಾ
ಸಾರಿ ತನ್ನ ಸಮರ್ಪಿಸಿದವನೆ
ಕಾರಣಿಕ ತಾನಾಗಲಾರನೆ ತಿಳಿರಿದನುವಾಗಿ || ೩೧ ||

ಚರಚರಣ ನೋಡಿದ ನಯನ – ಮುದ
ಭರಣಿ ಸೇವೆಯೊಳಿಹುದ ಕರ – ತೆರೆ
ತರದಿ ನೆನೆಯುವ ನಾಲಿಗೆಯುಯಿರಲತ್ತಹುದದಾವ ||
ದುರಿತಗಳು ದುರ್ನುಡಿಗಳೇನಿರೆ
ಬರಡುಗೊಳ್ಳುವದೆನುವ ನೀತಿಯ
ನೆರಳದೊಳಗಾದವಗೆ ತಾಪದ ತೆರೆಗಳೆಂತಯ್ಯಾ || ೩೨ ||

ಹಬ್ಬಕದು ತಂದಂಥ ಹರಕೆಯ
ಹೆಬ್ಬಯಕೆ ಜೀವನದೊಳಾಗದು
ಇಬ್ಬಗೆಯ ಪಥ ಯೋಚಿಸದೆ ಸಾಗಿರಲಿದಕೆ ಬೆಲೆಯು ||
ಕಬ್ಬದೊಳಗಾಗರ್ಭ ರಸರುಚಿ
ಸಬ್ಬಸಿಗೆಯೊಳಗೆಂತು ಹೇಳಾ
ದಿಬ್ಬದೊಳಿಹ ವಿಹಾರ ಪವನಲೆ ನೆಲಮನೆಯೊಳೆಂತು || ೩೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕ್ರೂರ ಕೆರೆತ ಕುಭಾಷೆಯಿರಲೆಡೆ
ಚಾರು ಚಿದ್ರಸಗೋಚರೆಂತದು
ತೋರು ವೇಷವನಂಬಲಾರದೆ ಸಹೃದಯ ಭಾಷೆ ॥
ಧಾರೆಯೊಳಗೀಸಿದರೆ ಸಂತಸ
ಪೂರವದು ಅರೆಭಕ್ತರಾ ನೆರೆ
ದಾರಿನಿರಿ ಬೇಡವದು ತಿಳಿಯುತ ಶರಣರೆಡೆ ಸಾಗಿ ॥ ೩೪ ॥

ಕರದಿ ಪಿಡಿದಿಹ ದರ್ಪಣೇನಿರೆ
ಪರೆ ಸದಾಮಯ ನಿಮ್ಮ ಮುಖವೆನಿ
ಸಿರಲದೇ ಕನ್ನಡಿಯದಾಗಿರಲಲ್ಲಿರದು ಶಬ್ದ ॥
ಅರಳು ತೊಳಕಳೆ ಪಕ್ವ ಪರಿಮಳ
ಹೊರಗದೇ ನಾಸಿಕಕೆ ಗೋಚರ
ದಿರವದೊಳಗಾದಾತ ದಿಶೆಗಿಹುದೆಂಥದೊ ಭವಾಬ್ದ ॥ ೩೫ ॥

ಅರಿವೆಯೊಳಗಿಟಕೊಂಡ ಮಲ್ಲಿಗೆ
ಇರವದೆ ಬಿದಿರ ಬುಟ್ಟಿಗೂ ತ
ಟ್ಟಿರುವ ಪರಿಜೀವನ ಪರಾತ್ಪರ ಪಥದೊಳಿರಬೇಕು ॥
ಹಿರಿಮೆ ತ್ರಿವಿಧಕೆ ಭಾವನರ್ಪಿಸು
ತಿರುವನಾತನೆ ಜಾಣನೆಂಬುವ
ಸುರಸವಾಣಿಯೆ ತನ್ನನೆದ್ದುತ ಸಾಗುತಿರಲತ್ತ ॥ ೩೬ ॥

ಲೇಸು ಲೇಸೆಂಬುವಿಕೆ ವಾಣಿ ವಿ
ಶೇಷಗೂಡಿರುವಂತೆ ಭಾವಾ
ಕಾಶದೊಳವಿರಹಿಸುವದಾಗಿರಲಾಗ ಚಿರಪದದಿ ॥
ಶೇಷ ಸಲ್ಲುವನೆಂಬೆನುವ ಗಣ
ಭಾಷೆ ಭೂಷಿತನಾಗಿಹುದ ನಿರಿ
ಸೂಸಲದೆ ಕಂಡಾಗ ನಮಗೂ ತೋಷ ತಿಳಿರಪ್ಪ ॥ ೩೭ ॥

ಸಲ್ಲು ಸಲ್ಲುತ್ತಿರಲಿ ಗುರುಪದ
ಸಲ್ಲು ಸಲ್ಲುತ್ತಿರಲಿ ಲಿಂಗದಿ
ಸಲ್ಲು ಸಲ್ಲುತ್ತಿರಲಿ ಜಂಗಮ ಪಾದ ಪದ್ಮದೊಳು ॥
ಸಲ್ಲು ಸಲ್ಲುತ್ತಿರಲಿದೇ ನಿಜ
ಬಲ್ಲತನವೆನಲಿಂತು ಸುಂದರ
ಯೆಲ್ಲಿಹುದು ನಾಕಾಣೆ ಹಂದರ ಹೂವ ನೀವಾಗಿ ॥ ೩೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಕ್ತಸುಂಕವ ನಿಡುವರಾಕಡೆ
ಸೂಕ್ತದಾಂಕಣ ನೋಡುತೀ ಸ
ದ್ಭಕ್ತಿಸುಂಕವ ಜಂಗಮಾರ್ಪಿತವಾಗಲಾವಾಗ ||
ಭಕ್ತಿ ಸಾರ್ಥಕವೆನ್ನುವಾಕರ
ಮುಕ್ತ ಮೌಕ್ತಿಕ ಮಾತಿನೊಳಗಾ
ಸಕ್ತಲಿರೆ ಶುಭ – ಭಕ್ತಿಯೆಂಬುದು ಕರಗಸದ ಕಾಂತಿ || ೩೯ ||

ಅರಿವು ಮರವೆಗಳುಂಟು ಜೀವಿಸು
ತಿರುವದೆಡೆಗಿದ ತಿಳಿರೆ ಪರತರ
ದರಿವುದೊಳಗಾದವಗೆ ಫಲವೇನಹುದೆಂಬುದನು ಹೇಳಿ ||
ಸರಳವಲ್ಲೆನಿತಿದುವು ಎಂಬ
ಸ್ವರಗಳೇನಿರಲಯ್ಯ ಸದ್ಗುರಿ
ಮರೆಯದಂತಿರುತಿರಲು ನೋಡಿರೆ ದುರ್ಲಭಾವುದದು || ೪೦ ||

ಇಂತು ಹೇಳಿದ ಸಾರ್ಥದೊಳ ಬಿಡ
ದಿಂತು ನಿಜದುರೆಲೀನವಾಗಿರ
ಲಂತು ಶಬ್ದದು ಮರೆಯೊಳಾದಂತೆನ್ನಿ ನೋಡಿರಿದ ||
ಸಂತತುರೆ ತತ್ವಾರ್ಥ ತಲ್ಲೀ
ನಾಂತದೊಳಗಿರಲಾಗ ಜೀವನ
ಕಾಂತಿ ಕಂಗೆಡದಂಥ ಸಸಿನೊಳಗೆನ್ನಿ ನಿಶ್ಚಯಿದು || ೪೧ ||

ಇಂತು ಭೋಧಾಲಿಸಿದ ಶರಣರಿ
ಗಂತು ಸಾಗರ ಸಸಿಯೆ ಮೇಲಾ
ದಂತೆ ಸಂತಸ ಸರಸದೊಳಗಿರಲಿತ್ತ ಜಗದಾರ್ಯ ||
ಸಂತಸಾಶೀರ್ವದಿಸುತಾ ದಿನ
ದಂತು ಸಾಗಿದ – ವೇಢೆಯೆಡೆ ಬಿಡ
ದಿಂತು ಪಾದವನಿಟ್ಟೆಡೆಗೆ ಪಾವನವಗೊಳಿಸುತ್ತ || ೪೨ ||

ಮಿಣಗು ದೀಪದೊಳಿರುವ ಮನೆಯೆಡೆ
ಗನಿತು ಸಾಗುತ ಸುತ್ತ ಮುತ್ತದೆ
ಗನುಪಮುದ ಸದ್ಭಕರ ಕಂಗಳದಾಳ ಕಳೆಯಂತೆ ||
ಅನುದಿನದ ಸಂಚಾರ ಸಮರಸ
ದೆಣಿಕೆಯೊಳ ಸುಜ್ಞಾನ ಸೂತ್ರಳೆ
ಕುಣಿಕೆ – ದಿವ್ಯಕ್ಷೇತ್ರಗೊಳಿಸುತ ಲಿಂಗ ಸರ್ವಾಂಗಿ || ೪೩ ||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇರಲೆಡೆಗೆ ಶಿವರಾತ್ರಿ ನಿದ್ರೆಯೊ
ಳಿರಲದೇ ಜಪವೆನ್ನಿರಾ ನಡೆ
ಯಿರಲದೇ ಪಾವನತೆ ನುಡಿಶಿವತತ್ವ ಹೊರತೇನು ॥
ಪರಮನಾತನ ಚರ್ಯ ಬೆಳಕವ
ಭರಿತಿರಿಸಿದಂತಿರುವರನುಪಮ
ಚರಿತನುಪಮಾತೀತ ಸಂಪಿಗೆ ಸೊಬಗಿನಾ ಸರಿಸ ॥ ೪೪ ॥

ತೆರಹಿರದ ನಡೆ ತೆರಹಿರದ ನುಡಿ
ತೆರಹಿರದ ಸಂಭಾಷಣೆಯ ಸುಖಿ
ತೆರಹಿರದ ತುಂಬಳಿದ ಸಾನುಭವಾರ್ಥ ಮಹಿಮಾರ್ಥ ॥
ತೆರಹಿರದ ಸುವಿಚಾರದಿಂ ಪದ
ತೆರೆಯೊಳಿರುತ ಸದಾ ಚಿದಾಗಸ
ಭರಿತ ಭಾಸ್ಕರದಾಚೆನಿಲವಿನ ಚಲುವದಿರುತಿಂತು ॥ ೪೫ ॥

ಧನದಿ ಶುಚಿ ನಿರ್ಮೋಹಿ ನಿರ್ಭಯ
ದನಘದಾತ್ಮಸ್ತುತಿ ವಿದೂರನು
ಮನದೆರೆದು ಮಾತಾಡಿದೆಡೆ ಬರಿ ಲಿಂಗ ಪ್ರತಿಭಾಂಗ ॥
ಘನತರದ ನಿಲವಾರ್ಥದೊಳ ದಿನ
ದೆಣಿಕೆಯೊಳ ಸಾಗಿರಲು ದೈಹಿಕ
ಕುಣಿಕೆಯೊಳಗಾರಬ್ದದಂತಿಹ ರುಜೆ ನಿಗೂಢದಿರೆ ॥ ೪೬ ॥

ನೆಲದೊಳಿಹ ಬೀಜೆದ್ದು ಹೊರಮುಖ
ದೆಲೆಯ ತೋರಿಸಿದಂತೆ ಪೂಜ್ಯರ
ಬಲ ತನುವಿನೊಳಪೀಡೆ ಸುರುವಾಗಲ್ಕೆ ಹಿಡಿದಂಥ ॥
ಬಲದ ಕಾರ್ಯಕ್ರಮದ ತೊರೆಯು
ತ್ತುಲುಹುತಾ ಪುಣೆ ಸಾಗಿ ತೋರಿಸು
ಲಳೆಯದಂಥಹ ಕ್ಷೀಣತೆಯ ಕಂಡಾಗ ಅಲ್ಲಿಂದ ॥ ೪೭ ॥

ಹೊರಟು ಬರುತಾಸ್ಪತ್ರೆಯಿಂ ತ
ಮ್ಮಿರವ ಮಠದೊಳಗಂದು ಭಾವನೆ
ನಿರತ ಗಂಗಾಧರನ ಸೇವೆಯೊಳಂದು ಇರುತಿರಲು ॥
ಸುರಸ ಶಿವ ತದ್ಧ್ಯಾನದೊಳಿರುತ
ಪರತರದ ಬಯಲಲ್ಲಿದ ಬಯಲೊ [1]
ಳರಳು ಪರಿಮಳವಾದವರ ಪಾರ್ಥಿವದೆ ಚಿತ್ಕಾಯ ॥ ೪೮ ॥

---

೧. ನಿಜೈಕ್ಯ ೨–೧೦–೧೯೪೯ ಆಶ್ವೀನ ಶುದ್ಧ ತೃತಿಯಾ ಸೋಮವಾರ ರಾತ್ರಿ ೯–೪೦ಕ್ಕೆ ಪುಣೆಯಲ್ಲಿ ಲಿಂಗೈಕ್ಯ ೫–೧೦–೧೯೪೯ ಗುರುವಾರ ಸಂಜೆ ೭ ಘಂಟೆಗೆ ವಿಧಿನತ್ ಕ್ರಿಯಾ ಸಮಾಧಿ ನೆರವೇರಿತು ಕಾಶಿಯ ಕೈಲಾಸಮಂಟಪದಾವರಣ ಜಂಗಮವಾಡಿಮಠ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಗ ಹೆಲಿಕಾಪ್ಟರದಿರಿಸಿ ಸಲಿ
ಸಾಗಿ – ತಲುಪಿಸಲಿತ್ತ ಗಣಬಿಡ
ದಾಗಿ ಸಹರಂಭಾಪುರಿಯ ಪೂಜ್ಯರರು – ಗುರುಬಳಗ ॥
ಭಾಗ ಸಂಮುಖ ಪೀಠದೊಳಗಾ
ವಾಗ ಅಂತಿಮದುತ್ತರಕ್ರಿಪ
ರಾಗ ಮುಗಿಸುತ ಮಂಗಲವ ಪುಷ್ಪಾಂಜಲಿಯ ಚರರು ॥ ೪೯ ॥

ನೆನೆದು ನಾಲ್ವಂತೊಂದು ವರ್ಷದೊ
ಳನುದಿನ ಸಮಾಜ ಚಿಂತನೆ
ದೆಣಿಕೆಯೊಳಗೆಪ್ಪತೆರಡನೆಯವಯದೊಳ ಬೆರೆದಿಹುದೆ ॥
ಗಣ ಮಹಾಂತರ ನಿತ್ಯ ಭಾವನೆ
ಬನದೊಳ ವಿರಾಜಿಸುತಲಿಂದಿಗು
ಘನತೆಯೊಳಗವರಿರವದೇಕರುಣಿಸುತಲೆಂದಿನೊಲು ॥ ೫೦ ॥

ಕಾವ್ಯ ಸೌಭಾಗ್ಯ :

ಖೊಟ್ಟ ಕಲ್ಪನೆ ಕಟ್ಟಿ ಜೋಡಿಸು
ತಿಟ್ಟ ಕಾವ್ಯಂದೆನದು ಶೋಭಿಸು
ತೊಟ್ಟು ಪಂಥ ಸಮಕ್ಷಮದಿ ಕೇಳಿಹುದ ಕಲ್ಪರಸ ॥
ಮಟ್ಟರಿತ ವಿಬುಧರಿಗೆ ರುಚಿರಹು
ದಟ್ಟದೊಳಗರಳಿಹುದ ಮಲ್ಲಿಗೆ
ಮೆಟ್ಟಲಂತೆನಿಸುವದು ಮಾನಸಕೊಪ್ಪ ಶುಚಿಸರಸ ॥ ೫೧ ॥

ಸಾಗುತಾಯಾ ದಿಶೆಗೆ ಬುಧಜತೆ
ಯಾಗಿ ಚರ್ಚಿಸುತಾಳ ಮೇಳನು
ವಾಗಿ ನಿಶ್ಚಯಿಸುತ್ತ ಷಟ್ಪದಿ ಮುದ್ದೆಗರಿಗದ್ದೆ ॥
ಜೋಗದಾರ್ಭಟವೆನದ ತತ್ವದ
ಭೋಗಿಯಾಗಿಹ ನಿರ್ಮಲಾತ್ಮಸು
ಯೋಗವಾ ಪ್ರತಿಬಿಂಬವೀ ಕೃತಿ ಕಂಡು ಕಂಡದ್ದೆ ॥ ೫೨ ॥

ಕಾಶಿಯೊಳಗಾನಿದ್ದವೇಳೆಯೆ
ರಾಶಿ ಕಂಡಿಹ ಕುಮುದನಿಯದೊಳ
ಸೋಸಿದಾ ಸಹಜಾತ್ಮದಾಚರಣೊಳಗೆ ಬಿಂಬಿಸಿದ ॥
ಹಾಸಿಹುದ ಹೂಗಳದೆ ಕುಂಡ ಸ
ದಾಶೆಯದ ಮುಕ್ತೆಸ್ತಳವಿವು ಸಂ
ತೋಷದಾಗರದೀಸಿದಂಥಹುದಾಂತರಿಕ ಶಬುದ ॥ ೫೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂಗಳದಿ ತಮ್ಮಿಚ್ಛೆ ನಡೆ ಹುಡಿ
ಹಂಗದೊಳಗಾದವರ ಕಾಣುತ
ನುಂಗಿ ನುಂಗುತಲಿತ್ತ್ರಕಾವ್ಯಾಂಗಳದಿ ವಿರಮಿಸುತ ॥
ಭಂಗವೆನಿಸದ ಧಾರೆಯೊಳಗನು
ರಂಗಿ ನಿರುಪಾಧೀಶನಿರವ ಪ
ದಾಂಗವೆಂಬದ ಬಲ್ಲ ಬಲ್ಲಿದ ನೆಲ್ಲ ಪದ್ಯ ಪಥ ॥ ೫೪ ॥

ಯಾರಿಗಿದು ಯೋಗ್ಯ :

ಬೆಳಕ ಕಾಣುತ ಕುರುಡರಂತಿಹು
ದಳಕು ಹೆಜ್ಜೆಯನಿಡುವರೆದುರೀ
ಥಳಕು ಚಿನ್ನಿಧಿ ಮಹತೆ ಸಹಜನಿತೆನಿತು ತೋರದದು ॥
ಹುಳುಕು ಹಸಿಬಿಸಿಯುಸಿರದೊಳಗಿದು
ತುಳುಕು ಗೊಂಡಿಹ ನಡೆಗದೆಂಥವ
ರೊಳಗಿದೆಂಥಹ ಸೆಳಕು ಸರಳಳವಲ್ಲ ಭಾ ಬೆಲ್ಲ ॥ ೫೫ ॥

ಸುರುಚಿಯೆಂಬುದನರಿತ ಮೇಲೂ
ಬರಡುಭಾವಿಕನಾಗಿ ಸಾಗುವ
ದುರುಳರಿಂಗೆ ಸರೋವರೆ ಸುಶೋಭಿತದ ಪದ್ಮೋಜ ॥
ಅರಳುತರಳಿಸುತಿರುವ ಬಲ್ಮೆಯ
ನರಿಯದಿಹ ಮತಿಮಂದರಿಗೆ ಸಹ
ಜಿರವು ಗೋಚರದೆಂತು – ಬೆರಳಿರದ ಕಡೆಗುಂಗುರವೆ ॥ ೫೬ ॥

ಉಳ್ಳಿಗಡ್ಡಿಯ ಬೀಜ ಸಮನೋ
ಡಿಲ್ಲಿ ಪುಂಡಿಯದು ಸಹ ಮೆಣಸನೊ
ಳುಳ್ಳ ಗುಣ ಪಪ್ಪಾಯಿ ಬೀಜದೊಳೆಂತು ಗುಣ ಘನತೆ ॥
ಉಳ್ಳ ಕರಿಕೆಯ ಬದಿಗೆ ಕೊನರಿಹು
ದಲ್ಲಿ ಜೇಕಿನಗಡ್ಡೆಯೊಳ ಬಲ
ದಲ್ಲಿಯ ರಸಾಯನವು ಡಂಬಕಗಳಿವೆ – ಭೂ ಒರತೆ ॥ ೫೭ ॥

ಕಾವ್ಯಾರೋಗ್ಯ :

ಸರಳ ಸಮುಚಿತ ಜನನಿಯಳ ಕರೆ
ಕರುಳ ಕುಡಿಗದು ತಟ್ಟೆ ಮುಟ್ಟು
ತ್ತೆರೆದ ಕಡೆಗದರಾಟ ನೋಟಿರುವಂತೆ ಚರಿತಾರ್ಥ ॥
ಬರೆದನೆನ್ನದು ಧನದ ಆಶೆಯೊ
ಳಿರುತರಳು ಬೆಳೆ ತನ್ನನಿಲವೊಳ
ವಿರಚಿಸಿದ – ಪೂರ್ವಾಗ್ರಹದಿ ಪೀಡಿತೆನದು ಸತ್ಯಾರ್ಥ ॥ ೫೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೃದು ಚರಮದ ಕಾಯದೊಳ ಬಿಡ
ದಿದುವೆ ಬಿರುಸಿನ ಉಗುರ ಚಿಗುರುತ
ಲಿದೆ ಸಮಾನ ಸದಾಶ್ರಯದೊಳಿರುವ ಹಲರ ಕಠೋರ ॥
ಮದ ಸದಾನಿರಿ ಕಿಡಿಯ ಸಿಡಿಸಿರ
ಲದರೊಳಗೆ ತೆನೆ ಸುಟ್ಟುಕೊಳ್ಳುವ
ರೆದುರದೇನಹುದೆಂಥ ಹಿತನುಡಿ – ತೊಡಗಿ ಬರಹದೆಡೆ ॥ ೫೯ ॥

ಹಿತನುಡಿ ತಿರಸ್ಕರಿಸಲೆಡೆ ಗತಿ
ಪಥವನರಿಸಿರಲೇನು ಬದಿ ಸರಿ
ಸುತಲಿ ಸಾಗುವರೆದುರು ನನದಾಯ್ತಿದುವೆ ಬರಹ ಹರೆ ॥
ಖುತ ಭಕುತರಾತುರದ ತವಕ ಮ
ರೆತು ನಿರಲಕ್ಷಿಸುವರೆದುರೀ ಗುರಿ
ಗತಿ ಮನೋಹರ ಕಾವ್ಯಕನ್ನಿಕೆ ಬಳಿ ವಿಲಾಸತೊರೆ ॥ ೬೦ ॥

ಸಂದಿಯೊಳ ನುಡಿಸಿಡಿಲು ಸಿಡಿಸಿರ
ಲೆಂದಿನಂತಿರಲಾತ್ಮ ಸಾಕ್ಷಿಯೊ
ಳಿಂದಿದುವೆ ಭೈತ್ರಾಗುತಾಧಾರಾಗಿಹುದು ಸಹಜ ॥
ಹೊಂದುತೀ ಹಲ ಕಾವ್ಯ ರಚನೆಯೊ
ನೆಂದಿನಂತಿಹುದಿದನು ವಿಬುಧರ
ಗಂಧ ಗುರಿ ಗ್ರಹಿಸುವರೆನುವ ಸವಿಮೆಲುಕು ಪವನುಲುಕು ॥ ೬೧ ॥

ವಿರತ ನನ್ನೆಡೆಗವರೊಳವಿರತ
ಸುರುಚಿಯೋಗಕ್ಷೇಮ ಬಯಸುವ
ಭರತಿ ಭಾವನೆ ಭಾವದೊಳಗಿರಿಸಿಹುದ ನೆರೆಯ ॥
ದುರುಳಳೆಂತರಿವರಿದ ಚಿರ
ತರದ ಮಮತೆಯ ಮಾತೆಯಳ ಕರೆ
ಕರುಳ – ಕೆಂಜಗ ಗುಣಿಯ ತಿಳಿಯನು ಹೇಳಲೆಂತಿಲ್ಲೆ ॥ ೬೨ ॥

ಮಾಡಬೇಕುಪಕಾರ ಸ್ಮರಣೆಯ
ಗೂಡದಿರಲು ಕೃತಘ್ನತೆಯ ಹುಡಿ
ಹಾಡವಾದಂತೆನಲೆ ಚಿನ್ನಿಧಿ ನನ್ನ ಮಠ ಬಗೆಗೆ ॥
ನಾಡೆ ಸತ್ಪಥದರ್ಶಿಯಾಗಿ ಸ
ದಾಡುವಂತೆಯೆ ಗಟ್ಟಿಗೊಳಿಸಿರ
ಲಾಡುತೆಪ್ಪತ್ನಾಲ್ಕು ವಯದೊಳಗೆನ್ನ ಕಾವ್ಯನಗೆ ॥ ೬೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾವ್ಯ ಫಲ ಶ್ರುತಿ :

ನೋಡದಿಹ ಪವನಮಿತ ತಂತಾ
ನಾಡುತಾ ನಿಯಮಿತದಿ ನಾಸಿಕ
ನಾಡಿಯೊಳಗಾದಂತೆ ಆಲಿಸಿದೆಡೆಗೆ ಖುತ ಸತತ ॥
ಮೂಡಣೋದಯ ಹೃದಯ ಹೊಂಪುಳಿ
ಹಾಡುತೊಳಗೊಳ ಸಂತತಾಮಯ
ಕೋಡಿ ಹೊನಲಾಲ್ಹಾದ ಹುಮ್ಮಸ ಹೂವ ಹವಿ ವಿತತ ॥ ೬೪ ॥

ಮಂಗಲಾ ಮಹ ಚಿನ್ನಿಧಿಗೆ ಮಹ
ಮಂಗಲದ ಕಿರಿಬಸವ ಬಳಗಕೆ
ಮಂಗಲಂ ಬಸವೇಶ ಗುರು ಸಂಗಮನ ಘನ ಘನಕೆ ॥
ಮಂಗಲಂ ಅಡವೀಶ ಪದ ಮುದ
ರಂಗದೊಳಗಾದಂಥ ಬಳಗಕೆ
ಸಂಗತಿಯನರಿತಂಥ ವಿಬುಧರಿಗೆಲ್ಲ ಕಿರಿಯರಿಗೆ ॥ ೬೫ ॥

ಮುಕ್ತಾಯ :

ಕಾಲೆರಡು ಸಾವಿರದೆಳೆಯಹದಿ
ನಾರಿಸವಿ ರಸ ರಂಗ ಪಂಚಮಿ
ಮೇಳ ದಿಪ್ಪತ್ತೆಂಟು ತೇದಿಯ ಶಶಿದಿನನುರಾಧಾ ॥
ನೀಳ ಷಟ್ಪದಿ ಶೀಲ ಸಾವಿರ
ಮೇಲೆ ಇಪ್ಪತ್ತೇಳರೊಳಗೆ ವಿ
ಶಾಲ ವೈಭವ ವಿವರಣೆಯ ತತ್ವಾರ್ಥದನುಮೋದಾ ॥ ೬೬ ॥

ಶುದ್ಧವಹುದಂಕಲಗಿಯಡವೀ
ಸಿದ್ಧ ಚರಣಾಶ್ರಯದಿ ಸ್ಥಾಪಿಸ
ಲೆದ್ದ ಪುರ ಮರೆಗುದ್ದಿ ಮಠವಿದುವಡವಿ ಸಿದ್ದೇಶ ॥
ಬದ್ದಿದಕೆ ಗುರುವಂಶದಾ ಕ್ರಮ
ಬದ್ಧ ಗುರು ಗುರುಪಾದ ಕೃಪೆಯಿಂ
ದೆದ್ದ ನಿರುಪಾಧೀಶನಾಕೃತಿ ಬೆಳಗಿನಾವಾಸ ॥ ೬೭ ॥

ಅಂತು ಬೆಳಗು ೧೮ಕ್ಕಂ ಪದ ೬೭ಕ್ಕಂ ಒಟ್ಟು ಪದ ೧೦೨೭ಕ್ಕಂ ಶಿವಂ

೨೮-೩-೨೦೧೬ ಸೋಮ ಅನುರಾಧಾ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

''ಮಹಾಮಾನವತಾವಾದಿ ಶ್ರೀ ಸಂಗನಬಸವ ವಿಜಯ'' ಮಹಾಕಾವ್ಯದ ವೈಚಾರಿಕ ನೆಲೆಗಳು

● ಜಗದೀಶ ಮುಗಳಿ
ಸಂಶೋಧನ ವಿದ್ಯಾರ್ಥಿ. ಕ.ವಿ.ವಿ.ಧಾರವಾಡ.

ಕಾವ್ಯವು ನಿತ್ಯನೂತನವಾದುದು, ನಿರಂತರ ಚಲನಶೀಲವಾದುದು. ಜಾಗತಿಕ ಸಾಹಿತ್ಯ ಪರಂಪರೆಯಲ್ಲಿ ಕಾವ್ಯಕ್ಕೆ ಮಿಗಿಲಾದ ಸ್ಥಾನವಿದೆ. ಭಾರತೀಯ ಸಾಹಿತ್ಯದಲ್ಲಿ ಪ್ರಾಚೀನ ಕಾಲದಿಂದಲೂ ಮಹಾಕಾವ್ಯ ಪರಂಪರೆಯೊಂದು ಬೆಳೆದುಬಂದಿದೆ. ಕನ್ನಡ ಸಾಹಿತ್ಯದಲ್ಲಿಯೂ ಮಹಾಕಾವ್ಯದ ಒಂದು ಪರಂಪರೆಯೇ ಇದೆ. ಕ್ರಿ.ಶ 12ನೆಯ ಶತಮಾನದಲ್ಲಿ ನಡೆದ ಸಮಾಜೋ–ಧಾರ್ಮಿಕ ಚಳುವಳಿಯ ನೇತಾರನಾದ ಬಸವಣ್ಣನವರ ಜೀವನ ಚರಿತ್ರೆಯನ್ನು ಕುರಿತು ಅನೇಕ ಕಾವ್ಯ, ಕಥೆ, ನಾಟಕ, ಪುರಾಣ, ಕಾದಂಬರಿಗಳು ರಚನೆಯಾಗಿವೆ. ಜೊತೆಗೆ ಅನೇಕ ಜನ ಕವಿಗಳು ಬಸವಣ್ಣನವರ ಜೀವನ ಚರಿತ್ರೆಯನ್ನು ಮಹಾಕಾವ್ಯಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಅವರಲ್ಲಿ ಶ್ರೀ ನಿರುಪಾಧೀಶ ಸ್ವಾಮಿಗಳೂ ಸಹ ''ಮಹಾಮಾನವತಾವಾದಿ ಶ್ರೀ ಸಂಗನಬಸವ ವಿಜಯ'' ಎಂಬ ಮಹಾಕಾವ್ಯವನ್ನು ಭಾಮಿನೀ ಷಟ್ಪದಿಯಲ್ಲಿ ರಚನೆಮಾಡಿದ್ದಾರೆ. ಈ ಮಹಾಕಾವ್ಯವು 25 ಸಂಧಿಗಳ ವ್ಯಾಪ್ತಿಯನ್ನು ಹೊಂದಿದೆ. 1001 ಭಾಮಿನೀ ಷಟ್ಪದಿಗಳನ್ನೊಳಗೊಂಡಿದೆ. ಬಸವಣ್ಣನವರ ಜೀವನ ಚರಿತ್ರೆಯನ್ನು ಒಳಗೊಂಡು ರಚಿತವಾದ ಈ ಮಹಾಕಾವ್ಯವು ಆಧುನಿಕದ ಈ ಸಂದರ್ಭದಲ್ಲಿ ಮಹಾಚಿತ್ರಕಾವ್ಯದಂತೆ ಮೂಡಿಬಂದಿದೆ.

ಪ್ರಸ್ತುತ ಸಂದರ್ಭದಲ್ಲಿ 'ಬಸವ ಚರಿತೆಯಲಿ ಕೈಯಿಡಲು ತೆರಪಿಲ್ಲ' ಎನ್ನುವಂತಿದ್ದರೂ ಯಾವುದೇ ಮತ, ಜಾತಿ, ಲಿಂಗ, ವಯೋಮಾನ, ಸಂಪ್ರದಾಯ, ಪ್ರಗತಿಶೀಲ, ಬಂಡಾಯ ಮತ್ತು ದಲಿತ ಈ ಯಾವ ಭೇದವಿಲ್ಲದೇ ಹಲವಾರು ಜನ ಕವಿಗಳು ಬಸವಣ್ಣನವರ ಜೀವನ, ಸಾಧನೆ ಮತ್ತುಸಾಹಿತ್ಯಗಳ ಬಗೆಗೆ ಲೇಖನದ ಮೇಲೆ ಲೇಖನ, ಕಾವ್ಯದ ಮೇಲೆ ಕಾವ್ಯ, ಗ್ರಂಥದ ಮೇಲೆ ಗ್ರಂಥ ರಚನೆಮಾಡುತ್ತಲೇ ಇದ್ದಾರೆ. ಇದು ಬರೆಯಲು 'ವಸ್ತು ಸಿಗದ ಅಭಾವದ ಸ್ಥಿತಿಯಲ್ಲ' ಬಸವಣ್ಣನವರ ಬಹುಮುಖ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವ್ಯಕ್ತಿತ್ವದ ಉಜ್ವಲ ನಿದರ್ಶನ. ಅಪ್ಪಟ ವಜ್ರದ ಮೇಲೆ ಬೇರೆ ಬೇರೆ ನಿಟ್ಟಿನಿಂದ ಬೆಳಕು ಹಾಯಿಸಿದಾಗ ಹೊಳೆಯುವ ವರ್ಣರಂಜನೆಯ ಸೊಗಸು, ಸೊಬಗು ಬಸವಣ್ಣನವರ ವ್ಯಕ್ತಿತ್ವಕ್ಕಿದೆ.

'ಶ್ರೀ ಸಂಗನಬಸವ ವಿಜಯ' ಮಹಾಕಾವ್ಯ ರಚಿತಗೊಂಡ ಹಿನ್ನೆಲೆ

ಶ್ರೀ ನಿರುಪಾಧೀಶ ಸ್ವಾಮಿಗಳ ''ಮಹಾಮಾನವತಾವಾದಿ ಶ್ರೀ ಸಂಗನಬಸವ ವಿಜಯ'' ಈ ಮಹಾಕಾವ್ಯದ ಶೀರ್ಷಿಕೆಯು ಹಿಂದಿನ ಬಸವ ಪುರಾಣ, ಚರಿತೆ, ಪವಾಡ ಎಂಬ ಶೀರ್ಷಿಕೆಗಳಿಗಿಂತ ಹೆಚ್ಚು ವೈಚಾರಿಕ ಮತ್ತು ಅರ್ಥಪೂರ್ಣವಾದುದೆನಿಸುತ್ತದೆ. ಬಸವಣ್ಣನವರ ಬದುಕಿನ ಕೊನೆಯ ಘಟನೆಗಳನ್ನು ಲಕ್ಷಿಸಿದ ಹಿನ್ನೆಲೆಯಲ್ಲಿ ಈ ಮಹಾಕಾವ್ಯವು ತನ್ನ ಬದುಕನ್ನೇ ಪ್ರಯೋಗಕ್ಕೆ ಒಳಪಡಿಸಿದ ಬಸವಣ್ಣನವರ ವೈಚಾರಿಕ ಚಿಂತನೆ ಮತ್ತುಸಮತಾ ಸಮಾಜವಾದವನ್ನು ಪ್ರಸ್ತುತಪಡಿಸುತ್ತದೆ.

'ಕೂಡಲಸಂಗಮ'ನ ಆಣತಿ ಹೊತ್ತು ಹೋರಾಡಿದ ಬಸವಣ್ಣ ತನ್ನ ಮರ್ತ್ಯದ ಮಣಿಹದಲ್ಲಿ ವಿಜಯಿಯೇ ಆದ್ದರಿಂದ ಇದು 'ಬಸವ ವಿಜಯ, ಶ್ರೀ ಸಂಗನಬಸವ ವಿಜಯ'ವಾಗಿದೆ. ಶ್ರೀ ನಿರುಪಾಧೀಶ ಸ್ವಾಮಿಗಳು ಬಸವಣ್ಣನವರ ಬಗೆಗೆ ಕೇಳಿದ, ಓದಿದ, ಚರ್ಚಿಸಿದ, ಅರಗಿಸಿಕೊಂಡ, ಸಂಶೋಧಿಸಿದ, ಪ್ರಶಂಸೆಯ, ಪರಾಮರ್ಶೆಯ, ವಿಶ್ಲೇಷಣೆಯ, ಸಂದೇಹದ, ನಿಶ್ಚಯದ ಎಲ್ಲ ಸಂಗತಿಗಳನ್ನೂ ನಿರುಪಾಧಿಕವಾಗಿ ಚಿಂತಿಸಿ, ಅದೇ ತೆರಪಿನಿಂದ ನಿರೂಪಿಸಲು ಪ್ರಯತ್ನಪಟ್ಟಿದ್ದಾರೆ. ಶ್ರೀ ನಿರುಪಾಧೀಶ ಸ್ವಾಮಿಗಳಲ್ಲಿ ಬಸವಣ್ಣನವರ ಬಗೆಗೆ ಚಿಂತಿಸಿ, ಮಡುಗಟ್ಟಿ ನಿಂತಿದ್ದ 'ಬಸವ ಚಿಂತನ' ಸಾಗರವು ಭಾಮಿನೀ ಷಟ್ಪದಿಯ ಕಾಲುವೆಯಲ್ಲಿ ಹರಿದು, ಪಂಡಿತ–ಪಾಮರರ ಬುದ್ಧಿ–ಭಾವಗಳಲ್ಲಿ ಹಸಿರು ಹುಟ್ಟುವಂತೆ ಮಾಡಿದೆ.

ಬಸವಣ್ಣನವರ ಅಂತರಂಗ–ಬಹಿರಂಗಗಳನ್ನು ಬಯಲುಗೊಳಿಸುತ್ತ ಸಾಗುವ ಈ ಮಹಾಕಾವ್ಯವು ಕೊನೆಯಲ್ಲಿ ಬಯಲಾಗುತ್ತದೆ. ಮೂಲ ಬಸವ ಚರಿತೆಯ ನಿರೂಪಣೆಯಲ್ಲಿ ಹೊಸನೋಟ, ಹೊಸ ಚಿಂತನೆ, ಹೊಸ ಪ್ರತಿಪಾದನೆಗಳು ಕಂಡುಬರುತ್ತವೆ. ಬಸವಣ್ಣನವರ ಜೀವನ, ಸಾಧನೆ–ಸಿದ್ಧಿಗಳನ್ನು, ಉಜ್ವಲ ವ್ಯಕ್ತಿತ್ವವನ್ನು, ವಿಕಾಸದ ಪ್ರತಿ ಹೆಜ್ಜೆಯನ್ನು ಸಾಧಾರವಾಗಿ ಬಿಂಬಿಸುವ ನೈಷ್ಠಿಕ, ಭಾಕ್ತಿಕ ನಿಡುಗಾವ್ಯ ಇದಾಗಿದೆ.

'ಶ್ರೀ ಸಂಗನಬಸವ ವಿಜಯ' ಮಹಾಕಾವ್ಯದ ಮೇಲೆ ವಚನ ಸಾಹಿತ್ಯದ ಪ್ರಭಾವ:

''ಬಸವಣ್ಣನವರ ಚರಿತ್ರೆಯನ್ನು ನಿರೂಪಿಸುವ ಎಲ್ಲ ಸಾಹಿತ್ಯ ಗ್ರಂಥಗಳಲ್ಲಿ ವಚನ ವಾಙ್ಮಯವು ಹೆಚ್ಚು ಪ್ರಮಾಣಬದ್ಧವಾದುದು. ಏಕೆಂದರೆ ಅದು ಬಸವಣ್ಣನವರ ಸಮಕಾಲೀನವಾದುದು. ಸಮಕಾಲೀನ ಘಟನೆಗಳನ್ನು ಸತ್ಯದೃಷ್ಟಿಯಿಂದ ನಿರೂಪಿಸತಕ್ಕುದು'', ಎಂಬ ಡಾ.ಆರ್.ಸಿ.ಹಿರೇಮಠ ಅವರ ಮಾತು ಸಮಂಜಸವಾದುದು. ಆದ್ದರಿಂದಲೇ ಸಮಕಾಲೀನ ಶರಣರ ಮತ್ತು ಬಸವಣ್ಣನವರ ವಚನಗಳನ್ನೇ ಆಧಾರವಾಗಿಸಿಕೊಂಡು ರಚನೆಯಾದ ಮಹಾಕಾವ್ಯವಿದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಸವನ ನಡೆ–ನುಡಿ–ನೋಟ ಪವಾಡ ಸದೃಶವಾದುದು. ಅದು ಪರುಷಮಣಿ. ಸಕಲ ಜೀವಿಗಳು ಪಾವನವಾದ ಘಟನೆಗಳನ್ನು ಈ ಮಹಾಕಾವ್ಯದಲ್ಲಿ ಕಾಣುತ್ತೇವೆ. ಬಸವಣ್ಣನವರ ತಂದೆ ತಾಯಿಯ ಕುರಿತು :

''ಸಾಂದ್ರವಾಗಿ ಹರಗಣ ಭಕ್ತಿಯ ಮಾಳ್ಪನೆಂತೋ
ಮಾದಲಾಂಬಿಕಾನಂದನನು ?
ಸಾಂದ್ರವಾಗಿ ಬಿಜ್ಜಳನರಮನೆಯ ನ್ಯಾಯ ನೋಳ್ಪನೆಂತೋ
ಮಾದರಸ ಮೋಹದ ಮಗನು'' !

ಗಂಗಾಂಬಿಕೆಯ ವಚನ ಸೂಚಿಸುತ್ತಿರುವಾಗ ಮತ್ತೇಕೆ ಸಂಶಯ ! ಎನ್ನುತ್ತಾರೆ ಶ್ರೀ ನಿರುಪಾಧೀಶರು. ಬಸವಣ್ಣನವರು ಸ್ವತಃ ಕಲ್ಯಾಣದಿಂದ ನಿರ್ಗಮಿಸಿದ ಅಲ್ಲಮನ ವಚನವೊಂದು ಈ ತೆರಪಿನಿಂದ ಇದೆ:

'ಕೇಳಾ ಬಸವಣ್ಣ ನಡೆ ನೀನು ಕಪ್ಪಡಿ ಸಂಗಯ್ಯನಲ್ಲಿ ಒಡಗೂಡು',
'ನಿರ್ವಾಹವಾಗಿತ್ತಯ್ಯ ಬಸವಣ್ಣಂಗೆ ಕಪ್ಪಡಿಯ ಸಂಗಯ್ಯನಲ್ಲಿ',

ಎಂಬ ವಚನಗಳು ಬಸವಣ್ಣನವರ ನೈಜ ನಡೆಯನ್ನು ಸೂಚಿಸುತ್ತದೆ.

'ಸಂಗನ ಬಸವಣ್ಣನ ಬೆರೆಸಿ ನೀನು ನಾನು ಬದುಕಿದೆನು',
'ಎನ್ನ ಪ್ರಾಣವೇ ಸಂಗನ ಬಸವಣ್ಣನಯ್ಯ'

ಇದೇ ರೀತಿ ಹಲವಾರು ಶರಣರ ವಚನಗಳಲ್ಲಿಯೂ 'ಸಂಗನ ಬಸವ' ನೆಂಬ ಪಂಕ್ತಿಗಳನ್ನು ಕಾಣುತ್ತೇವೆ. ಸ್ವಯಂ ಬಸವಣ್ಣನವರೇ ತಮ್ಮನ್ನು ಸಂಗನಬಸವನೆಂದೇ ಕರೆದುಕೊಂಡಿದ್ದಾರೆ.

'ಕೂಡಲಸಂಗನ ಶರಣರಿಗೆಲ್ಲ ಸಂಗನಬಸವನ ಬಿನ್ನಪ,
ಸಂಗನ ಬಸವಣ್ಣನೆಮಬ ಹೆಸರು ಪಡೆದೆನು',
'ಕೂಡಲಸಂಗಮದೇವಾ ಜಂಗಮ ಮುಖದಿಂದ
ಸಂಗನಬಸವಣ್ಣ ಬದುಕಿದನೆಂಬುದು'.

ಈ ಮಾತುಗಳು ಸಂಗನ ಬಸವಣ್ಣಂಗೆ ಸಂಗಮೇಶ್ವರನೇ ಗುರುವಾದ ಬಗೆಯನ್ನು ಪ್ರಸ್ತುತಪಡಿಸುತ್ತವೆ. ಈ ಸಂಗನ ಬಸವಣ್ಣನ ವಿಜಯವನ್ನು ತಿಳಿಯಪಡಿಸುವುದೇ ಈ ಮಹಾಕಾವ್ಯದ ಉದ್ದೇಶವಾಗಿದೆ. ಶ್ರೀ ನಿರುಪಾಧೀಶರ 'ಶ್ರೀ ಸಂಗನಬಸವ ವಿಜಯ' ಮಹಾಕಾವ್ಯದ ಮೇಲೆ ವಚನ ಸಾಹಿತ್ಯದ ಪ್ರಭಾವವು ತುಂಬಾ ಆಗಿದೆ. ಶರಣರ ಅನುಭಾವದ ನುಡಿಗಡಣಗಳ ಆಧಾರದ ಮೇಲೆಯೇ ಈ ಪ್ರಸ್ತುತ ಮಹಾಕಾವ್ಯವು ರಚನೆಯಾಗಿದೆ.

''ನಿರಂಜನ ಜಂಗಮ ಸಂಗಮದೇವ
ನಿತ್ಯನಿರಂಜನ ಕರ್ತು ಸಂಗಮನಾಥ
ಭಕ್ತಿಯ ಮೊದಲೆ ತೋರಿದನು
ಮರ್ತ್ಯಕ್ಕೆ ಬಸವ ಪ್ರಭು ಬಂದನು ಕೇಳಿ
ಎತ್ತಣ ಸುದ್ದಿಯೆಂದು ಎನಬೇಡವು''

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಸಂಗನಬಸವ ನಿರಂಜನ ಜಂಗಮ'ನೆಂದು ಕೊಡೆಕಲ್ಲ ವಚನವಾಕ್ಯ ಸಂಪುಟ–3 ವಿಶದಪಡಿಸುತ್ತದೆ.

ಶ್ರೀ ಸಂಗನಬಸವ ವಿಜಯ'' ಮಹಾಕಾವ್ಯದ ನಿಲುವು-ನೆಲೆಗಳು

ಬಸವಪೂರ್ವಯುಗದ ರಾಜಕೀಯ, ಧಾರ್ಮಿಕ, ಸಾಮಾಜಿಕ ಕಾಲವು ಸಂಘರ್ಷಮಯವಾಗುತ್ತ ಸಾಗುತ್ತಿತು. ಜನ ಜೀವನ ಹಲವು ಸ್ಥಿತ್ಯಂತರ ಗತಿಗಳನ್ನು ಕಾಣುತ್ತಿತ್ತು, ಮೂರನೆಯ ತೈಲಪನನ್ನು ತಳ್ಳುತ ಬಿಜ್ಜಳ ರಾಜನಾದನು. ಬಲದರಾಜಾಶ್ರಯದಿ ಜೈನ ಧರ್ಮದ ಬೆಳವಣಿಗೆ, ವಿಷ್ಣುವರ್ಧನ ವೈಷ್ಣವನಾದುದು, ವಾಮಪಥದ ವಿಚಾರ, ಪಾಶುಪಥರ ಹಲಚೇಷ್ಟೆ, ಕಾಪಾಲಿಕರ ಉಗ್ರತೆ, ಕೌಳರ ಸ್ವಚ್ಛಂದತೆ ಜನರಿಗೆ ಬೇಸರೆನಿಸಿದ್ದವು. ಅಂಧಶ್ರದ್ಧೆ ಜನಸಾಮಾನ್ಯರಿಗೆ ಸಿಗದ ಹಕ್ಕುಭಾದ್ಯತೆಗಳು, ಜನಹಿತರಹಿತ ಸಾಹಿತ್ಯ ಸೃಷ್ಟಿ, ಪಂಡಿತರಿಗೆ ಮಾತ್ರ ಮಿಸಲಾದ ವಿದ್ಯಾಲಯಗಳು, ತಳ–ಕೆಳಮಟ್ಟದ ಜನತೆಗೆ ದಕ್ಕಲಾರದ ಧಾರ್ಮಿಕ ಸ್ವಾತಂತ್ರ್ಯ, ನಾರಿಗೆ ಕಟ್ಟುಕಟ್ಟಳೆಗಳು, ಕರ್ಮಿಗಳ ಉಪಟಳ, ವೀರಶೈವ ವಿಚಾರ ವಿವರಣೆಯ ಕೊರತೆ, ಇಷ್ಟಿಂಗ ವಿಚಾರವಿಲ್ಲದ ಪರಿಸರ, ಸ್ಥಾವರ ದೃಷ್ಟಿ, ಕೆಲವರಿಗೇ ಮೀಸಲಾಗಿಹ ಸವಲತ್ತುಗಳು ಜನರೆಲ್ಲರನ್ನು ಕಂಗೆಡಿಸಿದ್ದವು. ಇಂಥ ಕಾಲನ ಸಂದರ್ಭದಲ್ಲಿ ಬಸವಣ್ಣನವರ ನಡೆ–ನುಡಿ, ಜೀವನ ಜನಸಾಮಾನ್ಯರಿಗೆಲ್ಲರಿಗೂ ಆದರ್ಶವಾಯಿತು.

''ತಾಲ ಮಾನಸರಸವನರಿಯೆ, ಓಜೆ ಬಜಾವಣೆಯ ಲೆಕ್ಕವನರಿಯೆ,
ಅಮೃತಗಣ ದೇವಗಣವನರಿಯೆ, ಕೂಡಲಸಂಗಮದೇವಾ,
ನಿನಗೆ ಕೇಡಿಲ್ಲವಾಗಿ, ಆನು ಒಲಿದಂತೆ ಹಾಡುವೆ''.

ಎಂಬ ಬಸವನ್ನನವರ ವಚನವು ಬಸವಣ್ಣನವರ ಧ್ಯೇಯ, ದೃಷ್ಟಿ, ಧೋರಣೆ, ಉದ್ದೇಶವನ್ನೂ, ಲೌಕಿಕ–ಪಾರಮಾರ್ಥಿಕ ಜೀವನ ಸಿದ್ಧಿಯ ಸಾಧ್ಯತೆಯನ್ನೂ ತಿಳಿಯಪಡಿಸುತ್ತದೆ. ಇದು'ಸಂಗನಬಸವ ವಿಜಯ' ಮಹಾಕಾವ್ಯದ ಸಿದ್ಧಿಯೂ ಆಗಿದೆ.

''ವಿಶ್ವಭಾಗ್ಯ ವಿನೀತಪೂರ್ಣನ
ಶಾಶ್ವತಾಕಾಶೊಲು ವಿಕಾಶನ
ನಶ್ವರದ ಜಗಜೀವಿಗಳಿಗಾಶ್ರಯಿ ಸದಾಶುನುಭನ !!
ವಿಶ್ವಬಂಧುತ್ವದ ವಿಚಾರಾ
ಕಸ್ಮಿಕನುಭವಕೋಡಿ ಬಸವನ
ಹ್ರಸ್ವವಲ್ಲದ ಚಿಂತನಾವಳಿ ಸೂತ್ರಕನ ಕಾವ್ಯ''

'ಸಂಗನಬಸವ ವಿಜಯ' ಮಹಾಕಾವ್ಯದಲ್ಲಿನ ಒಂದನೇ ಸಂಧಿಯ ಹದಿಮೂರನೇ ಪದ್ಯವು ಬಸವ ಚಿಂತನ ಕ್ರಮಗಳನ್ನು ಪ್ರಸ್ತುತಪಡಿಸುತ್ತದೆ. ವಿಶ್ವವ್ಯಾಪಕವಾದ ವಿಚಾರಗಳಿವು. ಅಶಾಶ್ವತ ಜೀವನದ ಶಾಶ್ವತ ವಿಚಾರಗಳಿವು. ಸಕಲರಿಗೂ ಲೇಸನ್ನೇ ಬಯಸುವ ನುಡುಗಡಣಗಳಿವು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಶರಣಶಿವ ಸಾಹಿತ್ಯ ಸುಂದರ
ಸರಣೆ ಸತ್ಯೆನಬೇಕು ಪರತರ
ಸರಳ ಸಂಗನಬಸವ ವಿಜಯ ಪ್ರಸಾದಕಾವ್ಯವಿದು.'

ಸುಗ್ಗಿಯೊಳಗೆ ಕಗ್ಗ–ಕಳೆ ಕೊನರಿಸುವ ತವಕವಿಲ್ಲಿದೆ. ವಿಚಾರಮತಿಗಳು ವಿಶಾಲವಾಗಿ ಮಂಥನ ಮಾಡಿ ವಿನಯಶೀಲತೆಯಿಂದ ಆಲಿಸುವುದು ಆನಂದದಲಿ. ಸತ್ಯಂ–ಶಿವಂ ಸುಂದರಂ ಎಂಬುದು ಇಲ್ಲಿಯ ಆಶಯ.

''ಮಂದಿರೊಳಗಾ ದೇವದಾಸಿಯ
ರಂದ-ಕುಣಿತಿರಲಂದಿನಾ ಗಣ
ಚಂದದಿಂ ಕಾಣುತ್ತಲದನೊಪ್ಪುವಿಕೆ ಸರಿಬರದೆ !!
ಮುಂದೆ ದೌನಿಕದೊಳಗಿದೇ ಸ್ವ
ಚ್ಛಂದಗೂಡದಪರಿಯೆ ಕಾನೂ
ನೊಂದು ಬಂದರೆ ಹೇಗೆ-ಇದನಾಲೋಚಿಸುತ ಬಸವ.''

ಅಂಗಭೋಗ ಮತ್ತು ರಂಗಭೋಗದ ಮೂಲಕ ದೇವಾಲಯಗಳಲಿ ನಡೆಯುತ್ತಿದ್ದ ಶೋಷಣೆಯನ್ನು ಹೋಗಲಾಡಿಸಲು ಬಸವಣ್ಣನವರು ದೇಹವನ್ನೇ ದೇವಾಲಯವಾಗಿಸಿಕೊಳ್ಳುವ ಕಲ್ಪನೆಯನ್ನು ಹುಟ್ಟುಹಾಕಿದರು. ಬಡವ–ಬಲ್ಲಿದ, ಮೇಲು–ಕೀಳು ಇಂಥ ತರತಮ ಭಾವನೆಗಳನ್ನು ಹೋಗಲಾಡಿಸಿ, ಸಮತಾಸಮಾಜದ ನಿರ್ಮಾಣಕ್ಕೆ ಕಾಯಕದ ಭಕ್ತಿಮಾರ್ಗವನ್ನು ಸ್ವಆಚರಣೆಯಿಂದ ಜನರಿಗೆ ತಿಳಿಯಪಡಿಸಿದರು.

ರಾಜಕೀಯ, ಧಾರ್ಮಿಕ, ಸಾಮಾಜಿಕ ಪರಿಸ್ಥಿತಿಗಳು ತಮ್ಮ ಸಮತೋಲನವನ್ನು ಕಳೆದುಕೊಂಡಿದ್ದವು. ನಾಡನಾಳುವ ನಾಡಪ್ರಭುಗಳ ನಡುವಿನ ಸಂಘರ್ಷದಲ್ಲಿ ಜನತೆಯ ಆಶೆಗಳ ಕನಸುಗಳನ್ನು ಕಟ್ಟಿಕೊಂಡು ಪರಸ್ಪರರು ಹೋರಾಟದಲ್ಲಿ ತೊಡಗಿಕೊಂಡಿದ್ದರು.

ಧಾರ್ಮಿಕ ಪರಿಸ್ಥಿತಿ:

''ಹಲವುಪಾಸನೆ ಕ್ಷುದ್ರ ಶಕ್ತಿಗ
ಳೊಲುಮೆ ಪಡೆಯುದಕಾಗಿ ಪಶುಗಳ
ಬಲಿಯನಿಡುವಿಕೆ ಬೆಂಕಿಯೊಳ ನಡೆದಾಡುವಿಕೆ ನರರ !!
ಬಲಿಕೊಡುವ ಹಲವಾರು ದುಷ್ಕೃತಿ
ಯೊಳಗೆ ಮುಳಗಿರೆ ಜೈನಧರ್ಮಿದು
ಬಲದ ರಾಜಾಶ್ರಯವ ಪಡೆಯುತ ಬೌದ್ಧಮತ ಸರಿಸಿ !!

ಧರ್ಮ–ದೇವರುಗಳ ಹೆಸರಿನಲ್ಲಿ ಜನರು ಅಂಧಕಾರದಲ್ಲಿ ತೊಳಲಾಡುತ್ತಿದ್ದರು. ಧರ್ಮಗಳ ಹೆಚ್ಚುಗಾರಿಕೆಯ ಒಣ ಪ್ರತಿಷ್ಠೆ ತುಂಬಿತುಳುಕುತಿತ್ತು ಸಾಮಾಜಿಕ ಪರಿಸ್ಥಿತಿ ಇನ್ನೂ ಕರ್ಮಠದಿಂದ ಕೊಡಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

''ಚಾರು ಚತುರಾಶ್ರಮದ ಕಟ್ಟಳೆ
ನೇರೆ ಸಕಲರಿಗೆನದು ಮೀಸಲು
ದೂರ ಶೂದ್ರರಿಗದುವು ಸರಳಸಮಾಜ ವಿಭಜಿಸಲು !!''

ಇಡೀ ಮಹಾಕಾವ್ಯದ ತುಂಬಾ ವೈಚಾರಿಕ ಚಿಂತನೆಯ ಪ್ರತಿಮೆಗಳು ಮೈಪಡೆದುಕೊಂಡಿವೆ. 'ಸಂಗಮದೇವನಿಂದ ಲಿಂಗಧಾರಣವೆಂದು ನೀವೇ ಹೇಳಿದಿರಿ, ಈಗ ಮುಂಜಿವೆಯೇಕೆ' ? ಎನ್ನುವ ಬಸವಣ್ಣ ಕಾರಣವನ್ನು ಕೆದಕುತ್ತಾನೆ. ಮುಂದಿನ ಸಂಧಿಗಳಲ್ಲಿ ಮಾದರಸ–ಮಾದಲಾಂಬಿಕೆಯ ಜೀವನ, ಬಸವನ ಜನನ, ನಾಮಕರಣ, ಬಾಲ್ಯ, ಮುಂಜಿಯ ಪ್ರತಿಭಟನೆ, ನಾಗಾಯಿಯ ಮದುವೆ, ಸಂಗಮಕ್ಕೆ ಪಯಣ– ಅಧ್ಯಯನ, ಸಂಗಮೇಶ್ವರನಿಂದ ದೀಕ್ಷೆ, ಗುರುಗಳಾಜ್ಞೆಯಂತೆ ಮಂಗಳವೇಢೆಗೆ ಪಯಣ, ಬಸವನ ಮದುವೆ, ಅನುಭಾವ ಗೋಷ್ಠಿ, ತಾಮ್ರಪಟ ಶಾಸನ ಓದಿದ್ದು, ನಾಗಾಯಿ ಜೊತೆ ಸಾಮಾಜಿಕ ಹಿತ ಚಿಂತನೆ ಮಾಡಿದ್ದು, ಶೂದ್ರತೆಯ ಬಗ್ಗೆ ಬಿಜ್ಜಳನಿಗೆ ಅರಹುವಿಕೆ, ಬಸವನ ಪರುಷದಿಂದ ಕುಷ್ಠರೋಗಿಯ ಗುಣಮುಖತೆ, ಬಸವ ಚನ್ನನಂಬಲಿಯುಂಡ ಬಗ್ಗೆ ಕರ್ಮಿಗಳಲ್ಲಾದ ತಣಮಳ–ದೂರು, ಕಳ್ಳರು ಶರಣಾಗುವಿಕೆ, ಮೋಳಿಗೆ ಮಾರಯ್ಯನ ಕುಟೀರದಲ್ಲಿ ಬಸವಣ್ಣ ಹೊನ್ನ ಜೋಳಿಗೆ ಇಟ್ಟಿದ್ದು, ಪುಣ್ಯಾಂಗನೆಯರು ಪುಣ್ಯಾಂಗನೆಯರಾದುದು, ಬಿಜ್ಜಳನೆದುರು ಹೋಮ–ಹವನ ಖಂಡನೆ, ಜಂಗಮರಿಗೆ ಬಸವನಿಗೆ ಹರಳಯ್ಯ ಕೆರಹ ಮಾಡಿ ತಂದದ್ದು, ಶೂನ್ಯ ಸಿಂಹಾಸನಾರೋಹನಾದ ಪ್ರಭುದೇವ, ಹರಳಯ್ಯ–ಮಧುವರಸರ ಸಂಬಂಧ, ಬಿಜ್ಜಳನ ಮುನಿಸು, ಬಸವನ ನಿರ್ಭಿಕತೆ, ಸಂಗಮಕ್ಕೆ ಬಸವನ ಆಗಮನ, ಲಿಂಗೈಕ್ಯನಾದುದು ಈ ಎಲ್ಲ ಸಂಗತಿಗಳು ಚಲಿಸುವ ಚಿತ್ರಪಟದಂತೆ 'ಶ್ರೀ ಸಂಗನಬಸವ ವಿಜಯ' ಮಹಾಕಾವ್ಯದಲ್ಲಿ ಮೂಡಿ ಬಂದಿವೆ.

''ನುಡಿದು ನುಡಿಸುವ ನೈಜವನುಭವ
ನಡಿದು ನಡೆಸಿದ ಶರಣಬಳಗದ
ಬೆಡಗು ಬಡಿಸಲು ಮನವಿಕಾಶತೆಗೊಳುತ ಬದಿಯುವರ !!''

ಎಂಬ ನುಡಿಗಳು ನುಡಿದಂತೆ ನಡೆದ, ನಡೆದಂತೆ ನುಡಿದ ಬಸವಣ್ಣನವರ ಜೀವನ ಪಥವನ್ನು ಪ್ರತಿಬಿಂಬಿಸುತ್ತವೆ. ಸರಳ, ಸುಂದರ, ಲಾಲಿತ್ಯಮಯವಾಗಿ ಸಾಗುವ ಭಾಷೆಯ ಓಘ ನಿರಂತರವಾಗಿದೆ. ಕುತೂಹಲ ತಣಿಸುವ ನಿರಂತರ ಹೊಚ್ಚ ಹೊಸ ಕಾವ್ಯವಿದು. ಕವಿ ರಾಘವಾಂಕನಿಗೆ ಪ್ರಿಯವಾದ ಛಂಧೋಬದ್ಧ ಶೈಲಿಯೇ ನಿರುಪಾಧೀಶರಿಗೂ ಪ್ರಿಯವಾಗಿದೆ. ಮೂಲ ಬಸವ ಚರಿತ್ರೆಯ ನಿರೂಪಣೆಯಲ್ಲಿ ಹೊಸನೋಟ, ಹೊಸ ಚಿಂತನೆ, ಹೊಸ ಪ್ರತಿಪಾದನೆಗಳು ಕಂಡಬರುತ್ತವೆ. ಪ್ರಸ್ತುತ ಮಹಾಕಾವ್ಯದಲ್ಲಿ ಭಾವಲಹರಿಯ ಅಲೆಗಳು ದಡದಿಂದ ದಡಕ್ಕೆ ಅಪ್ಪಳಿಸಿ, ವೈಚಾರಿಕ ಪ್ರತಿಲಹರಿಗಳನ್ನು ಹರಡಿ, ಬುದ್ಧಿ–ಭಾವಗಳನ್ನು ಬೆಸೆಯುವ ಪ್ರಯತ್ನ ಮಾಡುತ್ತವೆ. ಇದನ್ನು ನಿರ್ವಹಿಸಿದ ಪರಿಯನ್ನು ಮೆಚ್ಚಬೇಕಾದುದಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

''ಬಸವನಿಂ ಬದುಕಿತ್ತು ಲೋಕವು
ಬಸವನಿಂ ಬೆಳಗಿತ್ತು ತೂಕದಿ
ಬಸವನಿಂ ಭವಿಬಳಗ ಸವಿಗೂಡುತ್ತ ಭೂವಲಯ !!
ಬಸವ ಬಯಲೆನಿಸಿತ್ತು ಬಯಲೆವೆ
ಬಸವ ತಾ ಬಾಗಿತ್ತೆನುವ ಘನ
ಬಸವ ಬೆಳಗಿನೊಳಾನು ನೀನೋ-ಅಡವಿಸಿದ್ದೇಶ!!''

ಸಕಲರಿಗೂ ಲೇಸಾಗಲಿ, ಈ ಲೋಕವು ಸರ್ವಜನಾಂಗದ ಶಾಂತಿಯ ತೋಟವಾಗಲಿ, ಬಸವ ಧ್ವನಿ ಎಲ್ಲಡೆ ಮೊಳಗಲಿಯೆಂದು 'ಶ್ರೀ ಸಂಗನಬಸವ ವಿಜಯ' ಮಹಾಕಾವ್ಯದ ತುಂಬ ಆಶಿಸಲಾಗಿದೆ.

ಆಕರ ಗ್ರಂಥಗಳು

* 'ಶ್ರೀ ಸಂಗನಬಸವ ವಿಜಯ'–ಶ್ರೀ ನಿರುಪಾಧೀಶ ಸ್ವಾಮಿಗಳು
* ಬಸವ ದರ್ಶನ– ಡಾ. ದೇ. ಜವರೇಗೌಡ
* ಕರ್ತಾರನ ಕಮ್ಮಟ– ಡಾ. ಎಚ್. ತಿಪ್ಪೇರುದ್ರಸ್ವಾಮಿ
* ಬಸವಣ್ಣನವರು ವಚನಗಳು– ಎಲ್. ಬಸವರಾಜು
* ವಚನ ಸಾಹಿತ್ಯ – ವೈಚಾರಿಕ ಅಧ್ಯಯನ– ಡಾ. ಎಚ್. ತಿಪ್ಪೇರುದ್ರಸ್ವಾಮಿ
* ವಚನ ವಿನ್ಯಾಸ – ಡಾ. ಗಿರಡ್ಡಿ ಗೋವಿಂದರಾಜ.

ಕೃಪೆ : ಮಹಾಮನೆ ಏಪ್ರೀಲ್–೨೦೧೫

■■

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನುಬಂಧ - ೧

ವೇ|| ಮಹದೇವಯ್ಯ - ರುದ್ರಮ್ಮ



(ಇವರಲ್ಲದೆ ಬಸವಣ್ಣೆಮ್ಮ, ಮಹಾದೇವಕ್ಕ ಮಹಾನಂದಮ್ಮ ವೇ|| ಮಹದೇವಯ್ಯನವರ ಹೆಣ್ಣುಮಕ್ಕಳು)

ಚರಿತನಾಯಕರ ಸಂಕ್ಷಿಪ್ತ ಪರಿಚಯ

೧) ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲೂಕಿನ ಮದನಮಾಸೂರಲ್ಲಿ ಜನನ ೨೦-೩-೧೯೧೭ ಫಾಲ್ಗುಣ ವದ್ಯದ್ವಾದಶಿ.

೨) ೧೪-೯-೧೯೨೦ ರಂದು ಹಾವೇರಿ ಹೊಸಮಠಕ್ಕೆ ದಯಮಾಡಿಸಿದ ಅಥಣೀಯ ಶ್ರೀ ಮುರಘೇಂದ್ರ ಶಿವಯೋಗಿಗಳ ಕೃಪಾದೃಷ್ಟಿ – ಹಾಗೂ ಸಿದ್ದಲಿಂಗಯ್ಯಾ ಪಲ್ಲಕ್ಕಿ ಹತ್ತುವನೆಂಬ ಭವಿಷ್ಯವಾಣಿ ಅವರದು.

೩) ರಟ್ಟಿಹಳ್ಳಿ ಕಬ್ಬಿಣಕಂತಿ ಮಠದ ಶ್ರೀ ಷ. ಬ್ರ. ಸಿದ್ಧಲಿಂಗ ಶಿವಾಚಾರ್ಯರ ಯೋಗಕ್ಷೇಮದಲ್ಲಿ ಬೆಳವಣಿಗೆ ೪ನೇ ಇಯತ್ತೆಯವರೆಗೆ ಅಭ್ಯಾಸ.

೪) ಕಡೆನಂದಿ ಹಳ್ಳಿಗ್ರಾಮದಲ್ಲಿ ಪಂ – ಗುರುಮೂರ್ತಿಶಾಸ್ತ್ರಿಗಳವರಲ್ಲಿ ಸಂಸ್ಕೃತಾಧ್ಯಯನ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೫) ಶ್ರೀ ಶೈಲ ಪೀಠದ ಸನ್ನಿಧಿಯವರ ಸಮಕ್ಷಮ ಕ್ಯಾಸನೂರಿನ ಮಠಕ್ಕೆ ಪಟ್ಟಾಧಿಕಾರ, ಶ್ರೀ ಷ. ಬ್ರ. ಜಯಗುರು ವೃಷಭ ಶಿವಾಚಾರ್ಯರೆಂದು ನಾಮಕರಣ.

೬) ೧೯೩೭ ಇಸ್ವಿ ಸೊಲ್ಲಾಪೂರ ವಾರದ ಪಾಠಶಾಲೆ ಪ್ರವೇಶ ನಂತರ ಶ್ರೀ ಶೈಲ ಸನ್ನಿಧಿಯವರ ಆಜ್ಞೆಯಂತೆ ಕಾಶಿಗೆ ಗಮನ, ವಿಶ್ವಾರಾಧ್ಯ ಗುರುಕುಲದಲ್ಲಿ ೧೯೪೩ರಲ್ಲಿ ಪ್ರವೇಶ.

೭) ಜ. ವೀರಭದ್ರ ಶಿವಾಚಾರ್ಯರು ಲಿಂಗೈಕ್ಯ ೨೫–೧–೧೯೪೮. ೭–೧–೧೯೪೪ ರಂದು ಬರೆದಿಟ್ಟ ಮೃತ್ಯು ಪತ್ರದಂತೆ ೧೪–೧೧–೧೯೪೮ ರಂದು ಕಾಶಿಪೀಠದ ಸಿಂಹಾಸನಾರೋಹಣ.

೮) ಮಹಾರಾಷ್ಟ್ರದಲ್ಲಿ ಸಂಚಾರ ಹಲವಾರು ಕಡೆ ಪ್ರಸಾದ ನಿಲಯ ಸ್ಥಾಪನೆ.

೯) ೨೮–೧೨–೧೯೬೩ ರಿಂದ ಮಹಾರಾಷ್ಟ್ರದಲ್ಲಿ ವೀರಶೈವ ಪರಿಷತ್ ಸಭಾ.

೧೦) ೧೦–೬–೧೯೬೬ ಕೇದಾರ ಪೀಠದ ಪಟ್ಟಾಧಿಕಾರ ಜವಾಬ್ದಾರಿಯಿಂದ ಕಾರ್ಯ ನೆರವೇರಿಸಿದ್ದು.

೧೧) ಬಾರ್ಸಿಯ ದಹಿವಡಕರ ಮಠದ ಪಟ್ಟಾಧಿಕಾರ ಮಾಡಿದ್ದು ೧೧–೨–೧೯೭೬.

೧೨) ೬–೧–೧೯೭೭ರಂದು ಮರೆಗುದ್ದಿಯಲ್ಲಿ ಮಂಟಪೋತ್ಸವ ೧೦–೧–೧೯೭೭ ರಂದು ಸೊನ್ನದಲ್ಲಿ (ತಾ–ಬೀಳಗಿ) ಆಶೀರ್ವಚನ.

೧೩) ಸಂಸ್ಕೃತ ವಿಶ್ವವಿದ್ಯಾನಿಲಯದಲ್ಲಿ ಶಕ್ತಿವಿಶಿಷ್ಟಾದ್ವೈತ ವೇದಾಂತ ಪೀಠ ಸ್ಥಾಪನೆ – ೧೯೮೩ ಕಾರ್ಯಾರಂಭ.

೧೪) ಮಾರುಕಟ್ಟೆ ನಿರ್ಮಾಣ ೧೯೬೮ರಲ್ಲಿ; ವಿದರ್ಭ ಧರ್ಮ ಪ್ರಚಾರ ದೌರಾ.

೧೫) ೨–೧೦–೧೯೮೯ ಅಶ್ವಿನಶುದ್ಧ ತೃತೀಯಾ ಸೋಮವಾರ ನಿಜೈಕ್ಯ.

■■

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನುಬಂಧ - ೨

ನಿರುಪಾಧೀಶರ ಕೃತಿಗಳು

ಕಾವ್ಯಗಳು

ಷಟ್ಪದಿ	೧	ಮರೆಗುದ್ದಿಯ ಮಡಿವಾಳೇಶ್ವರ ಚರಿತೆ	೧೯೭೪
	೨	ಗಣೇಶ ಪುರಾಣ	೧೯೮೭
	೩	ಶ್ರೀ ಗುರು ಗುರುಪಾದೇಶ್ವರ ಚಿದ್ವಿಲಾಸ	೧೯೯೦
	೪	ಲಿಂಗನಾಯ್ಕನಹಳ್ಳಿ ಚನ್ನವೀರ ವಿಲಾಸ +	೧೯೯೧
	೫	ಚಿನ್ಮಯ ಜ್ಞಾನಿ ಚನ್ನಬಸವ ವಿಜಯ +	೨೦೦೨
	೬	ಮಹಾಮಾನವತಾವಾದಿ ಸಂಗನ ಬಸವ ವಿಜಯ+	೨೦೦೪
	೭	ಮರೆಗುದ್ದಿ ಮಡಿವಾಳೇಶ್ವರ ಕಾವ್ಯ (ಪರಿಷ್ಕೃತ ಮುದ್ರಣ)	೨೦೧೨
	೮	ಕನಕ ವಿಜಯ	೨೦೧೩
	೯	ಶಿವಯೋಗಿ ವೇಮ ವಿಜಯ	೨೦೧೩
	೧೦	ಶಿವಯೋಗಿ ಸಂಗಮ	೨೦೧೪
	೧೧	ಶರಣ ಸಂಗಮ	೨೦೧೪
	೧೨	ವಚನ ಶತಕ	೧೯೯೫
	೧೩	ನಾಗಲಾಂಬಿಕೆ	೧೯೯೫
	೧೪	ಭಾವ ಭಾಮಿನಿ	೨೦೧೬
	೧೫	ನೀಲಾಂಬಿಕೆ	೨೦೧೬
	೧೬	ಚಿನ್ನಿಧಿ	೨೦೧೬
	೧೭	ಸಿದ್ಧರಾಮ ವಿಲಾಸ	೨೦೧೭
	೧೮	ಗಂಗಾಬಿಕೆ	೨೦೧೭
ತ್ರಿಪದಿ			
	೧೯	ಚಿನ್ಮೂರ್ತಿ	೧೯೭೬
	೨೦	ಕತ್ತಲುಂಡ ಬೆಳಕು	೨೦೦೭
	೨೧	ಬಯಲಾಳ	೨೦೦೯
	೨೨	ಬಯಲೋಲ್ಲಾಸ	೨೦೧೧
	೨೩	ನಿನಾರು ?	೨೦೧೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೨೪ ನಿರಾಳ – (ಲಲಿತರಗಳೆ) ಬಾಗಲಕೋಟೆಯ ಚರಂತಿಮಠದ ಶ್ರೀ ನಿ.ಪ್ರ.ಪ್ರಭುಸ್ವಾಮಿಗಳ ನೈಜ ಜೀವನ ಕಾವ್ಯ ೨೦೧೨

೨೫ ಸುರಾಳದೊಳಗಣನಿರಾಳ ೨೦೧೨

೨೬ ಮಂಥನ ೨೦೧೧

ಚೌಪದಿ

೨೭ ಅಡವಿಸಿದ್ಧನ ಅಂಚೆ ೨೦೦೦

೨೮ ನಿರುಪಾಧೀಶನ ಚೌಪದಿ (ಕ.ಸಾ.ಪ. ಪ್ರಕಟನ) ೨೦೦೪

೨೯ ಗೆಲುವೆನೆಂಬ ಭಾಷೆ ೨೦೦೮

ವಚನ ಸಂಕಲನಗಳು

೩೦ ವಚನಾಂಕುರ ಭಾಗ ೧ ೧೯೮೭

೩೧ ವಚನಾಂಕುರ ಭಾಗ ೨ ೧೯೯೦

೩೨ ವಚನಾಂಕುರ ಭಾಗ ೩ ೧೯೯೧

೩೩ ವಚನ ಪಲ್ಲವಿ ಭಾಗ ೧ ೧೯೯೨

೩೪ ವಚನ ಪಲ್ಲವಿ ಭಾಗ ೨ ೧೯೯೫

೩೫ ವಚನ ಪಲ್ಲವಿ ಭಾಗ ೩ ೧೯೯೭

೩೬ ವಚನ ತೋರಣ ಭಾಗ ೧ ೨೦೦೩

೩೭ ವಚನ ತೋರಣ ಭಾಗ ೨ ಅಂಚಿನಲ್ಲಿ

೩೮ ಗೀತಮಂಗಲ – ಸಂ. ಜೆ. ಸಿ. ದೇಶಪಾಂಡೆ

೩೯ ಮಂಗಲ ಗೀತೆ – ನಿರುಪಾಧೀಶ

೪೦ ತ್ರಿವೇಣಿ (ಪದ್ಯಗಳು) ೨೦೦೯

ಗದ್ಯ ಭಾಗ

೪೧ ಆತ್ಮದ ಅಂಚೆ (ಆತ್ಮಚರಿತೆ) ೨೦೦೮

೪೨. ಪದ–ಪದಾರ್ಥ–ಲೇಖನ ಸಂಗ್ರಹ ಸಂ– ಮಲ್ಲಿಕಾರ್ಜುನ ಯಾಳವಾರ ೨೦೦೬

೪೩. ಪರಿಶೀಲನ ಸಂ. ಮಲ್ಲಿಕಾರ್ಜುನ ಯಾಳವಾರ ೨೦೧೭

೪೪ ತಾತ್ಪರ್ಯ – ತಲೆಕಟ್ಟು ನಿರುಪಾಧೀಶ ಅಪರಾಧ ಸೋತ್ರ ೨೦೦೫

ಸಂಪಾದನೆ

೪೫. ಸಂಪಾದನೆ –ಸಂಪಾದನೆಯ ಸುಮನ ಸೌರಭ್ಯ ೨೦೦೪

ಅನುಬಂಧ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿರುಪಾಧೀಶರ ಕುರಿತ ಗ್ರಂಥಗಳು

೪೬ ಶ್ರೀ ಮರೆಗುದ್ದಿ ಅಡವಿಸಿದ್ಧೇಶ್ವರ
ಮಠದ ಪರಂಪರೆ ೨೦೧೧
ಡಾ. ಅಶೋಕನರೋಡೆಪ್ರಸಾರಾಂಗ-ಕನ್ನಡವಿಶ್ವವಿದ್ಯಾಲಯ,ಹಂಪಿ

೪೭ ನಿರುಪಾಧೀಶರ ಸಾಹಿತ್ಯ ದರ್ಶನ
– ಡಾ. ಅಶೋಕ ನರೋಡೆ ೨೦೧೧

೪೮ ನಿರುಪಾಧೀಶರ ವಚನ ಸಂಗ್ರಹ
ಡಾ. ಗುರುಪಾದ ಮರಿಗುದ್ದಿ ೧೯೯೨

೪೯ ಪರಾಮರ್ಶೆ – ಡಾ ಅಶೋಕನ ರೋಡೆ ೨೦೦೪

೫೦ ಸಮಾಲೋಕನ – ಡಾ. ಸಂಗನಬಸವ ವಿಜಯ ಕಾವ್ಯದ ವಿಚಾರ
ಸಂಕಿರಣ ಕೃತಿ ಡಾ. ಅಶೋಕ ನರೋಡೆ ೨೦೦೫

೫೧ ಜಲದೊಳಗಣ ಕಿಚ್ಚು – ಮಲ್ಲಿಕಾರ್ಜುನ ಯಾಳವಾರ ೨೦೦೬

೫೨ ನಿರುಪಾಧಿ – ಅಭಿನಂದನ ಗ್ರಂಥ
– ಸ.ಡಾ.ಬಿ.ಕೆ.ಹಿರೇಮಠ ೨೦೦೬

೫೩ ರಸಗೀತ (ಕನ್ನಡ ಅನುವಾದ) ಡಾ. ಮಿಟ್ಟಲಕೋಡ ೨೦೦೬

೫೪ ಜಲದೊಳಗಣ ಕಿಚ್ಚು – ಮಲ್ಲಿಕಾರ್ಜುನ ಯಾಳವಾರ
(ದ್ವಿತೀಯ ಮುದ್ರಣ) ೨೦೧೩

೫೫ ಸಾಗರದೊಳಗಣ ಸೌರಂಭ
ಮಲ್ಲಿಕಾರ್ಜುನ ಯಾಳವಾರ ೨೦೧೩

೫೬. ಸುಯಿಧಾನಿ (ಕಾವ್ಯ) – ಸಿ. ಎಂ. ಹಿರೇಮಠ, ದಾಶ್ಯಾಳ ೨೦೧೫

೫೭. ಅನುಭಾವದ ಅರಳು– ಸಂ. ಮಲ್ಲಿಕಾರ್ಜುನ ಯಾಳವಾರ
ಮತ್ತು ಶಂಕರ ಡಬರಿ ೨೦೧೭

೫೮. ನಿರುಪಾಧೀಶರು– ಲೇ. ಮಲ್ಲಿಕಾರ್ಜುನ ಯಾಳವಾರ ೨೦೧೭

೫೯. ನಿರುಪಾಧೀಶ ಚರಿತಾಂತರಂಗ–ಗುರುಸ್ವಾಮಿ ಗಣಚಾರಿ ೨೦೧೭

೬೦. ನಿರಂಜನ ಅಭಿನಂದನ ಗ್ರಂಥ
– ಸಂ. ಡಾ. ವಿಜಯಕುಮಾರ ಕಟಗಿಹಳ್ಳಿಮಠ ೨೦೧೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಿಂದಿ ಗ್ರಂಥಗಳು

೬೧. ರಸಗೀತ (ಖಂಡಕಾವ್ಯ) ೧೯೭೩

೬೨. ರಸಗೀತ ದ್ವಿತೀಯ ಮುದ್ರಣ ೨೦೦೬

೬೩. ಸಪ್ತತೀರ್ಥ ೧೯೭೬

೬೪. ಮರೆಗುದ್ದಿ ಮಹಾಂತ – ಶಿವಾನಂದ ಗಿರಗಾಂವಿ ೨೦೧೧

೬೫. ಶ್ರೀ ಮರೆಗುದ್ದಿ ಮಡಿವಾಳೇಶ್ವರ (ನಾಟಕ) ೨೦೧೧

೬೬. ಗುರಪಾದೇಶ್ವರ ಚಿದ್ವಿಲಾಸ (ನಾಟಕ) ೨೦೧೧

ಅಡವಿ ಪ್ರಕಾಶನದಲ್ಲಿ ಕೃತಿಗಳ ಪ್ರಕಟಣೆ

೬೭. ಅಡಸಿದ್ಧೇಶ್ವರ ಸ್ತವನ ಶತಕ ವಿಶ್ವೇಶ್ವರ ದೇವರು ೨೦೦೧

೬೮ ಮರೆಗುದ್ದಿ (ಅಂಕಲಗಿ)

ಅಷ್ಟೋತ್ತರ ಶತನಾಮಾವಳಿ ೧ ೨೦೧೦

ಕುಮಾರದೇವರು

೬೯. ಸ್ತೋತ್ರ ಕಂದ ಪದ್ಯ – ಕುಮಾರದೇವರು

೭೦. ಅಡವಿಸಿದ್ಧೇಶ್ವರ ಸ್ತವನ ಶತಕ – ವಿಶ್ವೇಶ್ವರ ದೇವರು

೭೧. ಭಜನ ಭೃಂಗ–ಸಂ. ಸಿ.ಎಂ. ಹಿರೇಮಠ, ದಾಶ್ಯಾಳ ೨೦೧೫

ಪ್ರಶಸ್ತಿ - ಪುರಸ್ಕಾರಗಳು

೧. 'ಹಿಂದಿ ರತ್ನ' ಚಿನ್ನದ ಪದಕ ಪ್ರಧಾನ ೧೯೭೦

೨. ಪ್ರಯಾಗದ 'ಸಾಹಿತ್ಯ ರತ್ನ' ೧೯೭೧

೩. ರಸಗೀತ (ಹಿಂದಿ ಖಂಡಕಾವ್ಯ) ಗ್ರಂಥಕ್ಕಾಗಿ ಅಗ್ರಾದ ವಿಶ್ವಪೀಠದಿಂದ 'ವಿದ್ಯಾಲಂಕಾರ ಪ್ರದಾನ' ೧೯೭೭

೪. ಚಿನ್ಮಯ ಜ್ಞಾನಿ ಚನ್ನಬಸವ ವಿಜಯ, – ಗ್ರಂಥಕ್ಕೆ ಕ.ಸಾ.ಪ. ಬೆಂಗಳೂರದಿಂದ 'ರತ್ನಾಕರ ವರ್ಣಿ' – ಮುದ್ದಣ್ಣ ದತ್ತಿನಿಧಿ ಪ್ರಶಸ್ತಿ ೨೦೦೩

೫. ಮಹಾಮಾನವತಾವಾದಿ ಸಂಗನಬಸವ ವಿಜಯ, ಗ್ರಂಥಕ್ಕೆ ಮುಂಡರಗಿಯ 'ಅನ್ನದಾನೇಶ್ವರ ಪ್ರತಿಷ್ಠಾನ ಪ್ರಶಸ್ತಿ'

೬ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ ಗದಗದಲ್ಲಿ ಭಾಗಿ ೨೦೦೪

೭. ಬಾಗಲಕೋಟ ಜಿಲ್ಲಾ ಎರಡನೆಯ ಸಾಹಿತ್ಯ ಸಮ್ಮೇಳನ – ಶಿವಯೋಗ ಮಂದಿರ, ಸರ್ವಾಧ್ಯಕ್ಷತೆ ೨೦೦೫

೮. ಮಹಾಮಾನವತಾವಾದಿ ಸಂಗನಬಸವ ವಿಜಯ, ಗ್ರಂಥಕ್ಕೆ ಅಥಣಿಯ ಮೋಟಗಿ ಮಠದಿಂದ 'ಬಸವ ಭೂಷಣ' ಪ್ರಶಸ್ತಿ ೨೦೦೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೯. ಸಾಹಿತ್ಯ ಸೇವೆಗಾಗಿ ಬಾಗಲಕೋಟ ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನ ಬೀಳಗಿಯಲ್ಲಿ ಸನ್ಮಾನ ೨೦೦೫
೧೦. ಸಾಹಿತ್ಯ ಸೇವೆಗಾಗಿ ೭೧ನೆಯ ಅ.ಭಾ.ಕ. ಸಾ. ಸಮ್ಮೇಳನ ಬೀದರದಲ್ಲಿ ಸನ್ಮಾನ ೨೦೦೬
೧೧. 'ಆಜೂರ ಪ್ರಶಸ್ತಿ' ಪದ ಪದಾರ್ಥ ಕೃತಿಗೆ – ಹಾರೂಗೇರಿ ೨೦೦೭
೧೨. 'ಫ. ಗು. ಹಳಕಟ್ಟಿ' ಪ್ರಶಸ್ತಿ ಮಹಾಲಿಂಗಪೂರ. ೨೦೦೭
೧೩. 'ರಮಣ ಶ್ರೀ ಶರಣ' ಪ್ರಶಸ್ತಿ– ಬೆಂಗಳೂರ ೨೦೦೮
೧೪. 'ಮೃತ್ಯುಂಜಯ ಮಹಾಂತ' ಪ್ರಶಸ್ತಿ ಧಾರವಾಡ ೨೦೧೪
೧೫. ಬಾಗಲಕೋಟ ಜಿಲ್ಲೆ ನಾಲ್ಕನೆಯ ಸಾಹಿತ್ಯ ಸಮ್ಮೇಳನ ಮುಧೋಳ– ಸರ್ವಾಧ್ಯಕ್ಷತೆ ೨೨,೨೩, ಫೆಬ್ರುವರಿ ೨೦೧೪
೧೬. ''ಷಟ್ಪದಿ ಬ್ರಹ್ಮ'' ಇಲಕಲ್ ಸಂಸ್ಥಾನ ಮಠ, ಸೌದಿ ೨೦೧೫
೧೭. ''ಬಸವ ಬೆಳಗು'' ಪ್ರಶಸ್ತಿ ಪ್ರಭುದೇವರ ಸಂಸ್ಥಾನ ವಿರಕ್ತಮಠ ಸಂಡೂರು೨೦೧೭

■■

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಗಳ ವೈಯಕ್ತಿಕ ಪರಿಚಯ

ಹೆಸರು	:	ಶ್ರೀ ಮ.ನಿ.ಪ್ರ. ನಿರುಪಾಧೀಶ ಸ್ವಾಮಿಗಳು ಗುರು ಗುರುಪಾದಸ್ವಾಮಿಗಳು ಅಡವಿಸ್ವಾಮಿಮಠ ಮರೆಗುದ್ದಿ-೫೮೭೧೨ ತಾ. ಜಮಖಂಡಿ ಜಿ. ಬಾಗಲಕೋಟ ಮೊ. ೯೪೪೯೮೭೩೪೭೦, ೮೭೬೨೫೦೯೨೨೧ ಫೋನ್ : ೦೮೩೫೩ – ೨೩೯೦೨೧
ನಿರುಪಾಧೀಶರ ಜನನ	:	೨೫-೫-೧೯೪೨
ವಿದ್ಯಾರ್ಹತೆ	:	ಪ್ರಾಥಮಿಕ ಕನ್ನಡ ಗಂಡು ಮಕ್ಕಳ ಶಾಲೆ, ಕಾಖಂಡಕಿ ೧೯೪೮-೫೫
ಮಾಧ್ಯಮಿಕ ಶಾಲೆ	:	ಕಿಂಗ್ ಜಾರ್ಜ ಹೈಸ್ಕೂಲ್, ಮುಧೋಳ ೧೯೫೫-೫೯
ಪೀಠಾಧಿಕಾರ	:	ಶ್ರೀ ಅಡವಿ ಸಿದ್ಧೇಶ್ವರ ಮಠ ಮರೆಗುದ್ದಿ ೧೭-೧೨-೧೯೬೫
ಮಠಾಧಿಕಾರಿ ನಿವೃತ್ತಿ	:	೨೬-೧೧-೨೦೦೧ ೧೭-೧೨-೧೯೬೫ ರಿಂದ ೨೬-೧೧-೨೦೦೧ರ ವರೆಗೆ ಧರ್ಮಾಧಿಕಾರಿಯಾಗಿ ಸೇವೆ. ೨೦೦೧ ರಿಂದ ಪೂರ್ಣಾವಧಿ ಲೇಖಕರಾಗಿ.

■■

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶ್ರೀ ನಿರುಪಾಧೀಶ ಶ್ರೀರಗಳವರು 'ಚಿನ್ನಿಧಿ' ಕಾವ್ಯದಲ್ಲಿ ಅಧ್ಯಾಯಗಳಿಗಾಗಿ 'ಬೆಳಗು' ಎಂಬುದಾಗಿ ಬಳಸಿದ್ದುವು ಒಂದು ವಿಶೇಷತೆ ! ಇದು ಈ ಕೃತಿಯ ವೈಶಿಷ್ಟ್ಯಗಳಲ್ಲೊಂದು ಪುರಾಣ ಪರಂಪರೆಯನ್ನು ಸಂಪೂರ್ಣವಾಗಿ ಅನುಸರಿಸಿದಂತಿದೆ. ಬಸವಪುರಾಣದಲ್ಲಿ ಪ್ರತಿಯೊಂದು ಅಧ್ಯಾಯದಲ್ಲಿ ಬರುವಂತೆ – ತ್ರಿಚರಣಗಳುಳ್ಳ ಸೂಚನೆ ಈ ಕಾವ್ಯದುದ್ದಕ್ಕೂ ಬಂದಿರುವುದು ಗಮನಾರ್ಹ ಉದಾಹರಣೆಗೆ

ಚನ್ನ ಚಿನ್ನಿಧಿವರ್ಯರಾ ಸಂ
ಪನ್ನ ಜೀವನಚರ್ಯರುನ್ನತಿ
ಯೆನ್ನ ಬರೆಯುವ ಕಾರಣರಿವುದು ಮೊದಲು ಸಮದರ್ಶಿ ॥

ತ್ರಿಚರಣಗಳುಳ್ಳ ಪದ್ಯಗಳು ಪ್ರತಿಯೊಂದು ಅಧ್ಯಾಯದ ವಸ್ತು ವಿಷಯದ ವೈವಿಧ್ಯತೆಯನ್ನು ಸೂಚ್ಯವಾಗಿ ತಿಳಿಸುವ ಕ್ರಮ ವಿಶೇಷವಾದುದು. ಈ ಕೃತಿ ಕಿರಿದಾದರೂ ಮೌಲ್ಯದಲ್ಲಿ ಹಿರಿದಾಗಿದೆ. ಭಾಮಿನಿ ಷಟ್ಪದಿಯ ನಡೆಯಲ್ಲಿ ಸುಂದರವಾಗಿ ಮೂಡಿ ಬಂದಿದೆ. 'ಚಿನ್ನಿಧಿ' ಕಾವ್ಯ ಪ್ರಾರಂಭದಲ್ಲಿರುವ 'ಚಿನ್ನಿಧಿ'ಯ 'ಹೊಂಬೆಳಗು' ಓದಿದಾಗ ನಿರುಪಾಧೀಶರ ಕವಿತ್ವದ ಶಕ್ತಿ ನಮಗೆ ಅರಿವಾಗದಿರದು ! ಕಾವ್ಯದ ಪ್ರಾರಂಭಕ್ಕೂ ಮುನ್ನ ಬಸವಾದಿ ಶರಣರನ್ನು ಸ್ಮರಿಸಿರುವುದು ಪ್ರಾಚೀನ ಕಾವ್ಯಗಳನ್ನು ನೆನಪಿಗೆ ತರುತ್ತದೆಂದು ಹೇಳಬಹುದು.

ಪ್ರಸ್ತುತ ಕಾವ್ಯವು ಉಪಮೇ, ರೂಪಕ, ದೃಷ್ಟ್ಯಾಂತ ಮುಂತಾದ ಅಲಂಕಾರಿಕ ಭಾಷಾ ಪ್ರಯೋಗದೊಂದಿಗೆ ಮುಧೋಳ ಜಮಖಂಡಿಯ ಪರಿಸರದ ಪ್ರಾದೇಶಿಕ ನುಡಿಗಟ್ಟು – ಗಾದೆಮಾತು– ಪಡೆನುಡಿಗಳೊಂದಿಗೆ ಸರ್ವಾಂಗ ಸುಂದರವಾಗಿ ಮೂಡಿ ಬಂದಿದೆ.

ಚಿನ್ನಿಧಿ

ಶ್ರೀ ಅಡವೀಶ ಪ್ರಕಾಶನ, ಮರೇಗುದ್ದಿ

ಶ್ರೀ ಮುದ್ರಣ, ಗದಗ

CC0. In Public Domain. Jangamwadi Math Collection, Varanasi